ಭಾನುವಾರ, ಜನವರಿ 28, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 28 | ಪುಟ 20
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಭಾನುವಾರದ ಪುರವಣಿ
ಹಳ್ಳಿ ಹಳ್ಳಿಗಳಲ್ಲಿ ಕಂಡ ಅಜ್ಜನ ಜಾತ್ರೆಯ ಸಂಭ್ರಮ

‘ಹೆಣ್ಣನ್ನು ತುಳಿದವರೇ ಆದರ್ಶ ಆಗದಿರಲಿ’ 8

24 ಆಸ್ತಿಗಳ ಗುರುತು: ಗುತ್ತಿಗೆ ಪಡೆಯಲು ರಾಜ್ಯ ಸರ್ಕಾರ ಪ್ರಸ್ತಾವ

ಹುಣಸೆ ಹಣ್ಣು ಇಳುವರಿ ಕುಸಿತ? 10

‘ಶತ್ರು ಆಸ್ತಿ’ ಹರಾಜಿಗೆ ಸಿದ್ಧತೆ 8

‘ಒಂದು ರಾಜ್ಯ ಹಲವು ಜಗತ್ತು’ ಘೋಷವಾಕ್ಯವಷ್ಟೇ ದೊಡ್ಡದು; ಕನಿಷ್ಠ ಸೌಕರ್ಯವೂ ಸಿಕ್ಕದು

ಪ್ರವಾಸಿ ತಾಣ: ಸೌಲಭ್ಯಕ್ಕೆ ಅಸಡ್ಡೆ

ಒಳನೋಟ

ಪಶ್ಚಿಮ ದೇಶಗಳಿಂದ ರಾಜ್ಯದ ಪ್ರವಾಸೋದ್ಯಮ ಇಲಾಖೆ ಕಲಿಯುವಂತಹದ್ದು ಸಾಕಷ್ಟಿದೆ. ಅಲ್ಲಿ ಯಾವುದೇ ಚಾರಿತ್ರಿಕ ಸ್ಥಳಕ್ಕೆ ಹೋದರೆ ಎಲ್ಲಾ ಸೌಕರ್ಯಗಳು ಇದ್ದೇ ಇರುತ್ತದೆ. ನಮ್ಮಲ್ಲಿ ಅಭಿವೃದ್ಧಿಗೆ ಬಿಗಿ ನಿಯಮಗಳು ತೊಡಕಾಗಿವೆ..

• ಶಶಿಕಾಂತ ಎಸ್. ಶೆಂಬೆಳ್ಳಿ

ಬೀದರ್: ‘ಬೀದರ್ ಕೋಟೆ ನೋಡಬೇಕೆಂದು ಮಹಾರಾಷ್ಟ್ರದಿಂದ ಬಂದಿದ್ದೆ. ಆದರೆ, ಇಲ್ಲಿನ ಸ್ಮಾರಕಗಳಿಗೆ ಬೀಗ ಹಾಕಿದ್ದಾರೆ. ಸ್ಮಾರಕಗಳ ಬಗ್ಗೆ ವಿವರಿಸಲು ಗೈಡ್‌ಗಳೂ ಇಲ್ಲ. ಸ್ಮಾರಕಗಳ ಕಡೆಗೆ ಹೇಗೆ ಹೋಗಬೇಕೆಂಬ ದಿಕ್ಸೂಚಿ ಫಲಕಗಳೂ ಇಲ್ಲ. ಕನಿಷ್ಠ ಮಾಹಿತಿಯೇ ಇರದಿದ್ದರೆ ನೋಡುವುದಾದರೂ ಹೇಗೆ? ಇಷ್ಟೊಂದು ಖರ್ಚು ಮಾಡಿ ಇಲ್ಲಿಗೆ ಬಂದ ನಂತರ ಬಹಳ ನಿರಾಸೆಯಾಯಿತು...’

ಇದು ಪುಣೆಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ಪ್ರವಾಸಿ ಆಸ್ಥಾ ಅವರ ಮಾತುಗಳು.

‘ಕಲ್ಲಿನ ಕೋಟೆಯೊಳಗೆ ನಾಮಫಲಕಗಳಿದ್ದರೂ ಕುಡಿಯುವ ನೀರು, ಶೌಚಾಲಯ ಹುಡುಕಿದರೂ ಸಿಗುವುದಿಲ್ಲ. ಏಕನಾಥೇಶ್ವರಿ ದೇಗುಲದ ಬಳಿಯ ಕ್ಯಾಂಟೀನ್‌ನಲ್ಲಿ ಒಂದು ಲೀಟರ್ ನೀರಿಗೆ ದುಪ್ಪಟ್ಟು ಹಣ ಪಾವತಿಸಿದ್ದೇನೆ. ಕ್ಯಾಂಟೀನ್, ನೀರು, ಶೌಚಾಲಯ, ಲಗೇಜ್ ರೂಂ, ಮಾಹಿತಿ ಕೇಂದ್ರ ಸೇರಿದಂತೆ ಯಾವುದೇ ಸೌಕರ್ಯ ಇಲ್ಲ. ಹೀಗಿದ್ದರೆ ಪ್ರವಾಸಿಗರು ಬರುವುದಾದರೂ ಹೇಗೆ? ಕನಿಷ್ಠ ಸೌಕರ್ಯ ಕಲ್ಪಿಸಲು ಸಮಸ್ಯೆಯಾದರೂ ಏನಿದೆ?’ ಎಂದು ಜಮಖಂಡಿಯ ಪ್ರವಾಸಿ ಪರಶುರಾಮ್ ಭಜಂತ್ರಿ ಅವರು ಚಿತ್ರದುರ್ಗದ ಕೋಟೆಯೊಳಗಿನ ಅವ್ಯವಸ್ಥೆ ಬಗ್ಗೆ ಅಸಮಾಧಾನ ಹೊರಹಾಕಿದರು.

ಪ್ರವಾಸಿ ತಾಣಗಳಲ್ಲಿ ಈ ರೀತಿಯ ಸಮಸ್ಯೆ ಇರುವುದು ಬೀದರ್, ಬಯಲು ಸೀಮೆಯ ಚಿತ್ರದುರ್ಗದಲ್ಲಷ್ಟೇ ಅಲ್ಲ. ರಾಜ್ಯದ ಉತ್ತರ ದಿಕ್ಕಿನಿಂದ ದಕ್ಷಿಣದ ತುತ್ತ ತುದಿಯವರೆಗೂ ಬಹುತೇಕ ಪ್ರವಾಸಿ ತಾಣಗಳಲ್ಲಿ ಇದೇ ರೀತಿಯ ಸಮಸ್ಯೆಗಳು ಮಾರ್ದನಿಸುತ್ತವೆ.

ಬೀದರ್ ಕೋಟೆಗೆ ವಾರಾಂತ್ಯಕ್ಕೆ ಏನಿಲ್ಲವೆಂದರೂ ನಾಲ್ಕು ಸಾವಿರದಿಂದ ಐದು ಸಾವಿರ ಜನ ಬರುತ್ತಾರೆ. 5.5 ಕಿ.ಮೀ ಸುತ್ತಳತೆ ವಿಸ್ತೀರ್ಣದ ಕೋಟೆಯನ್ನು ಕಾಲ್ನಡಿಗೆಯಲ್ಲೇ ನೋಡಬೇಕು. ಬ್ಯಾಟರಿಚಾಲಿತ ವಾಹನಗಳ ವ್ಯವಸ್ಥೆ ಇಲ್ಲ. ಗೈಡ್‌ಗಳಿಲ್ಲ. ಲಗೇಜ್ ರೂಂಗಳಿಲ್ಲ. ಅಂಗವಿಕಲರಿಗೆ ತ್ರಿಚಕ್ರ ವಾಹನಗಳಿಲ್ಲ. ಇಲ್ಲಗಳ ಪಟ್ಟಿಯೇ ದೊಡ್ಡದಿದೆ. ಕೈಕಾಲು ಗಟ್ಟಿಯಿದ್ದವರಷ್ಟೇ ಕೋಟೆ ನೋಡಬಹುದು ಎಂಬ ಪರಿಸ್ಥಿತಿ ಇದೆ. ರಕ್ಷಣೆಯ ಹೆಸರಲ್ಲಿ ‘ರಂಗೀನ್ ಮಹಲ್’ ಸೇರಿದಂತೆ ಪ್ರಮುಖ ಸ್ಮಾರಕಗಳಿಗೆ ಬೀಗ ಹಾಕಲಾಗಿದೆ. ಉಪಾಹಾರ, ಊಟ, ತಂಪುಪಾನೀಯ, ಚಹಾ, ಬಿಸ್ಕತ್, ಅಷ್ಟೇಕೆ ಕುಡಿಯಲು ನೀರು ಬೇಕೆಂದರೂ ಕೋಟೆಯ ಹೊರಗೆ ಹೋಗಿ ಖರೀದಿಸುವ ಪರಿಸ್ಥಿತಿ ಇದೆ. ಕೋಟೆಯೊಳಗಿನ ಕ್ಯಾಂಟೀನ್‌ಗೆ ಎರಡು ಸಲ ಕರೆದ ಟೆಂಡರ್ ಪ್ರಕ್ರಿಯೆಯಲ್ಲಿ ಕಠಿಣ ಷರತ್ತುಗಳ ಕಾರಣಕ್ಕೆ ಯಾರೊಬ್ಬರೂ ಪಾಲ್ಗೊಂಡಿಲ್ಲ. ಇಷ್ಟಿದ್ದರೂ, ಬೀದರ್ ಕೋಟೆ ಯುನೆಸ್ಕೋ ಸಂಭವನೀಯ ಸ್ಮಾರಕಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದೆ.

6ನೇ ಪುಟ ನೋಡಿ

ಸೌಲಭ್ಯಕ್ಕೆ ಕಠಿಣ ನಿಯಮಗಳ ಕಡಿವಾಣ

ಸಂರಕ್ಷಿತ ಸ್ಮಾರಕಗಳಿರುವ ಕಡೆ ಕೋರ್ ಜೋನ್, ಬಫರ್ ಜೋನ್ ಎಂದು ಎರಡು ಭಾಗ ಮಾಡಲಾಗಿರುತ್ತದೆ. ಕೋರ್ ಜೋನ್‌ನಲ್ಲಿ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಳ್ಳುವಂತಿಲ್ಲ ಎಂದು ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ಹಾಗೂ ಯುನೆಸ್ಕೋ ನಿಯಮಗಳು ಹೇಳುತ್ತವೆ.

ಉದಾಹರಣೆಗೆ ಸಂರಕ್ಷಿತ ಸ್ಮಾರಕ ಇರುವ ಕಡೆಗಳಲ್ಲಿ 100 ಮೀಟರ್ ನಿಷೇಧಿತ ವಲಯ ಇರುತ್ತದೆ. ಅಲ್ಲಿ ಏನೂ ಮಾಡುವಂತಿಲ್ಲ. 200 ಮೀಟರ್ ಆಚೆಯದು ನಿಯಂತ್ರಿತ ಪ್ರದೇಶವಾಗಿರುತ್ತದೆ. ಏನೇ ಮಾಡಬೇಕಿದ್ದರೂ ಕೇಂದ್ರ ಕಚೇರಿ ಅನುಮತಿ ಕಡ್ಡಾಯವಾಗಿರುತ್ತದೆ. ಬಹುತೇಕ ಕಡೆಗಳಲ್ಲಿ ಹೆಚ್ಚು ಸ್ಮಾರಕಗಳು ಇರುವುದರಿಂದ ಅದನ್ನು ಸ್ಪಷ್ಟವಾಗಿ ಗುರುತಿಸದೆ ಗೊಂದಲ ಉಂಟಾಗಿದೆ. ಪತ್ರ ವ್ಯವಹಾರಕ್ಕೆ ಸಾಕಷ್ಟು ಸಮಯ ತೆಗೆದುಕೊಳ್ಳುವುದರಿಂದ ತುರ್ತಾಗಿ ಮೂಲಸೌಕರ್ಯ ಕಲ್ಪಿಸಲು ಸಮಸ್ಯೆ ಉಂಟಾಗುತ್ತದೆ. ಯುನೆಸ್ಕೋ, ಪುರಾತತ್ವ ಇಲಾಖೆಯ ಕೇಂದ್ರ ಕಚೇರಿಯನ್ನು ಒಳಗೊಂಡಂತೆ ಏಕಗವಾಕ್ಷಿ ವ್ಯವಸ್ಥೆ ಜಾರಿಗೆ ತರಬೇಕು. ನಿಯಮಗಳ ಬಗ್ಗೆ ಹೆಚ್ಚಿನ ಅಧಿಕಾರಿಗಳಿಗೆ ಜ್ಞಾನದ ಕೊರತೆ ಇದೆ. ಪ್ರತಿಯೊಂದಕ್ಕೂ ಕೇಂದ್ರ ಕಚೇರಿಗೆ ಪತ್ರ ಬರೆಯುವ ಸಂದರ್ಭ ಇದೆ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಪುರಾತತ್ವ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಹೇಳುತ್ತಾರೆ.

ಸ್ಮಾರಕಗಳು ಅಂದಗೆಡದಿರಲಿ ಎಂಬ ಕಾರಣಕ್ಕೆ ಶಾಶ್ವತವಾದ ಕಟ್ಟಡ ನಿರ್ಮಾಣಕ್ಕೆ ಅನುಮತಿ ಇಲ್ಲ. ಆದರೆ, ತಾತ್ಕಾಲಿಕವಾಗಿ ಶೌಚಾಲಯ ಸೇರಿದಂತೆ ಇತರೆ ವ್ಯವಸ್ಥೆಗಳನ್ನು ಕಲ್ಪಿಸಬಹುದು. ಆದರೆ, ಹೆಚ್ಚಿನ ಅಧಿಕಾರಿಗಳಿಗೆ ಜ್ಞಾನವಿಲ್ಲ. ಇದರ ಜೊತೆಯಲ್ಲಿ ಮೂಲಸೌಕರ್ಯಕ್ಕೆ ಎಎಸ್‌ಐ ಬಳಿ ಹೆಚ್ಚಿನ ಅನುದಾನವೂ ಇಲ್ಲ. ಇದರಿಂದ ಸೌಕರ್ಯ ಕಲ್ಪಿಸಲು ತೊಡಕಾಗುತ್ತದೆ ಎಂದು ಅವರು ಅಭಿಪ್ರಾಯಪಡುತ್ತಾರೆ.

ವಿಜಯಪುರ ನಗರದ ಐತಿಹಾಸಿಕ ಸ್ಮಾರಕ ‘ಬಾರಾಕಮಾನ್’ ವೀಕ್ಷಿಸಲು ಬರುವ ಪ್ರವಾಸಿಗರನ್ನು ಸ್ವಾಗತಿಸುವ ತರಕಾರಿ ವ್ಯಾಪಾರಸ್ಥರು ಮತ್ತು ಸ್ಥಳೀಯ ಗ್ರಾಹಕರು ಪ್ರಜಾವಾಣಿ ಚಿತ್ರ: ಸಂಜೀವ ಅಕ್ಕಿ

‘ಜಾತ್ರೆ’ ಸಾಗರ ಕೊಪ್ಪಳದಲ್ಲಿ ಶನಿವಾರ ನಡೆದ ಗವಿಸಿದ್ಧೇಶ್ವರ ಮಠದ ಮಹಾರಥೋತ್ಸವದಲ್ಲಿ ಪಾಲ್ಗೊಂಡಿದ್ದ ಭಕ್ತಸಮೂಹ ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

‘ಕಮಲ’–‘ಕೈ’ ಚುನಾವಣೆ ಕಹಳೆ

ಬಿಜೆಪಿಯ ತಾಲೀಮಿಗೆ ಕಾರ್ಯಕಾರಿಣಿ ನಾಂದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭೆಯಲ್ಲಿ ಬಿಜೆಪಿಗೆ 20ಕ್ಕಿಂತ ಹೆಚ್ಚು ಸ್ಥಾನ ಗೆಲ್ಲಿಸಿಕೊಡಬೇಕೆಂಬ ಹಟಕ್ಕೆ ಬಿದ್ದಿರುವ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು, ತಮ್ಮ ತಂದೆ ಬಿ.ಎಸ್. ಯಡಿಯೂರಪ್ಪ ಜತೆಗೂಡಿ ಚುನಾವಣಾ ತಾಲೀಮನ್ನು ಭರ್ಜರಿಯಾಗಿಯೇ ಆರಂಭಿಸಿದ್ದಾರೆ.

ವಿಧಾನಸಭೆ ಚುನಾವಣೆಯಲ್ಲಿ ಸೋಲುಕಂಡ ಬಳಿಕ ಕಳೆಗುಂದಿದ್ದ ಪಕ್ಷದಲ್ಲಿ ಹೊಸ ಹುರುಪು ತಂದಿರುವ ವಿಜಯೇಂದ್ರ, ಈಗಾಗಲೇ ಹಲವು ಸುತ್ತಿನ ಸಭೆಗಳನ್ನು ನಡೆಸಿದ್ದಾರೆ. ತಮ್ಮ ವರ್ಚಸ್ಸು ಹೆಚ್ಚಿಸಿಕೊಂಡು, ಪಕ್ಷದಲ್ಲಿ ವಿಶ್ವಾಸ ತುಂಬುವ ರೀತಿಯಲ್ಲಿ ತಮ್ಮ ನೇತೃತ್ವದ ಮೊದಲ ವಿಶೇಷ ರಾಜ್ಯ ಕಾರ್ಯಕಾರಿಣಿಯನ್ನು ಶನಿವಾರ ಅವರು ನಡೆಸಿದರು.

ಕೇಂದ್ರ ಸಚಿವರು, ಎಲ್ಲ ಹಂತದ ನಾಯಕರು ಸೇರಿದಂತೆ 900 ಕ್ಕೂ ಹೆಚ್ಚು ಪ್ರತಿನಿಧಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ವಿವರ 9

ಶೋಷಿತರ ಜಾಗೃತಿ ಸಮಾವೇಶ ಇಂದು

ಚಿತ್ರದುರ್ಗ: ಎಚ್.ಕಾಂತರಾಜ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗದ ವರದಿ ಜಾರಿಗೊಳಿಸುವಂತೆ ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರುವ ಉದ್ದೇಶದಿಂದ ಭಾನುವಾರ ಆಯೋಜಿಸಿರುವ ‘ಶೋಷಿತರ ಜಾಗೃತಿ ಸಮಾವೇಶ’ಕ್ಕೆ ಕೋಟೆನಗರಿ ಸಜ್ಜಾಗಿದೆ.

ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟ ಹಾಗೂ ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟದ ಆಶ್ರಯದಲ್ಲಿ ಹಮ್ಮಿಕೊಂಡಿರುವ ಸಮಾವೇಶಕ್ಕೆ ಚಿತ್ರದುರ್ಗ ಹೊರವಲಯದ ಮಾದಾರ ಚನ್ನಯ್ಯ ಗುರುಪೀಠ ಸಮೀಪದ ವಿಶಾಲ ಮೈದಾನದಲ್ಲಿ ಸಿದ್ಧತೆಗಳು ಪೂರ್ಣಗೊಂಡಿವೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಸಚಿವ ಸಂಪುಟದ ಸದಸ್ಯರು ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ.

ಒಳ ಪುಟಗಳು

ರಸ್ತೆ ಬದಿಯಲ್ಲಿ ಕುಳಿತ ಕೇರಳ ರಾಜ್ಯಪಾಲ 11

ಕಾಂಗ್ರೆಸ್‌ಗೆ 11 ಕ್ಷೇತ್ರ ಕೊಡಲು ಒಪ್ಪಿದ ಎಸ್‌ಪಿ 9

ಆಸ್ಟ್ರೇಲಿಯನ್ ಓಪನ್ ಟೆನಿಸ್ ಪುರುಷರ ಡಬಲ್ಸ್ ಪ್ರಶಸ್ತಿ ಗೆದ್ದ ಭಾರತದ ರೋಹನ್ ಬೋಪಣ್ಣ ಮತ್ತು ಆಸ್ಟ್ರೇಲಿಯಾದ ಮ್ಯಾಥ್ಯೂ ಎಬ್ಡೆನ್ ಅವರು ಟ್ರೋಫಿಯೊಂದಿಗೆ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಟೆನಿಸ್: ರೋಹನ್ ಹಿರಿಮೆ

ಮೆಲ್ಬರ್ನ್ (ಪಿಟಿಐ): ಕನ್ನಡಿಗ ರೋಹನ್ ಬೋಪಣ್ಣ ತಮ್ಮ ವೃತ್ತಿಜೀವನದಲ್ಲಿ ಮೊದಲ ಬಾರಿ ಗ್ರ್ಯಾನ್‌ಸ್ಲಾಮ್ ಟೆನಿಸ್‌ನಲ್ಲಿ ಪುರುಷರ ಡಬಲ್ಸ್ ಪ್ರಶಸ್ತಿ ಜಯಿಸಿದರು. ಈ ಸಾಧನೆ ಮಾಡಿದ ಅತಿ ಹಿರಿ ವಯಸ್ಸಿನ ಆಟಗಾರನೆಂಬ ಹೆಗ್ಗಳಿಕೆಗೂ 43 ವರ್ಷದ ರೋಹನ್ ಪಾತ್ರರಾದರು.

ಶನಿವಾರ ನಡೆದ ಆಸ್ಟ್ರೇಲಿಯನ್ ಓಪನ್ ಡಬಲ್ಸ್ ಫೈನಲ್‌ನಲ್ಲಿ ರೋಹನ್ ಹಾಗೂ ಆಸ್ಟ್ರೇಲಿಯಾದ ಮ್ಯಾಥ್ಯೂ ಎಬ್ಡೆನ್ ಜೋಡಿಯು 7–6, 7–5ರಿಂದ ಇಟಲಿಯ ಸಿಮೊನ್ ಬೊಲೆಲಿ ಮತ್ತು ಆ್ಯಂಡ್ರಿಯಾ ವಾವಾಸೊರಿ ಅವರನ್ನು ಮಣಿಸಿದರು.

16

ಬಿಹಾರ ಸಿ.ಎಂ ನಿತೀಶ್ ರಾಜೀನಾಮೆ ಇಂದು?

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಹಾರದ ‘ಮಹಾ ಘಟಬಂಧನ್’ ಸರ್ಕಾರ ಪತನದಂಚಿಗೆ ತಲುಪಿದ್ದು, ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಭಾನುವಾರ ಬೆಳಿಗ್ಗೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವ ಸಂಭವ ಇದೆ.

ಇದಕ್ಕೆ ಪೂರಕವಾಗಿ ಪಟ್ನಾ ಹಾಗೂ ನವದೆಹಲಿಯಲ್ಲಿ ಹಲವು ರಾಜಕೀಯ ಬೆಳವಣಿಗೆಗಳು ಶನಿವಾರ ನಡೆದವು. ಬಿಜೆಪಿ, ಜೆಡಿಯು, ಆರ್‌ಜೆಡಿ ಹಾಗೂ ಕಾಂಗ್ರೆಸ್‌ನ ಮುಖಂಡರು ಆಂತರಿಕ ಸಭೆಗಳನ್ನು ನಡೆಸಿ ಮುಂದಿನ ನಡೆ ಕುರಿತು ಕಾರ್ಯತಂತ್ರಗಳನ್ನು ಹೆಣೆದರು. ನಿತೀಶ್ ರಾಜೀನಾಮೆ ನೀಡುವ ಕಾಲ ಸನ್ನಿಹಿತವಾಗಿದೆ ಎಂದು ಜೆಡಿಯು ಮೂಲಗಳು ಹೇಳಿವೆ. ಅದೇ ರೀತಿ, ಆರ್‌ಜೆಡಿ, ಕಾಂಗ್ರೆಸ್ ಹಾಗೂ ಜೆಡಿಯು ನಾಯಕರ ಹೇಳಿಕೆಗಳು ಇದಕ್ಕೆ ಪುಷ್ಟಿ ನೀಡಿವೆ. ಬಿಹಾರ ಬಿಜೆಪಿಯ ನಾಯಕರು ಪಟ್ನಾದಲ್ಲಿ ಸಭೆ ನಡೆಸಿದರು.

ಈ ಎಲ್ಲ ಬೆಳವಣಿಗೆಗಳಿಂದಾಗಿ, 18 ತಿಂಗಳಲ್ಲೇ ನಿತೀಶ್ ಅವರು ಎನ್‌ಡಿಎ ಮೈತ್ರಿಕೂಟದ ತೆಕ್ಕೆಗೆ ಮರಳುವ ಸಾಧ್ಯತೆ ದಟ್ಟವಾಗಿದೆ.

ಕಳೆದ ಒಂಬತ್ತು ವರ್ಷಗಳಲ್ಲಿ ನಾಲ್ಕನೇ ಬಾರಿಗೆ ನಿತೀಶ್ ಅವರು ರಾಜಕೀಯ ಮಗ್ಗಲು ಬದಲಾಯಿಸಲು ಮುಂದಾಗಿದ್ದಾರೆ ಎಂಬ ಸುಳಿವನ್ನು ಜೆಡಿಯು ವಕ್ತಾರ ರಾಜೀವ್ ರಂಜನ್ ಪರೋಕ್ಷವಾಗಿ ನೀಡಿದರು. ‘ನಿತೀಶ್ ಅವರು ರಾಜ್ಯದ ಹಿತಾಸಕ್ತಿ ಪರಿಗಣಿಸಿ ನಿರ್ಧಾರ ತೆಗೆದುಕೊಳ್ಳುತ್ತಾರೆ. ಅವರ ಎಲ್ಲ ನಿರ್ಧಾರಗಳಲ್ಲಿ ಬಿಹಾರದ ಹಿತಾಸಕ್ತಿ ಮುಖ್ಯವಾಗಿರುತ್ತದೆ’ ಎಂದು ಅವರು ಹೇಳಿದರು.

9ನೇ ಪುಟ ನೋಡಿ

3 ವರ್ಷದಲ್ಲಿ 9,862 ಪ್ರಕರಣ ದಾಖಲು; ಬೆಂಗಳೂರಿನಲ್ಲಿಯೇ 1,454 ಪ್ರಕರಣ

ಪೋಕ್ಸೊ ಪ್ರಕರಣ: ಶಿಕ್ಷೆಯೇ ವಿಳಂಬ

• ನಾಗರಾಜ ಬಿ.ಎನ್.

> ಕೆಲ ಧಾರ್ಮಿಕ ಮುಖಂಡರು, ಉದ್ಯಮಿಗಳು, ರಾಜಕಾರಣಿಗಳು ಪೋಕ್ಸೊ ಪ್ರಕರಣದ ಆರೋಪಿಗಳು ಆಗಿದ್ದಾರೆ. ಸೂಕ್ತ ಸಾಕ್ಷ್ಯಾಧಾರ ಇದ್ದರೂ ಶಿಕ್ಷೆ ವಿಧಿಸುವ ಪ್ರಕ್ರಿಯೆ ಮಾತ್ರ ವಿಳಂಬವಾಗುತ್ತಿದೆ
> **ವಾಸುದೇವ ಶರ್ಮಾ,** ಕಾರ್ಯನಿರ್ವಾಹಕ ನಿರ್ದೇಶಕ, ಚೈಲ್ಡ್ ರೈಟ್ಸ್ ಟ್ರಸ್ಟ್

ಹುಬ್ಬಳ್ಳಿ: ರಾಜ್ಯದಲ್ಲಿ ಮೂರು ವರ್ಷಗಳ (2021–2023) ಅವಧಿಯಲ್ಲಿ ದಾಖಲಾದ ಪೋಕ್ಸೊ ಪ್ರಕರಣಗಳ ಸಂಖ್ಯೆ 9,862. ಆದರೆ, ಶಿಕ್ಷೆಯಾದ ಪ್ರಕರಣಗಳ ಸಂಖ್ಯೆ ಮಾತ್ರ 202!

ಬಾಲಕಿಯರ ರಕ್ಷಣೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಹಲವು ಯೋಜನೆಗಳು ಜಾರಿಗೊಳಿಸಿದರೂ ಲೈಂಗಿಕ ದೌರ್ಜನ್ಯ, ಬಾಲ್ಯ ವಿವಾಹದಂತಹ ಪ್ರಕರಣಗಳು ಜರುಗುತ್ತಲೇ ಇವೆ. ಆದರೆ, ಆರೋಪಿಗಳಿಗೆ ಮಾತ್ರ ತ್ವರಿತ ಶಿಕ್ಷೆಯಾಗುತ್ತಿಲ್ಲ.

ರಾಜ್ಯ ಅಪರಾಧ ದಾಖಲೆಗಳ ವಿಭಾಗದ ಪ್ರಕಾರ, ಪೋಕ್ಸೊ ಪ್ರಕರಣದಲ್ಲಿ ಬೆಂಗಳೂರು ನಗರ ಮೊದಲ ಸ್ಥಾನದಲ್ಲಿದೆ. ಅಲ್ಲಿ ಮೂರು ವರ್ಷದಲ್ಲಿ 1,454 ಪ್ರಕರಣಗಳು ದಾಖಲಾಗಿವೆ. ಕೊನೆಯ ಸ್ಥಾನಗಳಲ್ಲಿ ಇರುವ ಬೆಳಗಾವಿ ನಗರ ಮತ್ತು ಕಲಬುರಗಿ ನಗರದಲ್ಲಿ ತಲಾ 79 ಪ್ರಕರಣಗಳು ದಾಖಲಾಗಿವೆ.

ಮೂರು ವರ್ಷಗಳಲ್ಲಿ 129 ಪ್ರಕರಣಗಳನ್ನು ಸುಳ್ಳು ಎಂದು ಪರಿಗಣಿಸಲಾಗಿದೆ. 257 ಪ್ರಕರಣಗಳನ್ನು ವಿವಿಧ ಠಾಣೆಗಳಿಗೆ ತನಿಖೆಗಾಗಿ ವರ್ಗಾಯಿಸಲಾಗಿದೆ. ಎಂಟು ಪ್ರಕರಣಗಳು ಮಾತುಕತೆ ಮೂಲಕ ಬಗೆಹರಿದಿವೆ.

‘2012ರಲ್ಲಿ ಪೋಕ್ಸೊ ಕಾಯ್ದೆ ಬರುವವರೆಗೆ ಪೊಲೀಸ್ ಠಾಣೆಗೆ ದೂರು ನೀಡಲು ಜನ ಹಿಂಜರಿಯುತ್ತಿದ್ದರು. ಅವರಲ್ಲಿ ಭಯ ಮೂಡಿಸಲಾಗುತ್ತಿತ್ತು. ಈಗ ಸಾಕಷ್ಟು ಜಾಗೃತಿ ಮೂಡಿಸಿದ ಬಳಿಕ ಸಂತ್ರಸ್ತ ಮಕ್ಕಳ ಜೊತೆ ಪಾಲಕರು ಠಾಣೆಗೆ ದೂರು ನೀಡತೊಡಗಿದ್ದಾರೆ. ಆದರೆ, ಆರೋಪಿಗಳು ಶಿಕ್ಷೆಗೆ ಗುರಿಯಾಗುವ ಪ್ರಕ್ರಿಯೆ ತ್ವರಿತವಾಗಿ ನಡೆಯುತ್ತಿಲ್ಲ’ ಎಂದು ಚೈಲ್ಡ್ ರೈಟ್ ಟ್ರಸ್ಟ್ ಕಾರ್ಯನಿರ್ವಾಹಕ ನಿರ್ದೇಶಕ ವಾಸುದೇವ ಶರ್ಮಾ ‘ಪ್ರಜಾವಾಣಿ’ಗೆ ತಿಳಿಸಿದರು.

ಮೂರು ವರ್ಷದ ಪೋಕ್ಸೊ ಪ್ರಕರಣಗಳ ಸಂಖ್ಯೆ

ವರ್ಷ	ದಾಖಲಾದ ಪ್ರಕರಣ	ಶಿಕ್ಷೆ	ತನಿಖಾ ಹಂತ
2021	2,880	128	1,483
2022	3,189	69	2,134
2023	3,791	5	2,727

ಅತಿಹೆಚ್ಚು ಪ್ರಕರಣ ದಾಖಲಾದ ಜಿಲ್ಲೆಗಳ ವಿವರ

ಬೆಂಗಳೂರು ನಗರ	1,454
ಶಿವಮೊಗ್ಗ	540
ಚಿಕ್ಕಬಳ್ಳಾಪುರ	471
ಹಾಸನ	458
ಮೈಸೂರು	404
ತುಮಕೂರು	384
ಬೆಳಗಾವಿ ಗ್ರಾಮೀಣ	348
ರಾಮನಗರ	306

(ಆಧಾರ: ರಾಜ್ಯ ಅಪರಾಧ ದಾಖಲೆಗಳ ವಿಭಾಗ)

6ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ವಿವೇಕನಗರ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಕೊಲೆ: ನಾಲ್ವರು ಆರೋಪಿಗಳ ಬಂಧನ

ಬಾರ್‌ನಲ್ಲಿ ಬೈದಿದ್ದಕ್ಕೆ ಮನೆಗೆ ನುಗ್ಗಿ ರೌಡಿ ಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವೇಕನಗರ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ರೌಡಿ ಸತೀಶ್ ಅಲಿಯಾಸ್ ಮಿಲ್ಟ್ರಿ (30) ಕೊಲೆ ಪ್ರಕರಣದಲ್ಲಿ ನಾಲ್ವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿಗಳಾದ ಸುನೀಲ್ ಜೇಮ್ಸ್, ಕ್ಲೆಮೆಂಟ್, ಪ್ರಶಾಂತ್ ಹಾಗೂ ಧನುಷ್ ಬಂಧಿತರು. ಇವರೆಲ್ಲರೂ ಸೇರಿಕೊಂಡು ಜ. 24ರಂದು ಸತೀಶ್ ಮನೆಗೆ ನುಗ್ಗಿ ಹತ್ಯೆ ಮಾಡಿ ಪರಾರಿಯಾಗಿದ್ದರು' ಎಂದು ಪೊಲೀಸರು ಹೇಳಿದರು.

'ಮಾಯಾ ಬಜಾರ್ ನಿವಾಸಿ ಸತೀಶ್, ಹಲವು ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದ. ವಿವೇಕನಗರ ಠಾಣೆಯ ರೌಡಿ ಪಟ್ಟಿಯಲ್ಲಿ ಈತನ ಹೆಸರಿತ್ತು. ಸ್ಥಳೀಯರನ್ನು ಈತ ಹೆದರಿಸುತ್ತಿದ್ದ ಬಗ್ಗೆ ಮಾಹಿತಿ ಇದೆ' ಎಂದು ತಿಳಿಸಿದರು.

'ಆರೋಪಿ ಪ್ರಶಾಂತ್ ಹಾಗೂ ಸ್ನೇಹಿತರು, ಇತ್ತೀಚೆಗೆ ಬಾರ್‌ವೊಂದಕ್ಕೆ ಹೋಗಿದ್ದರು. ಬಾರ್‌ನಲ್ಲಿ ಪ್ರಶಾಂತ್ ಜೊತೆ ಜಗಳ ತೆಗೆದಿದ್ದ ಸತೀಶ್, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದ. ಜೊತೆಗೆ, ಆಗಾಗ ಜಗಳ ತೆಗೆದು ಜೀವ ಬೆದರಿಕೆಯೊಡ್ಡುತ್ತಿದ್ದ. ಸಿಟ್ಟಾಗಿದ್ದ ಪ್ರಶಾಂತ್, ಸ್ನೇಹಿತರ ಜೊತೆ ಸೇರಿ ಸತೀಶ್‌ನನ್ನು ಕೊಲೆ ಮಾಡಲು ಸಂಚು ರೂಪಿಸಿದ್ದ..

ಜ. 24ರಂದು ತಡರಾತ್ರಿ ಆರೋಪಿಗಳು ಮಾರಕಾಸ್ತ್ರ ಸಮೇತ ಸತೀಶ್‌ನನ್ನು ಮನೆಯವರೆಗೂ ಹಿಂಬಾಲಿಸಿದ್ದರು. ಮನೆಗೆ ನುಗ್ಗಿ ಹಲ್ಲೆ ಮಾಡಿದ್ದರು. ತೀವ್ರ ಗಾಯಗೊಂಡಿದ್ದ ಸತೀಶ್ ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಮೃತಪಟ್ಟಿದ್ದರು. ಕೊಲೆ ಸಂಬಂಧ ಪತ್ನಿ ದೂರು ನೀಡಿದ್ದರು' ಎಂದು ಹೇಳಿದರು.

ತಲಘಟ್ಟಪುರ ಕಾವಲಿಗೆ 101 ಸಿ.ಸಿ.ಟಿ.ವಿ ಕ್ಯಾಮೆರಾ

ಸಿಸಿ ಟಿ.ವಿ ಕ್ಯಾಮೆರಾಗಳ ನಿರ್ವಹಣೆಯ ಕಮಾಂಡ್ ಕೇಂದ್ರವನ್ನು ಕಮಿಷನರ್ ಬಿ.ದಯಾನಂದ್ ಅವರು ಶನಿವಾರ ಉದ್ಘಾಟಿಸಿದರು

ಬೆಂಗಳೂರು: ತಲಘಟ್ಟಪುರ ಠಾಣೆ ವ್ಯಾಪ್ತಿಯ ಪ್ರದೇಶಗಳಲ್ಲಿ ನಿಗಾ ವಹಿಸಲು 101 ಸಿ.ಸಿ ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದ್ದು, ಇವುಗಳ ನಿರ್ವಹಣೆಯ ಕಮಾಂಡ್ ಕೇಂದ್ರವನ್ನು ಕಮಿಷನರ್ ಬಿ.ದಯಾನಂದ್ ಅವರು ಶನಿವಾರ ಉದ್ಘಾಟಿಸಿದರು.

ಚೇಂಜ್ ಮೇಕರ್ಸ್ ಆಫ್ ಕನಕಪುರ ಅಸೋಸಿಯೇಷನ್ (ಸಿಎಂಕೆಆರ್‌ಎ) ಸಹಯೋಗದೊಂದಿಗೆ ತಲಘಟ್ಟಪುರ ಪೊಲೀಸ್ ಠಾಣೆ ವ್ಯಾಪ್ತಿಯ ಪ್ರದೇಶಗಳಲ್ಲಿ ಕ್ಯಾಮೆರಾ ಅಳವಡಿಸಲಾಗಿದೆ. ಅಸೋಸಿಯೇಷನ್ ನೇಮಕ ಮಾಡಿರುವ ಸಿಬ್ಬಂದಿ ಕ್ಯಾಮೆರಾ ನಿರ್ವಹಣೆ ಹೊಣೆ ಹೊತ್ತುಕೊಂಡಿದ್ದಾರೆ.

ತಂತಿರಹಿತ ಕ್ಯಾಮೆರಾಗಳು ಇವಾಗಿದ್ದು, ಪ್ರತಿಯೊಂದು ಕ್ಯಾಮೆರಾ ಬಳಿಯೇ ಧ್ವನಿವರ್ಧಕ ಅಳವಡಿಸಲಾಗಿದೆ. ಕಮಾಂಡ್ ಕೇಂದ್ರದಲ್ಲಿರುವ ಸಿಬ್ಬಂದಿ, ದೃಶ್ಯಗಳನ್ನು ನೋಡಿ ಧ್ವನಿವರ್ಧಕ ಮೂಲಕ ಸೂಚನೆ ನೀಡಲು ಅವಕಾಶವಿದೆ.

'ಪೊಲೀಸರು ಎಲ್ಲ ಸಂದರ್ಭದಲ್ಲಿ ಘಟನಾ ಸ್ಥಳದಲ್ಲಿ ಇರಲು ಸಾಧ್ಯವಿಲ್ಲ. ತಂತ್ರಜ್ಞಾನವನ್ನು ಸಮರ್ಥವಾಗಿ ಬಳಸಿಕೊಂಡು ಅಪರಾಧಗಳಿಗೆ ಕಡಿವಾಣ ಹಾಕಬೇಕಿದೆ' ಎಂದು ದಯಾನಂದ್ ಹೇಳಿದರು.

ಸಿಎಂಕೆಆರ್‌ಎ ಕಾರ್ಯದರ್ಶಿ ವಿ.ಕೆ.ವತ್ಸ, 'ಜನರ ಸುರಕ್ಷತೆ ಹಾಗೂ ಅಪರಾಧ ಕೃತ್ಯಗಳಿಗೆ ಕಡಿವಾಣ ಹಾಕುವ ಉದ್ದೇಶದಿಂದ ಕ್ಯಾಮೆರಾ ಅಳವಡಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಕಡೆ ಕ್ಯಾಮೆರಾಗಳನ್ನು ಅಳವಡಿಸುವ ಯೋಚನೆ ಇದೆ' ಎಂದರು.

ಬೆಂಕಿ ಅವಘಡ: ಯುವಕ ರಕ್ಷಣೆ

ಬೆಂಗಳೂರು: ಉಪ್ಪಾರಪೇಟೆ ಠಾಣೆ ವ್ಯಾಪ್ತಿಯ ಬಳೇಪೇಟೆಯಲ್ಲಿರುವ ಎರಡು ಅಂತಸ್ತಿನ ಕಟ್ಟಡದಲ್ಲಿ ಶುಕ್ರವಾರ ತಡರಾತ್ರಿ ಬೆಂಕಿ ಅವಘಡ ಸಂಭವಿಸಿದ್ದು, ಕಟ್ಟಡದಲ್ಲಿ ಸಿಲುಕಿದ್ದ ಯುವಕನನ್ನು ಅಗ್ನಿಶಾಮಕ ದಳದ ಸಿಬ್ಬಂದಿ ರಕ್ಷಿಸಿದ್ದಾರೆ. 'ಕೆಳ ಮಹಡಿಯಲ್ಲಿದ್ದ ಪೇಂಟ್ ಮಾರಾಟ ಮಳಿಗೆ ಹಾಗೂ ಮೊದಲ ಮಹಡಿಯಲ್ಲಿದ್ದ ಬ್ಯಾಗ್ ಮಾರಾಟ ಮಳಿಗೆಗಳಲ್ಲಿ ಬೆಂಕಿ ಆವರಿಸಿತ್ತು. ಬೆಂಕಿ ನಂದಿಸಲು ಯತ್ನಿಸಿದ್ದ ಯುವಕನೊಬ್ಬ ಕಟ್ಟಡದ ಕೊಠಡಿಯಲ್ಲಿ ಸಿಲುಕಿದ್ದ. ಅಗ್ನಿಶಾಮಕ ದಳದ ಸಿಬ್ಬಂದಿ ಯುವಕನನ್ನು ರಕ್ಷಿಸಿದ್ದಾರೆ' ಎಂದು ಪೊಲೀಸರು ಹೇಳಿದರು.

'ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಹೊತ್ತಿಕೊಂಡಿರುವ ಅನುಮಾನವಿದೆ. ಮಳಿಗೆಯಲ್ಲಿದ್ದ ₹ 30 ಲಕ್ಷ ಮೌಲ್ಯದ ವಸ್ತುಗಳು ಸುಟ್ಟಿವೆ ಎಂದರು.

ಠಾಣೆ ಭೇಟಿಗೆ ವೇಳಾಪಟ್ಟಿ ಕಮಿಷನರ್ ನಡೆಗೆ ಅಸಮಾಧಾನ

ಬೆಂಗಳೂರು: ನಗರದ ಪೊಲೀಸ್ ಠಾಣೆಗಳು ಹಾಗೂ ಉಪ ವಿಭಾಗಗಳ ಕಚೇರಿಗಳಿಗೆ ಭೇಟಿ ನೀಡಿ ವಾರ್ಷಿಕ ಪ್ರಗತಿ ಪರಿಶೀಲನೆ ನಡೆಸಲು ದಿನಗಳನ್ನು ನಿಗದಿಪಡಿಸಿ ಕಮಿಷನರ್ ಬಿ. ದಯಾನಂದ್ ಅವರು ವೇಳಾಪಟ್ಟಿ ಬಿಡುಗಡೆ ಮಾಡಿದ್ದಾರೆ.

ಕಮಿಷನರ್ ನಡೆಗೆ ಅಸಮಾಧಾನ ವ್ಯಕ್ತಪಡಿಸಿರುವ ಸಾರ್ವಜನಿಕರು, 'ಕಮಿಷನರ್ ಅವರು ಠಾಣೆಗಳಿಗೆ ದಿಢೀರ್ ಭೇಟಿ ನೀಡಿದರೆ, ಅಲ್ಲಿಯ ಅವ್ಯವಸ್ಥೆ ಕಣ್ಣಿಗೆ ಕಾಣುತ್ತದೆ. ಭೇಟಿ ದಿನಾಂಕ ನಿಗದಿಪಡಿಸಿದರೆ, ಪೊಲೀಸರು ಎಚ್ಚೆತ್ತುಕೊಳ್ಳುತ್ತಾರೆ. ಇದರಿಂದ ಠಾಣೆ ವ್ಯವಸ್ಥೆ ಸುಧಾರಿಸಲು ಸಾಧ್ಯವಿಲ್ಲ' ಎಂದಿದ್ದಾರೆ.

'ಜನಸ್ನೇಹಿ ಪೊಲೀಸ್ ವ್ಯವಸ್ಥೆ ರೂಪಿಸುವುದಾಗಿ ಸರ್ಕಾರ ಹೇಳುತ್ತಿದೆ. ಆದರೆ, ಹಲವು ಠಾಣೆಗಳಲ್ಲಿ ಜನಸ್ನೇಹಿ ವ್ಯವಸ್ಥೆ ಇಲ್ಲ. ದೂರುದಾರರನ್ನೂ ಆರೋಪಿಗಳ ರೀತಿಯಲ್ಲಿ ನೋಡಲಾಗುತ್ತಿದೆ. ಕೆಲ ಠಾಣೆಗಳಲ್ಲಿ ಭ್ರಷ್ಟಾಚಾರವೂ ವಿಪರೀತವಾಗಿದೆ. ಇದರಿಂದಾಗಿ ಹಲವು ಜನರು ಠಾಣೆಗೆ ಹೋಗಲು ಹೆದರುತ್ತಿದ್ದಾರೆ' ಎಂದು ದೂರಿದ್ದಾರೆ.

'ಪೊಲೀಸರ ಕೆಲಸದ ಬಗ್ಗೆ ಕಮಿಷನರ್ ಅವರು ಪರಿಶೀಲನೆ ನಡೆಸುವುದು ಉತ್ತಮ ಬೆಳವಣಿಗೆ. ಆದರೆ, ಅವರ ಭೇಟಿ ದಿಢೀರ್ ಆಗಿರಬೇಕು. ಆಗ ಮಾತ್ರ ಪೊಲೀಸರ ತಪ್ಪುಗಳನ್ನು ಪತ್ತೆ ಮಾಡಿ, ಶಿಸ್ತುಕ್ರಮ ಜರುಗಿಸಬಹುದು. ಮೊದಲೇ ದಿನ ತಿಳಿಸಿ ಠಾಣೆಗೆ ಹೋದರೆ, ಪೊಲೀಸರಿಗೆ ಅನುಕೂಲ ಹೆಚ್ಚು' ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.

'ಕಮಿಷನರ್ ದಯಾನಂದ್ ಅವರು ಆರಂಭದಲ್ಲಿ ಠಾಣೆಗಳಿಗೆ ದಿಢೀರ್ ಭೇಟಿ ನೀಡುತ್ತಿದ್ದರು. ಕರ್ತವ್ಯಲೋಪ ಎಸಗಿದ್ದ ಪೊಲೀಸರ ವಿರುದ್ಧ ಇಲಾಖೆ ಕ್ರಮ ಜರುಗಿಸಿದ್ದರು. ಆದರೆ, ಈಗ ಅವರೇ ದಿನ ನಿಗದಿಪಡಿಸಿರುವುದು ಅನುಮಾನಕ್ಕೆ ಕಾರಣವಾಗಿದೆ. ಕಮಿಷನರ್ ಅವರು ವೇಳಾಪಟ್ಟಿ ಹಿಂಪಡೆಯಬೇಕು. ದಿಢೀರ್ ಭೇಟಿ ಮುಂದುವರಿಸಬೇಕು' ಎಂದು ಆಗ್ರಹಿಸಿದ್ದಾರೆ.

ಹಲವು ವರ್ಷಗಳ ಬಳಿಕ ಚಾಲನೆ: 'ಠಾಣೆ ಹಾಗೂ ಉಪವಿಭಾಗ ಕಚೇರಿಗಳಿಗೆ ಭೇಟಿ ನೀಡಿ ಪ್ರಗತಿ ಪರಿಶೀಲನೆ ನಡೆಸುವ ಪ್ರಕ್ರಿಯೆ ಹಲವು ವರ್ಷಗಳಿಂದ ಬಂದ್ ಆಗಿತ್ತು. ಇದೀಗ ಈ ಪ್ರಕ್ರಿಯೆಗೆ ಪುನಃ ಚಾಲನೆ ನೀಡಿರುವ ದಯಾನಂದ್, ಆಯಾ ಠಾಣೆಗಳಲ್ಲಿಯೇ ಪ್ರತಿ ಪರಿಶೀಲನೆ ನಡೆಸಲು ಮುಂದಾಗಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಸುದ್ದಿ 2 ನಿಮಿಷ

ಚಿನ್ನದ ಗಟ್ಟಿ ಕದ್ದು ವಿಮಾನ ನಿಲ್ದಾಣದಲ್ಲಿ ಸಿಕ್ಕಿಬಿದ್ದ ಬಾಲಕ!

ದೇವನಹಳ್ಳಿ: ಕೆಲಸ ಮಾಡುತ್ತಿದ್ದ ಚಿನ್ನದ ಮಳಿಗೆಯಲ್ಲಿ ಕದ್ದಿದ್ದ ಚಿನ್ನದ ಗಟ್ಟಿಗಳನ್ನು ಬಚ್ಚಿಟ್ಟುಕೊಂಡು ಹೊರಟಿದ್ದ ಬಾಲಕನೊಬ್ಬನನ್ನು ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ಸಿಬ್ಬಂದಿ ಗುರುವಾರ ವಶಕ್ಕೆ ಪಡೆದಿದ್ದಾರೆ.

ಬಾಲಕನಿಂದ ₹12.46 ಲಕ್ಷ ಮೌಲ್ಯದ ತಲಾ 50 ಗ್ರಾಂ ತೂಕದ ಎರಡು ಚಿನ್ನಗಟ್ಟಿಗಳನ್ನು ವಶಪಡಿಸಿಕೊಂಡಿದ್ದಾರೆ. ಕಾನೂನು ಸಂಘರ್ಷಕ್ಕೆ ಒಳಪಟ್ಟ ಬಾಲಕನನ್ನು ಪರಿವರ್ತನಾ ಕೇಂದ್ರದ ಸುಪರ್ದಿಗೆ ಕೊಡಲಾಗಿದೆ.

ಮೆಜೆಸ್ಟಿಕ್ ಚಿನ್ನದ ಮಳಿಗೆಯೊಂದರಲ್ಲಿ ಕೆಲಸ ಮಾಡುತ್ತಿದ್ದ ಬಾಲಕ ಅಂಗಡಿಯಿಂದ 100 ಗ್ರಾಂ ತೂಕದ ಚಿನ್ನದ ಗಟ್ಟಿಗಳನ್ನು ಕದ್ದು ಅಹಮದಾಬಾದ್‌ಗೆ ಹೊರಟಿದ್ದ. ಅದಕ್ಕಾಗಿ ಜ.25ರಂದು ವಿಮಾನ ಟಿಕೆಟ್ ಕಾಯ್ದಿರಿಸಿದ್ದ.

ಬಾಲಕ ಶೂಗಳಲ್ಲಿ ಚಿನ್ನದ ಗಟ್ಟಿಗಳನ್ನು ಬಚ್ಚಿಟ್ಟುಕೊಂಡಿರುವುದು ವಿಮಾನ ನಿಲ್ದಾಣದ ಭದ್ರತಾ ತಪಾಸಣೆಯ ಸ್ಕ್ಯಾನಿಂಗ್ ಯಂತ್ರದಲ್ಲಿ ಪತ್ತೆಯಾಗಿದೆ.

ಕಾನೂನು ಸಂಘರ್ಷಕ್ಕೆ ಒಳಪಟ್ಟ ಬಾಲಕನನ್ನು ವಶಕ್ಕೆ ಪಡೆದ ವಿಮಾನ ನಿಲ್ದಾಣ ಪೊಲೀಸ್ ಠಾಣೆ ಸಿಐಎಸ್‌ಎಫ್ ಸಬ್ ಇನ್‌ಸ್ಪೆಕ್ಟರ್ ದೀಪಕ್ ತನ್ವಾರ್, ಪ್ರಕರಣ ದಾಖಲಿಸಿಕೊಂಡು, ಆತನನ್ನು ಪರಿವರ್ತನಾ ಕೇಂದ್ರಕ್ಕೆ ಕಳುಹಿಸಿದ್ದಾರೆ.

'ಅಹಿತಕರ ಘಟನೆಗಳಿಗೆ ಪಿ.ಜಿ ಮಾಲೀಕರೇ ಹೊಣೆ'

ಬೆಂಗಳೂರು: ನಗರದಲ್ಲಿರುವ ಪೇಯಿಂಗ್ ಗೆಸ್ಟ್ (ಪಿ.ಜಿ) ಕಟ್ಟಡಗಳಲ್ಲಿ ಸುರಕ್ಷತಾ ಕ್ರಮ ಕೈಗೊಳ್ಳುವಂತೆ ಮಾಲೀಕರಿಗೆ ಸೂಚನೆ ನೀಡಿರುವ ಪೊಲೀಸರು, ಯಾವುದಾದರೂ ಅಹಿತಕರ ಘಟನೆಗಳು ನಡೆದರೆ ಮಾಲೀಕರನ್ನೇ ಹೊಣೆ ಮಾಡುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಈ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಪ್ರಕಟಿಸಿರುವ ಹೆಚ್ಚುವರಿ ಪೊಲೀಸ್ ಕಮಿಷನರ್ ರಮಣ್ ಗುಪ್ತಾ, ಸುರಕ್ಷತಾ ಕ್ರಮ ಕೈಗೊಳ್ಳದವರ ವಿರುದ್ಧ ಕರ್ನಾಟಕ ಪೊಲೀಸ್ ಕಾಯ್ದೆಯಡಿ ಕ್ರಮ ಜರುಗಿಸುವುದಾಗಿ ಹೇಳಿದ್ದಾರೆ.

'ಪಿ.ಜಿ ನಡೆಸಲು ಬಿಬಿಎಂಪಿ ವತಿಯಿಂದ ಪರವಾನಗಿ ಪಡೆಯಬೇಕು. ವಾಸಕ್ಕೆ ಬರುವ ವ್ಯಕ್ತಿಗಳ ಗುರುತಿನ ಚೀಟಿಗಳು ಹಾಗೂ ಸಂಬಂಧಿಕರ ವಿವರಗಳನ್ನು ದಾಖಲಿಸಿಕೊಳ್ಳಬೇಕು. ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಬೇಕು. ಡ್ರಗ್ಸ್ ಸೇವನೆ ಹಾಗೂ ಮಾರಾಟಕ್ಕೆ ಅವಕಾಶ ನೀಡಬಾರದು. ಅಡುಗೆ, ಸ್ವಚ್ಛತೆ ಹಾಗೂ ಇತರೆ ಕೆಲಸಕ್ಕೆ ನೇಮಿಸಿಕೊಳ್ಳುವ ವ್ಯಕ್ತಿಗಳ ಬಗ್ಗೆ ಪೊಲೀಸರ ಪರಿಶೀಲನಾ ಪ್ರಮಾಣ ಪತ್ರ ಪಡೆಯಬೇಕು. ವಿದೇಶಿ ಪ್ರಜೆಗಳು ವಾಸವಿದ್ದರೆ, ಅವರ ಬಗ್ಗೆ ಸಂಬಂಧಪಟ್ಟ ಠಾಣೆಗೆ ಮಾಹಿತಿ ನೀಡಬೇಕು. ರಾತ್ರಿ 10 ಗಂಟೆಯಿಂದ ಬೆಳಿಗ್ಗೆ 6 ಗಂಟೆಯವರೆಗೆ ಯಾವುದೇ ಧ್ವನಿವರ್ಧಕ ಬಳಸಬಾರದು' ಎಂದು ಅವರು ಹೇಳಿದ್ದಾರೆ.

ಮತೀಯ ಗೂಂಡಾಗಿರಿ ಬಜರಂಗದಳದ ಇಬ್ಬರು ಸೆರೆ

ಪ್ರಜಾವಾಣಿ ವಾರ್ತೆ

ತುಮಕೂರು: ಹಿಂದೂ ಯುವತಿಯ ಜತೆ ಬೈಕ್‌ನಲ್ಲಿ ಹೋಗುತ್ತಿದ್ದ ಮುಸ್ಲಿಂ ಯುವಕನ ಮೇಲೆ ಹಲ್ಲೆ ನಡೆಸಿದ ಆರೋಪದ ಮೇರೆಗೆ ಬಜರಂಗದಳದ ಮುಖಂಡ ಮಂಜು ಭಾರ್ಗವ್ ಸೇರಿ ಆರು ಜನರ ವಿರುದ್ಧ ಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪೊಲೀಸರು ಶನಿವಾರ ನಗರದ ನಿವಾಸಿಗಳಾದ ತ್ಯಾಗರಾಜ್, ಶರತ್ ಎಂಬ ಆರೋಪಿಗಳನ್ನು ಬಂಧಿಸಿದ್ದಾರೆ. ಹಲ್ಲೆಯಲ್ಲಿ ಗಾಯಗೊಂಡಿರುವ ಸಲ್ಮಾನ್ ಪಾಷ (26) ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮೊಬೈಲ್ ರಿಪೇರಿ ಅಂಗಡಿ ನಡೆಸುತ್ತಿರುವ ಸಲ್ಮಾನ್ ಪರಿಚಯದ ಯುವತಿಯನ್ನು ಪ್ರತಿದಿನ ಬೈಕ್‌ನಲ್ಲಿ ಮನೆಯಿಂದ ಕೆಲಸ ಮಾಡುವ ಸ್ಥಳಕ್ಕೆ ಬಿಟ್ಟು, ಕರೆದೊಯ್ಯುತ್ತಿದ್ದರು.

'ಶುಕ್ರವಾರ ರಾತ್ರಿ ಯುವತಿಯನ್ನು ಮನೆಯ ಬಳಿ ಬಿಟ್ಟು ವಾಪಸ್ ಹೋಗುವಾಗ ಬನಶಂಕರಿ ಹತ್ತಿರ ಬೈಕ್ ಅಡ್ಡಗಟ್ಟಿದ ಕೆಲವರು ಹಲ್ಲೆ ನಡೆಸಿದರು. ಸ್ಥಳಕ್ಕೆ ಬಂದ ನನ್ನ ಸ್ನೇಹಿತರನ್ನು ಹೆದರಿಸಿ ಓಡಿಸಿದರು. ಕಲ್ಲು, ರಾಡ್‌ನಿಂದ ಹೊಡೆದಿದ್ದಾರೆ' ಎಂದು ಸಲ್ಮಾನ್ ದೂರು ನೀಡಿದ್ದಾರೆ.

'ಹಿಂದೂ ಹುಡುಗಿಯ ಜತೆ ಓಡಾಡುತ್ತಿರುವುದನ್ನು ಗಮನಿಸಿ ಸಾಯಿಸುವ ಉದ್ದೇಶದಿಂದ ಹಲ್ಲೆ ನಡೆಸಿದ್ದಾರೆ. ಮಂಜು ಭಾರ್ಗವ್ ಕುಮ್ಮಕ್ಕಿನಿಂದ ಜೀವನ್, ಶರತ್, ಹನುಮಂತರಾಜು, ರವಿ ಮತ್ತಿತರರು ಹಲ್ಲೆ ಮಾಡಿದ್ದಾರೆ. ಹಲ್ಲೆ ನಡೆದ ಸ್ಥಳಕ್ಕೆ ಬಂದ ಸ್ನೇಹಿತರು ಆಸ್ಪತ್ರೆಗೆ ದಾಖಲಿಸಿದ್ದಾರೆ' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಸಲ್ಮಾನ್ ನೀಡಿದ ದೂರಿನ ಮೇರೆಗೆ ಜೀವನ್, ಶರತ್, ಹನುಮಂತರಾಜು, ರವಿ, ಮಂಜು ಭಾರ್ಗವ್ ಮತ್ತು ಮತ್ತೊಬ್ಬನ ವಿರುದ್ಧ ಐಪಿಸಿ 307 (ಕೊಲೆ ಯತ್ನ) ಹಾಗೂ ಇತರ ಕಾಲಂ ಅಡಿ ಪ್ರಕರಣ ದಾಖಲಾಗಿದೆ.

ಸತ್ಯ, ಶುದ್ಧತೆಯ ಪ್ರತೀಕ ಮೇದಾರ ಕೇತಯ್ಯ

ಜಯಂತಿ ಕಾರ್ಯಕ್ರಮದಲ್ಲಿ ಶಿಕ್ಷಣ ತಜ್ಞೆ ಲೀಲಾ ದೇಸಾಯಿ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನಪದರ ಹಾಡುಗಳಲ್ಲಿ ನಲಿದಾಡಿರುವ ಮೇದಾರ ಕೇತಯ್ಯ ಅವರು ಸತ್ಯ, ಶುದ್ಧತೆಯ ಅನಾವರಣವಾಗಿದ್ದಾರೆ ಎಂದು ಶಿಕ್ಷಣ ತಜ್ಞೆ ಲೀಲಾ ದೇಸಾಯಿ ಹೇಳಿದರು.

ವಚನಜ್ಯೋತಿ ಬಳಗವು ಕಲ್ಯಾಣ ಗೃಹನಿರ್ಮಾಣ ಸಹಕಾರ ಸಂಘ ಬಡಾವಣೆಯ ಕಲ್ಯಾಣ ಪಟ್ಟಣದಲ್ಲಿ ಆಯೋಜಿಸಿದ್ದ ಮೇದಾರ ಕೇತಯ್ಯ ಜಯಂತಿಯಲ್ಲಿ ಅವರು ಉಪನ್ಯಾಸ ನೀಡಿದರು.

ದುರಾಸೆಗೆ ಒಳಗೊಳ್ಳದೆ ಸತ್ಯ ಶುದ್ಧತೆಯಿಂದ ಬದುಕನ್ನು ನಡೆಸಿದ ಮೇದಾರ ಕೇತಯ್ಯನವರನ್ನು ಸ್ಮರಿಸುತ್ತಿರುವುದು ಒಳ್ಳೆಯ ಬೆಳವಣಿಗೆ ಎಂದರು.

ಬೆಳವಲದ ನಾಡಿನಿಂದ ಬಸವಣ್ಣನವರ ತತ್ವದಿಂದ ಆಕರ್ಷಿತರಾಗಿ ಕಲ್ಯಾಣಕ್ಕೆ ಬಂದ ಕೇತಯ್ಯನವರು, ಸಮೀಪದ ಕಾಡಿನಿಂದ ಬಿದಿರನ್ನು ಕಡಿದು ಬುಟ್ಟಿಗಳನ್ನು ಹೆಣೆದು, ದಾಸೋಹ ಮಾಡುತ್ತಿದ್ದರು. ತಮ್ಮ ಮನೆಯಲ್ಲಿ ಬಸವಣ್ಣನವರು ಇಟ್ಟ ಚಿನ್ನದ ನಾಣ್ಯಗಳನ್ನು ಕಸಕ್ಕೆ ಎಸೆದ ಕೇತಯ್ಯನವರು ಬಿದಿರನ್ನು ಕಡೆಯುತ್ತಿದ್ದಾಗ ಚಿನ್ನದ ನಾಣ್ಯಗಳು ಉದುರುತ್ತಿದ್ದನ್ನು ತಿರಸ್ಕರಿಸಿ ಕೇವಲ ಬಿದಿರನ್ನು ಆಯ್ಕೆ ಮಾಡಿಕೊಂಡಿದ್ದನ್ನು ಭೀಮ ಕವಿಯು ಚಿತ್ರಿಸಿರುವ ಪ್ರಸಂಗವನ್ನು ವಿವರಿಸಿದರು.

ವಚನಜ್ಯೋತಿ ಬಳಗವು ಆಯೋಜಿಸಿದ್ದ ಮೇದಾರ ಕೇತಯ್ಯ ಜಯಂತಿಯಲ್ಲಿ ಬಳಗದ ಅಧ್ಯಕ್ಷ ಪಿನಾಕಪಾಣಿ, ಶಿಕ್ಷಣತಜ್ಞೆ ಲೀಲಾ ದೇಸಾಯಿ, ಗಮಕಿ ಸರ್ವಾಣಿ ಪುಷ್ಪಾರ್ಚನೆ ಮಾಡಿದರು

ವಚನಜ್ಯೋತಿ ಬಳಗದ ಅಧ್ಯಕ್ಷ ಪಿನಾಕಪಾಣಿ ಮಾತನಾಡಿ, 'ಜಾತಿಗಳಿಗೆ ಸೀಮಿತವಾದ ಜಯಂತಿಗಳ ಹೊರತಾಗಿ ನೆಲದ ವಚನಕಾರರನ್ನು ನೆನಪಿಸುವ ಉದ್ದೇಶ ಬಳಗದ್ದಾಗಿದೆ' ಎಂದರು.

ಪುಟಾಣಿಗಳಾದ ಸಾತ್ವಿಕ ಬಾಚಲಾಪುರ ಮತ್ತು ಶ್ರಾವಣಿ ಹಣ್ಣೆ, ಮೇದಾರ ಕೇತಯ್ಯ ಅವರ ಕುರಿತಾದ ಜನಪದ ಗೀತೆ ಹಾಡಿದರು. ದಿಶಾ ಮತ್ತು ಪ್ರದ್ಯೋತ್ ವಚನ ಗಾಯನ ಮಾಡಿದರು. ಗಮಕಿ ಸರ್ವಾಣಿ ಯೋಗೇಶ್, ಭೀಮಕವಿ ಕಂಡ ಮೇದಾರ ಕೇತಯ್ಯ ಪ್ರಸಂಗವನ್ನು ವಾಚನ ಮಾಡಿದರು.

ಬಸವ ಬೆಳಕುವಿನ ಪ್ರಸನ್ನ, ಬಳಗದ ಪ್ರಧಾನ ಕಾರ್ಯದರ್ಶಿ ಪ್ರಭು ಇಸುವನಹಳ್ಳಿ, ಕಲಿಕಾ ತರಗತಿಯ ಮಧು ಶಿವಕುಮಾರ್, ಬಳಗದ ರುದ್ರೇಶ್ ಇಸುವನಹಳ್ಳಿ, ಸಂಚಾಲಕ ದಿವಾಕರ್, ದಿವ್ಯಾ ಉಮೇಶ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

'ಮಕ್ಕಳ ಸಾಹಿತ್ಯದಲ್ಲಿ ಪ್ರಯೋಗ ಅಗತ್ಯ'

ಬೆಂಗಳೂರು: ಮಕ್ಕಳ ಸಾಹಿತ್ಯ ಲೋಕದಲ್ಲಿ ಪ್ರಯೋಗಗಳಾಗಬೇಕು. ಸಮಕಾಲೀನ ಸಂಗತಿಗಳನ್ನು ಅದರ ಚೌಕಟ್ಟಿನೊಳಗೆ ತರಬೇಕು. ಮಕ್ಕಳ ಸಾಹಿತ್ಯಕ್ಕೆ ಹೊಸ ಸ್ಪರ್ಶದ ಅಗತ್ಯವಿದೆ ಎಂದು ಲೇಖಕ ನಾಗೇಶ ಹೆಗಡೆ ಪ್ರತಿಪಾದಿಸಿದರು.

ಪರಾಗ್ ಹಾಗೂ ಬಹುರೂಪಿ ಪ್ರಕಾಶನ ಜಂಟಿಯಾಗಿ ಬೆಂಗಳೂರಿನಲ್ಲಿ ಹಮ್ಮಿಕೊಂಡಿರುವ ಮೂರು ದಿನಗಳ ಮಕ್ಕಳ ಕೃತಿಗಳ ಭಾಷಾಂತರ ಕಾರ್ಯಾಗಾರದಲ್ಲಿ ಸಾಹಿತಿಯೊಂದಿಗೆ ಸಂವಾದದಲ್ಲಿ ಅವರು ಮಾತನಾಡಿದರು.

ವಿಜ್ಞಾನ ಸಂವಹನ ಹೇಗೆ ಸರಳ ಭಾಷೆಯನ್ನು ಹೊಂದಿ, ಜನರಿಗೆ ಅರ್ಥವಾಗಬೇಕು ಎಂದು ಬಯಸುತ್ತೇವೆಯೋ ಮಕ್ಕಳ ಸಾಹಿತ್ಯ ರಚಿಸುವಾಗಲೂ ಅದೇ ಸೂತ್ರವನ್ನು ಅಳವಡಿಸಿಕೊಳ್ಳಬೇಕು ಎಂದರು.

ಪರಾಗ್‌ನ ಲಕ್ಷ್ಮಿ ಕರುಣಾಕರನ್, ಬಹುರೂಪಿಯ ಜಿ.ಎನ್. ಮೋಹನ್, ಶ್ರೀಜಾ ವಿ.ಎನ್., ಮಕ್ಕಳ ಸಾಹಿತ್ಯ ತಜ್ಞರಾದ ಎಂ. ಅಬ್ದುಲ್ ರೆಹಮಾನ್ ಪಾಷ, ತೇಜಸ್ವಿ ಶಿವಾನಂದ್ ಉಪಸ್ಥಿತರಿದ್ದರು.

ಲೈಂಗಿಕ ಕಿರುಕುಳ ಆರೋಪದಡಿ ಜೈಲು ಹೊರಬಂದು ಯುವತಿ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯುವತಿಗೆ ಲೈಂಗಿಕ ಕಿರುಕುಳ ನೀಡಿದ್ದ' ಆರೋಪದಡಿ ಜೈಲು ಸೇರಿ ಜಾಮೀನು ಮೇಲೆ ಹೊರಬಂದಿರುವ ಯುವಕನೊಬ್ಬ, 'ಯುವತಿ ಹಾಗೂ ಇತರರು ಹಣಕ್ಕಾಗಿ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರೆ' ಎಂದು ಆರೋಪಿಸಿ ರಾಜರಾಜೇಶ್ವರಿ ನಗರ ಠಾಣೆಗೆ ದೂರು ನೀಡಿದ್ದಾರೆ.

'ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ 24 ವರ್ಷದ ಯುವಕನ ವಿರುದ್ಧ 31 ವರ್ಷದ ಯುವತಿ ದೂರು ನೀಡಿದ್ದರು. ಅದರನ್ವಯ ಯುವಕನನ್ನು ಬಂಧಿಸಲಾಗಿತ್ತು. ಇದೀಗ ಅದೇ ಯುವಕ, ಯುವತಿ ಮೇಲೆಯೇ ದೂರು ನೀಡಿದ್ದಾನೆ. ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ದೂರಿನ ವಿವರ: 'ಕೆಲಸ ಮಾಡುತ್ತಿದ್ದ ಕಂಪನಿಯಲ್ಲಿ ಪರಿಚಯವಾಗಿದ್ದ ಯುವತಿ ಜೊತೆ ಸಲುಗೆ ಇಟ್ಟುಕೊಂಡಿದ್ದೆ. ಇಬ್ಬರೂ ಹಲವೆಡೆ ಸುತ್ತಾಡಿದ್ದೆವು. ₹ 20 ಲಕ್ಷ ನೀಡುವಂತೆ ಯುವತಿ ಬೇಡಿಕೆ ಇರಿಸಿದ್ದರು. ಹಣ ನೀಡದಿದ್ದರಿಂದ ನನ್ನ ವಿರುದ್ಧ ಕೋಣನಕುಂಟೆ ಠಾಣೆಯಲ್ಲಿ ಸುಳ್ಳು ದೂರು ನೀಡಿದ್ದರು' ಎಂದು ಯುವಕ ದೂರಿನಲ್ಲಿ ತಿಳಿಸಿದ್ದಾರೆ.

'ಜೈಲಿನಿಂದ ಬಿಡುಗಡೆಗೊಂಡ ಬಳಿಕವೂ ಯುವತಿ ಹಾಗೂ ಇತರರು, ಹಣಕ್ಕಾಗಿ ಪೀಡಿಸುತ್ತಿದ್ದಾರೆ. ಜೀವ ಬೆದರಿಕೆಯೊಡ್ಡುತ್ತಿದ್ದಾರೆ' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಎಂ.ಜಿ. ರಸ್ತೆ – ಬೈಯಪ್ಪನಹಳ್ಳಿ: ಮೆಟ್ರೊ ಸಂಚಾರ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಟ್ರೊ ನೇರಳೆ ಮಾರ್ಗದಲ್ಲಿ ಶನಿವಾರ ಬೆಳಿಗ್ಗೆ ತಾಂತ್ರಿಕ ಸಮಸ್ಯೆ ಉಂಟಾಗಿದ್ದರಿಂದ ಬೈಯಪ್ಪನಹಳ್ಳಿ– ಎಂ.ಜಿ. ರಸ್ತೆ ನಡುವೆ ಸುಮಾರು 1 ಗಂಟೆ ಮೆಟ್ರೊ ರೈಲು ಸಂಚಾರ ಸ್ಥಗಿತಗೊಂಡಿತು. ಈ ಸಮಯದಲ್ಲಿ ಪ್ರಯಾಣಿಕರು ಪರದಾಡಿದರು.

ಬೆಳಿಗ್ಗೆ 10 ಗಂಟೆಯ ಹೊತ್ತಿಗೆ ವಿದ್ಯುತ್ ಪೂರೈಕೆಯಲ್ಲಿ ಸಮಸ್ಯೆ ಉಂಟಾದದ್ದು ರೈಲು ಸಂಚಾರ ಸ್ಥಗಿತಗೊಳ್ಳಲು ಕಾರಣ. ಬೈಯಪ್ಪನಹಳ್ಳಿ– ವೈಟ್‌ಫೀಲ್ಡ್ ಮತ್ತು ಎಂ.ಜಿ ರಸ್ತೆ - ಚಲ್ಲಘಟ್ಟ ನಿಲ್ದಾಣಗಳ ನಡುವೆ ಮೆಟ್ರೊ ಸಂಚಾರ ಎಂದಿನಂತೆ ಇತ್ತು.

ಬಿಎಂಆರ್‌ಸಿಎಲ್ ತಾಂತ್ರಿಕ ಸಿಬ್ಬಂದಿ ಬಂದು ವಿದ್ಯುತ್ ಪ್ರವಹಿಸುವಲ್ಲಿ ಇದ್ದ ಸಮಸ್ಯೆಯನ್ನು ಸರಿಪಡಿಸಿದರು. ಬೆಳಿಗ್ಗೆ 11ಕ್ಕೆ ಮೆಟ್ರೊ ರೈಲು ಪುನರಾರಂಭಗೊಂಡಿತು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದರು.

ಪರದಾಟ: ಮೆಟ್ರೊ ಇದ್ದಕಿದ್ದಂತೆ ಸ್ಥಗಿತಗೊಂಡಿದ್ದರಿಂದ ಪ್ರಯಾಣಿಕರು ಪರದಾಡಿದರು. ಏನು ಮಾಡಬೇಕು ಎಂಬುದು ಗೊತ್ತಾಗದೇ ಹಲವರು ಗೊಂದಲದಲ್ಲಿ ಮುಳುಗಿದ್ದರು. ಕೆಲಸಕ್ಕೆ ತೆರಳುತ್ತಿದ್ದವರು ಸಮಯಕ್ಕೆ ಸರಿಯಾಗಿ ಹೋಗಲಾಗದೇ ಚಡಪಡಿಸಿದರು.

ಬೈಯಪನಹಳ್ಳಿ ಮತ್ತು ಎಂ. ಜಿ ರಸ್ತೆ ಮೆಟ್ರೊ ನಿಲ್ದಾಣಗಳಲ್ಲಿ ಒಮ್ಮೆಲೇ ಭಾರಿ ಜನದಟ್ಟಣೆ ಉಂಟಾಯಿತು. ಕೆಲವರು ತಮ್ಮ ಸ್ನೇಹಿತರಿಗೆ, ಸಂಬಂಧಿಗಳಿಗೆ ಕರೆ ಮಾಡಿ ವಾಹನ ತರಿಸಿಕೊಂಡು ಹೋಗಬೇಕಾದಲ್ಲಿಗೆ ಸಾಗಿದರು. ಅನೇಕರು ಬಸ್, ಕ್ಯಾಬ್, ಆಟೊದಲ್ಲಿ ಪ್ರಯಾಣಿಸಿದರು.

ತಾಂತ್ರಿಕ ದೋಷದಿಂದ ಮೆಟ್ರೊ ರೈಲು ಸಂಚಾರ ಸ್ಥಗಿತಗೊಂಡಿದ್ದರಿಂದ ಎಂ.ಜಿ. ರಸ್ತೆ ನಿಲ್ದಾಣದಿಂದ ಹೊರಬಂದು ಪರ್ಯಾಯ ವ್ಯವಸ್ಥೆಗಾಗಿ ಪ್ರಯಾಣಿಕರು ಕಾದರು – ಪ್ರಜಾವಾಣಿ ಚಿತ್ರ/ ಎಸ್‌.ಕೆ. ದಿನೇಶ್

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. 01/SBC/24 ದಿನಾಂಕ: 19-01-2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
ಕೆಎಸ್‌ಆರ್ ಬೆಂಗಳೂರು:	ರೂ. 6,73,67,081/-

ಕೆಎಸ್‌ಆರ್ ಬೆಂಗಳೂರು ಪ್ರದೇಶದಲ್ಲಿ ಕ್ವಾರ್ಟರ್ಸ್‌ಗಳ ನಿರ್ಮಾಣ ಮತ್ತು ಕೊಠಡಿಗಳನ್ನು ಅಧಿಕಾರಿಗಳ ವಿಶ್ರಾಂತಿ ಗೃಹಗಳಾಗಿ ಪರಿವರ್ತನೆ. ನಿರ್ವಹಣೆ ಅವಧಿ 12 ತಿಂಗಳುಗಳು.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 12–02–2024, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ಇಂಜಿನಿಯರ್ / ಕೋ–ಆರ್ಡ್ ಬೆಂಗಳೂರು

PUB/655/AAV/PRB/SWR/2023-24

South Western Railway-SWR SWRRLY SWRRLY

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. CAO/CN/BNC/100/2024 ದಿನಾಂಕ: 23-01-2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
ಶಹಾಪುರ ಮತ್ತು ವಾಡಿ	ರೂ. 22,62,53,081/-

ನಿಲ್ದಾಣಗಳ ನಡುವೆ ಶಹಾಪುರ, ಸಿರವಾಲ, ಬೀರಾಲ್ ಬುಜುರ್ಗ್, ನರಬೋಲಿ ಸ್ಟೇಷನ್ ಯಾರ್ಡ್‌ಗಳು ಸೇರಿದಂತೆ ಕಿಮಿ 210.500 ರಿಂದ ಕಿಮಿ 257.600 ವರೆಗೆ ರೈಲ್ವೇ ವಿಶೇಷಣಗಳಿಗೆ ಅನುಗುಣವಾಗಿ ಗಟ್ಟಿಯಾದ, ಬಾಳಿಕೆ ಬರುವ, ಶ್ರೇಣೀಕೃತ ಕೋನೀಯ, ಘನಾಕೃತಿಯ ಶ್ರೇಣೀಕೃತ ಕಲ್ಲಿನ ನಿಲುಭಾರವನ್ನು ಪುಡಿಮಾಡಿದ ಯಂತ್ರದ ಸಂಗ್ರಹಣೆ ಮತ್ತು ಪೇರಿಸುವಿಕೆ. (ಟೆಂಡರ್ ಉಲ್ಲೇಖ ಸಂಖ್ಯೆ: GDG-WD-55)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 14–02–2024, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಎಂಜಿನಿಯರ್ / ನಿರ್ಮಾಣ ಕಾಮಗಾರಿಗಳು / ಬೆಂಗಳೂರು ಕಂಟೋನ್ಮೆಂಟ್

PUB/654/AAV/PRB/SWR/2023-24

South Western Railway-SWR SWRRLY SWRRLY

ಸಂಸ್ಮರಣೆ, ಕಿರು ಚಿತ್ರ ಪ್ರದರ್ಶನ ಕಾರ್ಯಕ್ರಮದಲ್ಲಿ ಹಂಸಲೇಖ ಭರವಸೆ

'ನಾಲ್ವಡಿ ಒಡೆಯರ್ ಸಂಗೀತ ರೂಪಕ ನಿರ್ಮಾಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕೊಡುಗೆಗಳನ್ನು ಬಿಂಬಿಸುವ ಸಂಗೀತ ರೂಪಕವನ್ನು ನಿರ್ಮಿಸಲಾಗುವುದು' ಎಂದು ಸಂಗೀತ ನಿರ್ದೇಶಕ ಹಂಸಲೇಖ ತಿಳಿಸಿದರು.

ದಿ ಬೆಂಗಳೂರು ಸಿಟಿ ಇನ್‌ಸ್ಟಿಟ್ಯೂಟ್ ನಗರದಲ್ಲಿ ಹಮ್ಮಿಕೊಂಡಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಸಂಸ್ಮರಣೆ ಹಾಗೂ ಕಿರು ಚಿತ್ರ ಪ್ರದರ್ಶನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜೀವನ, ಸಾಧನೆ ಹಾಗೂ ಕೊಡುಗೆಯ ಬಗ್ಗೆ ಸಂಗೀತ ರೂಪಕ ನಿರ್ಮಿಸಿಕೊಡುವಂತೆ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಮನವಿ ಮಾಡಿದರು. ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಹಂಸಲೇಖ, 'ಸಂಗೀತ ರೂಪಕವನ್ನು ರಚಿಸಿ, ಕನ್ನಡಿಗರಿಗೆ ಅರ್ಪಿಸಲಾಗುವುದು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜೀವನ ಹಾಗೂ ಸಾಧನೆ ನಮಗೆಲ್ಲ ಆದರ್ಶಪ್ರಾಯ' ಎಂದು ಹೇಳಿದರು.

'ಕನ್ನಡವನ್ನು ಕೇವಲ ಭಾಷೆಯೆಂದು ಪರಿಗಣಿಸದೆ, ಅದು ನಮ್ಮ ಹಕ್ಕಿನ ಪತ್ರವೆಂದು ತಿಳಿದುಕೊಳ್ಳಬೇಕು. ಈ ಹಕ್ಕು ನಮ್ಮೆಲ್ಲರಿಗೂ ದಕ್ಕುವಂತೆ ಆಗಬೇಕು. ಈ ಬಗ್ಗೆ ನಾವು ಸದಾ ಎಚ್ಚರದಿಂದ ಇರಬೇಕು' ಎಂದು ತಿಳಿಸಿದರು.

ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್, 'ಮುಂದಿನ ದಸರಾ ಸಂಭ್ರಮಾಚರಣೆ ಮೊದಲೇ ಮೈಸೂರು ಅರಮನೆ ಆವರಣದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸಂಗೀತ ರೂಪಕವನ್ನು ಪ್ರದರ್ಶಿಸಲಾಗುವುದು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸಾಧನೆ ಹಾಗೂ ಅವರು ಈ ನಾಡಿಗೆ ನೀಡಿದ ಕೊಡುಗೆ ಅದ್ವಿತೀಯ. ಅವರು ಕರ್ನಾಟಕದ ಮನೆ-ಮನಗಳಲ್ಲೂ ಪ್ರಾತಃಸ್ಮರಣೀಯರಾಗಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇನ್‌ಸ್ಟಿಟ್ಯೂಟ್ ಅಧ್ಯಕ್ಷ ಕೆ. ಸುಕುಮಾರ್, 'ಮೈಸೂರು ಸಂಸ್ಥಾನದ ದೊರೆಯಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್, 1902ರಲ್ಲಿ ನಮ್ಮ ಸಂಸ್ಥೆಗೆ ಎರಡೂವರೆ ಎಕರೆ ಭೂಮಿಯನ್ನು ದಾನವಾಗಿ ನೀಡಿದ್ದರು. ದೂರದೃಷ್ಟಿ ಹೊಂದಿದ್ದ ಅವರು ಕೈಗಾರಿಕೆ, ನೀರಾವರಿ, ಶಿಕ್ಷಣ ಸೇರಿ ವಿವಿಧ ಕ್ಷೇತ್ರಗಳಿಗೆ ಅದ್ವಿತೀಯ ಕೊಡುಗೆ ನೀಡಿದ್ದಾರೆ' ಎಂದು ಹೇಳಿದರು.

ಇದೇ ವೇಳೆ ಪ್ರಮೋದಾದೇವಿ ಒಡೆಯರ್ ಹಾಗೂ ಹಂಸಲೇಖ ಅವರಿಗೆ ಇನ್‌ಸ್ಟಿಟ್ಯೂಟ್‌ನ ಗೌರವ ಸದಸ್ಯತ್ವ ನೀಡಿ ಗೌರವಿಸಲಾಯಿತು. ಬಳಿಕ ಹಂಸಲೇಖ ಅವರು ನಾಲ್ವಡಿ ಕೃಷ್ಣರಾಜ ಒಡೆಯರ್ ಕುರಿತಾಗಿ ನಿರ್ದೇಶಿಸಿರುವ ಕಿರುಚಿತ್ರ 'ಜಯಹೇ' ಪ್ರದರ್ಶಿಸಲಾಯಿತು.

ಕಾರ್ಯಕ್ರಮದಲ್ಲಿ ಪ್ರಮೋದಾದೇವಿ ಒಡೆಯರ್ ಅವರಿಗೆ ಸಂಸ್ಥೆಯ ಗೌರವ ಸದಸ್ಯತ್ವ ನೀಡಿ ಗೌರವಿಸಲಾಯಿತು. ಹಂಸಲೇಖ, ದಿ ಬೆಂಗಳೂರು ಸಿಟಿ ಇನ್‌ಸ್ಟಿಟ್ಯೂಟ್ ಅಧ್ಯಕ್ಷ ಕೆ. ಸುಕುಮಾರ್, ಉಪಾಧ್ಯಕ್ಷ ಎಸ್‌.ಸಿ. ಚಂದ್ರಶೇಖರ್, ಗೌರವ ಕಾರ್ಯದರ್ಶಿ ಲಕ್ಷ್ಮೀಶ ಚಂದ್ರ, ಗೌರವ ಖಜಾಂಚಿ ವಿರೂಪಾಕ್ಷ ಬಿ.ಪಿ. ಹಾಗೂ ಪದಾಧಿಕಾರಿಗಳು ಪಾಲ್ಗೊಂಡಿದ್ದರು

ಅನುಸೂಯಮ್ಮಗೆ 'ಶಾಂತವೇರಿ ಗೋಪಾಲಗೌಡ ಸ್ಮಾರಕ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಅನುಸೂಯಮ್ಮ

ಬೆಂಗಳೂರು: ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ನೀಡುವ 'ಸಮಾಜವಾದಿ ಧುರೀಣ ಶಾಂತವೇರಿ ಗೋಪಾಲಗೌಡ ಸ್ಮಾರಕ ಪ್ರಶಸ್ತಿ'ಗೆ ರಾಮನಗರದ ಚನ್ನಪಟ್ಟಣ ತಾಲ್ಲೂಕಿನ ಅರಳಾಳುಸಂದ್ರ ಗ್ರಾಮದ ರೈತ ಹೋರಾಟಗಾರ್ತಿ ಅನುಸೂಯಮ್ಮ ಆಯ್ಕೆಯಾಗಿದ್ದಾರೆ.

ಬಿಡದಿಯ ಮೈಕೊ ಕನ್ನಡ ಬಳಗದ ಸಹಯೋಗದಲ್ಲಿ ಈ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಪ್ರಶಸ್ತಿಯು ₹10 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ.

'ಅನುಸೂಯಮ್ಮ ಅವರು 70ರ ದಶಕದಲ್ಲಿ ಸ್ಥಳೀಯವಾಗಿ ಗೇಣಿದಾರರ ಹೋರಾಟವನ್ನು ರೂಪಿಸಿದ್ದರು. ಬಳಿಕ ರೈತ ಚಳವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು. ಸಮಾಜವಾದಿ ಚಳವಳಿಯ ರೂವಾರಿ ರಾಮಮನೋಹರ ಲೋಹಿಯಾ ಅವರ ಚಿಂತನೆಗಳಿಂದ ಸ್ಥಾಪಿತವಾದ 'ಸಮತಾ ವಿದ್ಯಾಲಯ'ದ ಸ್ಥಾಪಕ ಟ್ರಸ್ಟಿಯಾಗಿಯೂ ಕಾರ್ಯನಿರ್ವಹಿಸಿದ್ದರು. ಅವರು ಎಲ್ಲಿಯೇ ಅನ್ಯಾಯ ನಡೆದರೂ ಅದನ್ನು ದಿಟ್ಟವಾಗಿ ಎದುರಿಸುವ ಹಾಗೂ ಅನ್ಯಾಯದ ವಿರುದ್ಧ ಹೋರಾಟ ರೂಪಿಸುವ ಮನೋಧರ್ಮದವರಾಗಿದ್ದಾರೆ' ಎಂದು ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಹಂ.ಗು. ರಾಜೇಶ್ ತಿಳಿಸಿದ್ದಾರೆ.

'ಫೆ.4ರಂದು ಬೆಳಿಗ್ಗೆ 10 ಗಂಟೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸದ ಕಟ್ಟಡದ ಅಕ್ಕಮಹಾದೇವಿ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದ್ದು, ಭಾರತ್ ಸ್ಕೌಟ್ ಮತ್ತು ಗೈಡ್ಸ್ ಕರ್ನಾಟಕದ ಆಯುಕ್ತ ಪಿ.ಜಿ.ಆರ್. ಸಿಂಧ್ಯ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ. ಪ್ರಕಾಶಮೂರ್ತಿ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ' ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಗಣರಾಜ್ಯೋತ್ಸವ ಪ್ರಯುಕ್ತ ಫಲಪುಷ್ಪ ಪ್ರದರ್ಶನ: ಕಾರ್ಯಕ್ರಮದಲ್ಲಿ ನಟ ಅಶೋಕ್ ಭಾಗಿ

ವಿಜೇತರಿಗೆ ಬಹುಮಾನ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಲ್‌ಬಾಗ್ ಪುಷ್ಪ ಉದ್ಯಾನದಲ್ಲಿ ಗಣರಾಜ್ಯೋತ್ಸವ ಪ್ರಯುಕ್ತ ನಡೆಯುತ್ತಿರುವ ಫಲಪುಷ್ಪ ಪ್ರದರ್ಶನದಲ್ಲಿ ನಡೆದ ಸ್ಪರ್ಧೆಗಳಲ್ಲಿ ವಿಜೇತರಿಗೆ ಶನಿವಾರ ಬಹುಮಾನ ನೀಡಲಾಯಿತು.

ಗಾಜಿನ ಮನೆಯ ಪ್ರದರ್ಶಿಕೆಗಳು, ತೋಟಗಳ ಸ್ಪರ್ಧೆಗಳು, ಇಕೆಬಾನ, ಪುಷ್ಪ ಭಾರತಿ, ಪುಷ್ಪ ರಂಗೋಲಿ, ತರಕಾರಿ ಕೆತ್ತನೆ, ಡಚ್ ಹೂವಿನ ಜೋಡಣೆ, ಒಣ ಹೂವಿನ ಜೋಡಣೆ, ಥಾಯ್‌ಆರ್ಟ್, ಜಾನೂರ್ ಬೋನ್ಸಾಯ್ ಗಿಡಗಳ ಪ್ರದರ್ಶನ ಮತ್ತು ಪ್ರಬಂಧ ಸ್ಪರ್ಧೆಗಳಲ್ಲಿ ವಿಜೇತರು ಬಹುಮಾನ ಪಡೆದರು.

ಬಹುಮಾನ ವಿತರಿಸಿದ ನಟ ಅಶೋಕ್ ಮಾತನಾಡಿ, '1983ರಲ್ಲಿ ಕ್ರಾಂತಿಯೋಗಿ ಬಸವಣ್ಣ ಚಲನಚಿತ್ರದಲ್ಲಿ ಬಸವಣ್ಣನ ಪಾತ್ರ ಮಾಡಿದ್ದೆ. ಅದುವೇ ಜೀವನದಲ್ಲಿ ದೊಡ್ಡ ಬದಲಾವಣೆಗೆ ಕಾರಣವಾಯಿತು' ಎಂದು ಹೇಳಿದರು.

'ಉತ್ತರ ಕರ್ನಾಟಕದ ನನ್ನನ್ನು ಬಾಲ್ಯದಲ್ಲಿ ತಂದೆ ಇಲ್ಲಿನ ಫಲಪುಷ್ಪ ಪ್ರದರ್ಶನಕ್ಕೆ ಕರೆದುಕೊಂಡು ಬಂದಿದ್ದಾಗ ವಿಸ್ಮಯಗೊಂಡಿದ್ದೆ' ಎಂದು ಹಾಸ್ಯನಟ ಶರಣ್ ನೆನಪು ಮಾಡಿಕೊಂಡರು.

ಲಾಲ್‌ಬಾಗ್ ಪುಷ್ಪ ಉದ್ಯಾನದಲ್ಲಿ ಗಣರಾಜ್ಯೋತ್ಸವ ಪ್ರಯುಕ್ತ ಆಯೋಜಿಸಿರುವ ಫಲಪುಷ್ಪ ಪ್ರದರ್ಶನದಲ್ಲಿ ನಡೆದ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ನಟ ಅಶೋಕ್ ಪ್ರಶಸ್ತಿ ಪತ್ರ ವಿತರಿಸಿದರು. ಬಸವ ಸಮಿತಿಯ ಅಧ್ಯಕ್ಷ ಅರವಿಂದ ಜತ್ತಿ, ತೋಟಗಾರಿಕೆ ಇಲಾಖೆಯ ನಿರ್ದೇಶಕ ಡಿ.ಎಸ್‌. ರಮೇಶ್, ಅಧಿಕಾರಿಗಳು ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಜನರು ಬೇರೆಲ್ಲೊ ಸ್ವರ್ಗವನ್ನು ಹುಡುಕುತ್ತಾರೆ. ಲಾಲ್‌ಬಾಗ್‌ಗೆ ಬಂದರೆ ಅದೇ ಸ್ವರ್ಗ. ಹಸಿರು ಇರುವಲ್ಲಿ ಜೀವ ಇರುತ್ತದೆ. ಹಸಿರಿನ ಬಗ್ಗೆ ಅರಿವು ಮೂಡಿಸಿಕೊಳ್ಳಲಾದರೂ ಆಗಾಗ ಇಂಥ ಜಾಗಗಳಿಗೆ ಬರಬೇಕು. ಲಾಲ್‌ಬಾಗ್‌ನ ಒಂದೊಂದು ಮರವೂ 200- 300 ವರ್ಷಗಳ ಕಾಲದ ಇತಿಹಾಸ ಹೇಳುತ್ತದೆ ಎಂದು ವಿಶ್ಲೇಷಿಸಿದರು.

ದೇಶಿ ಮತ್ತು ವಿದೇಶಿ ಹೂಗಳ ವಿಶೇಷ ಜೋಡಣೆ, ವರ್ಟಿಕಲ್ ಗಾರ್ಡನ್ ಪರಿಕಲ್ಪನೆ, ಅನುಭವ ಮಂಟಪದ ಪುಷ್ಪ ಪ್ರತಿರೂಪ ಅನಾವರಣ, ಐಕ್ಯಮಂಟಪದ ಪುಷ್ಪ ಪ್ರತಿರೂಪ ಅನಾವರಣ, ಆಕರ್ಷಕ ಹೂಕುಂಡಗಳಿಂದ ಹ್ಯಾಂಗಿಂಗ್ ಟ್ರೀ ಕಲ್ಪನೆ, ಪುಷ್ಪ ಡೂಮ್ಸ್ ಅನಾವರಣ, ವಚನ ಪುಸ್ತಕ ಮಾರಾಟದ ವ್ಯವಸ್ಥೆ ಸಹಿತ ವಿವಿಧ ಪರಿಕಲ್ಪನೆಗಳನ್ನು ನೀಡಿ ಸಹಕರಿಸಿದವರನ್ನು ಗೌರವಿಸಲಾಯಿತು.

ಬಸವ ಸಮಿತಿಯ ಅಧ್ಯಕ್ಷ ಅರವಿಂದ ಜತ್ತಿ, ತೋಟಗಾರಿಕೆ ಇಲಾಖೆಯ ನಿರ್ದೇಶಕ ಡಿ.ಎಸ್. ರಮೇಶ್ ಹಾಜರಿದ್ದರು.

ಇಂದು ಕೊನೆ

ಲಾಲ್‌ಬಾಗ್‌ನಲ್ಲಿ ತೋಟಗಾರಿಕೆ ಇಲಾಖೆ ಆಯೋಜಿಸಿರುವ ಫಲಪುಷ್ಪ ಪ್ರದರ್ಶನ ಜ.28ರಂದು ಕೊನೆಗೊಳ್ಳಲಿದೆ.

ಗಣರಾಜ್ಯೋತ್ಸವದ ದಿನವಾದ ಶುಕ್ರವಾರ ಪ್ರದರ್ಶನ ವೀಕ್ಷಿಸಲು ಲಕ್ಷಕ್ಕೂ ಅಧಿಕ ಜನರು ಬಂದಿದ್ದರು. ಜನದಟ್ಟಣೆ ಉಂಟಾಗಿತ್ತು. ಶನಿವಾರ ದಟ್ಟಣೆ ಕಡಿಮೆಯಾಗಿತ್ತು.

ಅಂಕಿ ಅಂಶಗಳು

55,396
ಶನಿವಾರ ಲಾಲ್‌ಬಾಗ್ ಪುಷ್ಪಪ್ರದರ್ಶನಕ್ಕೆ ಭೇಟಿ ನೀಡಿದವರು.

₹37.5 ಲಕ್ಷ
ಸಂಗ್ರಹವಾದ ಮೊತ್ತ

'ಹಿಂದೂ ಸಮಾಜ ಜಾಗೃತವಾಗುತ್ತಿದೆ'

ಬೆಂಗಳೂರು: 'ಹಿಂದೂ ಸಮಾಜ ಜಾಗೃತಗೊಳ್ಳುತ್ತಿದ್ದು, ಇದರ ಮೊದಲ ಹೆಜ್ಜೆಯಾಗಿ ರಾಮ ಮಂದಿರ ನಿರ್ಮಿಸಲಾಗಿದೆ' ಎಂದು ಸಂಸದ ಅನಂತಕುಮಾರ್ ಹೆಗಡೆ ತಿಳಿಸಿದರು.

ಧಾತ್ರಿ ಪಬ್ಲಿಕೇಷನ್ಸ್ ಇಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎಸ್. ಎಸ್. ಉಮೇಶ್ ಅವರು ರಚಿಸಿದ 'ಅಯೋಧ್ಯಾ' ಕೃತಿಯ ಮೊದಲ ಪ್ರತಿ ಸ್ವೀಕರಿಸಿ, ಮಾತನಾಡಿದ ಅವರು, '500 ವರ್ಷಗಳ ಸಂಘರ್ಷದ ಬಳಿಕ ಭವ್ಯವಾದ ರಾಮ ಮಂದಿರ ನಿರ್ಮಾಣವಾಗಿದೆ. ನಿರಂತರ ಸಂಘರ್ಷದ ಬಳಿಕ ಜಯ ದೊರೆತಿದೆ. ರಾಮ ಎಂಬ ಪದವು ಈ ಸಂಸ್ಕೃತಿಯ ಜೊತೆಗೆ ಬೆರೆತಿದೆ. ಇದರಿಂದಾಗಿ ಇಡೀ ದೇಶದಲ್ಲಿ ರಾಮನ ನಾಮ ಸ್ಮರಣೆ ನಡೆಯುತ್ತಿದೆ. ರಾಮ ನಾಮವು ಬೀಜ ಮಂತ್ರವೂ ಹೌದು, ರಣ ಮಂತ್ರವೂ ಹೌದು' ಎಂದು ಹೇಳಿದರು.

ಲೇಖಕ ಎಸ್.ಎಸ್. ಉಮೇಶ್, '2 ವರ್ಷ ಅಯೋಧ್ಯೆಯ ಬಗ್ಗೆ ಸಂಶೋಧನೆ ನಡೆಸಿ, ಪುಸ್ತಕ ರಚಿಸಿದ್ದೇನೆ. ಅಯೋಧ್ಯೆಗೂ ಭೇಟಿ ನೀಡಿ, ಸಾಧು–ಸಂತರನ್ನು ಸಂದರ್ಶಿಸಿದ್ದೇನೆ. ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಸೇರಿ ಹಲವರು ಪೂರಕ ಮಾಹಿತಿ ಒದಗಿಸಿದ್ದಾರೆ' ಎಂದು ಹೇಳಿದರು.

ಸರ್ಕಾರಿ ಜಾಗ ಸ್ಥಳೀಯರಿಗೆ ಹಂಚಲು ಆಗ್ರಹ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಸಾರ್ವಜನಿಕರ ಉಪಯೋಗಕ್ಕೆ ಮೀಸಲಿಟ್ಟಿದ್ದ ಸರ್ಕಾರಿ ಜಾಗವನ್ನು ಕೊಳೆಗೇರಿ ಅಭಿವೃದ್ಧಿ ಮಂಡಳಿಗೆ ಹಸ್ತಾಂತರ ಮಾಡುತ್ತಿರುವ ಕ್ರಮ ಖಂಡಿಸಿ, ಸ್ಥಳೀಯ ನಿವಾಸಿಗಳು ಮೇಡಹಳ್ಳಿ ಸಮೀಪದ ಸರ್ಕಾರಿ ಜಮೀನಿನಲ್ಲಿ ಪ್ರತಿಭಟನೆ ನಡೆಸಿದರು.

ಮೇಡಹಳ್ಳಿ ಸಮೀಪದ ಸರ್ಕಾರಿ ಜಾಗದ ಹಂಚಿಕೆ ವಿಚಾರದಲ್ಲಿ ಸ್ಥಳೀಯರಿಗೆ ಆದ್ಯತೆ ನೀಡದೆ ಹೊರಗಿನವರಿಗೆ ಮನೆ ನಿರ್ಮಿಸಲು ಕೊಳೆಗೇರಿ ಅಭಿವೃದ್ಧಿ ಮಂಡಳಿಗೆ ಜಾಗ ಮಂಜೂರು ಮಾಡುವ ಕ್ರಮ ವಿರೋಧಿಸಿ, ಪಾರ್ವತಿನಗರ, ಜ್ಯೋತಿನಗರ, ಮೇಡಹಳ್ಳಿ ಸೇರಿದಂತೆ ಸುತ್ತಮುತ್ತಲ ನೂರಾರು ಸ್ಥಳೀಯರು ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಮುಖಂಡ ಮೇಡಹಳ್ಳಿ ಮಲ್ಲೇಶ್ ಮಾತನಾಡಿ, ಗ್ರಾಮದ ಸರ್ವೆ ನಂ. 89ರಲ್ಲಿ 8.15 ಎಕರೆ ಸರ್ಕಾರಿ ಗೋಮಾಳ ಜಮೀನಿದೆ. ದೇವಸಂದ್ರ ವಾರ್ಡ್‌ನ ರಾಜೀವ್ ನಗರದಲ್ಲಿ ಗಂಗಾಶೆಟ್ಟಿ ಕೆರೆ ಒತ್ತುವರಿ ಮಾಡಿಕೊಂಡು ವಾಸಿಸುತ್ತಿರುವ 146 ಒತ್ತುವರಿದಾರರಿಗೆ ಪುನರ್ವಸತಿ ಕಲ್ಪಿಸುವ ಉದ್ದೇಶದಿಂದ ಜಿಲ್ಲಾಧಿಕಾರಿ, ಇಲ್ಲಿನ 8.15 ಎಕರೆ ಜಮೀನಿನಲ್ಲಿ ಕೊಳೆಗೇರಿ ಅಭಿವೃದ್ಧಿ ಮಂಡಳಿಗೆ 3.15 ಎಕರೆ ಜಮೀನು ಮಂಜೂರು ಮಾಡಿ ಆದೇಶ ನೀಡಿದ್ದಾರೆ. ಈ ಮೂಲಕ ಈ ಭಾಗದಲ್ಲಿ ಅನೇಕ ವರ್ಷಗಳಿಂದ ನೆಲಸಿರುವ ನೂರಾರು ಸ್ವಂತ ಸೂರಿಲ್ಲದ ಕುಟುಂಬಗಳಿಗೆ ದ್ರೋಹ ಬಗೆಯಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮೇಡಹಳ್ಳಿ ಸಮೀಪದ ಸರ್ಕಾರಿ ಜಮೀನಿನಲ್ಲಿ ಸ್ಥಳೀಯ ನಿವಾಸಿಗಳು ಪ್ರತಿಭಟನೆ ನಡೆಸಿದರು

ಭೂಮಿ ಮತ್ತು ವಸತಿ ವಂಚಿತರ ಹೋರಾಟ ಸಮಿತಿ ಹಾಗೂ ಕರ್ನಾಟಕ ಜನಾಂದೋಲನ ಸಂಘಟನೆ ರಾಜ್ಯ ಅಧ್ಯಕ್ಷ ಮರಿಯಪ್ಪ ಮಾತನಾಡಿ, ಜ್ಯೋತಿನಗರ ನಿವಾಸಿಗಳು ಕಲ್ಲು ಕುಟಿಗರ ಸಹಕಾರ ಸಂಘ ಆರಂಭಿಸಿ ಬಂಡೆಯಲ್ಲಿ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿದ್ದರು. ಆದರೆ ಈಗ ಅದೇ ಜಾಗದಲ್ಲಿ ಕೊಳೆಗೇರಿ ಅಭಿವೃದ್ಧಿ ಮಂಡಳಿಗೆ 3.15 ಎಕರೆ ಜಮೀನು ಮಂಜೂರು ಆದೇಶ ನೀಡುವ ಮೂಲಕ ಸ್ಥಳೀಯರಿಗೆ ವಂಚನೆ ಮಾಡಿದ್ದಾರೆ ಎಂದು ದೂರಿದರು.

ಜ್ಯೋತಿನಗರ ನಿವಾಸಿ ಜಯಮ್ಮ ಮಾತನಾಡಿ, ಅನೇಕ ವರ್ಷಗಳಿಂದ ಉಳಿಸಿಕೊಂಡು ಬಂದಿರುವ ಸರ್ಕಾರಿ ಜಮೀನಿನಲ್ಲಿ ಸ್ಥಳೀಯರನ್ನು ಹೊರಗಿಟ್ಟು ಹೊರಗಿನ ನಿವಾಸಿಗಳಿಗೆ ಮನೆ ನಿರ್ಮಾಣಕ್ಕೆ ಜಮೀನು ಮಂಜೂರು ಮಾಡಿರುವುದು ಸರಿಯಲ್ಲ ಎಂದರು.

'ಎರಡು ಲೋಕಸಭಾ ಕ್ಷೇತ್ರಗಳಿಗೆ ನನ್ನ ಹೆಸರು'

ಸಿ.ಎಂ ಜೊತೆ ಶಾಸಕ ಎಸ್‌ಟಿಎಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಮನೆ ಮೈದಾನದಲ್ಲಿ ಶನಿವಾರ ನಡೆದ ಪಕ್ಷದ ವಿಶೇಷ ರಾಜ್ಯ ಕಾರ್ಯಕಾರಿಣಿ ಸಭೆಯಿಂದ ದೂರ ಉಳಿದ ಯಶವಂತಪುರ ಬಿಜೆಪಿ ಶಾಸಕ ಎಸ್.ಟಿ. ಸೋಮಶೇಖರ್ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆ ಕಾಣಿಸಿಕೊಂಡರು.

ಸೋಮಶೇಖರ್ ಅವರು ಶನಿವಾರ ಬೆಳಿಗ್ಗೆ ತಮ್ಮ ಕ್ಷೇತ್ರದಿಂದ ಮುಖ್ಯಮಂತ್ರಿ ಜೊತೆ, ಮುಖ್ಯಮಂತ್ರಿಯವರ ನಿವಾಸ ಕಾವೇರಿ ವರೆಗೂ ಕಾರಿನಲ್ಲಿ ಪ್ರಯಾಣಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಸೋಮಶೇಖರ್, 'ನನ್ನ ಕ್ಷೇತ್ರದಲ್ಲಿ ಮುಖ್ಯಮಂತ್ರಿಯವರ ಸ್ನೇಹಿತರಾಗಿರುವ ಕೆ.ಆರ್. ಪೇಟೆಯ ರಾಮೇಗೌಡ ಅವರು ಕಲ್ಯಾಣ ಮಂಟಪ ನಿರ್ಮಿಸಿದ್ದಾರೆ. ಈ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಭಾಗವಹಿಸುವುದಿಲ್ಲ ಎಂಬ ಲೆಕ್ಕಾಚಾರದಲ್ಲಿ ನಾನು ಹೋಗಿದ್ದೆ. ಹತ್ತು ನಿಮಿಷದಲ್ಲೇ ಮುಖ್ಯಮಂತ್ರಿ ಕಾರ್ಯಕ್ರಮಕ್ಕೆ ಬರುತ್ತಾರೆಂದು ಸಂದೇಶ ಬಂತು. ವಾಪಸಾಗುವಾಗ ಮಾತನಾಡಬೇಕು ಬಾ ಎಂದು ನನ್ನನ್ನು ಕಾರಿನಲ್ಲಿ ಮುಖ್ಯಮಂತ್ರಿ ಕರೆದುಕೊಂಡು ಬಂದರು' ಎಂದು ತಿಳಿಸಿದರು.

'ಬಿಜೆಪಿ ಕಾರ್ಯಕಾರಿಣಿ ಸಭೆಗೆ ನನಗೆ ಆಹ್ವಾನ ಇರಲಿಲ್ಲ. ನಾನಿನ್ನೂ ಬಿಜೆಪಿಯಲ್ಲಿಯೇ ಇದ್ದೇನೆ. ಪಕ್ಷ ಬಿಡುತ್ತೇನೆಂದು ಎಲ್ಲಿಯೂ ಹೇಳಿಲ್ಲ. ಕೆಲವರು ನನ್ನನ್ನು ದುರ್ಬಲ ಎಂದುಕೊಂಡಿದ್ದರು. ಈಗ ಮೈಸೂರು ಹಾಗೂ ಬೆಂಗಳೂರಿನ ಲೋಕಸಭಾ ಕ್ಷೇತ್ರಗಳಿಗೆ ನನ್ನ ಹೆಸರು ಕೇಳಿಬರುತ್ತಿದೆ. ನಮ್ಮನ್ನು ಕಡಿಮೆ ಅಂದಾಜು ಮಾಡಿದವರಿಗೆ ಈ ಬೆಳವಣಿಗೆಗಳು ಉತ್ತರ ನೀಡುತ್ತವೆ. ಆದರೆ, ನಾನು ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ' ಎಂದರು.

'ಈ ಹಿಂದೆ ಕಾಂಗ್ರೆಸ್- ಜೆಡಿಎಸ್ ಮೈತ್ರಿ ಮಾಡಿಕೊಂಡಿದ್ದವು. ಫಲಿತಾಂಶ ಏನಾಗಿದೆ ಎಂದು ಎಲ್ಲರಿಗೂ ಗೊತ್ತು. ಯಾವ ಪಕ್ಷಗಳು ಮೈತ್ರಿ ಮಾಡಿಕೊಂಡರೂ ತೀರ್ಮಾನ ಮಾಡಬೇಕಾದವರು ಜನ. ಸದ್ಯಕ್ಕೆ ಲೋಕಸಭೆ ಚುನಾವಣೆ ಕಾವೇರಿಲ್ಲ. ವಿಧಾನಪರಿಷತ್ ಚುನಾವಣೆ ವೇಳೆ ಯಾರಿಗೆ ಮತ ಹಾಕಬೇಕೆಂಬುದನ್ನು ತೀರ್ಮಾನ ಮಾಡುತ್ತೇನೆ. ಆದರೆ, ಕಾಂಗ್ರೆಸ್ ಸೇರುವುದಾಗಿ ನಾನು ಹೇಳಿಲ್ಲ. ಸ್ನೇಹಿತರ ಬಳಿಯೂ ಈ ಬಗ್ಗೆ ಚರ್ಚೆ ಮಾಡಿಲ್ಲ' ಎಂದು ಹೇಳಿದರು.

'ವಿಶ್ವವಾಣಿ' ಪತ್ರಿಕೆಯ 9ನೇ ವಾರ್ಷಿಕೋತ್ಸವ ಅಂಗವಾಗಿ ಆಯೋಜಿಸಿರುವ ಅಂತರ ಮುದ್ರಣ ಮಾಧ್ಯಮ 'ವಿವಿ ಕಪ್–2024' ಕ್ರಿಕೆಟ್ ಪಂದ್ಯಾವಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬ್ಯಾಟಿಂಗ್ ಮಾಡುವ ಮೂಲಕ ಚಾಲನೆ ನೀಡಿದರು

'ಡ್ರಗ್ಸ್ ಮಾರಾಟ: ಪೆಡ್ಲರ್ ವಿರುದ್ಧ ಗೂಂಡಾ ಕಾಯ್ದೆ ಮಾದರಿ ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಡ್ರಗ್ಸ್ ಮಾರಾಟದಲ್ಲಿ ಭಾಗಿಯಾಗುವ ಪೆಡ್ಲರ್‌ಗಳ ವಿರುದ್ಧ ಗೂಂಡಾ ಕಾಯ್ದೆ ಮಾದರಿಯಲ್ಲಿ ಕಾನೂನು ಕ್ರಮ ಜರುಗಿಸಲಾಗುವುದು' ಎಂದು ಪೊಲೀಸ್ ಕಮಿಷನರ್ ಬಿ. ದಯಾನಂದ್ ಹೇಳಿದರು.

ದೊಡ್ಡಕಲ್ಲಸಂದ್ರದ ಶಂಕರ್ ಫೌಂಡೇಷನ್ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಮಾಸಿಕ ಜನಸಂಪರ್ಕ ಸಭೆಯಲ್ಲಿ ಜನರ ದೂರುಗಳನ್ನು ಆಲಿಸಿ, ಅವರು ಮಾತನಾಡಿದರು.

'ಯುವ ಜನತೆ ಡ್ರಗ್ಸ್ ವ್ಯಸನಿಗಳಾಗಿ ಬದುಕು ಹಾಳು ಮಾಡಿಕೊಳ್ಳುತ್ತಿದ್ದಾರೆ. ಡ್ರಗ್ಸ್ ಜಾಲವನ್ನು ಬುಡಸಮೇತ ಕಿತ್ತೊಗೆಯಬೇಕು' ಎಂದು ಸಾರ್ವಜನಿಕರು ಆಗ್ರಹಿಸಿದರು.

ಅದಕ್ಕೆ ಪ್ರತಿಕ್ರಿಯಿಸಿದ ಕಮಿಷನರ್, 'ಗೂಂಡಾ ಕಾಯ್ದೆ ಮಾದರಿಯಲ್ಲಿ ಪೆಡ್ಲರ್‌ಗಳನ್ನು ಬಂಧಿಸಿ ಜೈಲಿಗಟ್ಟಲು ಕಾನೂನಿನಲ್ಲಿ ಅವಕಾಶವಿದೆ. ಇದರಡಿ ಪೆಡ್ಲರ್‌ಗಳನ್ನು ಮಟ್ಟಹಾಕಲಾಗುವುದು' ಎಂದರು.

ಧ್ವನಿವರ್ಧಕ ಬಳಕೆ: 'ಪ್ರಮುಖ ರಸ್ತೆ, ಜಂಕ್ಷನ್‌ಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಜೊತೆಯಲ್ಲಿ ಧ್ವನಿವರ್ಧಕಗಳನ್ನು ಅಳವಡಿಸಲಾಗುತ್ತಿದೆ. ಠಾಣೆಯಲ್ಲಿ ಕುಳಿತ ಸಿಬ್ಬಂದಿ, ಕ್ಯಾಮೆರಾ ದೃಶ್ಯಗಳನ್ನು ವೀಕ್ಷಿಸಿ ಧ್ವನಿವರ್ಧಕ ಮೂಲಕವೇ ಸೂಚನೆಗಳನ್ನು ನೀಡಲಿದ್ದಾರೆ' ಎಂದು ಕಮಿಷನರ್ ಹೇಳಿದರು.

'ಶ್ರೀ ಶ್ರೀ ಶಿಕ್ಷಣ ಪ್ರಶಸ್ತಿ' ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಠ್ಯಕ್ಕೆ ಸೀಮಿತಗೊಳ್ಳದೇ ನೈಜ ಶಿಕ್ಷಣ ನೀಡುತ್ತಿರುವ ದೇಶದ ವಿವಿಧ ರಾಜ್ಯಗಳ ಅತ್ಯುತ್ತಮ ಶಿಕ್ಷಕರನ್ನು 'ಶ್ರೀ ಶ್ರೀ ಶಿಕ್ಷಣ ಪ್ರಶಸ್ತಿ' ಮೂಲಕ ಗುರುತಿಸಲಾಗಿದೆ ಎಂದು ಆರ್ಟ್ ಆಫ್ ಲಿವಿಂಗ್ ಸಂಸ್ಥಾಪಕ ಶ್ರೀ ಶ್ರೀ ರವಿಶಂಕರ ಗುರೂಜಿ ತಿಳಿಸಿದರು.

ಆರ್ಟ್ ಆಫ್ ಲಿವಿಂಗ್ ಅಂತರರಾಷ್ಟ್ರೀಯ ಕೇಂದ್ರದಲ್ಲಿ ಶನಿವಾರ ಶ್ರೀ ಶ್ರೀ ರವಿಶಂಕರ್ ವಿದ್ಯಾಮಂದಿರ ಟ್ರಸ್ಟ್ ಹಮ್ಮಿಕೊಂಡಿದ್ದ 'ಶ್ರೀ ಶ್ರೀ ಶಿಕ್ಷಣ ಪ್ರಶಸ್ತಿ' ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಕೆಲಸವೇ ಧ್ಯೇಯ ಎಂಬ ನಂಬಿಕೆಯಿಂದ ನಮ್ಮ ಟ್ರಸ್ಟಿಗಳು ಕೆಲಸ ಮಾಡುತ್ತಾರೆ. ದೇಶದ ಎಲ್ಲ ಶಾಲೆಗಳು ನಮ್ಮವೇ ಆಗಿದ್ದು, ಅವುಗಳ ಅಭಿವೃದ್ಧಿ, ಉತ್ಕೃಷ್ಟತೆಗಾಗಿ ಶ್ರಮಿಸುತ್ತೇವೆ' ಎಂದರು.

ಕೇಂದ್ರ ಶಿಕ್ಷಣ ಸಚಿವ ಸುಭಾಷ್ ಸರ್ಕಾರ್ ಮಾತನಾಡಿ, 'ನಮ್ಮ ನಾಗರಿಕತೆಯು ನೀಡಿರುವ ಎಲ್ಲ ಕೊಡುಗೆಗಳ ಬಗ್ಗೆ ಗೌರವ ಇಟ್ಟುಕೊಳ್ಳಬೇಕು. ಪ್ರಾಚೀನ ವಿಜ್ಞಾನವಾದ ಯೋಗವನ್ನೂ ಹೆಮ್ಮೆಯ ಭಾವದಿಂದ ನೋಡಬೇಕು' ಎಂದು ಸಲಹೆ ನೀಡಿದರು.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮಾತನಾಡಿದರು. ತುಮಕೂರಿನ ಸರ್ಕಾರಿ ಸಂಯೋಜಿತ ಪ್ರೌಢಶಾಲೆಯ ಪ್ರಾಂಶುಪಾಲ ಎಸ್. ಕೃಷ್ಣಪ್ಪ, ಮಹಾರಾಷ್ಟ್ರದ ದತ್ತಾತ್ರೇಯ ವಾರೆ, ಗುರುಗ್ರಾಮದ ರಶ್ಮಿ ಶ್ರೀವಾಸ್ತವ್ ಸಹಿತ ಅನೇಕ ಸಾಧಕರಿಗೆ, ವಿವಿಧ ಶೈಕ್ಷಣಿಕ ಸಂಸ್ಥೆಗಳಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಫೋರ್ಟಿಸ್ ಕ್ಯಾನ್ಸರ್ ಶೃಂಗದಲ್ಲಿ ಕ್ಯಾನ್ಸರ್ ತಜ್ಞರ ಕಳವಳ

'ಆಧುನಿಕ ಜೀವನಶೈಲಿ: ಕ್ಯಾನ್ಸರ್ ಹೆಚ್ಚಳ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಧುನಿಕ ಜೀವನ ವಿಧಾನ, ಪಾಶ್ಚಾತ್ಯ ಆಹಾರ ಪದ್ಧತಿ ಹಾಗೂ ವಾಯು ಮಾಲಿನ್ಯದಿಂದಾಗಿ ನಗರ ಪ್ರದೇಶದಲ್ಲಿ ಕ್ಯಾನ್ಸರ್ ಪೀಡಿತರಾಗುವವರ ಸಂಖ್ಯೆ ಹೆಚ್ಚಳವಾಗುತ್ತಿದೆ' ಎಂದು ಕ್ಯಾನ್ಸರ್ ತಜ್ಞರು ಕಳವಳ ವ್ಯಕ್ತಪಡಿಸಿದರು.

ಫೋರ್ಟಿಸ್ ಆಸ್ಪತ್ರೆ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಫೋರ್ಟಿಸ್ ಕ್ಯಾನ್ಸರ್ ಶೃಂಗ'ದಲ್ಲಿ 250ಕ್ಕೂ ಹೆಚ್ಚು ಕ್ಯಾನ್ಸರ್ ತಜ್ಞರು ಭಾಗವಹಿಸಿದ್ದರು. ಈ ಶೃಂಗದಲ್ಲಿ ಕ್ಯಾನ್ಸರ್ ತಪಾಸಣೆ, ಚಿಕಿತ್ಸೆ, ರೋಗದ ಬಗ್ಗೆ ಜಾಗೃತಿಗೆ ಕೈಗೊಳ್ಳಬೇಕಾದ ಕ್ರಮಗಳು, ತಂತ್ರಜ್ಞಾನದ ಬಳಕೆ, ಮನೆ ಆರೈಕೆ ಸೇರಿ ವಿವಿಧ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

ಶೃಂಗ ಉದ್ಘಾಟಿಸಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, 'ವ್ಯಕ್ತಿಯನ್ನು ದೈಹಿಕ, ಮಾನಸಿಕ ಮತ್ತು ಆರ್ಥಿಕವಾಗಿ ಕುಗ್ಗಿಸುತ್ತಿದ್ದ ಕ್ಯಾನ್ಸರ್ ಕಾಯಿಲೆ, ಇತ್ತೀಚೆಗೆ ಸಾಮಾನ್ಯವಾಗಿದೆ. ಈ ಕಾಯಿಲೆ ಬಗ್ಗೆ ಜಾಗೃತಿಯೂ ಮೂಡುತ್ತಿದ್ದು, ತಂತ್ರಜ್ಞಾನದ ನೆರವಿನಿಂದ ಚಿಕಿತ್ಸೆಗಳು ವ್ಯಕ್ತಿಯನ್ನು ಪ್ರಾಣಾಪಾಯದಿಂದ ಪಾರು ಮಾಡುತ್ತಿವೆ. ಕೃತಕ ಬುದ್ಧಿಮತ್ತೆಯಂತಹ ತಂತ್ರಜ್ಞಾನಗಳು ನಿಖರ ಚಿಕಿತ್ಸೆಗೆ ಸಹಕಾರಿಯಾಗುತ್ತಿವೆ. ಆರಂಭಿಕ ಹಂತದಲ್ಲಿಯೇ ಕ್ಯಾನ್ಸರ್ ಪತ್ತೆ ಮಾಡಿದಲ್ಲಿ ಸುಲಭವಾಗಿ ಕಾಯಿಲೆಯನ್ನು ವಾಸಿ ಮಾಡಬಹುದು' ಎಂದು ಹೇಳಿದರು.

ಫೋರ್ಟಿಸ್ ಕ್ಯಾನ್ಸರ್ ಶೃಂಗವನ್ನು ದಿನೇಶ್ ಗುಂಡೂರಾವ್ ಉದ್ಘಾಟಿಸಿದರು. ಡಾ.ನಿತಿ ರೈಝೂದಾ, ಡಾ. ಅಶುತೋಷ್ ರಘುವಂಶಿ ಹಾಗೂ ಕ್ಯಾನ್ಸರ್ ತಜ್ಞರು ಪಾಲ್ಗೊಂಡಿದ್ದರು

ಕ್ಯಾನ್ಸರ್ ತಜ್ಞೆ ಡಾ.ನಿತಿ ರೈಝೂದಾ, 'ಪುರುಷರಲ್ಲಿ ಹೆಚ್ಚಾಗಿ ಪ್ರಾಸ್ಟೇಟ್ (ಮೂತ್ರನಾಳ), ಬಾಯಿ, ಜಠರ ಮತ್ತು ಅನ್ನನಾಳದ ಕ್ಯಾನ್ಸರ್ ಕಾಣಿಸಿಕೊಳ್ಳುತ್ತಿದೆ. ಸ್ತನ ಮತ್ತು ಗರ್ಭಕಂಠದ ಗರ್ಭಾಶಯದ ಕ್ಯಾನ್ಸರ್ ಮಹಿಳೆಯರಲ್ಲಿ ಹೆಚ್ಚಾಗಿ ಪತ್ತೆಯಾಗುತ್ತಿದೆ. ಗ್ರಾಮೀಣ ಪ್ರದೇಶಗಳಿಗೆ ಹೋಲಿಸಿದರೆ, ನಗರ ಪ್ರದೇಶದಲ್ಲಿ ಪ್ರಾಸ್ಟೇಟ್ ಕ್ಯಾನ್ಸರ್ ವೇಗವಾಗಿ ಹೆಚ್ಚಳವಾಗುತ್ತಿದೆ. ಪುರುಷರಲ್ಲಿ ಪತ್ತೆಯಾಗುವ ಕ್ಯಾನ್ಸರ್‌ಗಳಲ್ಲಿ ಇದು ಎರಡನೆಯ ಸ್ಥಾನದಲ್ಲಿದೆ. ಬಹುತೇಕ ಕ್ಯಾನ್ಸರ್ ಪೀಡಿತರು ರೋಗ ಉಲ್ಬಣಗೊಂಡ ಬಳಿಕ ಚಿಕಿತ್ಸೆಗೆ ಬರುತ್ತಾರೆ' ಎಂದು ತಿಳಿಸಿದರು.

ಫೋರ್ಟಿಸ್ ಹೆಲ್ತ್‌ಕೇರ್‌ನ ವ್ಯವಸ್ಥಾಪಕ ನಿರ್ದೇಶಕ ಡಾ. ಅಶುತೋಷ್ ರಘುವಂಶಿ, 'ಅತ್ಯಾಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಂಡಲ್ಲಿ ರೋಗಿಗಳಿಗೆ ಗುಣಮಟ್ಟದ ಚಿಕಿತ್ಸೆಗಳನ್ನು ಒದಗಿಸಲು ಸಾಧ್ಯ. ದೇಶದ ಬಹುತೇಕ ಜನರಿಗೆ ಕ್ಯಾನ್ಸರ್ ಕಾಯಿಲೆಯ ಬಗ್ಗೆ ಸರಿಯಾದ ತಿಳಿವಳಿಕೆಯಿಲ್ಲ' ಎಂದರು.

ಮುಖ್ಯಾಂಶಗಳು

- 250ಕ್ಕೂ ಹೆಚ್ಚು ಕ್ಯಾನ್ಸರ್ ತಜ್ಞರು ಭಾಗಿ
- ಕ್ಯಾನ್ಸರ್ ಜಾಗೃತಿಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚೆ
- ನಗರ ಪ್ರದೇಶದಲ್ಲಿ ಪ್ರಾಸ್ಟೇಟ್ ಕ್ಯಾನ್ಸರ್ ಹೆಚ್ಚಳ

ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ • ನೂತನ ಉಚಿತ ಡಯಾಲಿಸಿಸ್ ಸೇವೆಗೆ ಚಾಲನೆ

‘ಕೆ.ಸಿ.ಜನರಲ್ ಆಸ್ಪತ್ರೆ ಮೇಲ್ದರ್ಜೆಗೆ ಕ್ರಮ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ₹ 150 ಕೋಟಿ ವೆಚ್ಚದಲ್ಲಿ ಮೇಲ್ದರ್ಜೆಗೆ ಏರಿಸಲು ಕ್ರಮ
- ಕರ್ನಾಟಕದಲ್ಲಿ ಒಟ್ಟು 219 ಡಯಾಲಿಸಿಸ್ ಕೇಂದ್ರಗಳು
- 800 ಡಯಾಲೈಸರ್ ಯಂತ್ರಗಳನ್ನು ಕೇಂದ್ರಗಳಿಗೆ ಅಳವಡಿಸಲು ಯೋಜನೆ

ಬೆಂಗಳೂರು: ‘ಇಲ್ಲಿನ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ತಾಯಿ ಮತ್ತು ಮಕ್ಕಳ ಘಟಕ ನಿರ್ಮಾಣ ಸೇರಿ ಆಸ್ಪತ್ರೆಯನ್ನು ₹150 ಕೋಟಿ ವೆಚ್ಚದಲ್ಲಿ ಮೇಲ್ದರ್ಜೆಗೆ ಏರಿಸಲು ಕ್ರಮವಹಿಸಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಆರೋಗ್ಯ ಇಲಾಖೆ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಏಕ ಬಳಕೆಯ ಡಯಾಲೈಸರ್ ಯಂತ್ರಗಳ ಸೇವೆಗೆ ಚಾಲನೆ ನೀಡಿ, ಮಾತನಾಡಿದರು.

‘ಅತ್ಯಂತ ಹಳೆಯ ಆಸ್ಪತ್ರೆಯಾದ ಕೆ.ಸಿ. ಜನರಲ್‌ಗೆ ಹೆಚ್ಚಿನ ಸಂಖ್ಯೆಯಲ್ಲಿ ರೋಗಿಗಳು ಬರುತ್ತಿದ್ದಾರೆ. ಈ ಆಸ್ಪತ್ರೆಯಲ್ಲಿ ಅಡುಗೆ ತಯಾರಿಕೆ ಕೇಂದ್ರ ನಿರ್ಮಾಣ, ಲಾಂಡ್ರಿ ನವೀಕರಣ ಸೇರಿ ₹ 150 ಕೋಟಿ ವೆಚ್ಚದಲ್ಲಿ ಮೇಲ್ದರ್ಜೆಗೆ ಏರಿಸುವ ಪ್ರಸ್ತಾವವನ್ನು ಸಚಿವ ಸಂಪುಟದಲ್ಲಿ ಇಟ್ಟು, ಅನುಮೋದನೆ ಪಡೆಯಲಾಗುವುದು’ ಎಂದು ತಿಳಿಸಿದರು.

‘ಮೂತ್ರಪಿಂಡ ವೈಫಲ್ಯಕ್ಕೆ ಒಳಗಾದವರು ವಾರದಲ್ಲಿ ಮೂರು ಬಾರಿ ಡಯಾಲಿಸಿಸ್ ಮಾಡಿಸಿಕೊಳ್ಳಬೇಕಾಗುತ್ತದೆ. ಒಮ್ಮೆ ಡಯಾಲಿಸಿಸ್ ಮಾಡಿಸಿಕೊಂಡರೆ ₹ 2 ಸಾವಿರದವರೆಗೂ ವೆಚ್ಚವಾಗುತ್ತದೆ. ಇದರಿಂದಾಗಿ ಬಡವರಿಗೆ ಇಷ್ಟು ಹಣ ಪಾವತಿಸುವುದು ಕಷ್ಟ. ಆದ್ದರಿಂದ ಸರ್ಕಾರ ಉಚಿತವಾಗಿ ಡಯಾಲಿಸಿಸ್ ಸೇವೆ ಒದಗಿಸುತ್ತಿದೆ. ಕರ್ನಾಟಕದಲ್ಲಿ 219 ಡಯಾಲಿಸಿಸ್ ಕೇಂದ್ರಗಳಿದ್ದು, 800 ಡಯಾಲೈಸರ್ ಯಂತ್ರಗಳನ್ನು ಕೇಂದ್ರಗಳಿಗೆ ಅಳವಡಿಕೆ ಮಾಡಲಾಗುತ್ತಿದೆ’ ಎಂದು ತಿಳಿಸಿದರು.

ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಅಳವಡಿಸಲಾಗಿರುವ ಏಕ ಬಳಕೆಯ ಡಯಾಲೈಸರ್ ಯಂತ್ರಗಳ ಕಾರ್ಯನಿರ್ವಹಣೆಯನ್ನು ಸಿದ್ದರಾಮಯ್ಯ ಪರಿಶೀಲಿಸಿದರು. ದಿನೇಶ್ ಗುಂಡೂರಾವ್, ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಟಿ.ಕೆ. ಅನಿಲ್ ಕುಮಾರ್ ಹಾಗೂ ಇಲಾಖೆಯ ಅಧಿಕಾರಿಗಳು ಪಾಲ್ಗೊಂಡಿದ್ದರು

ಡಯಾಲಿಸಿಸ್ ಸೇವೆ ಸದೃಢ: ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ‘ಡಯಾಲಿಸಿಸ್ ಸೇವೆಯನ್ನ ಸದೃಢಗೊಳಿಸುವತ್ತ ಮಹತ್ವದ ಹೆಜ್ಜೆ ಇಡಲಾಗಿದೆ. ಡಯಾಲಿಸಿಸ್ ವ್ಯವಸ್ಥೆ ಬಗ್ಗೆ ಈ ಹಿಂದೆ ಸಾಕಷ್ಟು ದೂರುಗಳು ಸಾರ್ವಜನಿಕರಿಂದ ಬಂದಿದ್ದವು. ಬಹುಬಳಕೆಯ ಡಯಾಲಿಸಿಸ್ ಯಂತ್ರಗಳಿಂದ ರೋಗಿಗಳಿಗೆ ಕೆಲವೊಮ್ಮ ಸೋಂಕು ತಗುಲುತ್ತಿತ್ತು. ಅಲ್ಲದೇ, ಸಾಕಷ್ಟು ಯಂತ್ರಗಳು ಡಯಾಲಿಸಿಸ್ ನಡೆಸುವ ವೇಳೆ ಕೆಟ್ಟು ನಿಲ್ಲುತ್ತಿದ್ದವು. ಆದ್ದರಿಂದ ರಾಜ್ಯದಾದ್ಯಂತ ಹೊಸ ಡಯಾಲಿಸಿಸ್ ಯಂತ್ರಗಳನ್ನ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಅಳವಡಿಸುತ್ತಿದ್ದೇವೆ. ಇದರಿಂದ ಸೋಂಕು ರಹಿತ ಡಯಾಲಿಸಿಸ್ ಸೇವೆ ಸಿಗಲಿದೆ’ ಎಂದರು.

‘800 ಏಕಬಳಕೆಯ ಡಯಾಲೈಸರ್ ಯಂತ್ರಗಳಿಂದ ವಾರ್ಷಿಕ 7.20 ಲಕ್ಷ ಡಯಾಲಿಸಿಸ್ ಸೇವೆಗಳನ್ನು ಒದಗಿಸುವ ಸಾಮರ್ಥ್ಯ ಕಲ್ಪಿಸಲಾಗಿದೆ. ವಿಭಾಗವಾರು ಟೆಂಡರ್ ಮೂಲಕ ಬೆಂಗಳೂರು, ಮೈಸೂರು, ಬೆಳಗಾವಿ ವಿಭಾಗಗಳಲ್ಲಿ ನೂತನ ಡಯಾಲೈಸರ್ ಯಂತ್ರಗಳು ಅಳವಡಿಕೆಯಾಗಿವೆ. ಕಲಬುರಗಿ ವಿಭಾಗದಲ್ಲಿ 127 ಹೊಸ ಯಂತ್ರಗಳ ಅಳವಡಿಕೆ ಕಾರ್ಯ ಮುಂದಿನ ತಿಂಗಳೊಳಗೆ ಪೂರ್ಣಗೊಳ್ಳಲಿದೆ’ ಎಂದು ಹೇಳಿದರು.

‘ನ್ಯಾಯಕ್ಕಾಗಿ ದೇಣಿಗೆ’ ಅಭಿಯಾನಕ್ಕೆ ಕಾಂಗ್ರೆಸ್ ಚಾಲನೆ

ನವದೆಹಲಿ (ಪಿಟಿಐ): ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆಯುತ್ತಿರುವ ‘ಭಾರತ್ ಜೋಡೊ ನ್ಯಾಯ ಯಾತ್ರೆ’ಗಾಗಿ ಕಾಂಗ್ರೆಸ್ ಶನಿವಾರ, ‘ನ್ಯಾಯಕ್ಕಾಗಿ ದೇಣಿಗೆ’ (ಡೊನೆಟ್ ಫಾರ್ ನ್ಯಾಯ) ಅಭಿಯಾನಕ್ಕೆ ಚಾಲನೆ ನೀಡಿದೆ.

ಕಾರ್ಯಕರ್ತರನ್ನು ಹುರಿದುಂಬಿಸುವುದು ದೇಣಿಗೆ ಅಭಿಯಾನದ ಗುರಿಯಾಗಿದೆಯೇ ಹೊರತು ಹಣ ಸಂಗ್ರಹಣೆಯ ಏಕಮಾತ್ರ ಉದ್ದೇಶವಿಲ್ಲ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ಕಾಂಗ್ರೆಸ್ ಖಜಾಂಚಿ ಅಜಯ್ ಮಾಕನ್ ಹೇಳಿದ್ದಾರೆ.

ಅಜಯ್ ಮಾಕನ್

₹670 ಅಥವಾ ಅದಕ್ಕಿಂತ ಹೆಚ್ಚಿನ ಮೊತ್ತ ನೀಡುವ ಯಾವುದೇ ವ್ಯಕ್ತಿಗೆ ರಾಹುಲ್ ಗಾಂಧಿ ಅವರ ಸಹಿಯುಳ್ಳ ಟಿ–ಷರ್ಟ್, ₹67,000 ಅಥವಾ ಅದಕ್ಕಿಂತ ಹೆಚ್ಚು ಹಣ ನೀಡುವವರಿಗೆ ಟಿ–ಷರ್ಟ್, ಬ್ಯಾಗು, ಬ್ಯಾಂಡ್, ಬ್ಯಾಡ್ಜ್ ಮತ್ತು ಸ್ಟಿಕ್ಕರ್ ಅನ್ನು ಒಳಗೊಂಡ ನ್ಯಾಯ ಕಿಟ್ ಅನ್ನು ಉಡುಗೊರೆಯಾಗಿ ನೀಡಲಾಗುವುದು ಎಂದು ಹೇಳಿದ್ದಾರೆ.

‘ಸಂವಿಧಾನ: ಅಂಬೇಡ್ಕರ್‌ಗಿಂತ ನೆಹರೂ ಪಾತ್ರ ಹಿರಿದು’– ಸುಧೀಂದ್ರ ಕುಲಕರ್ಣಿ

ಮುಂಬೈ (ಪಿಟಿಐ): ‘ಸಂವಿಧಾನ ರಚನೆಯಲ್ಲಿ ಬಿ.ಆರ್.ಅಂಬೇಡ್ಕರ್ ಅವರಿಗಿಂತ ದೇಶದ ಮೊದಲ ಪ್ರಧಾನಿಯಾಗಿದ್ದ ಜವಾಹರಲಾಲ್ ನೆಹರೂ ಅವರ ಕೊಡುಗೆ ಹೆಚ್ಚು’ ಎಂದು ರಾಜಕೀಯ ವಿಶ್ಲೇಷಕ ಸುಧೀಂದ್ರ ಕುಲಕರ್ಣಿ ತಮ್ಮ ಲೇಖನದಲ್ಲಿ ಅಭಿಪ್ರಾಯ ವ್ಯಕ್ತಪಡಿಸಿರುವುದು ವಿವಾದಕ್ಕೆ ಕಾರಣವಾಗಿದೆ.

ಸುಧೀಂದ್ರ ಕುಲಕರ್ಣಿ ಈ ಬಗ್ಗೆ ಸುದ್ದಿ ಮಾಧ್ಯಮವೊಂದರಲ್ಲಿ ಲೇಖನ ಬರೆದಿದ್ದು, ಅದರ ಲಿಂಕ್ ಅನ್ನು ಭಾರತೀಯ ಸಾಗರೋತ್ತರ ಕಾಂಗ್ರೆಸ್ ಅಧ್ಯಕ್ಷ ಸ್ಯಾಮ್ ಪಿತ್ರೋಡಾ ‘ಎಕ್ಸ್’ನಲ್ಲಿ ಹಂಚಿಕೊಂಡಿದ್ದರು. ಅದನ್ನು ನಂತರ ತೆಗೆದುಹಾಕಲಾಗಿದೆ. ಲೇಖನದ ಬಗ್ಗೆ ಬಿಜೆಪಿ ತೀವ್ರ ಆಕ್ಷೇಪಣೆ ವ್ಯಕ್ತಪಡಿಸಿದ್ದು, ‘ದಲಿತರು ಹಾಗೂ ಅಂಬೇಡ್ಕರ್ ಅವರಿಗೆ ಅವಮಾನ ಮಾಡಲಾಗಿದೆ’ ಎಂದು ಟೀಕಿಸಿದೆ.

‘ಸಂವಿಧಾನ ರಚನೆಯಲ್ಲಿ ಬಾಬಾ ಸಾಹೇಬರು ಮುಖ್ಯ ಪಾತ್ರ ವಹಿಸಿದ್ದರು ಎಂದು ಇಡೀ ಜಗತ್ತು ನಂಬಿದೆ. ಈ ಬಗೆಗಿನ ಪಿತ್ರೋಡಾ ಅವರ ಅಭಿಪ್ರಾಯವು ಬಾಬಾ ಸಾಹೇಬರನ್ನು ಅವಮಾನಿಸುವ ಕಾಂಗ್ರೆಸ್ ಮನಸ್ಥಿತಿಯನ್ನು ಸೂಚಿಸುತ್ತದೆ’ ಎಂದು ಕೇಂದ್ರ ಕಾನೂನು ಸಚಿವ ಅರ್ಜುನ್ ಮೇಘವಾಲ್ ಟೀಕಿಸಿದ್ದಾರೆ.

ಸುಧೀಂದ್ರ ಕುಲಕರ್ಣಿ ತಮ್ಮ ಲೇಖನವನ್ನು ಸಮರ್ಥಿಸಿಕೊಂಡಿದ್ದಾರೆ. ‘ಸಂವಿಧಾನ ರೂಪಿಸುವಲ್ಲಿ ಅಂಬೇಡ್ಕರ್ ಅವರಿಗಿಂತ ನೆಹರೂ ಪಾತ್ರ ಹಿರಿದು’ ಎಂದಿರುವ ಅವರು, ‘ಈ ಬಗ್ಗೆ ಸಂಶೋಧನೆ ಮಾಡಿರುವೆ. ಬಿ.ಆರ್. ಅಂಬೇಡ್ಕರ್ ಅವರನ್ನು ಸಂವಿಧಾನದ ಕರ್ತೃ ಎಂದು ಭಾವಿಸಲಾಗಿದೆ. ಆದರೆ, ಇತಿಹಾಸದ ವಾಸ್ತವಾಂಶಗಳನ್ನು ಪರಿಶೀಲಿಸಿದರೆ, ಅದು ಸುಳ್ಳು ಎನ್ನುವುದು ತಿಳಿಯುತ್ತದೆ’ ಎಂದಿದ್ದಾರೆ.

ಬನ್ನೇರುಘಟ್ಟ ಆನೆ ಕುಟುಂಬಕ್ಕೆ ಮತ್ತೊಬ್ಬ ಅತಿಥಿ

ಗಂಡು ಮರಿಗೆ ಜನ್ಮ ನೀಡಿದ ‘ವೇದಾ’; ಮರಿಯ ತೂಕ 130 ಕೆ.ಜಿಗೂ ಹೆಚ್ಚು

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಬನ್ನೇರುಘಟ್ಟ ಜೈವಿಕ ಉದ್ಯಾನದ ಎಲ್ಲರ ಅಚ್ಚುಮೆಚ್ಚಿನ ಆನೆ ವೇದಾ ಶುಕ್ರವಾರ ಗಂಡು ಮರಿಗೆ ಜನ್ಮ ನೀಡಿದ್ದಾಳೆ. ಹೊಸ ಅತಿಥಿಯ ಆಗಮನ ಮತ್ತು ಮರಿ ಆನೆಯ ತುಂಟಾಟ ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಸಂತಸ ತಂದಿದೆ.

ಡಿಸೆಂಬರ್ ಕೊನೆಯಲ್ಲಿ ರೂಪಾ ಎಂಬ ಆನೆಯು ಮರಿ ಹಾಕಿತ್ತು. ಒಂದು ತಿಂಗಳ ಅಂತರದಲ್ಲಿ ಎರಡು ಮರಿಗಳು ಆನೆ ಕುಟುಂಬಕ್ಕೆ ಸೇರ್ಪಡೆಯಾಗಿವೆ. ನೂತನ ಅತಿಥಿಯ ಆಗಮನದಿಂದ ಬನ್ನೇರುಘಟ್ಟದ ಆನೆ ಕುಟುಂಬದ ಸಂಖ್ಯೆ 26ಕ್ಕೆ ಏರಿದೆ.

ವೇದಾ ಜನ್ಮ ನೀಡುತ್ತಿರುವ ಐದನೇ ಮರಿ ಇದಾಗಿದೆ. ಚಂಪಾ, ಐರಾವತ, ಶ್ರುತಿ, ಐಹಿಲ್ಯ ಎಂಬ ನಾಲ್ಕು ಮರಿಗಳಿಗೆ ವೇದಾ ಜನ್ಮ ನೀಡಿದ್ದಾಳೆ ಎಂದು ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ ಸೂರ್ಯಸೇನ್ ತಿಳಿಸಿದರು.

ಆನೆ ಮರಿ ಅಂದಾಜು 120-130 ಕೆ.ಜಿಗೂ ಹೆಚ್ಚು ತೂಕವಿದ್ದು, ಆರೋಗ್ಯವಾಗಿದೆ. ಉದ್ಯಾನದ ಇತರ ಸಿಬ್ಬಂದಿಯೂ ತಾಯಿ ಮತ್ತು ಮರಿಯಾನೆಯನ್ನು ಅತ್ಯಂತ ಜತನದಿಂದ ನೋಡಿಕೊಳ್ಳುತ್ತಿದ್ದಾರೆ. ವೇದಾಳ ಮಾವುತ ಮಣಿಕಂಠ ಮತ್ತು ದ್ಯಾವಪ್ಪ ಆನೆ ಮತ್ತು ಮರಿಯ ಆರೈಕೆಯಲ್ಲಿ ತೊಡಗಿದ್ದಾರೆ. ತಾಯಿಗೆ ವಿಶೇಷ ಆರೈಕೆ ಮಾಡಲಾಗುತ್ತಿದೆ. ಉದ್ದು, ಅವಲಕ್ಕಿ, ಕಡಲೆಕಾಳು, ಹೆಸರಕಾಳು, ತೆಂಗಿನಕಾಯಿ ಸೇರಿದಂತೆ ವಿಶೇಷ ಆಹಾರವನ್ನು ನೀಡಲಾಗುತ್ತಿದೆ.

ಮರಿಯು ತಾಯಿಯ ಹಾಲನ್ನೇ ಅವಲಂಬಿಸಿರುವುದರಿಂದ ತಾಯಿ ಹೆಚ್ಚು ಹಾಲು ನೀಡಲು ಅನುಕೂಲವಾಗುವಂತೆ ಪೌಷ್ಟಿಕ ಆಹಾರ ನೀಡಲಾಗುತ್ತಿದೆ ಎಂದು ಉದ್ಯಾನದ ಆನೆ ಮೇಲ್ವಿಚಾರಕ ಸುರೇಶ್ ತಿಳಿಸಿದರು.

ಬನ್ನೇರುಘಟ್ಟ ಜೈವಿಕ ಉದ್ಯಾನದ ಆನೆ ವೇದಾ ಗಂಡು ಮರಿಗೆ ಜನ್ಮ ನೀಡಿದ್ದು ತಾಯಿ ಮತ್ತು ಮರಿ ಜೊತೆಯಲ್ಲಿರುವ ನೋಟ

ಜೋಯಾಲುಕ್ಕಾಸ್: ಆಭರಣ ತಯಾರಿಕೆ ಮೇಲೆ ಶೇ 50 ರಿಯಾಯಿತಿ

ಬೆಂಗಳೂರು: ಜೋಯಾಲುಕ್ಕಾಸ್ ಎಲ್ಲಾ ಆಭರಣಗಳ ತಯಾರಿಕೆ ಮೇಲೆ ಶೇ 50ರಷ್ಟು ರಿಯಾಯಿತಿ ಪ್ರಕಟಿಸಿದೆ.

ಈ ವಿಶೇಷ ಕೊಡುಗೆಯು ಚಿನ್ನ, ಬೆಳ್ಳಿ, ವಜ್ರ ಹಾಗೂ ಅಮೂಲ್ಯ ಹರಳು ಸೇರಿದಂತೆ ಆಭರಣಗಳ ಶ್ರೇಣಿಯನ್ನು ಒಳಗೊಂಡಿದೆ. ಈಗಾಗಲೇ ಆರಂಭವಾಗಿರುವ ರಿಯಾಯಿತಿ ಸೌಲಭ್ಯವು ಜೋಯಾಲುಕ್ಕಾಸ್‌ನ ಎಲ್ಲಾ ಮಳಿಗೆಗಳಲ್ಲಿ ಫೆಬ್ರುವರಿ 18ರವರೆಗೆ ಗ್ರಾಹಕರಿಗೆ ಲಭ್ಯವಿದೆ.

ಉಚಿತ ಆಜೀವ ನಿರ್ವಹಣೆ, ಒಂದು ವರ್ಷದ ಉಚಿತ ವಿಮೆ, ಪ್ರತಿ ಖರೀದಿಯೊಂದಿಗೆ ಮರು ಖರೀದಿಯ ಭರವಸೆ ಸೇರಿದಂತೆ ಹೆಚ್ಚುವರಿ ಸೌಲಭ್ಯಗಳಿವೆ. ಗ್ರಾಹಕರಿಗೆ ಅನುಕೂಲ ಕಲ್ಪಿಸಲು ಈ ಕ್ರಮವಹಿಸಲಾಗಿದೆ ಎಂದು ಜೋಯಾಲುಕ್ಕಾಸ್ ಸಮೂಹದ ಅಧ್ಯಕ್ಷ ಜೋಯ್ ಅಲುಕ್ಕಾಸ್ ತಿಳಿಸಿದ್ದಾರೆ.

‘ಗ್ಯಾರಂಟಿ’ಗಳ ಅನುಷ್ಠಾನಕ್ಕೆ ಪ್ರಾಧಿಕಾರ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಐದು ‘ಗ್ಯಾರಂಟಿ’ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ ಮತ್ತು ಮೇಲ್ವಿಚಾರಣೆಗೆ ರಾಜ್ಯ ಮತ್ತು ಜಿಲ್ಲಾಮಟ್ಟದಲ್ಲಿ ‘ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ’ಗಳು ಹಾಗೂ ತಾಲ್ಲೂಕು ಮತ್ತು ಬಿಬಿಎಂಪಿ ಮಟ್ಟದಲ್ಲಿ ‘ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ’ಗಳನ್ನು ರಚಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿದೆ.

ರಾಜ್ಯಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದಲ್ಲಿ ಅಧ್ಯಕ್ಷ, ಐವರು ಉಪಾಧ್ಯಕ್ಷರು, ಎಲ್ಲ 31 ಜಿಲ್ಲೆಗಳನ್ನು ಪ್ರತಿನಿಧಿಸಲು 31 ಸದಸ್ಯರು ಇರಲಿದ್ದಾರೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಎಸಿಎಸ್ ಅಥವಾ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ ಸದಸ್ಯ ಕಾರ್ಯದರ್ಶಿ ಆಗಿರುತ್ತಾರೆ. ಅಧ್ಯಕ್ಷರಿಗೆ ಸಚಿವ ಸಂಪುಟ ದರ್ಜೆಯ ಸ್ಥಾನಮಾನ, ಎಲ್ಲ ಐವರು ಉಪಾಧ್ಯಕ್ಷರಿಗೆ ರಾಜ್ಯ ಸಚಿವ ಸ್ಥಾನಮಾನ ನೀಡಲಾಗುವುದು.

ರಾಜ್ಯದ ಜಿಲ್ಲೆಗಳನ್ನು ಐದು ವಿಭಾಗಗಳಾಗಿ ವಿಂಗಡಿಸಿ, ರಾಜ್ಯಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಐವರು ಉಪಾಧ್ಯಕ್ಷರಿಗೆ ಪ್ರತಿ ವಿಭಾಗಗಳ ಜವಾಬ್ದಾರಿಯನ್ನು ಹಂಚಿಕೆ ಮಾಡಿ ಸದಸ್ಯ ಕಾರ್ಯದರ್ಶಿ ಆದೇಶ ಹೊರಡಿಸಲಿದ್ದಾರೆ.

ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದಲ್ಲಿ ರಾಜ್ಯಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಒಬ್ಬ ಸದಸ್ಯ ಅಧ್ಯಕ್ಷ ಆಗಿರುತ್ತಾರೆ, ಉಳಿದಂತೆ ಐವರು ಉಪಾಧ್ಯಕ್ಷರು, 15 ಸದಸ್ಯರು ಇರಲಿದ್ದಾರೆ. ಆಯಾ ಜಿಲ್ಲೆಯ ಹೆಚ್ಚುವರಿ ಜಿಲ್ಲಾಧಿಕಾರಿ ಸದಸ್ಯ ಕಾರ್ಯದರ್ಶಿ ಆಗಿರುತ್ತಾರೆ.

ತಾಲ್ಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯಲ್ಲಿ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಒಬ್ಬ ಸದಸ್ಯ ಅಧ್ಯಕ್ಷ, 14 ಸದಸ್ಯರು ಇರಲಿದ್ದಾರೆ. ಕಾರ್ಯನಿರ್ವಹಣಾಧಿಕಾರಿ (ಇಒ) ಸದಸ್ಯ ಕಾರ್ಯದರ್ಶಿ ಆಗಿರುತ್ತಾರೆ.

28 ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡ ಬಿಬಿಎಂಪಿ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯಲ್ಲಿ ರಾಜ್ಯಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಒಬ್ಬ ಸದಸ್ಯ ಅಧ್ಯಕ್ಷ, ಪ್ರತಿ ವಿಧಾನಸಭೆಯಿಂದ ಒಬ್ಬರಂತೆ 28 ಸದಸ್ಯರು, ಬಿಬಿಎಂಪಿ ವಿಶೇಷ ಆಯುಕ್ತ (ಆಡಳಿತ) ಸದಸ್ಯ ಕಾರ್ಯದರ್ಶಿ ಆಗಿರುತ್ತಾರೆ.

ಸುದ್ದಿ 2 ನಿಮಿಷ

ಕೇರಳದಲ್ಲಿ ಎನ್‌ಡಿಎ ಪಾದಯಾತ್ರೆಗೆ ಚಾಲನೆ

ಕಾಸರಗೋಡು (ಪಿಟಿಐ): ಲೋಕಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಬಿಜೆಪಿ ನೇತೃತ್ವದ ರಾಷ್ಟ್ರೀಯ ಪ್ರಜಾ ಸತ್ತಾತ್ಮಕ ಒಕ್ಕೂಟ (ಎನ್‌ಡಿಎ) ಶನಿವಾರ ಕೇರಳದ ಕಾಸರಗೋಡಿನಲ್ಲಿ ಪಾದಯಾತ್ರೆಗೆ ಚಾಲನೆ ನೀಡಿತು.

ಇಲ್ಲಿನ ಥಳಿಪ್ಪಡುಪು ಮೈದಾನದಲ್ಲಿ ನಡೆದ ರಾಜ್ಯವ್ಯಾಪಿ ಪಾದಯಾತ್ರೆ ಚಾಲನಾ ಕಾರ್ಯಕ್ರಮದಲ್ಲಿ ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್, ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ವಿ. ಮುರಳೀಧರನ್, ಎನ್‌ಡಿಎ ರಾಜ್ಯ ಸಂಚಾಲಕ ತುಷಾರ್ ವೆಳ್ಳಪಳ್ಳಿ ಮತ್ತು ಎನ್‌ಡಿಎ ಉಪಾಧ್ಯಕ್ಷ ಪಿ.ಕೆ. ಕೃಷ್ಣದಾಸ್ ಮುಂತಾದ ಮುಖಂಡರು ಹಾಗೂ ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು.

ಪಾದಯಾತ್ರೆ ಉದ್ಘಾಟಿಸಿದ ಪ್ರಮೋದ್ ಸಾವಂತ್, ‘ರಾಜ್ಯದಲ್ಲಿ ಪಾದಯಾತ್ರೆಗೆ ಜನರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು, ರಾಜ್ಯದಲ್ಲಿ ಲೋಕಸಭಾ ಚುನಾವಣೆಯಲ್ಲಿ ಕಮಲ ಅರಳಲಿದೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ರಾಜ್ಯದ ವಿವಿಧ ಜಿಲ್ಲೆಗಳ ಲೋಕಸಭಾ ಕ್ಷೇತ್ರಗಳಲ್ಲಿ ಸಾಗುವ ಪಾದಯಾತ್ರೆಯು ಜನವರಿ 27ರಂದು ಪಾಲಕ್ಕಾಡ್‌ನಲ್ಲಿ ಸಮಾರೋಪಗೊಳ್ಳಲಿದೆ.

ವಿದ್ಯಾರ್ಥಿಗಳ ಮೇಲೆ ಒತ್ತಡ ಹೇರಬೇಡಿ: ಪೋಷಕರಿಗೆ ಸಲಹೆ

ಕೆ.ಆರ್.ಪುರ: ವಿದ್ಯಾರ್ಥಿಗಳ ಮೇಲೆ ಒತ್ತಡ ಹೇರುವ ಬದಲು ಅವರ ಆಸಕ್ತಿಗೆ ಹೆಚ್ಚು ಒತ್ತು ಕೊಡಬೇಕು ಎಂದು ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಹೇಳಿದರು.

ಸಮೀಪದ ಗೆದ್ದಲಹಳ್ಳಿಯ ಪ್ರೆಸ್ಟೀಜ್ ಶಾಲೆಯಲ್ಲಿ ಹಮ್ಮಿಕೊಂಡಿದ್ದ ವಾರ್ಷಿಕೋತ್ಸವದಲ್ಲಿ ಅವರು ವಿದ್ಯಾರ್ಥಿಗಳಿಗೆ ನೆನಪಿನ ಕಾಣಿಕೆ ನೀಡಿ, ಮಾತನಾಡಿದರು.

ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ವಂಚನೆಗಳು ಹೆಚ್ಚಾಗಿವೆ. ವಿದ್ಯಾರ್ಥಿಗಳು ದುಶ್ಚಟಗಳಿಂದ ದೂರವಿರಬೇಕು. ಡ್ರಗ್ಸ್ ಮುಕ್ತ ಸಮಾಜದ ನಿರ್ಮಾಣಕ್ಕೆ ಅಡಿಪಾಯ ಹಾಕಬೇಕು ಎಂದು ಸಲಹೆ ನೀಡಿದರು.

ವಿದ್ಯಾರ್ಥಿಗಳು ಕಷ್ಟಪಟ್ಟು ಓದುವ ಬದಲು ಇಷ್ಟಪಟ್ಟು ಓದುವುದನ್ನು ರೂಢಿಸಿಕೊಳ್ಳಬೇಕು. ಸಮಾಜದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡಲು ಭ್ರಷ್ಟಾಚಾರ ಮುಕ್ತ ಸಮಾಜಕ್ಕೆ ಬುನಾದಿಯನ್ನು ಹಾಕಬೇಕು ಎಂದರು.

ಶಾಲೆ ಅಧ್ಯಕ್ಷ ಆಂಜಿನಪ್ಪ, ನಿರ್ದೇಶಕಿ ರಮಾದೇವಿ, ಲಕ್ಷ್ಮಿದೇವಿ, ಪ್ರಾಂಶುಪಾಲರಾದ ಹೇಮಲತಾ ಇದ್ದರು.

ಭಂಡಾರಕೇರಿ ಮಠದ ವಿದ್ಯೇಶತೀರ್ಥ ಸ್ವಾಮೀಜಿ ಅಭಿಮತ

‘ಸೌಹಾರ್ದಕ್ಕೆ ಸಂಗೀತದ ಕೊಡುಗೆ ಅನನ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾಮಾಜಿಕ ಶಾಂತಿ ಮತ್ತು ಸೌಹಾರ್ದಕ್ಕೆ ಶಾಸ್ತ್ರೀಯ ಸಂಗೀತದ ಕೊಡುಗೆ ಅನನ್ಯ’ ಎಂದು ಭಂಡಾರಕೇರಿ ಮಠದ ವಿದ್ಯೇಶತೀರ್ಥ ಸ್ವಾಮೀಜಿ ತಿಳಿಸಿದರು.

ಅನುಗ್ರಹ ಸಂಗೀತ ಮಹಾವಿದ್ಯಾಲಯ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ತ್ಯಾಗರಾಜರ ಮತ್ತು ಪುರಂದರದಾಸರ ಆರಾಧನಾ ಸಂಗೀತೋತ್ಸವದಲ್ಲಿ ಹರಿದಾಸರ ಪ್ರಚಲಿತ ದೇವರನಾಮಗಳ ಪುಸ್ತಕ ‘ಭಕ್ತಿ ಸನ್ನುತಿ-ಭಾಗ 2’ ಬಿಡುಗಡೆಗೊಳಿಸಿ, ಮಾತನಾಡಿದರು.

‘ಯಾವ ದೇಶದಲ್ಲಿ ಸಂಗೀತ ಮತ್ತು ಸಾಹಿತ್ಯಗಳು ಸಮೃದ್ಧವಾಗಿರುತ್ತವೆಯೋ ಅಲ್ಲಿ ಸುಭಿಕ್ಷೆ ನೆಲೆಸಿರುತ್ತದೆ. ಈ ರಂಗದ ವಿದ್ವಾಂಸರನ್ನು, ತಜ್ಞರನ್ನು ಗೌರವಿಸುವುದು ಹಾಗೂ ಆದರಿಸುವುದು ಶ್ರೇಷ್ಠ ಕಾರ್ಯ’ ಎಂದು ಹೇಳಿದರು.

ಆರಾಧನಾ ಸಂಗೀತೋತ್ಸವದಲ್ಲಿ ಮೃದಂಗ ವಿದ್ವಾಂಸ ಎಚ್.ಎಸ್. ಸುಧೀಂದ್ರ, ತಬಲಾ ವಾದಕ ಗುರುಮೂರ್ತಿ ವೈದ್ಯ, ಪವಮಾನಾಚಾರ್ಯ ಕಲ್ಲಾಪುರ ಅವರನ್ನು ಸನ್ಮಾನಿಸಲಾಯಿತು. ಅನುಗ್ರಹ ಸಂಗೀತ ಮಹಾವಿದ್ಯಾಲಯದ ಪ್ರಾಚಾರ್ಯ ವಿದ್ವಾನ್ ಶ್ರೀಕಂಠ ಭಟ್, ವಿದ್ಯೇಶತೀರ್ಥ ಸ್ವಾಮೀಜಿ, ಎಂ.ಆರ್.ವಿ. ಪ್ರಸಾದ್, ವಸುಮತಿ ಭಟ್, ಸುಬ್ಬುಕೃಷ್ಣ ಪಾಲ್ಗೊಂಡಿದ್ದರು

ಬೆಂಗಳೂರು ಗಾಯನ ಸಮಾಜದ ಅಧ್ಯಕ್ಷ ಎಂ.ಆರ್.ವಿ. ಪ್ರಸಾದ್, ‘ಜ್ಞಾನಿಗಳನ್ನು ಸನ್ಮಾನಿಸಿದರೆ ಸಮಾಜದಲ್ಲಿ ಇನ್ನಷ್ಟು ಶ್ರೇಷ್ಠ ಕೆಲಸಗಳಿಗೆ ಪ್ರೇರಣೆ ನೀಡಿದಂತಾಗುತ್ತದೆ’ ಎಂದರು.

ಆರಾಧನಾ ಮಹೋತ್ಸವದ ಅಂಗವಾಗಿ ಅನುಗ್ರಹ ಸಂಗೀತ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಂದ ಹರಿದಾಸರ ದೇವರನಾಮ ಗೋಷ್ಠಿ, ಶಾಸ್ತ್ರೀಯ ಸಂಗೀತ ಗಾಯನ ನಡೆಯಿತು.

‘ಲಿಂಗಾಯತ ಉಪಪಂಗಡ ಒಗ್ಗೂಡಿಸಿ’

ಪ್ರಜಾವಾಣಿ ವಾರ್ತೆ

ಕಲಬುರಗಿ: ‘ನಮ್ಮ ತಪ್ಪಿನ ಅರಿವಾಗಿದ್ದು, ನಮ್ಮ ಮಕ್ಕಳಿಗೂ ಮೀಸಲಾತಿ ಸಿಗಬೇಕಾದರೆ ವೀರಶೈವ ಲಿಂಗಾಯತ ಸಮುದಾಯದ ಎಲ್ಲ ಉಪ ಪಂಗಡಗಳನ್ನು ಅಪ್ಪಿಕೊಳ್ಳಬೇಕು. ಸಮುದಾಯದ ನಾಯಕರು ಉಪ ಪಂಗಡಗಳನ್ನು ಒಗ್ಗೂಡಿಸುವ ಮೂಲಕ ವೀರಶೈವ ಲಿಂಗಾಯತ ಮಹಾಸಭೆ ಸ್ಥಾಪನೆಯ ಮೂಲ ಉದ್ದೇಶವನ್ನು ಸಾಕಾರಗೊಳಿಸಬೇಕು’ ಎಂದು ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ಹೇಳಿದರು.

ನಗರದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆ ಶನಿವಾರ ಆಯೋಜಿಸಿದ್ದ ಶಿರಸಂಗಿ ಲಿಂಗರಾಜ ದೇಸಾಯಿ ಅವರ ರಾಜ್ಯ ಮಟ್ಟದ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿ, ‘ಫ.ಗು. ಹಳಕಟ್ಟಿ ಅವರ ಶಿವಸಿಂಪಿಗ ಅಂತಹ ಹಲವು ಸಣ್ಣ–ಸಣ್ಣ ಸಮುದಾಯಗಳು ನಮ್ಮಿಂದ ದೂರಾಗಿವೆ. ನಮ್ಮ ತಪ್ಪುಗಳನ್ನು ತಿದ್ದಿಕೊಂಡು ಸಣ್ಣ ಸಮುದಾಯಗಳನ್ನು ಅಪ್ಪಿಕೊಂಡಾಗ ಮಾತ್ರ ನಮ್ಮ ಜನಸಂಖ್ಯೆ ಶೇ 30ರಷ್ಟು ದಾಟುತ್ತದೆ. ಇಲ್ಲದಿದ್ದರೆ ನಮ್ಮ ಶಕ್ತಿ ಕುಂದುತ್ತದೆ’ ಎಂದು ಎಚ್ಚರಿಸಿದರು.

ಎಂ.ಬಿ ಪಾಟೀಲ

‘ಮೀಸಲಾತಿಯ ವಿಚಾರದಲ್ಲಿ ಬಹಳ ದೊಡ್ಡ ಗದ್ದಲ ಮಾಡಿದ್ದ ಒಂದು ತಂಡ, ಮೀಸಲಾತಿಯ ಆಸೆಗಾಗಿ ದಾರಿ ತಪ್ಪಿಸಿ ಏನೇನೋ ಬರೆಯಿಸಿದ್ದರು. ನಾವೆಲ್ಲರೂ ಛಿದ್ರವಾಗಿ ಹರಿದು ಹಂಚಿ ಹೋಗಿದ್ದೇವೆ. ಕೆಲವರಿಗೆ 2ಎ ಸಿಕ್ಕಿದ್ದರೆ ಮತ್ತೆ ಕೆಲವರು 3ಬಿಯಲ್ಲಿ ಇದ್ದಾರೆ. ಆದರೆ, ಅನ್ಯ ಸಮುದಾಯಗಳು ಕೇಂದ್ರ ಮತ್ತು ರಾಜ್ಯದಲ್ಲಿ ಒಂದೇ ಶೀರ್ಷಿಕೆಯಲ್ಲಿ ಇವೆ’ ಎಂದು ತಿಳಿಸಿದರು.

ಸಚಿವ ಈಶ್ವರ ಖಂಡ್ರೆ ಮಾತನಾಡಿ, ‘ಆರ್ಥಿಕವಾಗಿ ಸಬಲತೆ ಸಾಧಿಸಿದರೂ ಸಂಘಟನೆಯಲ್ಲಿ ದುರ್ಬಲವಾಗಿ ಸಾಮಾಜಿಕ ನ್ಯಾಯದ ಅಡಿ ಮೀಸಲಾತಿಯನ್ನು ಕೇಳದಿರುವುದು ವಿಪರ್ಯಾಸ. ಎಲ್ಲರೂ ಒಗ್ಗೂಡಿ ಹೋರಾಟ ಮಾಡಿ ಒಕ್ಕೊರಲಿನಿಂದ ಒಬಿಸಿ ಮೀಸಲಾತಿ ಕೇಳಿದರೆ ಸಿಗುವ ಸಾಧ್ಯತೆ ಇದೆ’ ಎಂದು ಅಭಿಪ್ರಾಯ ಪಟ್ಟರು.

‘ಪತ್ರಿಕಾ ವಿತರಕರಿಗೆ ₹5 ಕೋಟಿ ಮೀಸಲಿಡಿ’

ಬೆಂಗಳೂರು: ಪತ್ರಿಕಾ ವಿತರಕರ ಶ್ರೇಯೋಭಿವೃದ್ಧಿಗೆ ರಾಜ್ಯದ ಮುಂದಿನ ಬಜೆಟ್‌ನಲ್ಲಿ ₹5 ಕೋಟಿ ಮೀಸಲಿಡುವಂತೆ ಕೋರಿ ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅವರಿಗೆ ರಾಜ್ಯ ಪತ್ರಿಕಾ ವಿತರಕರು ಶನಿವಾರ ಮನವಿ ಸಲ್ಲಿಸಿದರು. ಒಕ್ಕೂಟದ ರಾಜ್ಯ ಅಧ್ಯಕ್ಷ ಕೆ.ಶಂಭುಲಿಂಗ ಅವರ ನೇತೃತ್ವದಲ್ಲಿ ಮನವಿ ಸಲ್ಲಿಸಲಾಯಿತು.

ಪತ್ರಿಕಾ ವಿತರಣೆ ಕೆಲಸದಲ್ಲಿ 60 ವರ್ಷ ಮೇಲ್ಪಟ್ಟ ಅನೇಕ ಮಂದಿ ಕೆಲಸ ಮಾಡುತ್ತಿದ್ದಾರೆ. ‘ಇ-ಶ್ರಮ್’ ಯೋಜನೆಯಲ್ಲಿ ವಿತರಕರ ವಯೋಮಿತಿಯನ್ನು 59 ವರ್ಷದಿಂದ 75 ವರ್ಷಕ್ಕೆ ಏರಿಸಬೇಕು. ವಿತರಕರಿಗಾಗಿ ಸಮುದಾಯ ಭವನ ನಿರ್ಮಿಸಲು ಜಾಗ, ನಿವೇಶನ, ಎಲೆಕ್ಟ್ರಿಕ್ ಬೈಕ್ ಉಚಿತವಾಗಿ ನೀಡಬೇಕು ಎಂದು ಕೋರಿದರು.

ನಗರದಲ್ಲಿ ಇಂದು

ಆರ್ಗ್ಯಾನಿಕ್ ಸಂತೆ: ನೃತ್ಯ ಪ್ರದರ್ಶನ: ಮೀನಾಕ್ಷಿ ಪ್ರಸಾದ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ದಿ ಗ್ರೀನ್ ಪಾತ್, ಮಲ್ಲೇಶ್ವರ, ಬೆಳಿಗ್ಗೆ 8ರಿಂದ

ಉಚಿತ ಆರೋಗ್ಯ ಶಿಬಿರ: ಅತಿಥಿಗಳು: ಶ್ರೀಧರ್ ಲಕ್ಷ್ಮಯ್ಯ, ಪಿ. ಕೃಷ್ಣಮೂರ್ತಿ, ಯಲ್ಲಪ್ಪ, ಜೆ.ಎಂ. ನಾರಾಯಣಸ್ವಾಮಿ, ಜಿ. ಕಿಶೋರ್ ಕುಮಾರ್, ಎಸ್. ಪ್ರವೀಣ್, ಎಸ್. ಸಂಜೀವ್ ಕುಮಾರ್, ಲಕ್ಷ್ಮಿ ಮಂಜಣ್ಣ, ಆಯೋಜನೆ: ಕರ್ನಾಟಕ ಭೋವಿ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ಜಸ್ಮಾದೇವಿ ಮಂದಿರ ಕಲ್ಯಾಣ ಮಂಟಪ, ಆಸ್ಟಿನ್ ಟೌನ್ ಲೇಔಟ್, ಬೆಳಿಗ್ಗೆ 7

ಡಿ.ಬಿ. ಮಲ್ಲಿಕಾರ್ಜುನಸ್ವಾಮಿ ಮಹಾಮನೆ ಅವರ ‘ವಿಷಾದ ಗಾಥೆ’ ಪುಸ್ತಕ ಬಿಡುಗಡೆ: ಬರಗೂರು ರಾಮಚಂದ್ರಪ್ಪ, ಅಧ್ಯಕ್ಷತೆ: ವಿಜಯಾ, ಪುಸ್ತಕದ ಕುರಿತು: ರಾಜಶೇಖರ ಮಠಪತಿ, ಅಭಿನಂದಿಸುವವರು: ಎಲ್. ಹನುಮಂತಯ್ಯ, ಅಭಿನಂದಿತರು: ಎಸ್. ದಿವಾಕರ್, ಕೃತಿಕಾರನ ಕುರಿತು: ಶ್ರೀನಿವಾಸ್ ಜಿ. ಕಪ್ಪಣ್ಣ, ಆಯೋಜನೆ: ಯಾಜಿ ಪ್ರಕಾಶನ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 9.30



ಬರಗೂರು ರಾಮಚಂದ್ರಪ್ಪ

‘ಭಾರತೀಯ ಶಿಕ್ಷಣದ ಪುನರುತ್ಥಾನ’ ವಿದ್ವತ್ ಸಮ್ಮೇಳನ, 1051 ಪುಸ್ತಕಗಳ ಬಿಡುಗಡೆ: ಉಪಸ್ಥಿತಿ: ವಿದ್ಯೇಶತೀರ್ಥ ಸ್ವಾಮೀಜಿ, ಸುವಿದ್ಯೇಂದ್ರ ಸ್ವಾಮೀಜಿ, ಅಭಿನವ ಶಂಕರ ಭಾರತೀ ಸ್ವಾಮೀಜಿ, ಮುಖ್ಯ ವಕ್ತಾರರು: ಇಂದುಮತಿ ಕಟ್ದಾರೆ, ಆರತಿ ವಿ.ಬಿ., ವೀರನಾರಾಯಣ ಪಾಂಡುರಂಗಿ, ಎಂ.ಎ. ಅಳ್ವಾರ್, ಆಯೋಜನೆ: ಪುರಾಣಪ್ರಮತಿ, ವಿದ್ಯಾಕ್ಷೇತ್ರ, ಸ್ಥಳ: ಯುವಪಥ, ಜಯನಗರ, ಬೆಳಿಗ್ಗೆ 9.30

ಕರ್ನಾಟಕ ಸಾಂಸ್ಕೃತಿಕ ಸಿರಿ ಸಂಭ್ರಮ: ಉದ್ಘಾಟನೆ: ಪಿ.ಎನ್. ಶ್ರೀನಿವಾಸಾಚಾರಿ, ಅತಿಥಿ: ಪದ್ಮಾ ಟಿ. ಚಿನ್ಮಯಿ, ಅಧ್ಯಕ್ಷತೆ: ಎನ್.ವಿ. ಅಂಬಾಮಣಿ, ಆಯೋಜನೆ: ಕರ್ನಾಟಕ ವಿಶ್ವಕರ್ಮ ಸಾಹಿತ್ಯ ಕಲಾ ಅಕಾಡೆಮಿ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10

ಗಾಯನ, ಹಾಸ್ಯ, ರಸಪ್ರಶ್ನೆ, ಕವಿಗೋಷ್ಠಿ: ಅಧ್ಯಕ್ಷತೆ: ಸದಾನಂದ, ಅತಿಥಿ: ಬಿ.ಕೆ. ರವಿರಾಜ್, ಉಪಸ್ಥಿತಿ: ಎಂ.ಜಿ. ರಮೇಶ್, ಆಯೋಜನೆ: ಸಹಮತ, ಸ್ಥಳ: ನಂ. 323, ಹೇಮ ಸದನ, ಸಹಕಾನಗರ, ಬೆಳಿಗ್ಗೆ 10



ಎನ್. ಸಂತೋಷ್ ಹೆಗ್ಡೆ

‘ಇ.ಡಿ., ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ–2002, ಸಿಬಿಐ, ಸಂವಿಧಾನ ಹಾಗೂ ರಾಜ್ಯಪಾಲರ ಜವಾಬ್ದಾರಿ’ ಕುರಿತು ಸಂವಾದ: ಮಾತನಾಡುವವರು: ಎನ್. ಸಂತೋಷ್ ಹೆಗ್ಡೆ, ಬಿ.ವಿ. ಆಚಾರ್ಯ, ಕೃಷ್ಣಪ್ರಸಾದ್, ಎಲ್. ಹನುಮಂತಯ್ಯ, ಸಂಚಾಲಕ: ಬಿ.ಕೆ. ಚಂದ್ರಶೇಖರ್, ಆಯೋಜನೆ: ನಾಗರಿಕರ ವೇದಿಕೆ, ಸ್ಥಳ: ಗಾಂಧಿಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30

ಕೆ.ಎನ್. ಗಣೇಶಯ್ಯ ಅವರ ‘ಇಮ್ಮಡಿ ಮಡಿಲು’, ‘ಹೊಕ್ಕಳ ಮೆದುಳು’, ‘ಅಜ್ಞಾತ ಚಿತ್ತದತ್ತ ಒಂದು’ ಪುಸ್ತಕಗಳ ಬಿಡುಗಡೆ: ಮಲ್ಲೇಪುರಂ ಜಿ. ವೆಂಕಟೇಶ, ಅತಿಥಿಗಳು: ಎಂ.ಆರ್. ದತ್ತಾತ್ರಿ, ಕರ್ಕಿ ಕೃಷ್ಣಮೂರ್ತಿ, ಆಯೋಜನೆ: ಅಂಕಿತ ಪುಸ್ತಕ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬೆಳಿಗ್ಗೆ 10.30

ಕೆ.ಎಸ್. ನರಸಿಂಹಸ್ವಾಮಿ ಅವರ ಜನ್ಮದಿನಾಚರಣೆ ಅಂಗವಾಗಿ ‘ಕವಿಗೋಷ್ಠಿ, ಗೀತಗಾಯನ, ರಸಪ್ರಶ್ನೆ’: ಅಧ್ಯಕ್ಷತೆ: ಬಿ. ಶಾಂತಕುಮಾರ್, ಅತಿಥಿಗಳು: ಟಿ.ಪಿ. ಪ್ರಭುದೇವ್, ಜಿ.ಆರ್. ಶೇಷಾದ್ರಿ, ಆಯೋಜನೆ: ರವಿಕಿರಣ ಆರ್ಟ್ಸ್ ಆ್ಯಂಡ್ ಕ್ರಿಯೇಷನ್ಸ್ ಟ್ರಸ್ಟ್, ಸ್ಥಳ: ಕೆನ್ ಕಲಾ ಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ಡಾ. ಎಚ್.ಎಸ್. ಸುರೇಶ್ ಅವರ ‘ಸ್ಥೂಲಕಾಯ ಮತ್ತು ಬೊಜ್ಜು’, ‘ಮಕ್ಕಳೇ ಮದ್ಯಪಾನ ಹಾಗೂ ಉದ್ದೀಪನ ವಸ್ತುಗಳಿಂದ ದೂರವಿರಿ’, ಓವರ್‌ವೇಟ್ ಆ್ಯಂಡ್ ಒಬೆಸಿಟಿ’ ಪಸ್ತಕಗಳ ಬಿಡುಗಡೆ: ಚಂದ್ರಶೇಖರ ಕಂಬಾರ, ನಾಗತಿಹಳ್ಳಿ ಚಂದ್ರಶೇಖರ್, ಡಾ. ರವಿಕುಮಾರ್ ಬಿ.ಸಿ., ಪುಸ್ತಕಗಳ ಪರಿಚಯ: ಪಿ. ರಾಮಮೂರ್ತಿ, ಸಾಧಕರಿಗೆ ಸನ್ಮಾನ: ಹೊ.ನ. ನೀಲಕಂಠೇಗೌಡ, ಡಾ. ಮಂಜುನಾಥ್ ಎಚ್. ಜಿ., ಡಾ. ದಿನೇಶ್ ಬಿ., ಆಯೋಜನೆ: ವಿಶ್ವಮಾನವ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30



ಚಂದ್ರಶೇಖರ ಕಂಬಾರ

ಇಂದಿರಾ ನಾಡಿಗ್ ಅವರ ‘ಬೆಸೆಯದ ಬಂಧ’ ಪುಸ್ತಕ ಬಿಡುಗಡೆ: ಮುದ್ದುಮೋಹನ್, ಅಧ್ಯಕ್ಷತೆ: ಡಿ.ವಿ. ಗುರುಪ್ರಸಾದ್, ಪುಸ್ತಕದ ಬಗ್ಗೆ: ಸಿ.ಬಿ. ಶೈಲಜಾ ಜಯಕುಮಾರ್, ಉಪಸ್ಥಿತಿ: ಬಿ.ಎಸ್. ವಿದ್ಯಾರಣ್ಯ, ಆಯೋಜನೆ: ಚಾರುಮತಿ ಪ್ರಕಾಶನ, ಸ್ಥಳ: ಕಸ್ತೂರಬಾ ಸಭಾಂಗಣ, ಗಾಂಧಿಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ಸಂಗೀತೋತ್ಸವ: ಯುಗಳ ಗಾಯನ: ಶ್ರೀಕಾಂತಂ ನಾಗದೀಪ್ತಿ, ಶ್ರೀಕಾಂತಂ ನಾಗಪ್ರಣತಿ, ಪಿಟೀಲು: ಪ್ರಣವಿ ಗುರುಪ್ರಸನ್ನ, ಮೃದಂಗ: ಎಂ. ವಿನಯ್ ನಾಗರಾಜನ್, ಘಟ: ಆರ್. ವಿಶ್ವನಾಥ್, ಮೋರ್ಸಿಂಗ್: ಕಾರ್ತಿಕ್ ಪ್ರಣವ್, ಆಯೋಜನೆ: ಸದ್ಗುರು ಶ್ರೀ ತ್ಯಾಗಬ್ರಹ್ಮ ವೈದಿಕ ಆರಾಧನಾ ಕೈಂಕಾರ್ಯ ಟ್ರಸ್ಟ್, ಸ್ಥಳ: ಶೃಂಗೇರಿ ಶಂಕರ ಮಠದ ಆವರಣ, ಚಾಮರಾಜಪೇಟೆ, ಬೆಳಿಗ್ಗೆ 10ರಿಂದ

‘ದಿನದರ್ಶಿಕೆ’ ಬಿಡುಗಡೆ: ಚ.ಹ. ರಘುನಾಥ್, ಅಧ್ಯಕ್ಷತೆ: ರಾಜು ಎನ್., ಆಯೋಜನೆ: ಬೆಂಗಳೂರು ಉತ್ತರ ಜಿಲ್ಲಾ ಪದವಿಪೂರ್ವ ಕಾಲೇಜುಗಳ ಪ್ರಾಚಾರ್ಯರ ಸಂಘ, ಸ್ಥಳ: ಆರ್. ಆರ್. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಭಾಂಗಣ, ಚಿಕ್ಕಬಾಣವರ, ಬೆಳಿಗ್ಗೆ 11

ಸಾಮೂಹಿಕ ಸತ್ಯನಾರಾಯಣಸ್ವಾಮಿ ಪೂಜಾ ಕಾರ್ಯಕ್ರಮ: ಸಾನ್ನಿಧ್ಯ: ಸಚ್ಚಿದಾನಂದ ಜ್ಞಾನೇಶ್ವರ ಭಾರತೀ ಸ್ವಾಮೀಜಿ, ಅತಿಥಿಗಳು: ಎಲ್. ರವಿಸುಬ್ರಮಣ್ಯ, ಸಿ.ಕೆ. ರಾಮಮೂರ್ತಿ, ಮೋಹನ್ ಎಸ್. ಶೇಟ್, ಪುಷ್ಪಾ ವರ್ಣೇಕರ್, ಶ್ರೀಕಾಂತ್ ಎಸ್. ಶೇಟ್, ಅಧ್ಯಕ್ಷತೆ: ಮಹೇಶ್ ಜಿ. ಶೇಟ್, ಆಯೋಜನೆ: ಬೆಂಗಳೂರು ದೈವಜ್ಞ ಯುವಕ ಸಂಘ, ಸ್ಥಳ: ಧರ್ಮಸ್ಥಳ ಮಂಜುನಾಥ ಸ್ವಾಮಿ ಕಲ್ಯಾಣ ಮಂಟಪ, ಬಸವನಗುಡಿ, ಬೆಳಿಗ್ಗೆ 11.30

ಕೆ.ಎಸ್. ನರಸಿಂಹಸ್ವಾಮಿ, ಎಂ. ಲೀಲಾವತಿ ಅವರ ನೆನಪಿನಲ್ಲಿ ‘ದೀಪವು ನಿನ್ನದೆ ಗಾಳಿಯು ನಿನ್ನದೆ’ ಕರೋಕೆ ಗಾಯನ: ಅತಿಥಿಗಳು: ಕೆ.ಎನ್. ಮಹಾಬಲ, ಗಾಯನ: ರವಿರಾಜ, ಪ್ರಸಾದ್ ನವರತ್ನ, ರಾಜೀವ್ ಅಗಳಿ, ಸಿರಿ ಚಂದ್ರಶೇಖರ್, ಸಂಗೀತ ಸುಧೀಂದ್ರ, ಆಯೋಜನೆ: ವಿಜಯಚಂದ್ರಿಕಾ ಸಂಗೀತ್ ಚಂದನ್, ಸ್ಥಳ: ಬಿ.ಎಂ.ಶ್ರೀ. ಕಲಾಭವನ, ಬಿ.ಎಂ. ಶ್ರೀ. ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 4

31ನೇ ವಾರ್ಷಿಕೋತ್ಸವ ‘ಭಾವಯಾಮಿ ರಘುರಾಮಂ’ ನೃತ್ಯ ಪ್ರದರ್ಶನ: ಉದ್ಘಾಟನೆ: ರವೀಂದ್ರ ಭಟ್ಟ, ಅತಿಥಿ: ಎಲ್.ಜಿ. ಮೀರಾ, ಅಧ್ಯಕ್ಷತೆ: ದೀಪಾ ಫಡ್ಕೆ, ನೃತ್ಯ ಪ್ರದರ್ಶನ: ಕೃಪಾ ಫಡ್ಕೆ ಮತ್ತು ತಂಡ, ಆಯೋಜನೆ: ಶಿವರಾಮ ಕಾರಂತ ವೇದಿಕೆ, ಸ್ಥಳ: ವಿನಾಯಕ ದೇವಸ್ಥಾನ ಸಭಾಂಗಣ, ಆರ್.ಟಿ. ನಗರ, ಸಂಜೆ 4ರಿಂದ

ಬಹುಲಾ ನೃತ್ಯ ರೂಪಕ: ಆಯೋಜನೆ ಮತ್ತು ಸ್ಥಳ: ಸಾಧನ ಸಂಗಮ ಡಾನ್ಸ್ ಸೆಂಟರ್, ಬಸವೇಶ್ವರನಗರ, ಸಂಜೆ 5.30

ಗೌರಿ ದಿನ ‘ಪತ್ರಿಕೋದ್ಯಮದ ಪುನರ್ ರಚನೆ ಹೇಗೆ?’ ಮಾತು ಚರ್ಚೆ: ಭಾಗವಹಿಸುವವರು: ಪರಂಜಾಯ್ ಗುಹಾ ಠಾಕುರ್ತಾ, ಮೀನಾ ಕೊತ್ವಾಲ್, ಹರ್ಷ್ತೋಶ್ ಬಾಲ್, ಮಹಮ್ಮದ್ ಜುಬೇರ್, ನವೀನ್ ಕುಮಾರ್, ಸುಮಿತ್ ಚೌವ್ಹಾಣ್, ಅಧ್ಯಕ್ಷತೆ: ತೀಸ್ತಾ ಸೆಟಲ್ವಾಡ್, ಆಯೋಜನೆ: ಗೌರಿ ಸ್ಮಾರಕ, ಸ್ಥಳ: ಇಂಡಿಯನ್ ಸೋಶಿಯಲ್ ಇನ್‌ಸ್ಟಿಟ್ಯೂಟ್, ಬೆನ್ಸನ್ ಕ್ರಾಸ್ ರಸ್ತೆ, ಬೆನ್ಸನ್ ಟೌನ್, ಸಂಜೆ 5.30

ಗೀತಾನುಸಂಧಾನ: ಉದ್ಘಾಟನೆ: ಡಿ.ವಿ. ಸದಾನಂದಗೌಡ, ಡಾ.ಸಿ.ಎನ್. ಅಶ್ವತ್ಥನಾರಾಯಣ, ಸಿ.ಟಿ. ರವಿ, ವಿ.ಜಿ. ಕಿರಣ್‌ಕುಮಾರ್, ರ. ಆಂಜನಪ್ಪ, ಎಸ್.ಟಿ. ಸೋಮಶೇಖರ್, ನಂದೀಶ್ ರೆಡ್ಡಿ, ಜವರಾಯಿಗೌಡ, ಸಿ.ಎಂ. ಮಾರೇಗೌಡ, ಮರಿಸ್ವಾಮಿ, ಆಯೋಜನೆ: ವಿವೇಕ ಜಾಗೃತಿ, ಸ್ಥಳ: ಶೇಷಾದ್ರಿಪುರಂ ಕಾಲೇಜು ಸಭಾಂಗಣ, ಕೆಂಗೇರಿ ಉಪನಗರ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

'ಇಂಡಿಯಾ'ದಲ್ಲಿ ಆಂತರಿಕ ಸ್ಫೋಟ ಇಲ್ಲ: ಜೈರಾಮ್

ನವದೆಹಲಿ(ಪಿಟಿಐ): 'ವಿರೋಧ ಪಕ್ಷಗಳ ಮೈತ್ರಿಕೂಟ 'ಇಂಡಿಯಾ'ದಲ್ಲಿ ಯಾವುದೇ ಆಂತರಿಕ ಸ್ಫೋಟವಾಗಿಲ್ಲ. ಆದರೆ, ಸಣ್ಣ ಸ್ಫೋಟಗಳನ್ನು ಉಂಟುಮಾಡಲು ಬಿಜೆಪಿ ಇನ್ನಿಲ್ಲದ ಪ್ರಯತ್ನ ನಡೆಸುತ್ತಿದೆ' ಎಂದು ಕಾಂಗ್ರೆಸ್ ಶನಿವಾರ ದೂರಿದೆ.

ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ನೇತೃತ್ವದ ಜೆಡಿಯು ಪುನಃ ಎನ್‌ಡಿಎ ಸೇರಲಿದೆ ಎಂಬ ವರದಿಗಳ ಹಿನ್ನೆಲೆಯಲ್ಲಿ ಕಾಂಗ್ರೆಸ್ ಈ ಪ್ರತಿಕ್ರಿಯೆ ನೀಡಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, 'ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ನಿತೀಶ್ ಕುಮಾರ್ ಅವರೊಂದಿಗೆ ಮಾತನಾಡಲು ಪ್ರಯತ್ನಿಸುತ್ತಿದ್ದು, ಸಂಪರ್ಕ ಸಾಧ್ಯವಾಗುತ್ತಿಲ್ಲ. ಖರ್ಗೆ ಅವರಿಗೆ ನಿತೀಶ್ ಕುಮಾರ್ ಕಚೇರಿ ಪ್ರತಿಕ್ರಿಯಿಸಿದೆ. ಆದರೆ, ಈ ಮೊದಲೇ ನಿಗದಿಯಾಗಿರುವ ಕಾರ್ಯಕ್ರಮಗಳ ಕಾರಣದಿಂದಾಗಿ ಉಭಯ ನಾಯಕರ ನಡುವೆ ಸಂಪರ್ಕ ಸಾಧ್ಯವಾಗುತ್ತಿಲ್ಲ. ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರೊಂದಿಗೆ ಖರ್ಗೆ ಈಗಾಗಲೇ ಮಾತನಾಡಿದ್ದಾರೆ. ಇತ್ತೀಚಿನ ಬೆಳವಣಿಗೆಗಳ ಕುರಿತು ಅವರಿಗೆ ಪತ್ರವನ್ನೂ ಬರೆದಿದ್ದಾರೆ'.

'ನಿತೀಶ್ ಕುಮಾರ್ ಹಾಗೂ ಮಮತಾ ಬ್ಯಾನರ್ಜಿ ಅವರು ಇಂಡಿಯಾ ಮೈತ್ರಿಕೂಟ ಸ್ಥಾಪನೆಯಲ್ಲಿ ಮಹತ್ವ ವಹಿಸಿದವರು. ಹೀಗಾಗಿ ಈ ಇಬ್ಬರೂ ನಾಯಕರು ವಿಪಕ್ಷಗಳ ಮೈತ್ರಿಕೂಟದಲ್ಲಿ ಮುಂದುವರಿಯುತ್ತಾರೆ ಎಂಬ ವಿಶ್ವಾಸ ಹೊಂದಿದ್ದೇನೆ' ಎಂದರು.

'ನ್ಯಾಯ ಯಾತ್ರೆ: ಪೋಸ್ಟರ್‌ಗಳಿಗೆ ಹಾನಿ'

ಪ್ರಜಾವಾಣಿ ವಾರ್ತೆ

ಕೋಲ್ಕತ್ತಾ: ಉತ್ತರ ಬಂಗಾಳದ ಜಲಪೈಗುರಿಯಲ್ಲಿ ರಾಹುಲ್ ಗಾಂಧಿಯವರ 'ನ್ಯಾಯ ಯಾತ್ರೆ'ಯ ಪೋಸ್ಟರ್‌ಗಳಿಗೆ ಹಾನಿ ಮಾಡಲಾಗಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ದುಷ್ಕರ್ಮಿಗಳು ಯಾತ್ರೆಗೆ ಅಡ್ಡಿಪಡಿಸಲು ಪ್ರಯತ್ನಿಸುತ್ತಿರುವುದರಿಂದ ಪಶ್ಚಿಮ ಬಂಗಾಳದಲ್ಲಿ ಯಾತ್ರೆ ಸುಗಮವಾಗಿ ಸಾಗಲು ಕ್ರಮ ಕೈಗೊಳ್ಳಬೇಕೆಂದು ವಿನಂತಿಸಿ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಮತಾ ಬ್ಯಾನರ್ಜಿ ಅವರಿಗೆ ಪತ್ರ ಬರೆದಿದ್ದರು. ಅದರ ನಡುವೆಯೇ ಕಾಂಗ್ರೆಸ್ ಯಾತ್ರೆಯ ಪೋಸ್ಟರ್‌ಗಳನ್ನು ಹರಿಯಲಾಗಿದೆ ಎಂದು ಆರೋಪಿಸಿದೆ.

'ಅಸ್ಸಾಂನಲ್ಲಿ ಬಿಜೆಪಿಯನ್ನು ಎದುರಿಸಬೇಕಾಯಿತು. ಆದರೆ, ಪಶ್ಚಿಮ ಬಂಗಾಳದಲ್ಲಿ ಯಾತ್ರೆಗೆ ತೊಂದರೆ ಮಾಡುತ್ತಿದ್ದಾರೆ. ಇದು ಟಿಎಂಸಿಗೆ ನಮ್ಮ ಹೋರಾಟ ಬೇಕಾಗಿಲ್ಲ ಎನ್ನುವುದನ್ನು ತೋರಿಸುತ್ತದೆ'ಎಂದು ಕಾಂಗ್ರೆಸ್ ವಕ್ತಾರ ಸೌಮ್ಯ ಐಚ್ ರಾಯ್ ಹೇಳಿದ್ದಾರೆ.

ನಿದ್ರೆಯ ಸಮಸ್ಯೆಯಿಂದ ಬಳಲುತ್ತಿದ್ದೀರಾ?

1. ನೀವು 18–65 ವರ್ಷದೊಳಗಿನ ಪ್ರಾಯದವರಾಗಿದ್ದರೆ.
2. ನಿಮಗೆ ಕಳೆದ 3 ತಿಂಗಳಿಗಿಂತ ಹೆಚ್ಚು ಕಾಲ ರಾತ್ರಿ ವೇಳೆ ಆರಾಮವಾಗಿ ಸಾಕಷ್ಟು ನಿದ್ರಿಸಲು ಸಾಧ್ಯವಾಗುತ್ತಿಲ್ಲವಾದರೆ
3. ರಾತ್ರಿ ಪದೇ ಪದೇ ಎಚ್ಚರವಾಗುತ್ತಿದ್ದರೆ

ಬೆಂಗಳೂರಿನ ನಿಮ್ಹಾನ್ಸ್ ಸಂಸ್ಥೆಯ 'ನ್ಯೂರಾಲಜಿ' ಮತ್ತು 'ಇಂಟಿಗ್ರೇಟಿವ್ ಮೆಡಿಸಿನ್' ವಿಭಾಗದ ವೈದ್ಯರಿಂದ

ಭಾರತದ 4 ಕೇಂದ್ರಗಳಾದ್ಯಂತ ಐಸಿಎಂಆರ್ ಸಂಸ್ಥೆಯಿಂದ ಪ್ರಾಯೋಜಿತ ಮತ್ತು ಮೇಲ್ವಿಚಾರಣೆಯಲ್ಲಿ ಕೈಗೊಳ್ಳಲಾಗುತ್ತಿರುವ, ಕ್ರೋನಿಕ್ ಇನ್ಸೋಮ್ನಿಯಾ ಎಂಬ ಸಂಶೋಧನಾ ಯೋಜನೆಯಲ್ಲಿ ಭಾಗವಹಿಸಿರಿ. ಹೀಗೆ ಭಾಗವಹಿಸಿದವರನ್ನು ಸ್ಲೀಪ್ ಕ್ಲಿನಿಕ್‌ನಲ್ಲಿ ಅಥವಾ ಒಪಿಡಿ'ಯಲ್ಲಿ ತಜ್ಞರಿಂದ ತಪಾಸಣೆ ಮಾಡಲಾಗುತ್ತದೆ ಮತ್ತು ರಾತ್ರಿಯಿಡಿ ನಿದ್ರಾ ಪರೀಕ್ಷೆ, ರಕ್ತ ಮತ್ತು ಮೂತ್ರ ತಪಾಸಣೆಗಳನ್ನು ಮಾಡಲಾಗುತ್ತದೆ.

ದಯವಿಟ್ಟು ಕರೆ/ಎಸ್‌ಎಂಎಸ್ ಮಾಡಿರಿ 9731682430
(ಬೆಳಗ್ಗೆ 10 ರಿಂದ ಸಂಜೆ 5 ಗಂಟೆವರೆಗೆ)
ಇ–ಮೇಲ್: sleepclinic.nimhans@gmail.com

ಕಾರಾಗೃಹದಲ್ಲಿ ಶ್ರೀರಾಮನ ಪೂಜೆ: ಹಲ್ಲೆಯ ಆರೋಪ

ಪ್ರಜಾವಾಣಿ ವಾರ್ತೆ

ವಿಜಯಪುರ: ಅಯೋಧ್ಯೆಯಲ್ಲಿ ಬಾಲರಾಮನ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ದಿನ ವಿಜಯಪುರದ ಕೇಂದ್ರ ಕಾರಾಗೃಹದಲ್ಲಿ ಪೂಜೆ ಮಾಡಿ, ಪ್ರಸಾದ ವಿತರಿಸಿದ ಮಹಾರಾಷ್ಟ್ರದ ಮೂವರು ಹಿಂದೂ ಕೈದಿಗಳ ಮೇಲೆ ಹಲ್ಲೆ ನಡೆದಿದೆ ಎಂಬ ಆರೋಪ ಕೇಳಿಬಂದಿದೆ.

ಮಹಾರಾಷ್ಟ್ರದ ಕೈದಿಯೊಬ್ಬ 'ಕಾರಾಗೃಹದಲ್ಲಿ ರಾಮನ ಪೂಜೆ ಮಾಡಿದ ನಮ್ಮ ಮೇಲೆ ಹಲ್ಲೆ ನಡೆದಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ನಮ್ಮನ್ನು ರಕ್ಷಿಸಬೇಕು' ಎಂದು ಕೋರಿದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೆಯಾಗಿದೆ.

'ರಾಮನ ಪೂಜೆಗೆ ಅವಕಾಶ ಕಲ್ಪಿಸುವಂತೆ ಜೈಲಿನ ಅಧಿಕಾರಿ ಕೆ.ಎನ್. ಚೌಧರಿ ಅವರಿಗೆ ಕೋರಿದ್ದೆವು. ಆದರೆ, ಅವರು ನಿರಾಕರಿಸಿದ್ದರು. ಆದರೂ ನಾವು ನಮ್ಮ ಕೊಠಡಿಯಲ್ಲಿ ರಾಮನ ಚಿತ್ರಕ್ಕೆ ಪೂಜೆ ಸಲ್ಲಿಸಿ, ಇಡೀ ಜೈಲಿಗೆ ಪ್ರಸಾದ ಹಂಚಿದ್ದೆವು' ಎಂದು ವಿಡಿಯೊದಲ್ಲಿ ಕೈದಿ ಹೇಳಿದ್ದಾನೆ.

'ಪೂಜೆ ಮಾಡಿದ್ದಕ್ಕೆ ರೌಡಿ ಶೀಟರ್ ಹಾಗೂ ಕೊಲೆ ಆರೋಪಿ ಶೇಖ್ ಮೊಹಮ್ಮದ್ ಮೋದಿ ಮತ್ತು ಆತನ ಸಹಚರರು ನಮ್ಮ ಮೇಲೆ ಜನವರಿ 23ರಂದು ಹಲ್ಲೆ ಮಾಡಿದ್ದಾರೆ. ಆದರೆ, ಅವರ ಮೇಲೆ ಜೈಲರ್ ಯಾವುದೇ ಕ್ರಮ ಕೈಗೊಂಡಿಲ್ಲ. ನಮ್ಮನ್ನು ಕಾರಾಗೃಹದಲ್ಲಿನ ಕೃಷ್ಣಾ ಸೆಲ್‌ನಲ್ಲಿ ಪ್ರತ್ಯೇಕವಾಗಿ ಇರಿಸಿದ್ದಾರೆ' ಎಂದು ಆರೋಪಿಸಿದ್ದಾನೆ.

'ಘಟನೆಯೇ ನಡೆದಿಲ್ಲ': 'ಜೈಲಿನಲ್ಲಿ ಜನವರಿ 22ರಂದು ಯಾವುದೇ ಪೂಜಾ ಕಾರ್ಯಕ್ರಮ ನಡೆದಿಲ್ಲ. ಜನವರಿ 23ರಂದು ಕೈದಿಗಳ ನಡುವೆ ಗಲಾಟೆ, ಹೊಡೆದಾಟ ನಡೆದಿಲ್ಲ. ಅಂದಿನ ಪರಿಸ್ಥಿತಿಯ ಲಾಭ ಪಡೆಯಲು ಕೈದಿಯೊಬ್ಬ ಇಲ್ಲಸಲ್ಲದ ಆರೋಪದೊಂದಿಗೆ ಕಥೆ ಕಟ್ಟಿ ಹರಿಬಿಟ್ಟಿರುವ ವಿಡಿಯೊ ಸಂಪೂರ್ಣ ಸುಳ್ಳು' ಎಂದು ವಿಜಯಪುರದ ಕೇಂದ್ರ ಕಾರಾಗೃಹದ ಅಧೀಕ್ಷಕ ಐ.ಜೆ.ಮ್ಯಾಗೇರಿ 'ಪ್ರಜಾವಾಣಿ'ಗೆ ತಿಳಿಸಿದರು.

'ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ನಡೆದ ಕೊಲೆ ಯತ್ನ ಪ್ರಕರಣದಲ್ಲಿ ಬಂಧಿಯಾದ ದೇವ ಅಲಿಯಾಸ್ ಪರಮೇಶ್ವರ ಜಾಧವ ಸೇರಿ ಮೂವರು ಕೈದಿಗಳನ್ನು ಈ ಹಿಂದೆ ಅಲ್ಲಿಯ ಸರ್ಕಾರ ಯರವಾಡ ಮತ್ತು ಸತಾರ ಜೈಲಿನಲ್ಲಿ ಇರಿಸಿತ್ತು. ಈ ಆರೋಪಿಗಳು ಅಲ್ಲಿ ಇತರೆ ಕೈದಿಗಳಿಗೆ ಬೆದರಿಕೆ ಒಡ್ಡುವುದು, ಬೈಯ್ಯುವುದು, ಗಲಾಟೆ ಮಾಡುತ್ತಿದ್ದರು ಎಂಬ ಕಾರಣಕ್ಕೆ ವಿಜಯಪುರ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರಿಸಲಾಗಿದೆ. ಇಲ್ಲಿಯೂ ಅವರು ಇತರೆ ಕೈದಿಗಳಿಗೆ ತೊಂದರೆ ನೀಡಬಾರದು ಎಂಬ ಕಾರಣಕ್ಕೆ ಮುನ್ನೆಚ್ಚರಿಕೆ ಕ್ರಮವಾಗಿ ಪ್ರತ್ಯೇಕ ಸೆಲ್‌ನಲ್ಲಿ ಇರಿಸಲಾಗಿದೆ' ಎಂದು ತಿಳಿಸಿದರು.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

ಕೆಐಎಡಿಬಿ

(ಕರ್ನಾಟಕ ಸರ್ಕಾರದ ಒಂದು ಅಧೀನ ಸಂಸ್ಥೆ)

ವಸತಿ ನಿವೇಶನಗಳ ಇ-ಹರಾಜು

ಆಯಾ ಜಿಲ್ಲೆಯೊಳಗೆ ಅಥವಾ ಅಕ್ಕ ಪಕ್ಕದ ಜಿಲ್ಲೆಯಲ್ಲಿರುವ ಉದ್ಯಮಿಗಳು ಅಥವಾ ಕೈಗಾರಿಕಾ ಘಟಕದಲ್ಲಿ ಕೆಲಸ ಮಾಡುವ ಉದ್ಯೋಗಿಗಳಿಗೆ ಮಾತ್ರ.

ಸ್ಥಳ: ವಸಂತನರಸಾಪುರ ಕೈಗಾರಿಕಾ ಪ್ರದೇಶ, 3ನೇ ಹಂತ, ತುಮಕೂರು ಜಿಲ್ಲೆ

ಕ್ರಮ ಸಂಖ್ಯೆ	ನಿವೇಶನಗಳ ವಿವರಗಳು	ನಿವೇಶನಗಳ ಸಂಖ್ಯೆ	ನಿವೇಶನದ ಅಳತೆ ಚದರ ಮೀಟರ್ ನಲ್ಲಿ
1	EWS	70	6.10x9.14
2	LIG	256	9.14x12.19
3	MIG	82	9.14x15.24
4	HIG	9	12.19x18.29
	ಒಟ್ಟು	417	-

- ವಸತಿ ಬಡಾವಣೆಯು ಪ್ರಮುಖ ಕೈಗಾರಿಕಾ ಬೆಳವಣಿಗೆಯ ಕೇಂದ್ರವಾದ ರಾಷ್ಟ್ರೀಯ ಹೆದ್ದಾರಿ 48 ರ ಸಮೀಪದಲ್ಲಿದೆ.
- ವ್ಯಾಜ್ಯ ಮುಕ್ತ ಮತ್ತು ಸ್ಪಷ್ಟ ಹಕ್ಕುಪತ್ರಗಳ ಜೊತೆಗೆ 24/7 ವಿದ್ಯುತ್ ಮತ್ತು ನೀರಿನ ಲಭ್ಯತೆ.
- ಅಭಿವೃದ್ಧಿ ಹೊಂದಿದ ಕೈಗಾರಿಕಾ ಪ್ರದೇಶದ ಪಕ್ಕದಲ್ಲಿದೆ.

ಇ - ಹರಾಜಿನಲ್ಲಿ ನೋಂದಾಯಿಸಲು ಕೊನೆಯ ದಿನಾಂಕ
12ನೇ ಫೆಬ್ರವರಿ 2024
ಫೆಬ್ರವರಿ 14 ಮತ್ತು 15 ರಂದು
ಲೈವ್ ಹರಾಜು

ವಸಂತನರಸಾಪುರ

ಇ-ಹರಾಜಿಗಾಗಿ ಸಾಮಾನ್ಯ ನಿಯಮಗಳು ಮತ್ತು ಷರತ್ತುಗಳಿಗಾಗಿ, ನಮ್ಮ ವೆಬ್‌ಸೈಟ್‌ಗೆ ಭೇಟಿ ನೀಡಿ: ವೆಬ್‌ಸೈಟ್ : www.kiadb.in
ಹರಾಜಿನಲ್ಲಿ ನೋಂದಾಯಿಸಲು ದಿನಾಂಕ : 29.01.2024 ರಿಂದ
ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ : https://kppp.karnataka.gov.inಗೆ ಭೇಟಿ ನೀಡಿ,

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: ಕಾರ್ಯಪಾಲಕ ಇಂಜಿನಿಯರ್ ಕೆಐಎಡಿಬಿ, ವಲಯ ಕಚೇರಿ, ತುಮಕೂರು, ಮಾರುತಿ ಗ್ರೂಪ್ಸ್ ಕಟ್ಟಡ, 2ನೇ ಮಹಡಿ, ಎಸ್‌ಐಟಿ ಕಾಲೇಜು ಹತ್ತಿರ, ಮುಖ್ಯ ಗೇಟ್, ಬಿ.ಹೆಚ್. ರಸ್ತೆ, ತುಮಕೂರು - 572103. **ಇಮೇಲ್ :** dotumakuru@kiadb.in **ವೆಬ್‌ಸೈಟ್:** www.kiadb.in
ಸಂಪರ್ಕದ ವಿವರಗಳು: 9902933944 / 9538746961 / 9449626995

ಸ್ಥಳ : ಹುಬ್ಬಳ್ಳಿ-ಧಾರವಾಡ ನಗರದ ಗಾಮನಗಟ್ಟಿ ಕೈಗಾರಿಕಾ ಪ್ರದೇಶದ ವಸತಿ ಲೇಔಟ್ ಪ್ರದೇಶ

ಕ್ರಮ ಸಂಖ್ಯೆ	ನಿವೇಶನಗಳ ವಿವರಗಳು	ನಿವೇಶನಗಳ ಸಂಖ್ಯೆ	ನಿವೇಶನದ ಅಳತೆ ಚದರ ಮೀಟರ್ ನಲ್ಲಿ
1	EWS	123	6.10x9.14
2	LIG	83	9.14x12.19
3	MIG	65	9.14x15.24
4	HIG	44	12.19x18.29
	ಒಟ್ಟು	315	-

- ವಸತಿ ಬಡಾವಣೆಯು ಪ್ರಮುಖ ಕೈಗಾರಿಕಾ ಬೆಳವಣಿಗೆಯ ಕೇಂದ್ರವಾದ ರಾಷ್ಟ್ರೀಯ ಹೆದ್ದಾರಿ 48 ರ ಸಮೀಪದಲ್ಲಿದೆ.
- ವ್ಯಾಜ್ಯ ಮುಕ್ತ ಮತ್ತು ಸ್ಪಷ್ಟ ಹಕ್ಕುಪತ್ರಗಳ ಜೊತೆಗೆ 24/7 ವಿದ್ಯುತ್ ಮತ್ತು ನೀರಿನ ಲಭ್ಯತೆ.
- ಅಭಿವೃದ್ಧಿ ಹೊಂದಿದ ಕೈಗಾರಿಕಾ ಪ್ರದೇಶದ ಪಕ್ಕದಲ್ಲಿದೆ.

ಇ - ಹರಾಜಿನಲ್ಲಿ ನೋಂದಾಯಿಸಲು ಕೊನೆಯ ದಿನಾಂಕ
14ನೇ ಫೆಬ್ರವರಿ 2024
ಫೆಬ್ರವರಿ 16 ಮತ್ತು 17 ರಂದು
ಲೈವ್ ಹರಾಜು


ಗಾಮನಗಟ್ಟಿ ಲೇಔಟ್

ಇ-ಹರಾಜಿಗಾಗಿ ಸಾಮಾನ್ಯ ನಿಯಮಗಳು ಮತ್ತು ಷರತ್ತುಗಳಿಗಾಗಿ, ನಮ್ಮ ವೆಬ್‌ಸೈಟ್‌ಗೆ ಭೇಟಿ ನೀಡಿ: ವೆಬ್‌ಸೈಟ್ : www.kiadb.in
ಹರಾಜಿನಲ್ಲಿ ನೋಂದಾಯಿಸಲು ದಿನಾಂಕ : 01.02.2024 ರಿಂದ
ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ : https://kppp.karnataka.gov.inಗೆ ಭೇಟಿ ನೀಡಿ,

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: ಕಾರ್ಯಪಾಲಕ ಇಂಜಿನಿಯರ್ ಕೆಐಎಡಿಬಿ, ವಲಯ ಕಚೇರಿ, ಧಾರವಾಡ, ಲಕ್ಕಮ್ಮನಹಳ್ಳಿ, ಕೈಗಾರಿಕಾ ಪ್ರದೇಶ, ಪೂನಾ-ಬೆಂಗಳೂರು ರಸ್ತೆ, ಧಾರವಾಡ 560004.
ಇಮೇಲ್ : dodharwad@kiadb.in **ಅರ್ಜಿ ಸಲ್ಲಿಸಲು :** https://kppp.karnataka.gov.inಗೆ ಭೇಟಿ ನೀಡಿ.
ವೆಬ್‌ಸೈಟ್: www.kiadb.in **ಸಂಪರ್ಕದ ವಿವರಗಳು:** 9845806948 / 94485 80835 / 8762191753

ಸ್ಥಳ : ರಾಯಚೂರು ನಗರದ ಕೆಐಎಡಿಬಿಯ ವಸತಿ ಬಡಾವಣೆ ಪ್ರದೇಶ

ಕ್ರಮ ಸಂಖ್ಯೆ	ನಿವೇಶನಗಳ ವಿವರಗಳು	ನಿವೇಶನಗಳ ಸಂಖ್ಯೆ	ನಿವೇಶನದ ಅಳತೆ ಚದರ ಮೀಟರ್ ನಲ್ಲಿ
1	EWS	111	6X9
2	LIG	89	12X12
3	MIG	253	9X15
4	HIG	88	12X18
	ಒಟ್ಟು	541	-

- ವಸತಿ ಬಡಾವಣೆಯು ಪ್ರಮುಖ ಕೈಗಾರಿಕಾ ಬೆಳವಣಿಗೆಯ ಕೇಂದ್ರವಾದ ರಾಯಚೂರು ನಗರದಲ್ಲಿದೆ.
- ವ್ಯಾಜ್ಯ ಮುಕ್ತ ಮತ್ತು ಸ್ಪಷ್ಟ ಹಕ್ಕುಪತ್ರಗಳ ಜೊತೆಗೆ 24/7 ವಿದ್ಯುತ್ ಮತ್ತು ನೀರಿನ ಲಭ್ಯತೆ.
- ಅಭಿವೃದ್ಧಿ ಹೊಂದಿದ ಕೈಗಾರಿಕಾ ಪ್ರದೇಶದ ಪಕ್ಕದಲ್ಲಿದೆ.

ಇ - ಹರಾಜಿನಲ್ಲಿ ನೋಂದಾಯಿಸಲು ಕೊನೆಯ ದಿನಾಂಕ
20ನೇ ಫೆಬ್ರವರಿ 2024
ಫೆಬ್ರವರಿ 22 ಮತ್ತು 23 ರಂದು
ಲೈವ್ ಹರಾಜು


ರಾಯಚೂರು ವಸತಿ ಬಡಾವಣೆ ಪ್ರದೇಶ

ಇ-ಹರಾಜಿಗಾಗಿ ಸಾಮಾನ್ಯ ನಿಯಮಗಳು ಮತ್ತು ಷರತ್ತುಗಳಿಗಾಗಿ, ನಮ್ಮ ವೆಬ್‌ಸೈಟ್‌ಗೆ ಭೇಟಿ ನೀಡಿ: ವೆಬ್‌ಸೈಟ್ : www.kiadb.in
ಹರಾಜಿನಲ್ಲಿ ನೋಂದಾಯಿಸಲು ದಿನಾಂಕ : 09.02.2024 ರಿಂದ
ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ : https://kppp.karnataka.gov.inಗೆ ಭೇಟಿ ನೀಡಿ,

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: ಕಾರ್ಯಪಾಲಕ ಇಂಜಿನಿಯರ್ ಕೆಐಎಡಿಬಿ, ವಲಯ ಕಚೇರಿ, ರಾಯಚೂರು, ಪ್ಲಾಟ್ ಸಂಖ್ಯೆ 49, ಹೈದರಾಬಾದ್ ರಸ್ತೆ, ರಾಯಚೂರು **ಇಮೇಲ್ :** doballari@kiadb.in
ವೆಬ್‌ಸೈಟ್: www.kiadb.in **ಸಂಪರ್ಕದ ವಿವರಗಳು:** 8431496301 / 7975234573 / 9448109286



ಬೀದರ್ ಕೋಟೆ ವೀಕ್ಷಣೆಗೆ ಬ್ಯಾಟರಿಚಾಲಿತ ವಾಹನದ ಸೌಲಭ್ಯ, ಲಗೇಜ್ ಇರಿಸುವ ಕೋಣೆ ಇಲ್ಲದ ಕಾರಣ ಪ್ರವಾಸಿಗರು ಚೀಲಗಳನ್ನು ಹಿಡಿದುಕೊಂಡು ಕಾಲ್ನಡಿಗೆಯಲ್ಲೇ ಸ್ಮಾರಕಗಳನ್ನು ವೀಕ್ಷಿಸುತ್ತಿರುವುದು ಚಿತ್ರ: ಲೋಕೇಶ ವಿ. ಬಿರಾದಾರ

ಪ್ರವಾಸಿ ತಾಣ ಸೌಲಭ್ಯಕ್ಕೆ ಅಸಡ್ಡೆ

ಒಂದನೇ ಪುಟದಿಂದ

ಪಶ್ಚಿಮ ದೇಶಗಳಿಂದ ರಾಜ್ಯದ ಪ್ರವಾಸೋದ್ಯಮ ಇಲಾಖೆ ಕಲಿಯಬೇಕಾದ್ದು ಸಾಕಷ್ಟಿದೆ. ಅಲ್ಲಿ ಯಾವುದೇ ಚಾರಿತ್ರಿಕ ಸ್ಥಳಕ್ಕೆ ಹೋದರೆ ಶೌಚಾಲಯ, ಶುದ್ಧ ಕುಡಿಯುವ ನೀರು, ತಿಂಡಿ, ವಿವಿಧ ಬಗೆಯ ಕಾಫಿ, ಸ್ಮರಣಿಕೆ ಅಂಗಡಿಗಳು ತೀರಾ ಹತ್ತಿರದಲ್ಲಿ ಇದ್ದೇ ಇರುತ್ತವೆ. ಇದು ಸ್ಥಳೀಯರಿಗೆ ಉದ್ಯೋಗ ಪಡೆಯಲು ಅವಕಾಶ ಕಲ್ಪಿಸುತ್ತದೆ. ಆದರೆ, ನಮ್ಮಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ತೊಡಕಾಗುವಂತಹ ವಿಧಿ ನಿಯಮಗಳನ್ನು ಹೇರಲಾಗುತ್ತಿದೆ.

'ಪಿಸುಗುಟ್ಟುವ ಗೋಪುರ' ಎಂದೇ ಹೆಸರಾಗಿರುವ ವಿಜಯಪುರದ ಗೋಳಗುಮ್ಮಟವು ಯುನೆಸ್ಕೊ ಮಾನ್ಯತೆಗೆ ಕಾದಿದೆ. ಆದರೆ, ಅಧಿಕೃತವಾಗಿ ಇದುವರೆಗೆ ಯಾವುದೇ ಪ್ರಸ್ತಾವ ಸಲ್ಲಿಕೆಯಾಗಿಲ್ಲ. ಜಾಗತಿಕವಾಗಿ ಗೋಳಗುಮ್ಮಟ ಪ್ರವಾಸಿಗರನ್ನು ಆಕರ್ಷಿಸುವಲ್ಲಿ ವಿಫಲವಾಗಿದೆ. ಆದಿಲ್‌ಶಾಹಿಗಳ ಗೋಳಗುಮ್ಮಟ, ಚಾಲುಕ್ಯರ ಪಟ್ಟದಕಲ್ಲು ಸ್ಮಾರಕ ಮತ್ತು ಬಾದಾಮಿ ಗುಹೆಗಳಿಗೆ ಪ್ರವಾಸಿಗರ ಆಕರ್ಷಣೆಗಾಗಿ ಧ್ವನಿ-ಬೆಳಕಿನ ವ್ಯವಸ್ಥೆ ಕಲ್ಪಿಸಬೇಕೆಂಬ ಬಹು ವರ್ಷಗಳ ಬೇಡಿಕೆ ಕೈಗೂಡಿಲ್ಲ. 'ದೇವಾಲಯಗಳ ತೊಟ್ಟಿಲು' ಖ್ಯಾತಿಯ ಐಹೊಳೆ ಮತ್ತು ಬಾದಾಮಿಯ ಗುಹಾಂತರ ದೇವಾಲಯಗಳ ವ್ಯಾಪ್ತಿಯಲ್ಲಿರುವ ಮನೆಗಳನ್ನು ತೆರವುಗೊಳಿಸಿ, ಅಲ್ಲಿಯ ನಿವಾಸಿಗಳಿಗೆ ಬೇರೆಡೆ ಪುನರ್ವಸತಿ ಕಲ್ಪಿಸುವ ಯೋಜನೆ ದಶಕ ಕಳೆದರೂ ಕಾರ್ಯಗತವಾಗಿಲ್ಲ. ಹಂಪಿ, ಬೀದರ್ ಕೋಟೆಯೂ ಇದಕ್ಕೆ ಹೊರತಾಗಿಲ್ಲ. ಇಲ್ಲೂ ವ್ಯಾಜ್ಯ ಕೋರ್ಟ್ ಮೆಟ್ಟಿಲೇರಿದೆ.

'ದಖನಿ ಹೊರಹೊಮ್ಮಿಸಿದ ಅತಿ ಹೆಚ್ಚು ಸ್ಮಾರಕಗಳಿರುವುದು ವಿಜಯಪುರ, ಬೀದರ್ ನಗರಗಳಲ್ಲಿ. ಆದರೆ, ಹೆಚ್ಚಿನ ಸ್ಮಾರಕಗಳು ಪ್ರವಾಸಿಗರಿಗೆ ಅಪರಿಚಿತವಾಗಿವೆ. ಪ್ರವಾಸಿಗರಿಗೆ ಈ ಸ್ಮಾರಕಗಳನ್ನು ಪರಿಚಯಿಸುವ ಕೆಲಸವನ್ನೇ ಪ್ರವಾಸೋದ್ಯಮ ಇಲಾಖೆ ಮಾಡುತ್ತಿಲ್ಲ. ಅತಿಕ್ರಮಣದ ಸಮಸ್ಯೆಯೂ ಕಾಡುತ್ತಿದೆ. ಸುತ್ತಲೂ ಜನವಸತಿ ಬೆಳೆಯುತ್ತಿರುವುದರಿಂದ ಸ್ಮಾರಕಗಳು ಅಂದಗೆಡುವ ಭೀತಿಯಲ್ಲಿವೆ' ಎಂದು ವಿಜಯಪುರದ ನಿವಾಸಿ ವಿಶ್ರಾಂತ ಕಳವಳ ವ್ಯಕ್ತಪಡಿಸಿದರು.

ಹಂಪಿ ವಿಶ್ವ ಪಾರಂಪರಿಕ ತಾಣದ ವ್ಯಾಪ್ತಿ 236 ಚದರ ಕಿ.ಮೀ. ಇದೆ. ಅಂಜನಾದ್ರಿ ಬೆಟ್ಟವೂ ಇದರ ವ್ಯಾಪ್ತಿಗೆ ಒಳಪಡುತ್ತದೆ. ಅಂಜನಾದ್ರಿಯಲ್ಲಿ ರೋಪ್‌ವೇ ಅಭಿವೃದ್ಧಿ ಯೋಜನೆಗೆ ಯುನೆಸ್ಕೊ ಅನುಮತಿ ನೀಡುತ್ತಿಲ್ಲ. ಕೂಡಲಸಂಗಮ ಹೊರತುಪಡಿಸಿದರೆ, ಬಾದಾಮಿ, ಪಟ್ಟದಕಲ್ಲು, ಐಹೊಳೆ, ವಿಜಯಪುರ, ಹಂಪಿ ಸೇರಿದಂತೆ ಉತ್ತರದ ಬಹುತೇಕ ಜಿಲ್ಲೆಗಳಲ್ಲಿ ಯಾತ್ರಿ ನಿವಾಸಗಳಿಲ್ಲ. ವಿಜಯಪುರದ ಐತಿಹಾಸಿಕ ಕೋಟೆ ಗೋಡೆ ಸಂಪೂರ್ಣ ಒತ್ತುವರಿಯಾಗಿದೆ.

'ಚಿತ್ರದುರ್ಗಕ್ಕೆ ಬರುವ ಪ್ರವಾಸಿಗರ ವಾಹನ ಕಲ್ಲಿನಕೋಟೆಯತ್ತ ಸಾಗಲು ರಸ್ತೆ ಸರಿಯಾಗಿಲ್ಲ. ಚಿತ್ರದುರ್ಗ ಕೋಟೆ ಬಾಗಿಲು ದಾಟಿ ಒಳಪ್ರವೇಶಿಸಲು ಪರ್ಯಾಯ ವ್ಯವಸ್ಥೆ ಇನ್ನೂ ಕಲ್ಪಿಸಿಲ್ಲ. ಟಿಕೆಟ್ ರೂಪಿಸಿದ ಆನ್‌ಲೈನ್ ವ್ಯವಸ್ಥೆ ಕೂಡ ಪ್ರವಾಸಿಗರಿಗೆ ಪೂರಕವಾಗಿಲ್ಲ. ಹೆಚ್ಚು ಪ್ರವಾಸಿಗರು ಭೇಟಿ ನೀಡಿದಾಗ ಟಿಕೆಟ್ ಪಡೆಯಲು ಹರಸಾಹಸ ಪಡುವ ಸ್ಥಿತಿ ಇದೆ' ಎಂದು ಪ್ರವಾಸಿ ಪರಶುರಾಮ್ ಗೋಕಾ ತೋಡಿಕೊಂಡರು.

ರಸ್ತೆ ಬದಿಗೆ ಶಾಸನಗಳು: ರಾಜ್ಯದಲ್ಲಿ ಹಂಪಿ, ಬೇಲೂರು, ಹಳೇಬೀಡು, ಸೋಮನಾಥಪುರ, ಪಟ್ಟದಕಲ್ಲು ಸ್ಮಾರಕಗಳು ಯುನೆಸ್ಕೊ ಪಟ್ಟಿಗೆ ಸೇರ್ಪಡೆಯಾಗಿವೆ. ಅಲ್ಲೂ ಪರಿಸ್ಥಿತಿ ಭಿನ್ನವಾಗಿಲ್ಲ. ಶೌಚಾಲಯ, ತಂಗಲು ಕೊಠಡಿ ವ್ಯವಸ್ಥೆ, ವಾಹನಗಳ ಪಾರ್ಕಿಂಗ್‌ಗೆ ಪರದಾಟ ನಡೆಸಬೇಕಾದ ಸ್ಥಿತಿ ಇದೆ.

ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯದ ಪಾರ್ಕಿಂಗ್ ಬಳಿ, ಜೈನ ಬಸದಿ, ಕೇದಾರೇಶ್ವರ ದೇವಾಲಯ ಹಾಗೂ ಜೈನ ಬಸದಿ ಬಳಿ ಶೌಚಾಲಯ ಇಲ್ಲ. ಶುದ್ಧ ಕುಡಿಯುವ ನೀರು ಪೂರೈಕೆ ಇಲ್ಲ. ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಮಯೂರ ಹೋಟೆಲ್‌ನಲ್ಲಿ ವಾಸ್ತವ್ಯಕ್ಕೆ 4 ಕೊಠಡಿ ಮಾತ್ರ ಲಭ್ಯವಿದೆ. ಬೇಲೂರಿನ ಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ ಎನ್ನುತ್ತಾರೆ ಸ್ಥಳೀಯರು.

ಜೈನ ಕ್ಷೇತ್ರ ಶ್ರವಣಬೆಳಗೊಳಕ್ಕೆ ನಿತ್ಯ ದೇಶ- ವಿದೇಶಗಳ ಪ್ರವಾಸಿಗರು ಭೇಟಿ ನೀಡುತ್ತಾರೆ. ಕೇಂದ್ರ ಸರ್ಕಾರ 'ಸ್ವಚ್ಛ ಭಾರತ್ ಮಿಷನ್' ಯೋಜನೆಯಡಿ ಪಾರಂಪರಿಕ ತಾಣಗಳಲ್ಲಿ ಶುಚಿತ್ವ, ನೈರ್ಮಲ್ಯ ಮತ್ತು ಮೂಲಸೌಕರ್ಯಗಳನ್ನು ಮೇಲ್ದರ್ಜೆಗೇರಿಸಲು ಗುರುತಿಸಿರುವ ದೇಶದ 10 ಪ್ರಮುಖ ಸ್ವಚ್ಛ 'ಐಕಾನಿಕ್' ಸ್ಥಳಗಳಲ್ಲಿ ಶ್ರವಣಬೆಳಗೊಳವೂ ಸೇರಿದೆ. ಆದರೆ ಈ ಪ್ರಸಿದ್ಧ ತಾಣಕ್ಕೆ ಮೂಲಸೌಕರ್ಯಗಳ ಕೊರತೆ ಸಾಕಷ್ಟಿದೆ. ಪಟ್ಟಣ ವ್ಯಾಪ್ತಿಯಲ್ಲಿ ಕಿರಿದಾದ ರಸ್ತೆಗಳು, ಪಾರ್ಕಿಂಗ್ ವ್ಯವಸ್ಥೆ ಇಲ್ಲ. ವಸತಿ ಸೌಕರ್ಯ ಇದ್ದರೂ ಸಾಲದು. ಸಾಕಷ್ಟು ಶೌಚಾಲಯ ಇಲ್ಲ.

'ವಿಶ್ವದ ಎರಡನೇ ಅತಿದೊಡ್ಡ ಮಧುಗಿರಿ ಏಕಶಿಲಾ ಬೆಟ್ಟದ ಮಧ್ಯ ಭಾಗದಲ್ಲಿ ಬೆಟ್ಟ ಹತ್ತಲು ಅಳವಡಿಸಿದ್ದ ಕಬ್ಬಿಣದ ಪೈಪ್‌ಗಳು ಸಂಪೂರ್ಣವಾಗಿ ಕಿತ್ತುಹೋಗಿವೆ. ಪೈಪ್‌ಗಳ ದುರಸ್ತಿ ಮಾಡಿಲ್ಲ. ಇದರಿಂದ ಬೆಟ್ಟ ಹತ್ತಲು ಸಮಸ್ಯೆಯಾಗುತ್ತಿದೆ. ಏಕಶಿಲಾ ಬೆಟ್ಟವು ತನ್ನದೇ ಆದ ಇತಿಹಾಸ ಹೊಂದಿದೆ. ಆದರೆ, ಬೆಟ್ಟದ ಉಳಿವಿಗೆ ಆಸಕ್ತಿ ತೋರುತ್ತಿಲ್ಲ' ಎಂದು ಪ್ರವಾಸಿಗ ಅಂಜಿನಪ್ಪ ಪರಿಸ್ಥಿತಿ ಬಿಚ್ಚಿಟ್ಟರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೂಡುಬಿದಿರೆ ಚೌಟರ ಅರಮನೆ, ಮಂಗಳೂರಿನ ಸುಲ್ತಾನ್ ಬತ್ತೇರಿ, ಉಡುಪಿ ಜಿಲ್ಲೆಯ ಬಾರ್ಕೂರು ಸಮೀಪದ ಕೋಟೆ ಕುರುಹು, ಕತ್ತಲೆ ಬಸದಿ, ಬೈಂದೂರಿನ ಸೋಮೇಶ್ವರ ದೇವಾಲಯ ಇನ್ನಿತರ ತಾಣಗಳು ಪುರಾತತ್ವ ಇಲಾಖೆಗೆ ಸೇರಿವೆ. ಗತವೈಭವಕ್ಕೆ ಸಾಕ್ಷಿಯಾಗಿ ನಿಂತಿರುವ ದೇವಾಲಯಗಳು, ಶಾಸನಗಳು, ಸ್ತಂಭಗಳು, ಬಸದಿ, ಕೋಟೆ ಕುರುಹುಗಳಿಗೆ ರಕ್ಷಣೆ ಇಲ್ಲದಂತಾಗಿದೆ.

ಇಲ್ಲಿನ ಆವೆಮಣ್ಣಿನ ಸೂರಾಲು ಅರಮನೆ, ಕತ್ತಲೆ ಬಸದಿ, ಕೆರೆಗಳು, ಕೋಟೆ ಪ್ರದೇಶಗಳಲ್ಲಿರುವ ಶಾಸನಗಳು, ಬಸದಿಗಳನ್ನು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಕೆಲ ವರ್ಷಗಳ ಹಿಂದೆ ಉತ್ಖನನ ಮಾಡಿ ರಾಷ್ಟ್ರೀಯ ಸ್ಮಾರಕವೆಂದು ಘೋಷಿಸಿತ್ತು. ಆದರೆ, ಇವು ಈಗ ನಿರ್ಲಕ್ಷ್ಯಕ್ಕೆ ಒಳಗಾಗಿವೆ. ಶಾಸನಗಳು ಯಾವುದೇ ರಕ್ಷಣೆ ಇಲ್ಲದೆ ರಸ್ತೆ ಬದಿಯಲ್ಲಿ ಬಿದ್ದಿವೆ.

'ಬಾರ್ಕೂರು ಕೋಟೆ ಕುರುಹು ಪ್ರದೇಶಕ್ಕೆ ಭೇಟಿ ನೀಡಿದರೆ, ನಮ್ಮ ಇತಿಹಾಸದ ಬಗ್ಗೆ ಹೆಮ್ಮೆಯಾಗುತ್ತದೆ. ಆದರೆ, ಪ್ರವಾಸಿಗರಿಗೆ ನಿಸರ್ಗದ ಕರೆಗೆ ಹೋಗಲು ಶೌಚಾಲಯ ಸೌಲಭ್ಯವೂ ಇಲ್ಲ' ಎಂದು ಬೆಂಗಳೂರಿನಿಂದ ಬಂದಿದ್ದ ಎಂಜಿನಿಯರ್ ರಕ್ಷಿತ್ ಬೇಸರ ವ್ಯಕ್ತಪಡಿಸಿದರು.

ಕಠಿಣ ನಿಯಮಗಳೇ ಅಡ್ಡಿ: ಯುನೆಸ್ಕೋ ಹಾಗೂ ಪುರಾತತ್ವ ಇಲಾಖೆಯ ಕಠಿಣ ನಿಯಮಗಳಿಂದ ಸ್ಮಾರಕಗಳ ಪರಿಸರದಲ್ಲಿ ಯಾವುದೇ ಹೊಸ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಇದಕ್ಕೆ ಹಂಪಿ ಉತ್ತಮ ನಿದರ್ಶನ. ಪ್ರವಾಸಿಗರ ಅನುಕೂಲಕ್ಕಾಗಿ ಹಂಪಿ–ಆನೆಗೊಂದಿ ಸಂಪರ್ಕಿಸಲು ತುಂಗಭದ್ರಾ ನದಿ ಮೇಲೆ 2009ರಲ್ಲಿ ಸೇತುವೆ ನಿರ್ಮಾಣ ಕಾಮಗಾರಿ ಕೈಗೆತ್ತಿಕೊಳ್ಳಲಾಗಿತ್ತು. ಅದು ಕುಸಿದು ಬಿದ್ದು 8 ಕಾರ್ಮಿಕರು ಮೃತಪಟ್ಟಿದ್ದರು. ಬಳಿಕ ಆ ಕಾಮಗಾರಿ ಕೈಗೆತ್ತಿಕೊಳ್ಳಲು ಯುನೆಸ್ಕೋ ಅನುಮತಿ ನೀಡಲಿಲ್ಲ. ಇಂದಿಗೂ ಯೋಜನೆ ಕಾರ್ಯಗತವಾಗಿಲ್ಲ.

'ಸ್ಮಾರಕಗಳ ಜೀರ್ಣೋದ್ಧಾರ, ಅವುಗಳ ಪರಿಸರದಲ್ಲಿ ಯಾವುದೇ ರೀತಿಯ ಸೌಕರ್ಯ ಕಲ್ಪಿಸಲು ನಮಗೆ ಅಧಿಕಾರ ಇಲ್ಲ. ಏನೇ ಮಾಡಬೇಕಿದ್ದರೂ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯ ಕೇಂದ್ರ ಕಚೇರಿಯ ಅನುಮತಿ ಪಡೆಯಬೇಕಾದದ್ದು ಕಡ್ಡಾಯ. ಇನ್ನು, ಯುನೆಸ್ಕೋ ಪಟ್ಟಿಗೆ ಸೇರಿರುವ ಸ್ಥಳಗಳಲ್ಲಿ ಯುನೆಸ್ಕೋ ಅನುಮತಿ ಇಲ್ಲದೆ ಏನೂ ಮಾಡುವಂತಿಲ್ಲ. ಕಠಿಣವಾದ ನಿಯಮಗಳಿವೆ. ಹೀಗಾಗಿ ಪ್ರವಾಸಿಗರು ಕೇಳುವ ಮೂಲಸೌಲಭ್ಯ ಅಭಿವೃದ್ಧಿ ಮಾಡುವುದು ಕಷ್ಟವಾಗುತ್ತಿದೆ' ಎನ್ನುತ್ತಾರೆ ಪುರಾತತ್ವ ಇಲಾಖೆಯ ಬೀದರ್ ಉಪವಿಭಾಗದ ಸಹಾಯಕ ಸಂರಕ್ಷಣಾಧಿಕಾರಿ ಅನಿರುದ್ಧ್ ದೇಸಾಯಿ.

ಘೋಷವಾಕ್ಯಕ್ಕಷ್ಟೇ ಸೀಮಿತ: 'ಒಂದು ರಾಜ್ಯ ಹಲವು ಜಗತ್ತುಗಳು' ಇದು ಪ್ರವಾಸೋದ್ಯಮ ಇಲಾಖೆಯ ಘೋಷವಾಕ್ಯ. ರಾಜ್ಯದಲ್ಲಿನ ಹಲವು ಜಗತ್ತುಗಳನ್ನು ಕಣ್ತುಂಬಿಕೊಳ್ಳಲೆಂದೇ ನಿತ್ಯ ದೇಶ–ವಿದೇಶಗಳಿಂದ ಅಸಂಖ್ಯ ಜನ ರಾಜ್ಯಕ್ಕೆ ಭೇಟಿ ಕೊಡುತ್ತಾರೆ. ಆದರೆ, ಹೀಗೆ ಭೇಟಿ ಕೊಟ್ಟಾಗ ಕನಿಷ್ಠ ಮೂಲಸೌಕರ್ಯಗಳು ಸಿಗದೆ ಅವರು ಗೊಣಗಿಕೊಂಡು ಹಿಂತಿರುಗಬೇಕಾದ ಪರಿಸ್ಥಿತಿ ಸೃಷ್ಟಿಯಾಗುತ್ತಿದೆ. ಸಹಜವಾಗಿಯೇ ರಾಜ್ಯದ ಪ್ರವಾಸಿ ತಾಣಗಳೆಂದರೆ ಅಲ್ಲಿಗೆ ಭೇಟಿ ಕೊಡಲು ಹೊರಗಿನವರು ಹಿಂಜರಿಯುತ್ತಿದ್ದಾರೆ. ಇದರಿಂದ ಪ್ರವಾಸೋದ್ಯಮಕ್ಕೆ ದೊಡ್ಡ ಪೆಟ್ಟು ಬೀಳುತ್ತಿದೆ.

ಪ್ರವಾಸೋದ್ಯಮ ಇಲಾಖೆಯ ಅಡಿಯಲ್ಲಿ ರಾಜ್ಯದಲ್ಲಿ ನಾಲ್ಕು ಸರ್ಕಾರಿ ಸಂಸ್ಥೆಗಳು ಕೆಲಸ ನಿರ್ವಹಿಸುತ್ತಿವೆ. ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ (ಕೆಎಸ್‌ಟಿಡಿಸಿ), ಜಂಗಲ್ ಲಾಡ್ಜಸ್ ಮತ್ತು ರೆಸಾರ್ಟ್ಸ್ ಲಿಮಿಟೆಡ್ (ಜೆಎಲ್‌ಆರ್), ಕರ್ನಾಟಕ ಪ್ರವಾಸೋದ್ಯಮ ಮೂಲಸೌಕರ್ಯ ಲಿಮಿಟೆಡ್ (ಕೆಟಿಐಎಲ್) ಮತ್ತು ಕರ್ನಾಟಕ ಪ್ರದರ್ಶನ ಪ್ರಾಧಿಕಾರ (ಕೆಇಎ). ಆದರೆ, ಇದರ ಹೆಚ್ಚಿನ ಚಟುವಟಿಕೆಗಳು ಚಾರಿತ್ರಿಕ ಮತ್ತು ಐತಿಹಾಸಿಕ ಸ್ಥಳಗಳನ್ನು ಹೊರತುಪಡಿಸಿದೆ. ಜಂಗಲ್ ಲಾಡ್ಜಸ್ ಕಾಡಿನಂಚಿನಲ್ಲಿ ರೆಸಾರ್ಟ್ ನಡೆಸುತ್ತಿದೆ. ಕೆಎಸ್‌ಟಿಡಿಸಿ ಮತ್ತು ಕೆಟಿಐಎಲ್ ಚಾರಿತ್ರಿಕ ಮತ್ತು ಐತಿಹಾಸಿಕ ಸ್ಥಳಗಳಲ್ಲಿ ತನ್ನ ಕಾರ್ಯಚಟುವಟಿಕೆ ಇನ್ನೂ ವಿಸ್ತರಿಸಬೇಕಿದೆ. ಜಂಗಲ್ ಲಾಡ್ಜಸ್ ಹೊರತುಪಡಿಸಿದರೆ ಉಳಿದ ಸಂಸ್ಥೆಗಳು ತಾವು ನಡೆಸುತ್ತಿರುವ ಉದ್ಯಮಕ್ಕೆ ಗುಣಮಟ್ಟದ ಛಾಪು ನೀಡಬೇಕಿದೆ.

ಕೈಚೆಲ್ಲಿದ ಉದ್ಯೋಗ ಸೃಷ್ಟಿ ಅವಕಾಶ: ಪ್ರವಾಸಿ ತಾಣಗಳಲ್ಲಿ ಉತ್ತಮ ಸೌಕರ್ಯ ಕಲ್ಪಿಸಿದರೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರನ್ನು ಆಕರ್ಷಿಸಬಹುದು. ಇದರ ಮೂಲಕ ಉದ್ಯೋಗ ಸೃಷ್ಟಿಗೂ ವಿಪುಲ ಅವಕಾಶಗಳಿವೆ. ಆದರೆ, ಸರ್ಕಾರದ ಆದ್ಯತೆಯ ಪಟ್ಟಿಯಲ್ಲಿ ಪ್ರವಾಸೋದ್ಯಮ ಕ್ಷೇತ್ರದ ಅಭಿವೃದ್ಧಿ ಕೊನೆಯ ಸ್ಥಾನ ಪಡೆದಿರುವುದರಿಂದ ಹೇಳಿಕೊಳ್ಳುವಂತಹ ಕೆಲಸಗಳಾಗುತ್ತಿಲ್ಲ. ಬರೀ ಘೋಷಣೆಗಳಿಗೆ ಸೀಮಿತವಾಗಿದೆ.

ರಾಜ್ಯದಲ್ಲಿ ಬೆಂಗಳೂರು, ಮೈಸೂರು, ಹೊಸಪೇಟೆಯಲ್ಲಿ ಪ್ರವಾಸಿಗರಿಗೆ ಅಗತ್ಯವಾದ ಸೌಕರ್ಯಗಳಿವೆ. ತಂಗಲು ಹೋಟೆಲ್, ಸಾರಿಗೆ ವ್ಯವಸ್ಥೆ, ಆಯಾ ರಾಜ್ಯಗಳ ಖಾದ್ಯಗಳು ಸಿಗುತ್ತವೆ. ಪ್ರವಾಸಿ ಮಾರ್ಗದರ್ಶಿಗಳಿಗೂ ಕೊರತೆ ಇಲ್ಲ. ಆದರೆ, ರಾಜ್ಯದ ಇತರೆ ಸ್ಥಳಗಳಲ್ಲಿ ಈ ಸೌಕರ್ಯ ಹೇಳಿಕೊಳ್ಳುವಂತಹ ರೀತಿಯಲ್ಲಿ ಇಲ್ಲ. ಪ್ರವಾಸಿ ಸ್ಥಳಗಳಿಗೆ ಉತ್ತಮ ಸಾರಿಗೆ ಸೌಕರ್ಯ, ತಂಗಲು ಯಾತ್ರಿ ನಿವಾಸ, ಹೋಟೆಲ್ ವ್ಯವಸ್ಥೆ, ಪ್ರವಾಸಿ ಮಾರ್ಗದರ್ಶಿಗಳ ನೇಮಕ, ಅಗತ್ಯ ಇರುವ ಕಡೆ ಬ್ಯಾಟರಿಚಾಲಿತ ವಾಹನಗಳ ವ್ಯವಸ್ಥೆ, ಬಿಸಿಲು ಹೆಚ್ಚಿರುವ ಕಡೆಗಳಲ್ಲಿ ರಾತ್ರಿ ವೇಳೆ ಸ್ಮಾರಕಗಳ ವೀಕ್ಷಣೆಗೆ ವ್ಯವಸ್ಥೆ ಮಾಡಿದರೆ ಉದ್ಯೋಗ ಸೃಷ್ಟಿಸಬಹುದು. ಆದರೆ, ಈ ವಿಚಾರದಲ್ಲಿ ಇಚ್ಛಾಶಕ್ತಿ ಕೊರತೆ ಎದ್ದು ಕಾಣುತ್ತಿದೆ.

ಪೂರಕ ಮಾಹಿತಿ: ವಿವಿಧ ಬ್ಯುರೋಗಳಿಂದ

ಚಿತ್ರದುರ್ಗದ ಏಳುಸುತ್ತಿನ ಕೋಟೆ ಆವರಣದಲ್ಲಿನ ಕುಡಿಯುವ ನೀರಿನ ಘಟಕ ಹಾಳಾಗಿರುವುದು ಚಿತ್ರ: ವಿ.ಚಂದ್ರಪ್ಪ

ಶ್ರವಣಬೆಳಗೊಳದಲ್ಲಿ ಸ್ಮಾರಕಕ್ಕೆ ಹೋಗುವ ದಾರಿಯಲ್ಲಿ ಪ್ರವಾಸಿಗರು ವಾಹನಗಳನ್ನು ನಿಲ್ಲಿಸಿ, ಆಹಾರ ಸಿದ್ಧಪಡಿಸುತ್ತಿರುವುದು

'ಸ್ಮಾರಕಗಳ ದತ್ತು' ಯೋಜನೆಗೆ ಚಾಲನೆ

ರಾಜ್ಯ ಸರ್ಕಾರ ಸ್ಮಾರಕಗಳ ಸಂರಕ್ಷಣೆಗಾಗಿ ಕಲ್ಕಿ ಫೌಂಡೇಶನ್ ಜೊತೆ ಒಡಂಬಡಿಕೆ ಮಾಡಿಕೊಂಡು 'ನಮ್ಮ ಸ್ಮಾರಕ' ಎಂಬ ಡಿಜಿಟಲ್ ವೇದಿಕೆಯನ್ನು ಸಿದ್ಧಪಡಿಸಿದೆ. ಸಂಘ ಸಂಸ್ಥೆಗಳು, ಉದ್ಯಮಿಗಳು, ಖಾಸಗಿ ಕಂಪನಿಗಳು, ಕೈಗಾರಿಕೋದ್ಯಮಿಗಳ ಸಹಕಾರದೊಂದಿಗೆ ಎಲ್ಲ ಸ್ಮಾರಕಗಳು, ಪ್ರಾಚ್ಯ ವಸ್ತು ಅವಶೇಷಗಳನ್ನು ಸಂರಕ್ಷಿಸಿ, ಆ ಸ್ಥಳಗಳಿಗೆ ಪ್ರವಾಸಿಗರನ್ನು ಆಕರ್ಷಿಸಲು ಯೋಜನೆ ಅನುಷ್ಠಾನಕ್ಕೆ ತರುತ್ತಿದೆ. ಈ ಯೋಜನೆಯಡಿ ರಾಜ್ಯದ 800ಕ್ಕೂ ಹೆಚ್ಚು ಸಂರಕ್ಷಿತ ಸ್ಮಾರಕಗಳ ಪೈಕಿ 280 ಸ್ಮಾರಕಗಳನ್ನು ಆಯ್ಕೆ ಮಾಡಿದೆ. ಸ್ಮಾರಕಗಳಿಗೆ ಮೂಲಸೌಕರ್ಯ ಒದಗಿಸುವುದು, ಶಿಥಿಲಾವಸ್ಥೆಯಲ್ಲಿರುವ ಸ್ಮಾರಕಗಳನ್ನು ಜೀರ್ಣೋದ್ಧಾರಗೊಳಿಸುವುದು ಯೋಜನೆಯಲ್ಲಿ ಸೇರಿದೆ. 'ಸ್ಮಾರಕ ದತ್ತು' ಯೋಜನೆಯ ಅನುಷ್ಠಾನಕ್ಕೆ ಪ್ರವಾಸೋದ್ಯಮ ಸಚಿವ ಎಚ್‌.ಕೆ. ಪಾಟೀಲ ಅವರು, 'ನಮ್ಮ ಸ್ಮಾರಕ ದರ್ಶನ ಮತ್ತು ಸಂರಕ್ಷಣೆಗಾಗಿ ಪ್ರವಾಸ' ಹಮ್ಮಿಕೊಂಡಿದ್ದಾರೆ. ಈಗಾಗಲೇ ಎರಡು ಹಂತದ ಪ್ರವಾಸದಲ್ಲಿ ಅವರು ಐದು ಜಿಲ್ಲೆಗಳಿಗೆ ಭೇಟಿ ಕೊಟ್ಟಿದ್ದಾರೆ. ಸ್ಮಾರಕಗಳ ರಕ್ಷಣೆಗೆ ಸರ್ಕಾರದ ಜತೆಗೆ ಜನರು ಕೈಜೋಡಿಸಿದರೆ, ನಮ್ಮ ಇತಿಹಾಸ ಮತ್ತು ಪರಂಪರೆಯನ್ನು ಮುಂದಿನ ಪೀಳಿಗೆಗೆ ದಾಟಿಸಬಹುದು. 'ನಮ್ಮ ಸ್ಮಾರಕ ದರ್ಶನ ಮತ್ತು ಸಂರಕ್ಷಣೆಗಾಗಿ ಪ್ರವಾಸ' ಕೈಗೊಂಡು ಸ್ಮಾರಕಗಳಲ್ಲಿ ಸ್ವಚ್ಛತೆ, ಮೂಲಸೌಲಭ್ಯ, ಸಂರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು' ಎಂದು ಸಚಿವ ಎಚ್‌.ಕೆ. ಪಾಟೀಲ ತಿಳಿಸಿದ್ದಾರೆ.

'ರಾಜ್ಯದ ಪ್ರವಾಸೋದ್ಯಮಕ್ಕೆ ಚುರುಕುಮುಟ್ಟಿಸಲು ಆರಂಭಿಸಿದ್ದೇನೆ. ಕರಾವಳಿಯ 320 ಕಿ.ಮೀ ಉದ್ದಗಲ ಅಭಿವೃದ್ಧಿಗೆ ಯೋಜನೆ ರೂಪಿಸಿದ್ದೇವೆ. ವಿಸ್ತ್ರುತ ಯೋಜನಾ ವರದಿಯೂ ಸಿದ್ಧವಾಗಿದೆ. ಇದರ ಜತೆಯಲ್ಲಿ ಚಾಮುಂಡಿಬೆಟ್ಟವೂ ಸೇರಿದಂತೆ ಹತ್ತು ಕಡೆ ರೋಪ್‌ವೇ ಮಾಡುತ್ತೇವೆ' ಎಂದು ಸಚಿವರು ತಿಳಿಸಿದರು.

ಮಕ್ಕಳಿಗೆ ಕುಡಿಯಲು ನೀರು, ಸ್ನ್ಯಾಕ್ಸ್, ಡಸ್ಟ್‌ಬಿನ್, ಹಿರಿಯ ನಾಗರಿಕರಿಗೆ ವೀಲ್ ಚೇರ್ ಇಲ್ಲ. ಬೀದರ್‌ನ ಸ್ಮಾರಕಗಳನ್ನು ನೋಡುವುದು ಹೇಗೆ?
ಸಾಕ್ಷಿ ಟಂಡನ್
ಹೈದರಾಬಾದ್ ಪ್ರವಾಸಿ

ಚಿತ್ರದುರ್ಗ ಕೋಟೆಯೊಳಗೆ ಏನೇನೂ ಸೌಕರ್ಯಗಳಿಲ್ಲ. ಮಹಿಳಾ ಪ್ರವಾಸಿಗರಿಗೆ ಕೋಟೆ ಸುರಕ್ಷಿತವೂ ಅಲ್ಲ. ಇದನ್ನು ನೋಡಿ ಬೇಸರವಾಯಿತು.
ಜ್ಯೋತಿ ಶಾಂತರಾಜ್
ದಾವಣಗೆರೆ ಪ್ರವಾಸಿ

ಕಾರ್ಯರೂಪಕ್ಕೆ ಬಾರದ ಪ್ರವಾಸಿ ಸರ್ಕ್ಯೂಟ್

ರಾಜ್ಯದ ಬೇರೆ ಬೇರೆ ಭಾಗಗಳಲ್ಲಿರುವ ಪ್ರವಾಸಿ ತಾಣಗಳಿಗೆ ತಕ್ಕಂತೆ ಪ್ರವಾಸಿ ಸರ್ಕ್ಯೂಟ್ ಮಾಡಿ, ಪ್ರವಾಸಿಗರನ್ನು ಆಕರ್ಷಿಸಬೇಕೆನ್ನುವುದು ದಶಕಗಳ ಯೋಜನೆ. ಆದರೆ, ಇದು ಇನ್ನೂ ಬಹುತೇಕ ಕಡೆಗಳಲ್ಲಿ ಕಾರ್ಯರೂಪಕ್ಕೆ ಬಂದಿಲ್ಲ. ಇನ್ನೂ ಗೊಂದಲ ಮನೆ ಮಾಡಿದೆ.

ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಯೋಜನೆ ಇನ್ನೂ ಶೈಶವಾವಸ್ಥೆಯಲ್ಲೇ ಇದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಸಂಬಂಧ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಕೆಯಾದರೆ, ಚಿಕ್ಕಮಗಳೂರು, ಉಡುಪಿ ಜಿಲ್ಲೆಗಳಲ್ಲಿ ಇನ್ನೂ ಯೋಜನೆಯೇ ರೂಪಿತವಾಗಿಲ್ಲ. 'ಪ್ರಸಿದ್ಧ ತಾಣಗಳನ್ನು ಒಳಗೊಂಡ ಪ್ರವಾಸಿ ಸರ್ಕ್ಯೂಟ್ ಸಿದ್ಧಪಡಿಸಿ, ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದೆ. ಪ್ರವಾಸಿಗರು ಹೆಚ್ಚು ಭೇಟಿ ನೀಡುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದು ಯಶಸ್ಸು ಕಾಣಬಹುದೆಂಬ ನಿರೀಕ್ಷೆ ಇದೆ' ಎನ್ನುತ್ತಾರೆ ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕ ಎನ್. ಮಾಣಿಕ್ಯ. ಆದರೆ, ಮೈಸೂರು ಭಾಗದಲ್ಲಿ ಪರಿಸ್ಥಿತಿ ಭಿನ್ನವಿದೆ. ಮೈಸೂರು ಭಾಗದಲ್ಲಿ ಪ್ರವಾಸೋದ್ಯಮ ಉತ್ತೇಜಿಸಲು, ಮೈಸೂರು–ಶ್ರೀರಂಗಪಟ್ಟಣ–ಹಾಸನ–ಬೇಲೂರು–ಹಳೇಬೀಡು ಪ್ರವಾಸಿ ಸರ್ಕ್ಯೂಟ್ ಅಭಿವೃದ್ಧಿಪಡಿಸುವ ಕಾರ್ಯ ನಡೆದಿಲ್ಲ. ಘೋಷಣೆಗಷ್ಟೇ ಸೀಮಿತವಾಗಿದೆ.

'ಪ್ರವಾಸಿ ಸರ್ಕ್ಯೂಟ್ ಅಥವಾ ಪ್ರವಾಸಿ ಕಾರಿಡಾರ್ ರೀತಿಯ ಪ್ರಸ್ತಾವ ಇಲಾಖೆಯ ಮುಂದಿಲ್ಲ' ಎಂದು ಪ್ರವಾಸೋದ್ಯಮ ಇಲಾಖೆಯ ಜಂಟಿ ನಿರ್ದೇಶಕಿ ಎಂ.ಕೆ. ಸವಿತಾ ತಿಳಿಸಿದ್ದಾರೆ. ಬಹಮನಿ–ರಾಷ್ಟ್ರಕೂಟ–ಚಾಲುಕ್ಯ ಪ್ರವಾಸೋದ್ಯಮ ಸರ್ಕ್ಯೂಟ್ ವಾಹನಕ್ಕೆ ಸಿ.ಎಂ ಡಿಸೆಂಬರ್ 3ರಂದು ಭಾಲ್ಕಿಯಲ್ಲಿ ಚಾಲನೆ ಕೊಟ್ಟಿದ್ದರು. ಇದುವರೆಗೂ ಅದು ಸಂಚಾರ ಆರಂಭಿಸಿಲ್ಲ.

'ಮಾರ್ಚ್ ಅಂತ್ಯದೊಳಗೆ 500 ಸ್ಮಾರಕ ಗುರುತಿಸಲು ಸೂಚನೆ'

ಮೈಸೂರು: 'ರಾಜ್ಯದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಸ್ಮಾರಕಗಳನ್ನು ಗುರುತಿಸುವ ಕಾರ್ಯ ಭರದಿಂದ ನಡೆದಿದ್ದು, ಮಾರ್ಚ್ ಅಂತ್ಯದೊಳಗೆ 500 ಸ್ಮಾರಕಗಳನ್ನು ಗುರುತಿಸುವಂತೆ ಪರಂಪರೆ ಇಲಾಖೆ ಆಯುಕ್ತರಿಗೆ ಸೂಚಿಸಲಾಗಿದೆ' ಎಂದು ಪ್ರವಾಸೋದ್ಯಮ ಸಚಿವ ಎಚ್‌.ಕೆ.ಪಾಟೀಲ ತಿಳಿಸಿದರು.

ನಗರದಲ್ಲಿ ಶನಿವಾರ ವಿಠಲರೆಡ್ಡಿ ಎಫ್. ಚುಳಕಿ ಅವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದ ಅವರು, 'ರಾಜ್ಯದಲ್ಲಿರುವ 25 ಸಾವಿರ ಸ್ಮಾರಕಗಳಲ್ಲಿ 10 ಸಾವಿರ ಗುಡಿರೂಪದಲ್ಲಿವೆ. 850 ಸ್ಮಾರಕಗಳನ್ನು ಗುರುತಿಸಲಾಗಿದ್ದು, 550 ಸ್ಮಾರಕಗಳನ್ನು ರಕ್ಷಿಸಲಾಗಿದೆ. ಇನ್ನೂ 24 ಸ್ಮಾರಕಗಳನ್ನು ರಾಜ್ಯ ಸರ್ಕಾರ ಗುರುತಿಸಿ ಸಂರಕ್ಷಿಸಬೇಕಾಗಿದೆ' ಎಂದರು.

'ಐಹೊಳೆಯೊಂದರಲ್ಲೇ 125 ಗುಡಿಗಳಿವೆ. ಅವು ಹಂಪಿಯಲ್ಲಿರುವ ಸ್ಮಾರಕಗಳಿಗಿಂತಲೂ ಕಡಿಮೆ ಏನಿಲ್ಲ. 50ರಷ್ಟನ್ನು ಭಾರತೀಯ ಸರ್ವೇಕ್ಷಣಾ ಇಲಾಖೆ ಗುರುತಿಸಿ ಸಂರಕ್ಷಿಸಿದೆ. ಉಳಿದ ಸ್ಮಾರಕಗಳು ಮನೆಗಳಲ್ಲಿವೆ. ಕೆಲವು ಸ್ಮಾರಕಗಳಲ್ಲಿ ಎಮ್ಮೆ ಕಟ್ಟಿದ್ದಾರೆ. ಸ್ಮಾರಕಗಳನ್ನು ನೋಡಿದರೆ ಹೊಟ್ಟೆ ಉರಿಯುತ್ತದೆ' ಎಂದು ವಿಷಾದಿಸಿದರು.

'ಕನ್ನಡದ ಮೊದಲ ವಿಶ್ವವಿದ್ಯಾಲಯ ಚಿತ್ತಾಪುರದಲ್ಲಿನ ನಾಗಾವಿ ವಿಶ್ವವಿದ್ಯಾಲಯ. ಅದನ್ನು ಸಂರಕ್ಷಿಸುವ ಕೆಲಸವೂ ನಡೆಯಬೇಕು' ಎಂದರು.

'ತಾತಗುಣಿಯ ರೋರಿಚ್ ಎಸ್ಟೇಟ್ ಅನ್ನು ಸಾಂಸ್ಕೃತಿಕ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಬೇಕು' ಎಂದು ಇದೇ ಸಂದರ್ಭದಲ್ಲಿ ಕಲಾವಿದ ಎಂ.ಎಸ್.ಮೂರ್ತಿ ಸಚಿವರ ಗಮನಸೆಳೆದರು.

ಪೋಕ್ಸೊ: ಶಿಕ್ಷೆಯೇ ವಿಳಂಬ

ಒಂದನೇ ಪುಟದಿಂದ

'ತ್ವರಿತವಾಗಿ ತನಿಖೆ ನಡೆದು, ಆರೋಪಿಗಳಿಗೆ ಶಿಕ್ಷೆಯಾದಲ್ಲಿ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ನಿಯಂತ್ರಿಸಬಹುದು. ದಾಖಲಾದ ಪ್ರಕರಣವು ಒಂದು ವರ್ಷದ ಅವಧಿಯಲ್ಲಿ ಪೂರ್ಣಗೊಳ್ಳಬೇಕು ಎಂಬುದು ಕಾಯ್ದೆಯ ನಿಯಮ. ಆದರೆ, ಎರಡು ಅಥವಾ ಮೂರು ವರ್ಷಗಳವರೆಗೂ ತನಿಖೆ, ಕೋರ್ಟ್‌ಲ್ಲಿ ವಿಚಾರಣೆ ನಡೆಯುತ್ತಲೇ ಇರುತ್ತವೆ' ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೋಸಂಬೆ ತಿಳಿಸಿದರು.

'ವಿರುದ್ಧ ಹೇಳಿಕೆ ಸಿಗಲ್ಲ': 'ಪ್ರಕರಣಗಳಲ್ಲಿ ಆರೋಪಿಗಳಿಗೆ ಬೇಗನೇ ಶಿಕ್ಷೆಯಾಗದಿರಲು ಹಲವು ಕಾರಣಗಳಿವೆ. ಹಲವು ಬಾರಿ ಸೂಕ್ತ ಸಾಕ್ಷ್ಯಾಧಾರ ಸಿಗುವುದಿಲ್ಲ. ಇನ್ನೂ ಕೆಲ ಸಲ ದೂರುದಾರರು ವಿಮುಖರಾಗಿ, ಪ್ರಕರಣ ಮುಂದುವರೆಸಲು ಬಯಸಲ್ಲ. 18 ವರ್ಷ ತುಂಬುವ ಮೊದಲೇ ಮದುವೆಯಾಗುವ ಕೆಲ ಬಾಲಕಿಯರು ಹೆರಿಗೆಗೆಂದು ಆಸ್ಪತ್ರೆಗೆ ಬಂದಾಗ, ಬಾಲ್ಯ ವಿವಾಹ ಎಂದು ಗೊತ್ತಾಗುತ್ತದೆ. ಆಗ ವೈದ್ಯರ ಮುಖಾಂತರ ಪೋಕ್ಸೊ ಪ್ರಕರಣ ದಾಖಲಾಗುತ್ತದೆ' ಎಂದು ವಕೀಲರೊಬ್ಬರು ತಿಳಿಸಿದರು.

'ಪೋಕ್ಸೊ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ತನಿಖೆ, ವಿಚಾರಣೆ, ಕೋರ್ಟ್‌ನಲ್ಲಿ ವಾದ ಸಹ ನಡೆಯುತ್ತದೆ. ಪಾಲಕರ ಹಾಗೂ ಬಾಲಕಿಯ ಒಪ್ಪಿಗೆ ಇರುವುದರಿಂದ ಮತ್ತು ಅವಳ ಭವಿಷ್ಯದ ದೃಷ್ಟಿಯಿಂದ ಕೋರ್ಟ್‌ನಲ್ಲಿ ಆರೋಪಿ ವಿರುದ್ಧದ ಹೇಳಿಕೆ ಸಿಗುವುದಿಲ್ಲ. ಹೊಂದಾಣಿಕೆಯೊಂದೇ ಪರಿಹಾರ ಪರಿಸ್ಥಿತಿ ನಿರ್ಮಾಣಗೊಳ್ಳುತ್ತದೆ' ಎಂದರು.

ಪೋಕ್ಸೊ ಪ್ರಕರಣದ ತನಿಖೆ ವಿಳಂಬವನ್ನು ಆಯೋಗ ಗಂಭೀರವಾಗಿ ಪರಿಗಣಿಸಿದೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಪತ್ರ ಬರೆದು ಮಾಹಿತಿ ಕೇಳಲಿದೆ. ವರದಿ ಆಧರಿಸಿ, ಕಠಿಣ ಕ್ರಮಕ್ಕೆ ಶಿಫಾರಸು ಮಾಡಲಾಗುವುದು
ಶಶಿಧರ ಕೋಸಂಬೆ, ಸದಸ್ಯ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ

ಪೋಕ್ಸೊ ಪ್ರಕರಣ ದಾಖಲಾದ 90 ದಿನಗಳಲ್ಲಿ ನಾವು ಕೋರ್ಟ್‌ಗೆ ದೋಷಾರೋಪ ಪಟ್ಟಿ ಸಲ್ಲಿಸುತ್ತೇವೆ. ಯಾವುದೇ ಕಾರಣಕ್ಕೂ ವಿಳಂಬ ಮಾಡುವುದಿಲ್ಲ. ಮುಂದಿನ ಪ್ರಕ್ರಿಯೆ ಕೋರ್ಟ್‌ನಲ್ಲಿ ನಡೆಯುತ್ತದೆ
ರೇಣುಕಾ ಸುಕುಮಾರ್
ಕಮಿಷನರ್, ಹುಬ್ಬಳ್ಳಿ-ಧಾರವಾಡ

ಒಕ್ಕೂಟ ಬಿಡುವ ಬಗ್ಗೆ ಜೆಡಿಯು ತಿಳಿಸಿಲ್ಲ: ಖರ್ಗೆ

ಪ್ರಜಾವಾಣಿ ವಾರ್ತೆ

ಮಲ್ಲಿಕಾರ್ಜುನ ಖರ್ಗೆ

ಕಲಬುರಗಿ: 'ವಿರೋಧ ಪಕ್ಷಗಳ ಇಂಡಿಯಾ ಮೈತ್ರಿಕೂಟ ತೊರೆಯುವ ಬಗ್ಗೆ ಜೆಡಿಯು ನಮಗೆ ಯಾವುದೇ ಮಾಹಿತಿ ನೀಡಿಲ್ಲ. ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಉಳಿವಿಗಾಗಿ ನಮ್ಮಲ್ಲಿ ಒಗ್ಗಟ್ಟು ಕಾಯ್ದುಕೊಳ್ಳುವುದು ಅಗತ್ಯ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರತಿಪಾದಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಿತೀಶ್ ಕುಮಾರ್ ಅವರು ಒಕ್ಕೂಟದಿಂದ ಹೊರಬೀಳುವ ಬಗ್ಗೆ ಯಾವುದೇ ಮಾಹಿತಿ ನೀಡಿಲ್ಲ. ರಾಜ್ಯಪಾಲರನ್ನು ಭೇಟಿ ಮಾಡುವ ಬಗ್ಗೆಯೂ ಹೇಳಿಲ್ಲ. ಒಕ್ಕೂಟದಲ್ಲಿ ಒಗ್ಗಟ್ಟು ಕಾಯ್ದುಕೊಳ್ಳಬೇಕು ಎಂಬ ಉದ್ದೇಶದಿಂದ ಮಮತಾ ಬ್ಯಾನರ್ಜಿ, ಲಾಲೂ ಪ್ರಸಾದ್, ಸೀತಾರಾಮ್ ಯೆಚೂರಿ ಅವರೊಂದಿಗೆ ಮಾತನಾಡಿದ್ದೇನೆ. ಎಲ್ಲರೂ ಒಟ್ಟಾಗಿದ್ದರೆ ಚುನಾವಣೆಯಲ್ಲಿ ಉತ್ತಮ ಹೋರಾಟ ಮಾಡಬಹುದು. ಮುಂದೆ ಏನಾಗುತ್ತದೆಯೋ ನೋಡೋಣ' ಎಂದರು.

'ಭಾನುವಾರ ಡೆಹ್ರಾಡೂನ್‌ನಲ್ಲಿ ಪಕ್ಷದ ಸಭೆ ಇದೆ. ಅದಾದ ಬಳಿಕ ದೆಹಲಿಗೆ ತೆರಳಿ ವಿದ್ಯಮಾನಗಳ ಬಗ್ಗೆ ಮಾಹಿತಿ ಪಡೆದು ಪ್ರತಿಕ್ರಿಯಿಸುತ್ತೇನೆ' ಎಂದು ಹೇಳಿದರು.

ಗುಂಡಣ್ಣ

25 ವರ್ಷಗಳ ಹಿಂದೆ
ಗುರುವಾರ, 28-1-1999

● **ಸ್ಟೀವರ್ಟ್ ಹತ್ಯೆ: 53 ಬಂಧನ ಪ್ರಮುಖ ಆರೋಪಿಗೆ ಶೋಧ**

ಭುವನೇಶ್ವರ, ಜ. 27 (ಯುಎನ್‌ಐ)– ಒರಿಸ್ಸಾದ ಮನೋಹರಪುರ ಗ್ರಾಮದಲ್ಲಿ ಆಸ್ಟ್ರೇಲಿಯಾದ ಧರ್ಮ ಪ್ರಚಾರಕ ಗ್ರಹಾಂ ಸ್ಟೀವರ್ಟ್ ಮತ್ತು ಅವರ ಇಬ್ಬರು ಪುತ್ರರನ್ನು ಸಜೀವ ದಹನ ಮಾಡಿದ ಘಟನೆ ಸಂಬಂಧ ಇದುವರೆಗೆ 53 ಜನರನ್ನು ಪೊಲೀಸರು ಬಂಧಿಸಿದ್ದಾರೆ.

ಈ ಮಧ್ಯೆ, ರಾಷ್ಟ್ರದ ಅಲ್ಪಸಂಖ್ಯಾತರಿಗೆ ರಕ್ಷಣೆ ನೀಡಲು ಹಲವು ರಾಜ್ಯ ಸರ್ಕಾರಗಳು ವ್ಯಾಪಕ ಕ್ರಮ ತೆಗೆದುಕೊಂಡಿವೆ. ಅಲ್ಲದೆ, ದೇಶದ ವಿವಿಧ ರಾಜಕೀಯ ಪಕ್ಷಗಳು ಹಾಗೂ ಸಂಘಟನೆಗಳು ಈ ಕೃತ್ಯವನ್ನು ಖಂಡಿಸಿವೆ.

50 ವರ್ಷಗಳ ಹಿಂದೆ
ಸೋಮವಾರ, 28-1-1974

● **ಆರ್ಥಿಕ ಸಂಕಷ್ಟ: ನಿರಾಡಂಬರ ಗಣರಾಜ್ಯ ದಿನಾಚರಣೆ**

ನವದೆಹಲಿ, ಜ.27– ಆರ್ಥಿಕ ಬಿಕ್ಕಟ್ಟು, ವಿದ್ಯುತ್ ಕೊರತೆ ಮುಂತಾದ ಸಂಕಷ್ಟಗಳ ಕಾರಣ ದೇಶವು ನಿನ್ನೆ ತನ್ನ 25ನೇ ಗಣರಾಜ್ಯೋತ್ಸವವನ್ನು ನಿರಾಡಂಬರವಾಗಿ ಮಿತವ್ಯಯದಲ್ಲಿ ಆಚರಿಸಿತು.

ರಾಜಧಾನಿಯಲ್ಲಿ ಸಡಗರ, ಸಂಭ್ರಮದ ವಾತಾವರಣವಿದ್ದರೂ, ಬಹುಕಾಲದಿಂದ ನಡೆದು ಬಂದಿದ್ದ ಆಡಂಬರ, ವೈಭವದ ಸಾಂಪ್ರದಾಯಿಕ ಅಂಶಗಳು ಲೋಪಿಸಿದ್ದವು. ಆದರೂ, ಸಾವಿರಾರು ಮಂದಿ ಉತ್ಸಾಹಿ ನಾಗರಿಕರು, ಮಾರ್ಗದುದ್ದಕ್ಕೂ ಮತ್ತು ಕೆಂಪುಕೋಟೆಯ ಬಳಿ ಸಶಸ್ತ್ರ ಸೇನೆ ಪರೇಡ್ ನಡೆಯಿತು.

ದಿನ ಭವಿಷ್ಯ
ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ
ಭಾನುವಾರ ಜನವರಿ 28, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪುಷ್ಯ ಕೃಷ್ಣ ತೃತೀಯ ಗಂ. 30-11 ನಕ್ಷತ್ರ: ಮಘಾ ಗಂ. 15-53 ಯೋಗ: ಸೌಭಾಗ್ಯ ಗಂ. 08-50 ಕರಣ: ವಣಿಜ ಗಂ. 16-53, ಮಕರ ಮಾಸದ 13 ನೇ ದಿನ, ಮಳೆನಕ್ಷತ್ರ: ಶ್ರವಣ 2.
ರಾಹುಕಾಲ : ಸಾಯಂಕಾಲ 04-30 – 06-00
ಸೂರ್ಯೋದಯ : 07-01 ಸೂರ್ಯಾಸ್ತ : 06-25
ಮುಸ್ಲಿಂ ದಿನಾಂಕ : 16 ರಜಬ್
ಅದೃಷ್ಟ ಸಂಖ್ಯೆ : 10, 3

ಮೇಷ: ಹೂಡಿಕೆ ವಿಚಾರದಲ್ಲಿ ಆಳವಾಗಿ ಯೋಚಿಸಿ ತೀರ್ಮಾನಿಸುವುದು ಅಥವಾ ಮಿತ್ರರ ಸಲಹೆ ಪಡೆಯುವುದು ಅನುಕೂಲಕರ. ಅನಾರೋಗ್ಯಕರ ಹೆಂಡತಿಯ ಆರೋಗ್ಯದಲ್ಲಿ ಸಾಕಷ್ಟು ಬದಲಾವಣೆಯಾಗಬಹುದು.

ವೃಷಭ: ಕುಲ ದೇವರ ದರ್ಶನ ಅಥವಾ ಕ್ಷೇತ್ರಕ್ಕೆ ಕಾಣಿಕೆ ಕಳುಹಿಸಿದ ನಂತರ ಈ ದಿನವನ್ನು ಪ್ರಾರಂಭಿಸಿ. ನಿಮ್ಮ ದಿನ ನಿತ್ಯದ ದಿನಚರಿಯಲ್ಲಿ ಬದಲಾವಣೆ ಇಲ್ಲ. ಕಬ್ಬಿಣ ಮತ್ತು ತಾಮ್ರದ ವ್ಯಾಪಾರಿಗಳಿಗೆ ಹೆಚ್ಚಿನ ಲಾಭ ಸಿಗಲಿದೆ.

ಮಿಥುನ: ಒಮ್ಮೆ ನಿಮ್ಮ ಜೀವನವನ್ನು ಹಿಂದಿರುಗಿ ನೋಡಿದರೆ ನಿಮ್ಮ ಸಾಧನೆಗಳ ಬಗ್ಗೆ ನಿಮಗೆ ಹೆಮ್ಮೆ ಎನಿಸುವುದು. ಮನುಷ್ಯ ಪ್ರಯತ್ನದ ಜೊತೆ ಮಹಾ ಗಣಪತಿಯ ಮೊರೆ ಹೋಗುವುದರಿಂದ ಕಾರ್ಯ ಸಿದ್ಧಿಯಾಗಲಿದೆ.

ಕರ್ಕಾಟಕ: ವೈಯಕ್ತಿಕವಾಗಿ ನಿಯಮ, ನಿಷ್ಠೆಯಿಂದಿರುವುದು ಉತ್ತಮ. ಯಾವುದೇ ವಿಚಾರದಲ್ಲಿಯಾದರೂ ಸಮಾಲೋಚನೆ ಒಳ್ಳೆಯದು. ಹಿಂದಿನಿಂದ ಬಾಕಿ ಇದ್ದ ಆಫೀಸಿನ ಕೆಲಸಗಳನ್ನು ಪೂರ್ತಿಗೊಳಿಸಲು ಪ್ರಯತ್ನಿಸಿ.

ಸಿಂಹ: ಕಾರ್ಖಾನೆಯೊಂದನ್ನು ಗುತ್ತಿಗೆ ಆಧಾರದಲ್ಲಿ ಪಡೆದುಕೊಳ್ಳಲು ನಿಮ್ಮ ಸ್ನೇಹಿತನ ಸಹಾಯ ಪಡೆಯಬಹುದು. ನಿಮ್ಮ ಅಭಿವೃದ್ಧಿಯನ್ನು ನೋಡಿ ಬಂಧುಗಳು ಶತ್ರುಗಳಂತೆ ಮನೋಭಾವನೆ ತೋರುವರು.

ಕನ್ಯಾ: ಭಾರಿ ಕೆಲಸಕ್ಕೆ ಕೈಹಾಕಿದ ಪರಿಣಾಮದಿಂದ ಈ ದಿನ ನಿಮ್ಮ ಪ್ರತಿಭೆ ಬೆಳಕಿಗೆ ಬರಲಿದೆ. ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಪ್ರಯತ್ನ ಬಲವನ್ನು ಹೆಚ್ಚಿಸಿದರೆ ಉತ್ತಮ. ಆತಂಕದ ಸ್ಥಿತಿಯಾದರೂ ಧೃತಿಗೆಡದಿರಿ.

ತುಲಾ: ಕಾರ್ಯ ಕ್ಷೇತ್ರದಲ್ಲಿ ಶಾಂತ ಚಿತ್ತದಿಂದ ಕಾರ್ಮಿಕರ ಮಾತುಗಳನ್ನು ಆಲಿಸಿ ಸೂಕ್ತ ಕ್ರಮ ಕೈಗೊಳ್ಳಿ. ಸಂಘ ಸಂಸ್ಥೆಗಳಿಂದ ಮನ್ನಣೆ, ಸನ್ಮಾನ ಸಿಗಲಿದೆ. ಕೆಲಸದಲ್ಲಿ ಧನಾತ್ಮಕ ಬದಲಾವಣೆಯಿಂದಾಗಿ ಸಂತಸವಾಗಲಿದೆ.

ವೃಶ್ಚಿಕ: ಹತ್ತಾರು ವರ್ಷಗಳ ಸತತ ಪ್ರಯತ್ನದ ಫಲವಾಗಿ ಕುಟುಂಬದಲ್ಲಿನ ಸ್ಥಾನ ಭದ್ರವಾಗುವುದು. ಹಣಕಾಸು ಸಂಸ್ಥೆಗೆ ಪಾಲುದಾರರಾಗುವುದು ದಾರಿಯಲ್ಲಿ ಹೋಗುವ ಸಮಸ್ಯೆಯನ್ನು ಮನೆಗೆ ಕರೆತಂದಂತೆ ಆಗುವ ಸಾಧ್ಯತೆಯಿದೆ.

ಧನು: ಕೈ ತಪ್ಪಿ ಹೋದ ಕಾರ್ಯಗಳಿಂದ ಆಗುವ ಲಾಭ ನಷ್ಟದ ಮೌಲ್ಯಮಾಪನ ಮಾಡುತ್ತ ಸುಮ್ಮನೆ ಕೂರುವುದರಿಂದ ಯಾವುದೇ ಪ್ರಯೋಜನವಿಲ್ಲ. ಹೂಡಿಕೆ ವಿಚಾರದಲ್ಲಿ ದೀರ್ಘಾಲೋಚನೆ ನಡೆಸುವುದು ಉತ್ತಮ.

ಮಕರ: ಸಂಘ ಸಂಸ್ಥೆಗಳ ಅಧಿಕಾರ ಪಡೆದುಕೊಳ್ಳುವ ವಿಚಾರದಲ್ಲಿ ಯಾವುದೇ ವಾಮಮಾರ್ಗ ಅನುಸರಿಸಬೇಡಿ. ರಾಸಾಯನಿಕ ವಸ್ತುಗಳ ವ್ಯಾಪಾರ ವ್ಯವಹಾರಗಳಲ್ಲಿ ಲಾಭ ಕಾಣಲಿದ್ದೀರಿ. ಆಭರಣ ವ್ಯಾಪಾರಿಗಳಿಗೆ ಧನಲಾಭ ಪ್ರಾಪ್ತಿ.

ಕುಂಭ: ನಿಮ್ಮನ್ನು ಹೀಯಾಳಿಸುವವರೇ, ಅನುಮಾನಿಸುತ್ತಿರುವವರೇ ಇಂದು ನಿಮ್ಮ ಸಹಾಯ ಕೋರಿ ಬರಲಿದ್ದಾರೆ. ಶಿಕ್ಷಣ ಮುಂದುವರೆಸಲು ಬಂಧುಗಳಿಂದ ಸಹಾಯ ದೊರಕಲಿದೆ. ಪತ್ರಕರ್ತರಿಗೆ ಭಯ ಮೂಡುವ ಪ್ರಸಂಗವಿದೆ.

ಮೀನ: ಸಹೋದರರಲ್ಲಿನ ಸಂಬಂಧಗಳು ಗಟ್ಟಿಗೊಂಡು ಸುರಕ್ಷತೆಯ ಭಾವ ಉಂಟಾಗಲಿದೆ. ಊರಿನ ಅಥವಾ ಸುತ್ತಮುತ್ತಲಿನ ಕುತೂಹಲಕಾರಿ ವಿಷಯ ತಿಳಿದು ಅಚ್ಚರಿಗೊಳ್ಳುವಿರಿ. ದಾಂಪತ್ಯದಲ್ಲಿ ಹೊಂದಾಣಿಕೆ ಅಗತ್ಯ ಅನಿಸಲಿದೆ.

ಪದಬಂಧ 5574
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಒಂದುಪದಾರ್ಥಕ್ಕೆ ಬದಲಾಗಿ ಮತ್ತೊಂದನ್ನು ಕೊಡುವಿಕೆ (4)
3.ಆಶ್ವಯುಜ ಕಾರ್ತೀಕ ಮಾಸಗಳನ್ನು ಒಳಗೊಂಡ ಕಾಲ (4)
5.ರಸ ಒಸರುತ್ತಿರುವ ಜಿಹ್ವೆ (3)
7.ಹತ್ತನೆಯ ಒಂದು ಭಾಗವಿದು (4)
9.ಚಾರನದ್ದು ಒಳ್ಳೆಯ ನಡತೆ (4)
12.ಗಣಪತಿಯ ವಾಹನ (3)
14.ಬಾಗಿಲು ಕಾಯುವವನು ಹಾರ ಧರಿಸಿದ್ದಾನೆ (4)
15.ಈತ ಬುದ್ಧಿಯಿಲ್ಲದವನು (4)

ಮೇಲಿಂದ ಕೆಳಕ್ಕೆ
1.ಹೆಂಡತಿಯನ್ನು ಕಳೆದುಕೊಂಡ ವ್ಯಕ್ತಿ (3)
2.ಮನದಲ್ಲಿರುವ ಕಾಮ (3)
3.ಪದಗಳ ಅರ್ಥವನ್ನು ವಿವರಿಸುವ ಗ್ರಂಥ (4)
4.ಸೈನ್ಯವಿರುವ ಜಾಗ (3)
6.ಸೂಕ್ತವಾದುದನ್ನು ಹೀಗೆ ಹೇಳಿ (4)
7.ಮೈಮೇಲೆ ಗುಳ್ಳೆಗಳು ಏಳುವ ಒಂದು ಅಂಟುರೋಗ (3)
8.ನೂರು ವರ್ಷಗಳ ಕಾಲ ಬದುಕಿರುವವನು (4)
10.ಚಾವಡಿ ಹತ್ತಿರವಿರುವ ಪಿಸುಣ (4)
11.ಏಳಿಗೆಯಿಲ್ಲಿ ಉಲ್ಟಾ ಆಗಿಬಿಟ್ಟಿದೆ (3)
12.ಮೂಗಿಗೆ ಧರಿಸುವ ಆಭರಣ (3)
13.ದನಕ್ಕಾಗಿ ನಡೆದ ಯುದ್ಧ (3)



5573ರ ಪದಬಂಧದ ಉತ್ತರ

ಎಡದಿಂದ ಬಲಕ್ಕೆ
1.ಹರಿಗೋಲು 3.ಉಪೋದ್ಘಾತ
5.ಕೆಸರು 7.ದುಮ್ಮಾನ
9.ಮತ್ತರ 10.ಶರಣ
11.ಅಂಗರ 15.ಕೋಲಾಹಲ
16.ಕಾರಬಾರು

ಮೇಲಿಂದ ಕೆಳಕ್ಕೆ
1.ಹರಕೆ 2.ಉಬ್ಬ
3.ಉಮೇದುವಾರ 4.ತಪ್ಪ
6.ಸದವಕಾಶ 8.ನದಲಗ
9.ಮರಣಶಾಸನ 12.ದಬಾರು
13.3ಕೋಲ 14.ಕಾಕ

ಸುಡೊಕು 5959

	2			3		4		6
4		1	5		2		8	
3				4			5	1
	9				4	6		
6		2		8				5
		4	2			3		
				2				9
	1	3	8		5			
9	4		6		3	8		2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5958 ಸುಡೊಕು

5	3	1	4	8	6	2	9	7
7	8	4	2	3	9	1	5	6
2	9	6	1	5	7	8	4	3
8	1	7	5	4	2	3	6	9
3	6	2	9	7	1	5	8	4
9	4	5	8	6	3	7	1	2
1	7	8	3	9	4	6	2	5
4	2	3	6	1	5	9	7	8
6	5	9	7	2	8	4	3	1

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಗಿರಿಯಾಸ್®

ಗೃಹಬಳಕೆ ವಸ್ತುಗಳ ವ್ಯಾಪಾರಿಗಳು 1971 ರಿಂದ

ಮಳಿಗೆಗಳು 10AM - 10PM ವರೆಗು ತೆರೆದಿರುತ್ತದೆ

ಫೈನಾನ್ಸ್ BONANZA UPTO ₹11,500 ಕ್ಯಾಶ್ ಬ್ಯಾಕ್*

ಕ್ಯಾಶ್ ಬ್ಯಾಕ್ BONANZA UPTO 20% ಕ್ಯಾಶ್ ಬ್ಯಾಕ್*

AXIS BANK, citi, HDFC BANK, HSBC, ICICI Bank Credit Cards, IndusInd Bank, kotak, RBL BANK, Union Bank of India, YES BANK, Standard Chartered, Bank of Baroda Credit Card, FEDERAL BANK, SBI card

ಅತಿ ದೊಡ್ಡ ಗಣರಾಜ್ಯೋತ್ಸವ ಸೇಲ್

UPTO 70% OFF

ಇಂದು ಕೊನೆಯ ದಿನ

ಉಚಿತ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್ ಮೌಲ್ಯ ₹20,000

ಎಕ್ಸ್‌ಚೇಂಜ್ BONANZA UPTO ₹25,000 ವರೆಗೂ ಕಡಿತ ಹಳೆಯ ಎಲೆಕ್ಟ್ರಾನಿಕ್ಸ್ ಮತ್ತು ಗೃಹೋಪಯೋಗಿ ವಸ್ತುಗಳ ಎಕ್ಸ್‌ಚೇಂಜ್ ಮೇಲೆ*

FINANCE POWERED BY Groww 0% EMI ₹2,000 ಕ್ಯಾಶ್ ಬ್ಯಾಕ್ MIN PRODUCT VALUE ₹10,000

MobiKwik 5% ಕ್ಯಾಶ್ ಬ್ಯಾಕ್* on UPI — MINIMUM TRANSACTION ₹5000, MAXIMUM CASHBACK UPTO ₹1000

ಕೇವಲ ₹1 ಪಾವತಿಸಿ ಮನೆಗೆ ತೆಗೆದುಕೊಂಡು ಹೋಗಿ*

ಫೈನಾನ್ಸ್ ಬೊನಾಂಜಾ 1 ಇ.ಎಮ್.ಐ ಉಚಿತ*

ಇನ್ಸ್ಟಂಟ್ ಅಪ್ರೂವಲ್ UPTO ₹4,00,000*

ಎಲ್ಲಾ LG ಉತ್ಪನ್ನಗಳ ಮೇಲೆ ಭರವಸೆಯ ಉಡುಗೊರೆಗಳು: BT SPEAKER, INDUCTION COOKER, STEAM IRON, KETTLE, DRY IRON

24 HOURS EXPRESS DELIVERY*

Product	Discount	Special Price	MRP
SAMSUNG 70 4K ULTRA SMART ಎಲ್ಇಡಿ 70TU7200	55% ಕಡಿತ	₹99,000	₹2,19,900
SONY 65 4K ULTRA HD SMART OLED GOOGLE TV XR-65A80K	48% ಕಡಿತ	₹1,81,990	₹3,49,900
LG 55 4K SMART ಓಎಲ್ಇಡಿ OLED55G1PTZ	56% ಕಡಿತ	₹1,19,900	₹2,69,990
Haier 43 4K SMART ಎಲ್ಇಡಿ	41% ಕಡಿತ	₹31,000	₹52,490

NVY NEVER BEFORE PRICES: 43 4K SMART LED ₹18,990 (MRP ₹39,990, ಇ.ಎಮ್.ಐ ₹1,583, 52%); 55 4K SMART LED ₹29,990 (MRP ₹65,990, ಇ.ಎಮ್.ಐ ₹2,499, 54%); 65 4K SMART LED ₹49,990 (MRP ₹99,990, ಇ.ಎಮ್.ಐ ₹4,166, 50%)

OPPO RENO 10 – 8/256 GB: OFFER PRICE ₹32,999*, ಇ.ಎಮ್.ಐ ₹2,750, UPTO 10% CASH BACK*. ಉಚಿತ: ₹3,999 ಮೌಲ್ಯದ SMART WATCH+ 70% OFF ON DAMAGE PROTECTION

Redmi 13C 8/256: OFFER PRICE ₹14,499*, ಇ.ಎಮ್.ಐ ₹1,208. 70% DISCOUNT ON DAMAGE PROTECTION

SAMSUNG Galaxy S24 Ultra — S24 SERISES PRE BOOKING OPEN. HDFC Cash Back ₹5,000*, Effective Price: ₹1,19,999* (512GB), EMI: ₹13,333. For Pre Booking customers only - Get 1 year Accidental & Liquid Damage Protection @ Just ₹199

vivo Y56 (5G*): ₹14,990* ONWARDS, ಇ.ಎಮ್.ಐ ₹1,249. ಉಚಿತ: ₹1,599 ಮೌಲ್ಯದ POWER BANK+ 70% OFF ON DAMAGE PROTECTION

iPhone 15\15 PRO\ PRO MAX: STARTS FROM ₹72,990*, ಇ.ಎಮ್.ಐ ₹3,042. 70% OFF ON DAMAGE PROTECTION

hp 15s: N4500, 8GB,512GB SSD, 15.6" HD, WIN 11, MSO 2021. ಇ.ಎಮ್.ಐ ₹2,499, OFFER PRICE ₹29,990*. ಉಚಿತ: ಸ್ಮಾರ್ಟ್ ವಾಚ್ WORTH ₹3999 + PAY RS. 2499 AND GET GOODIES WORTH ₹10999

Lenovo SLIM 3i: RYZEN 7 5700U, 16GB, 512GB SSD, 15.6 FHD, INT AMD RADEON GFX, WIN 11 MSO 21. ಇ.ಎಮ್.ಐ ₹4,166, OFFER PRICE ₹49,990*. ಉಚಿತ: METAL BT ಸ್ಮಾರ್ಟ್ ವಾಚ್ WORTH ₹7999 + PAY ₹1499 AND GET 1 YRS ADDITIONAL WARRANTY + DAMAGE PROTECTION WORTH ₹7999

HOT DEAL: i5 10TH GEN, 8GB/1TB+ 256 GB SSD, 14 FHD, WIN10. ಇ.ಎಮ್.ಐ ₹3,083, OFFER PRICE ₹36,990*. ಉಚಿತ: METAL BT ಸ್ಮಾರ್ಟ್ ವಾಚ್ WORTH ₹7999

DELL INS 3520: 12TH GEN I5-1235U, 16GB DDR4, 512GB SSD/15.6 FHD, WIN 11 MSO 2021. ಇ.ಎಮ್.ಐ ₹4,499, OFFER PRICE ₹53,990*. ಉಚಿತ: METAL BT ಸ್ಮಾರ್ಟ್ ವಾಚ್ WORTH ₹7999+ PAY ₹2499 AND GET GOODIES WORTH ₹12199

hp VICTUS- GAMING: RYZEN 5 5600H, 16GB, 512GB SSD, RADEON RX6500M 4GB GFX, 15.6 FHD, WIN 11. ಇ.ಎಮ್.ಐ ₹4,749, OFFER PRICE ₹56,990*. ಉಚಿತ: METAL BT ಸ್ಮಾರ್ಟ್ ವಾಚ್ WORTH ₹7999 + PAY ₹1499 AND GET 1 YRS ADDITIONAL WARRANTY + DAMAGE PROTECTION WORTH ₹7999

Product	Discount	Special Price	MRP
LG 694 LTRS SIDE BY SIDE GC-B257SLUV	32% ಕಡಿತ	₹90,390	₹1,32,199
SAMSUNG 523L Top Mount Freezer with Twin Cooling Plus™ RT54B6558SL	30% ಕಡಿತ	₹56,890	₹80,990
Haier 276 ಲೀ ಫ್ರಾಸ್ಟ್ ಫ್ರೀ	42% ಕಡಿತ	₹33,490	₹58,200
BOSCH 9 ಕೆಜಿ ಫ್ರಂಟ್ ಲೋಡಿಂಗ್	32% ಕಡಿತ	₹50,240	₹73,490
LG 10.5/7KG FRONT LOAD WASHER-DRYER, AI DIRECT DRIVE™, BLACK VCM FHD1057STB	26% ಕಡಿತ	₹70,640	₹94,990

LG SOUND BAR OK55: 500W for Karaoke Playback, Recording, Echo Effects and Vocal Effects, DJ Effects, DJ Wheel, DJ Loop, Party Thruster, DJ Pad and Multi-Color Lighting, Bass Blast, XBOOM App (Black). EMI ₹1,833, OFFER PRICE ₹21,990*

SONY 5.1 Ch. SOUND BAR HT-S20: 5.1ch Home Theatre System, 400W, Bluetooth & USB Connectivity, HDMI & Optical connectivity. EMI ₹1,221, OFFER PRICE ₹14,650*

DAIKIN 1.0 TON 5 STAR INVERTER: 32% ಕಡಿತ, SPECIAL PRICE: ₹37,990, MRP: ₹55,500

Godrej 23ಲೀ ಕನ್ವೆಕ್ಷನ್ ಮೈಕ್ರೋವೇವ್: 40% ಕಡಿತ, SPECIAL PRICE: ₹9,000, MRP: ₹15,100

Greenchef MIXER GRINDERS:TULIP 3 JAR 600W + PRESSURE COOKERS:3 LTR NAMO: 58% ಕಡಿತ, OFFER PRICE: ₹2,024, COMBI MRP: ₹4,798

Greenchef GAS STOVES:BLISS 2 BURNER + NON STICK COOKWARE:2PC DUET PACK: 58% ಕಡಿತ, OFFER PRICE: ₹2,024, COMBI MRP: ₹4,798

Greenchef CLASSIC SS 2IN1 COMBO (3LTRS + 2LTRS PAN) KETTLES:S S KETTLE 1.5LTRS - SWIFT: 58% ಕಡಿತ, OFFER PRICE: ₹2,024, COMBI MRP: ₹4,798

NIRLEP NON STICK COOKWARE: ASPA 4 Pc SET + VL IRON BOX:ECO DRY IRON: 58% ಕಡಿತ, OFFER PRICE: ₹2,024, COMBI MRP: ₹4,798

LG, SAMSUNG, SONY, Panasonic, Haier, NVY, IFB, Godrej, LLOYD, Whirlpool, BOSCH, Electrolux, PHILIPS, hp, acer, DELL, Lenovo, ASUS, vivo, OPPO, ONEPLUS, mi, iPhone, JBL, BLUE STAR, HAFELE, Symphony, HAVELLS, USHA, DAIKIN, GENERAL, Prestige, VOLTAS, VOLTAS beko, Butterfly, Preethi, VIJAYALAKSHMI, ULTRA, EUREKA FORBES, pureit, Livpure, FABER, KENSTAR, Pigeon, BAJAJ, Crompton, MAHARAJA, V-GUARD, ZEBRONICS, KAFF, OZONE

GIRIAS THE CONSUMER DURABLE PEOPLE Since 1971

ಶಿರಾ 9035023188 | ಬಾಗೇಪಲ್ಲಿ 9036289562 | ಚನ್ನಪಟ್ಟಣ 9035023186 | ಹಿರಿಯೂರು 9035023185 | ತಿಪಟೂರು 90362 89548 | ಉತ್ತರಹಳ್ಳಿ 90362 89563 | ಹೊಸಕೋಟೆ 90362 89545 | ಕುಣಿಗಲ್ 90362 89546 | ಮಾದನಾಯಕನಹಳ್ಳಿ 90362 89550 | ಗೌರಿಬಿದನೂರು 90354 99244 | ಮಾಗಡಿ ರಸ್ತೆ 90362 89557 | ಹೆಸರಘಟ್ಟ ಮುಖ್ಯ ರಸ್ತೆ 90362 89551 | ಕೆಆರ್ ಪುರಂ 9019929881 | ಅಂದ್ರಹಳ್ಳಿ 95918 35070 | ಚಿಕ್ಕಬಾಣಾವರ 95918 32080 | ಅತ್ತಿಬೆಲೆ 99009 77747 | ಹೆಬ್ಬಗೋಡಿ 90350 50023 | ಭಾರತೀಯ ಮಾಲ್ 70900 00981 | ಮಂತ್ರಿ ಮಾಲ್ 95919 25353 | ಕೆಂಗೇರಿ 99009 77712 | ಸಹಕಾರನಗರ 90199 29882 | ದೊಡ್ಡಬಳ್ಳಾಪುರ 77602 12888 | ಎಲೆಕ್ಟ್ರಾನಿಕ್ ಸಿಟಿ 9591103536 | ಕನಕಪುರ ಮುಖ್ಯ ರಸ್ತೆ 90082 20739 | ಜಾಲಹಳ್ಳಿ ಕ್ರಾಸ್ 9008220804 | ಆರ್.ಟಿ.ನಗರ 91080 65665 | ಬನಶಂಕರಿ 9035499199 | ಬನ್ನೇರುಘಟ್ಟ ರೋಡ್ 9035422500 | ಬಸವನಗರ 90354 99244 | ನಾಗಭಾವಿ 9035499311 | ಹೊಸೂರು ರಸ್ತೆ 9035499022 | ವೈಟ್‌ಫೀಲ್ಡ್ ಲೇಔಟ್ 90354 99177 | ಇಂದಿರಾನಗರ 9035499255 | ಜಯನಗರ 90354 99077 | ಜೆ.ಪಿ.ನಗರ 9606922698 | ಕತ್ರಿಗುಪ್ಪೆ 9035499288 | ಕೋರಮಂಗಲ 90354 11200 | ಮಲ್ಲೇಶ್ವರಂ 90354 99233 | ಮತ್ತಿಕೆರೆ 90352 22377 | ಮಾರತ್‌ಹಳ್ಳಿ 90354 99011 | ಮೈಸೂರು ರಸ್ತೆ 90354 99188 | ನಾಗರಭಾವಿ 90354 99191 | ನೆಲಮಂಗಲ 9606922798 | ರಾಜಾಜಿನಗರ 9035499144 | ಆರ್.ಆರ್.ನಗರ 9035499088 | ವಿಜಯನಗರ 96069 22795 | ಯಲಹಂಕ 9036001315 | ರಾಮನಗರ 9606922697 | ತುಮಕೂರು 90082 18009 | ಕೋಲಾರ 90082 20791 | ಚಿಕ್ಕಬಳ್ಳಾಪುರ 9591561669 | ಚಿಂತಾಮಣಿ 90362 89552 | ಹೊಸೂರು 04344 243633.

STORE LOCATOR

ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಹಣಕಾಸು ಯೋಜನೆಗಳು ಫೈನಾನ್ಸ್ ಕಂಪನಿಯ ಸ್ವಂತ ವಿವೇಚನೆಗೆ ಒಳಪಟ್ಟಿರುತ್ತವೆ. ಆಯ್ದ ಬ್ರಾಂಡ್‌ಗಳ ಮತ್ತು ಮಾಡೆಲ್‌ಗಳ ಮೇಲೆ 20% ತನಕ ಕ್ಯಾಶ್ ಬ್ಯಾಕ್ ಮತ್ತು 1 ಇಎಂಐ ತನಕ ರಿಯಾಯಿತಿ. ...

151 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು. SHOP ONLINE @ www.giriasindia.com

"like" us on facebook HTTPS://WWW.FACEBOOK.COM/GIRIAS.INDIA

WE SUPPORT ROUND TABLE INDIA LADIES CIRCLE INDIA

ಬಹು ಮಾಧ್ಯಮ ಪ್ರಜಾವಾಣಿ www.prajavani.net LIVE

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಸೆಲೆಬ್ರಿಟಿ ಸಂಜೆ 5 ಗಂಟೆಗೆ

ಧೀರಜ್ ಗೌಡ

ಅಂಡರ್ 19 ಕರ್ನಾಟಕ ತಂಡದ ನಾಯಕ

'ಬೌಲಿಂಗ್ ನೋಡಿ ಕೊಹ್ಲಿ ಬೆನ್ನು ತಟ್ಟಿದ್ದರು'

ಯುಟ್ಯೂಬ್‌ನಲ್ಲಿ:
ನ್ಯೂಸ್ ಎಕ್ಸ್‌ಪ್ರೆಸ್: ರಾತ್ರಿ 7ಕ್ಕೆ

ಪಾಡ್‌ಕಾಸ್ಟ್
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8 ಕ್ಕೆ

24 ಆಸ್ತಿಗಳ ಗುರುತು: ಗುತ್ತಿಗೆ ಪಡೆಯಲು ರಾಜ್ಯ ಸರ್ಕಾರ ಪ್ರಸ್ತಾವ

'ಶತ್ರು ಆಸ್ತಿ' ಹರಾಜಿಗೆ ಸಿದ್ಧತೆ

• ನವೀನ್ ಮಿನೇಜಸ್

ಬೆಂಗಳೂರು: 'ಕಸ್ಟೋಡಿಯನ್ ಆಫ್ ಎನಿಮಿ ಪ್ರಾಪರ್ಟಿ ಫಾರ್ ಇಂಡಿಯಾ (ಸಿಇಪಿಐ)'ದ ವತಿಯಿಂದ ರಾಜ್ಯದಲ್ಲಿರುವ 'ಶತ್ರುಗಳ ಆಸ್ತಿ' ಎಂದು ಗುರುತಿಸಲಾದ 24 ಆಸ್ತಿಗಳ ಸಮೀಕ್ಷೆ ನಡೆಸಲಾಗಿದ್ದು, ಇವುಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ಅವಕಾಶ ರಾಜ್ಯಕ್ಕೆ ಲಭ್ಯವಾಗಲಿದೆ.

ಪಾಕಿಸ್ತಾನ ಹಾಗೂ ಚೀನಾದ ನಾಗರಿಕತ್ವ ಪಡೆದುಕೊಂಡ ಜನರು ರಾಜ್ಯದಲ್ಲಿ ಆಸ್ತಿಗಳನ್ನು ಬಿಟ್ಟುಹೋಗಿದ್ದಾರೆ. ಈ ಆಸ್ತಿಗಳನ್ನು ರಾಜ್ಯ ಸರ್ಕಾರ ಸಾರ್ವಜನಿಕ ಬಳಕೆಗಾಗಿ ಗುತ್ತಿಗೆ ಆಧಾರದಲ್ಲಿ ತನ್ನ ಹಿಡಿತಕ್ಕೆ ಪಡೆಯುವ ಮೊದಲ ಅವಕಾಶ ಸಿಗಲಿದೆ.

'ಸಿಇಪಿಐನ ಮುಂಬೈ ಪ್ರಾದೇಶಿಕ ಕಚೇರಿಯ ಪ್ರತಿನಿಧಿಗಳು ನಗರಕ್ಕೆ ಬಂದಿದ್ದರು. 'ಶತ್ರು ಆಸ್ತಿ'ಗಳ ಸಮೀಕ್ಷೆಯನ್ನು ಅವರು ನಡೆಸಿದ್ದಾರೆ. ಈ ಆಸ್ತಿಗಳನ್ನು ದೀರ್ಘಕಾಲಕ್ಕೆ ಗುತ್ತಿಗೆ ಆಧಾರದಲ್ಲಿ ಪಡೆದುಕೊಳ್ಳಲು ರಾಜ್ಯ ಸರ್ಕಾರ ಪ್ರಸ್ತಾವ ಸಲ್ಲಿಸಲಿದೆ ಎಂದು ಮೌಖಿಕವಾಗಿ ಅವರಿಗೆ ತಿಳಿಸಲಾಗಿದೆ. ಸರ್ಕಾರ ಈ ಆಸ್ತಿಗಳನ್ನು ಗುತ್ತಿಗೆಗೆ ಪಡೆಯದಿದ್ದರೆ ಅವುಗಳನ್ನು ಹರಾಜು ಮಾಡುವ ಯೋಜನೆಯನ್ನು ಸಿಇಪಿಐ ಹೊಂದಿದೆ' ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಕೆ.ಎ. ದಯಾನಂದ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'24 ಶತ್ರುಗಳ ಆಸ್ತಿಗಳು' ಬೆಂಗಳೂರು ನಗರ, ಕಲಬುರಗಿ, ವಿಜಯಪುರ ಮತ್ತು ಉಡುಪಿ ಜಿಲ್ಲೆಗಳಲ್ಲಿದ್ದು, ಖಾಸಗಿ ವ್ಯಕ್ತಿಗಳು ಒತ್ತುವರಿ ಮಾಡಿಕೊಂಡಿದ್ದಾರೆ. 'ನಾವು ಆಸ್ತಿಗಳನ್ನು ಪರಿಶೀಲನೆ ಮಾಡಿದ್ದು, ಪೆಟ್ರೋಲ್ ಬಂಕ್, ಹೋಟೆಲ್ ಸೇರಿದಂತೆ ಇತರೆ ವ್ಯವಹಾರಗಳನ್ನು ಈ ಆಸ್ತಿಗಳಲ್ಲಿ ನಡೆಸಲಾಗುತ್ತಿದೆ' ಎಂದು ದಯಾನಂದ್ ಹೇಳಿದರು.

'ಎನಿಮಿ ಪ್ರಾಪರ್ಟಿ ಕಾಯ್ದೆ 1968' ಪ್ರಕಾರ ಸಿಇಪಿಐ ಈ ಆಸ್ತಿಗಳನ್ನು 'ಶತ್ರುಗಳ ಆಸ್ತಿ' ಎಂದು ಘೋಷಿಸಿದೆ. ದೇಶದಲ್ಲಿ ಇಂತಹ 9,406 ಆಸ್ತಿಗಳಿದ್ದು, ಕರ್ನಾಟಕದಲ್ಲಿ 24 ಆಸ್ತಿಗಳಿವೆ.

ಬೆಂಗಳೂರಿನಲ್ಲಿ 'ಶತ್ರುಗಳ ಆಸ್ತಿ' ಎಂದು ಗುರುತಿಸಲಾದ ಆರು ಆಸ್ತಿಗಳಿದ್ದು, 1.5 ಲಕ್ಷ ಚದರ ಅಡಿ ವಿಸ್ತೀರ್ಣದ ಈ ಭೂಮಿ ಸುಮಾರು ₹500 ಕೋಟಿ ಬೆಲೆಬಾಳುತ್ತದೆ. ಪ್ರತಿಷ್ಠಿತ ರಾಜಭವನ ರಸ್ತೆ, ವಿಠ್ಠಲಮಲ್ಯ ರಸ್ತೆ, ವಿಕ್ಟೋರಿಯ ರಸ್ತೆಗಳಲ್ಲಿ ಈ ಆಸ್ತಿಗಳಿವೆ. ನಾಲ್ವರು ವ್ಯಕ್ತಿಗಳು ಈ ಆಸ್ತಿಗಳ ಮಾಲೀಕತ್ವವನ್ನು ಹೊಂದಿದ್ದು, ಮೂವರು ಪಾಕಿಸ್ತಾನಕ್ಕೆ ಹೋಗಿದ್ದಾರೆ. ಮತ್ತೊಬ್ಬರು ಚೀನಾದ ನಾಗರಿಕತ್ವ ಪಡೆದುಕೊಂಡಿದ್ದಾರೆ.

ದಾಖಲೆಗಳ ಪ್ರಕಾರ, ರಾಜಭವನ ರಸ್ತೆಯಲ್ಲಿ 1.23 ಲಕ್ಷ ಚದರ ಅಡಿಯಷ್ಟಿರುವ 'ಶತ್ರು ಆಸ್ತಿ' ಒಬ್ಬ ವ್ಯಕ್ತಿಯದ್ದಾಗಿದೆ. ಉಳಿದ ಆಸ್ತಿಗಳು 950 ಚದರ ಅಡಿಯಿಂದ 7,897 ಚದರ ಅಡಿ ವಿಸ್ತೀರ್ಣದಲ್ಲಿವೆ.

ಕೇಂದ್ರ ಗೃಹ ಸಚಿವಾಲಯ ಹೊಸ ಮಾರ್ಗಸೂಚಿಯನ್ನು ಹೊರತಂದಿದ್ದು, ಜಿಲ್ಲಾಧಿಕಾರಿಗಳು 'ಶತ್ರು ಆಸ್ತಿ' ಒತ್ತುವರಿಯನ್ನು ತೆರವುಗೊಳಿಸುವ ಅಧಿಕಾರವನ್ನು ಹೊಂದಿದ್ದಾರೆ. ನಂತರ ಈ ಆಸ್ತಿಗಳನ್ನು ಹರಾಜು ಮಾಡಬಹುದು. ದೇಶದಲ್ಲಿರುವ 'ಶತ್ರು ಆಸ್ತಿಗಳಲ್ಲಿನ' ಒತ್ತುವರಿ ತೆರವುಗೊಳಿಸಿ, ಅವುಗಳನ್ನು ಮಾರಾಟ ಮಾಡುವ ಪ್ರಕ್ರಿಯೆಯನ್ನು ಕೇಂದ್ರ ಸರ್ಕಾರ ಕಳೆದ ವರ್ಷ ಮಾರ್ಚ್‌ನಿಂದ ಆರಂಭಿಸಿದೆ.

ಬೆಂಗಳೂರಿನಲ್ಲಿರುವ 'ಶತ್ರು ಆಸ್ತಿ'

- ಜೊಸೆಫೈನ್ ರಾಜಮ್ಮ ಕ್ಸೇವಿಯರ್, ವಿಕ್ಟೋರಿಯ ರಸ್ತೆ (ಎರಡು ಆಸ್ತಿಗಳು)
- ಸೈಯದ್ ಅಬ್ದುಲ್ ಶುಕ್ಕುರ್, 2ನೇ ಮುಖ್ಯರಸ್ತೆ, ಕಲಾಸಿಪಾಳ್ಯ
- ಮರಿಯಮ್ ಮಿರ್ಜಾ ಖಲೀಲಿ, ರಾಜಭವನ ರಸ್ತೆ (ಎರಡು ಆಸ್ತಿಗಳು)
- ಮೈಕೆಲ್ ಥಾಮ್, ವಿಠ್ಠಲ ಮಲ್ಯ ರಸ್ತೆ

ಸುದ್ದಿ 2 ನಿಮಿಷ

ಅನ್ಯಾಯದ ದೂರು: ಸಿ.ಎಂಗೆ ಪತ್ರ

ಬೆಂಗಳೂರು: 'ವಿವಿಧ ಇಲಾಖೆಗಳಿಗೆ ಹುದ್ದೆಗಳ ನೇಮಕಾತಿ ಗಳಲ್ಲಿ ಕಲ್ಯಾಣ ಕರ್ನಾಟಕ ಭಾಗದ ಅಭ್ಯರ್ಥಿಗಳಿಗೆ ಮೀಸಲಾತಿ ಕಲ್ಪಿಸುವ ಉದ್ದೇಶದಿಂದ ರಾಜ್ಯ ಸರ್ಕಾರ 2023ರ ಫೆ. 1ರಂದು ಹೊರಡಿಸಿರುವ ಸುತ್ತೋಲೆಯಿಂದ ಕಲ್ಯಾಣ ಕರ್ನಾಟಕ ಭಾಗ ಹೊರತುಪಡಿಸಿದ 24 ಜಿಲ್ಲೆಗಳ ಅಭ್ಯರ್ಥಿಗಳಿಗೆ ಅನ್ಯಾಯವಾಗುತ್ತಿರುವ ದೂರುಗಳು ಬಂದಿವೆ. ಈ ಬಗ್ಗೆ ಪರಿಶೀಲಿಸಿ, ಸೂಕ್ತ ಕ್ರಮ ತೆಗೆದುಕೊಳ್ಳಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್‌.ಕೆ. ಪಾಟೀಲ ಮನವಿ ಮಾಡಿದ್ದಾರೆ.

ಈ ಬಗ್ಗೆ ಮುಖ್ಯಮಂತ್ರಿಗೆ ಪತ್ರ ಬರೆದಿರುವ ಅವರು, 'ಸರ್ಕಾರ ಹೊರಡಿಸಿರುವ ಸುತ್ತೋಲೆಯು ರಾಜ್ಯಪಾಲರು ಹೊರಡಿಸಿರುವ ಗೆಜೆಟ್ ಕಾಯ್ದೆ ಮತ್ತು ನಿಯಮಗಳಿಗೆ ಹಾಗೂ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ಜಾರಿ ಆಗುತ್ತಿರುವುದು ಗಮನಕ್ಕೆ ಬಂದಿದೆ' ಎಂದು ಅವರು ಹೇಳಿದ್ದಾರೆ.

'ರಾಜ್ಯಪಾಲರ ಆದೇಶ ಮತ್ತು ಕೆಎಟಿ ನೀಡಿರುವ ತೀರ್ಪುಗಳ ಬಗ್ಗೆ ಅಧ್ಯಯನ ಮಾಡಲು ಸಮಿತಿ ರಚಿಸಬೇಕು. ಈ ಸಮಿತಿಯ ವರದಿ ಆಧರಿಸಿ, ಮೀಸಲಾತಿ ನಿಯಮ ಅನುಷ್ಠಾನಗೊಳಿಸುವಂತೆ ನೇಮಕಾತಿ ಪ್ರಾಧಿಕಾರಗಳಿಗೆ ಸೂಚಿಸುವಂತೆ ಅಭ್ಯರ್ಥಿಗಳು ಮನವಿ ಮಾಡಿದ್ದಾರೆ' ಎಂದೂ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಅಂಗನವಾಡಿ ಕೇಂದ್ರಕ್ಕೆ ಭೂದಾನ

ಕಿಕ್ಕೇರಿ (ಮಂಡ್ಯ): ಕೆ.ಆರ್. ಪೇಟೆ ತಾಲ್ಲೂಕಿನ ಕಿಕ್ಕೇರಿ ಹೋಬಳಿಯ ಅಂಕನಹಳ್ಳಿಯ ರೈತ ಪಟೇಲ್ ಕೃಷ್ಣೇಗೌಡರ ಪುತ್ರ ಕುಮಾರ್ ಅವರು ಗ್ರಾಮದ ಅಂಗನವಾಡಿಗೆಂದು ₹4 ಲಕ್ಷ ಮೌಲ್ಯದ 30X75 ಅಳತೆಯ ನಿವೇಶನವನ್ನು ದಾನ ಮಾಡಿದ್ದಾರೆ.

'ನಮ್ಮೂರಿನ ಮಕ್ಕಳಿಗೆ ಉತ್ತಮ ಭವಿಷ್ಯ ರೂಪಿಸಬೇಕು' ಎಂದು ಕೋರಿ ಅವರು ಭೂದಾನ ಪತ್ರವನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿ ತರುಣ್ ಕುಮಾರ್‌ಗೆ ನೀಡಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಾಯಕ ನಿರ್ದೇಶಕ ಅರುಣ್‌ಕುಮಾರ್, ಐಕನಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯ ಎ.ಎಸ್. ಮಂಜೇಗೌಡ, ಮುಖಂಡರಾದ ಪ್ರವೀಣ, ಎ.ಬಿ. ರವಿ, ಶೇಖರ್ ಭಾಗವಹಿಸಿದ್ದರು.

ಕಾಂಗ್ರೆಸ್ ಗೈರು: ತರೂರ್ ಸಮರ್ಥನೆ

ಕೋಲ್ಕತ್ತ (ಪಿಟಿಐ): ಬಾಲರಾಮ ಮೂರ್ತಿಯ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಭಾಗವಹಿಸಲು ನಿರಾಕರಿಸಿದ ಕಾಂಗ್ರೆಸ್ ನಾಯಕತ್ವದ ತೀರ್ಮಾನವನ್ನು ಕಾಂಗ್ರೆಸ್ ಸಂಸದ ಶಶಿ ತರೂರ್ ಸಮರ್ಥಿಸಿಕೊಂಡಿದ್ದಾರೆ. 'ಕಾರ್ಯಕ್ರಮದಲ್ಲಿ ಪ್ರತಿಪಕ್ಷಗಳ ನಾಯಕರು ಭಾಗಿಯಾಗಿದ್ದರೆ, ಅವರನ್ನು ಪ್ರಧಾನಿ ನರೇಂದ್ರ ಮೋದಿ ಅವರ ಈ ಕಾರ್ಯಕ್ರಮದಲ್ಲಿ ಪೋಷಕ ಪಾತ್ರಗಳ ರೀತಿ ಮೂಲೆಗುಂಪು ಮಾಡಲಾಗುತ್ತಿತ್ತು. ಅಂಥ ಪೋಷಕ ಪಾತ್ರ ನಿರ್ವಹಿಸುವ ಅನಿವಾರ್ಯ ಕಾಂಗ್ರೆಸ್‌ಗೆ ಇಲ್ಲ' ಎಂದರು

ರಾಷ್ಟ್ರೀಯ ಲಿಂಗಾಯತ ಪ್ರಥಮ ಮಹಿಳಾ ಸಮಾವೇಶದಲ್ಲಿ ಮಾತೆ ಗಂಗಾದೇವಿ ಅಭಿಮತ

'ಹೆಣ್ಣನ್ನು ತುಳಿದವರೇ ಆದರ್ಶ ಆಗದಿರಲಿ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಶತಮಾನಗಳಿಂದ ಧರ್ಮದ ಹೆಸರಿನಲ್ಲಿ ನಿಮ್ಮನ್ನು ತುಳಿದವರೇ ಆದರ್ಶ ಆಗಬಾರದು. ಅನಾದಿ ಕಾಲದ ಆಚರಣೆಗಳನ್ನೆಲ್ಲ ಧಿಕ್ಕರಿಸಿ, ಹೆಣ್ಣುಮಕ್ಕಳಿಗೆ ಸಮಾನತೆ ನೀಡಿದ ಬಸವಾದಿ ಶರಣರನ್ನು ಮಾತ್ರ ಅನುಸರಿಸಿ' ಎಂದು ಕೂಡಲಸಂಗಮದ ಬಸವ ಧರ್ಮ ಪೀಠಾಧ್ಯಕ್ಷೆ ಮಾತೆ ಗಂಗಾದೇವಿ ಕರೆ ನೀಡಿದರು.

ಜಾಗತಿಕ ಲಿಂಗಾಯತ ಮಹಸಭೆಯಿಂದ ನಗರದಲ್ಲಿ ಶನಿವಾರ ಆರಂಭಗೊಂಡ ಎರಡು ದಿನಗಳ ರಾಷ್ಟ್ರೀಯ ಲಿಂಗಾಯತ ಪ್ರಥಮ ಮಹಿಳಾ ಸಮಾವೇಶದ ಉದ್ಘಾಟನಾ ಸಮಾರಂಭದ ಸರ್ವಾಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

'ಶರಣರ ಹೊರತುಪಡಿಸಿ ಜಗತ್ತಿನ ಯಾವ ಧರ್ಮದವರೂ ಮಹಿಳೆಗೆ ಸ್ವಾತಂತ್ರ್ಯ, ಸಮಾನತೆ ನೀಡಿಲ್ಲ. ಹೆಣ್ಣುಮಕ್ಕಳಿಗೆ ಧರ್ಮಾಚರಣೆ ಅವಕಾಶವೇ ಇರದ ಸಂದರ್ಭದಲ್ಲಿ ಬಸವಣ್ಣ, ಅಕ್ಕ ಮಹಾದೇವಿ ಜಗತ್ತೇ ಅಚ್ಚರಿ ಆಗುವಂತೆ ಹೆಜ್ಜೆ ಇಟ್ಟರು. ಆದರೆ, ಲಿಂಗಾಯತ ಹೆಣ್ಣುಮಕ್ಕಳು ಈಗಲೂ ಗುಡಿ– ಗುಂಡಾರ ಸುತ್ತುತ್ತಾರೆ. ಕಸಕ್ಕಿಂತ ಕೀಳಾಗಿ ಕಂಡವರನ್ನೇ ದೇವರೆಂದು ಪೂಜಿಸುತ್ತಾರೆ' ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಡಂಬಳ-ಗದಗ ತೋಂಟದಾರ್ಯ ಸಂಸ್ಥಾನ ಮಠದ ತೋಂಟದ ಸಿದ್ಧರಾಮ ಸ್ವಾಮೀಜಿ ಮಾತನಾಡಿ, 'ಬಸವಣ್ಣ ನಮ್ಮ ಧರ್ಮಗುರು. ವಚನಗಳೇ ನಮ್ಮ ಸಂವಿಧಾನ. ಲಿಂಗವೇ ನಮ್ಮ ದೇವರು. ಉಳಿದೆಲ್ಲ ಮೌಢ್ಯಗಳಿಂದ ಹೊರಬರಬೇಕು. ನಿಜಾಚರಣೆ ಮಾಡಿದ ಶರಣರ ತತ್ವಗಳನ್ನು ಮಾತ್ರ ಪಾಲಿಸಬೇಕು' ಎಂದರು.

ಬೀದರ್ ಲಿಂಗಾಯತ ಮಹಾಮಠದ ಪೀಠಾಧೀಶರಾದ ಅನ್ನಪೂರ್ಣ ತಾಯಿ ಮಾತನಾಡಿ, 'ಜನವರಿ 22ರಂದು ನಡೆದ ಮಂದಿರ ಉದ್ಘಾಟನೆಯಿಂದ ದೂರವಿರುವ ಗಟ್ಟಿತನ ತೋರಿದವರೇ ನಿಜವಾದ ಲಿಂಗಾಯತರು. ಬಹಳಷ್ಟು ಮಹಿಳೆಯರು ಅಂದು ತಮ್ಮ ಮಕ್ಕಳಿಗೆ ಕೇಸರಿ ವೇಷ ತೊಡಿಸಿ, ಕೈಯಲ್ಲಿ ಬಿಲ್ಲು-ಬಾಣ ಕೊಟ್ಟು ಫೋಟೊ ತೆಗೆಸಿಕೊಂಡರು. ಇಂಥ ಮೌಢ್ಯದಿಂದ ಹೊರಬನ್ನಿ' ಎಂದರು.

ಅತ್ತಿವೇರಿಯ ಬಸವೇಶ್ವರಿ ತಾಯಿ, ಶಿಕಾರಿಪುರದ ಶರಣಾಂಬಿಕಾ ತಾಯಿ, ನಿವೃತ್ತ ನ್ಯಾಯಮೂರ್ತಿ ಅರಳಿ ನಾಗರಾಜ, ಮಹಾಸಭೆಯ ಮಹಾಪ್ರಧಾನ ಕಾರ್ಯದರ್ಶಿ ಶಿವಾನಂದ ಜಾಮದಾರ, ಜಿಲ್ಲಾ ಘಟಕದ ಅಧ್ಯಕ್ಷ ಬಸವರಾಜ ರೊಟ್ಟಿ ಮಾತನಾಡಿದರು.

ಇದಕ್ಕೂ ಮುನ್ನ ಸಮ್ಮೇಳನದ ಸರ್ವಾಧ್ಯಕ್ಷೆ ಮಾತೆ ಗಂಗಾದೇವಿ ಅವರನ್ನು ಮೆರವಣಿಗೆ ಮಾಡಲಾಯಿತು. ಶರಣ– ಶರಣೆಯರ ವೇಷ ಧರಿಸಿದ ಮಹಿಳೆಯರು ಕುದುರೆ ಸವಾರಿ ಮಾಡಿದರು. ಸ್ಮರಣ ಸಂಚಿಕೆ, ಗ್ರಂಥಗಳನ್ನು ಬಿಡುಗಡೆ ಮಾಡಲಾಯಿತು.

ಜಾಗತಿಕ ಲಿಂಗಾಯತ ಮಹಾಸಭೆ ವತಿಯಿಂದ ಬೆಳಗಾವಿಯಲ್ಲಿ ಶನಿವಾರ ಆಯೋಜಿಸಿದ ರಾಷ್ಟ್ರೀಯ ಲಿಂಗಾಯತ ಪ್ರಥಮ ಮಹಿಳಾ ಸಮಾವೇಶದಲ್ಲಿ ವಿವಿಧ ಮಠಾಧೀಶರು ಹಾಗೂ ಅಪಾರ ಸಂಖ್ಯೆಯ ಮಹಿಳಾ ಪ್ರತಿನಿಧಿಗಳು ಪಾಲ್ಗೊಂಡರು

'ಮಂದಿರ ಉದ್ಘಾಟನೆಗೆ ಹೋದವರಿಗೆ ಧಿಕ್ಕಾರ'

'ಶರಣ ತತ್ವಗಳನ್ನು ಹೇಳುವ, ಮೀಸಲಾತಿಗಾಗಿ ಹೋರಾಡುವ ಕೆಲವು ಸ್ವಾಮೀಜಿಗಳೇ ಜನವರಿ 22ರಂದು ಮಂದಿರ ಉದ್ಘಾಟನೆಗೆ ಹೋಗಿ ನಿಂತರು. ಅವರಿಗೆ ನಾನು ಧಿಕ್ಕಾರ ಹೇಳುತ್ತೇನೆ' ಎಂದು ಅಥಣಿ ಮೋಟಗಿ ಮಠದ ಪ್ರಭುಚನ್ನಬಸವ ಸ್ವಾಮೀಜಿ ಗುಡುಗಿದರು.

'ಸನಾತನ ಧರ್ಮದಲ್ಲಿ ಹುಟ್ಟಿದ್ದು ನನ್ನ ತಪ್ಪಲ್ಲ; ಈ ಧರ್ಮದಲ್ಲಿ ಹೆಣ್ಣಾಗಿ ಹುಟ್ಟಿದ್ದು ನನ್ನ ತಪ್ಪು' ಎಂದು ಸೀತಾಮಾತೆಯೇ ಹೇಳಿದ್ದಾಳೆ. ಧರ್ಮದೊಳಗಿನ ಸೂಕ್ಷ್ಮತೆಯನ್ನು ಮಹಿಳೆಯರು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ಸ್ವತಂತ್ರವಾದ ಲಿಂಗಾಯತ ಧರ್ಮವನ್ನೇ ಪಾಲಿಸಬೇಕು' ಎಂದರು.

ಆಡಿ– ಹಂದಿಗುಂದದ ಸಿದ್ಧೇಶ್ವರ ಮಠಾಧೀಶ ಶಿವಾನಂದ ಸ್ವಾಮೀಜಿ ಮಾತನಾಡಿ, 'ಕಾವಿ ಹಾಕಿಕೊಂಡವರು ಸಮಾಜ ಒಡೆಯುವ ಕೆಲಸ ಮಾಡಬಾರದು. ಲಿಂಗಾಯತ ಧರ್ಮ ಪಾಲನೆ ಸಾಧ್ಯವಾಗದಿದ್ದರೆ ಕಾವಿ ಬಿಚ್ಚಿ, ಪೀಠವನ್ನು ತ್ಯಾಗ ಮಾಡಬೇಕು' ಎಂದರು.

'ಕೊಂಡಿ ಮಂಚಣ್ಣ ಎಂಬಾತ ಬಸವಣ್ಣನವರಿಗೆ ನಿಂದಕನಾಗಿದ್ದ. ಈಗ ವೀರಶೈವ– ಲಿಂಗಾಯತ ಒಂದೇ ಎಂದು ಯಾರು ಹೇಳುತ್ತಾರೋ ಅವರೇ ಕೊಂಡಿ ಮಂಚಣ್ಣ' ಎಂದರು.

> **ಬ್ರಿಟಿಷರು ಹಾಕಿದ ಕಪ್ಪ ಕಾಣಿಕೆ ವಿರುದ್ಧ ಚನ್ನಮ್ಮ ಖಡ್ಗ ಹಿಡಿದು ನಿಂತಳು. ಅದೇ ರೀತಿ ಲಿಂಗಾಯತ ಮಹಿಳೆಯರು ಕೂಡ ಕಂದಾಚಾರದ ವಿರುದ್ಧ ನಿಲ್ಲಬೇಕು.**
> **ಮಾತೆ ಗಂಗಾದೇವಿ**
> ಪೀಠಾಧ್ಯಕ್ಷೆ, ಕೂಡಲಸಂಗಮದ ಬಸವ ಧರ್ಮ

ಪೋಕಳೆಗೆ ಬಿ.ಎಚ್.ಶ್ರೀಧರ ಪ್ರಶಸ್ತಿ

ಚಂದ್ರಕಾಂತ ಪೋಕಳೆ

ಶಿರಸಿ: ರಾಜ್ಯ ಮಟ್ಟದ ಬಿ.ಎಚ್. ಶ್ರೀಧರ ಸಾಹಿತ್ಯ ಪ್ರಶಸ್ತಿಗೆ ಸಾಹಿತಿ ಚಂದ್ರಕಾಂತ ಪೋಕಳೆ ಆಯ್ಕೆಯಾಗಿದ್ದಾರೆ. ಪ್ರಶಸ್ತಿ ₹10 ಸಾವಿರ ನಗದು, ನೆನಪಿನ ಕಾಣಿಕೆ ಹಾಗೂ ಪ್ರಶಸ್ತಿ ಪತ್ರ ಒಳಗೊಂಡಿದೆ.

ಉತ್ತರ ಕನ್ನಡದ ಮಂಚಿಕೇರಿಯ ಪೋಕಳೆ ಬೆಳಗಾವಿಯಲ್ಲಿ ನೆಲೆಸಿ ದ್ದಾರೆ. ಬಿ.ಎಚ್.ಶ್ರೀಧರ ಅವರ ಜನ್ಮದಿನದ ಪ್ರಯುಕ್ತ ಏ. 24ರಂದು ಶಿರಸಿಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಶಸ್ತಿ ಆಯ್ಕೆ ಸಮಿತಿಯ ಕಾರ್ಯಾಧ್ಯಕ್ಷ ರಾಜಶೇಖರ ಹೆಬ್ಬಾರ ತಿಳಿಸಿದ್ದಾರೆ.

ಧ್ವಜಸ್ತಂಭ ತೆರವಿಗೆ ನೋಟಿಸ್, ಬಿಗುವಿನ ಸ್ಥಿತಿ

ಮಂಡ್ಯ: ತಾಲ್ಲೂಕಿನ ಕೆರಗೋಡು ಗ್ರಾಮದಲ್ಲಿರುವ 108 ಅಡಿ ಎತ್ತರದ ಆಂಜನೇಯ– ಅರ್ಜುನ ಧ್ವಜಸ್ತಂಭ ತೆರವಿಗೆ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ನೋಟಿಸ್ ನೀಡಿರುವುದನ್ನು ಖಂಡಿಸಿ ಅಕ್ಕಪಕ್ಕದ 12 ಹಳ್ಳಿಗಳ ಜನ ಶನಿವಾರ ಪ್ರತಿಭಟನೆ ನಡೆಸಿದರು.

ಗ್ರಾಮದಲ್ಲಿ ಅಂಗಡಿ ಮುಂಗಟ್ಟು ಮುಚ್ಚಿದ್ದು ಬಿಗುವಿನ ಪರಿಸ್ಥಿತಿ ನಿರ್ಮಾಣವಾಗಿದೆ, ಪೊಲೀಸರು ಸ್ಥಳದಲ್ಲೇ ಮೊಕ್ಕಾಂ ಹೂಡಿದ್ದಾರೆ. ಗ್ರಾಮದ ಮಾರಮ್ಮ ದೇವಾಲಯ ಬೀದಿಯ ರಂಗಮಂದಿರದ ಬಳಿ ಸುತ್ತಮುತ್ತಲಿನ ಹಳ್ಳಿಗಳ (12 ದೊಡ್ಡಿ) ಜನ ಸ್ವಂತ ಹಣ ಹಾಕಿ ಜನವರಿ 19ರಂದು ಧ್ವಜ ಸ್ತಂಭ ಸ್ಥಾಪಿಸಿ ಆಂಜನೇಯ–ಅರ್ಜುನರ ಭಾವಚಿತ್ರವುಳ್ಳ ಬೃಹತ್ ಬಾವುಟ ಹಾರಿಸಿದ್ದರು. ಶನಿವಾರ ಬೆಳಿಗ್ಗೆ ಗ್ರಾಮಕ್ಕೆ ತೆರಳಿದ ತಾಲ್ಲೂ ಪಂಚಾಯತ್ ಇ.ಒ ವೀಣಾ ಅವರು ನೋಟಿಸ್ ನೀಡಿ ಸ್ತಂಭದ ತೆರವಿಗೆ ಸೂಚಿಸಿದರು. 'ಕಾಂಗ್ರೆಸ್ ಶಾಸಕ ಗಣಿಗ ರವಿಕುಮಾರ್ ಸೂಚನೆ ಮೇರೆಗೆ ಸ್ತಂಭ ತೆರವುಗೊಳಿಸಲಾಗುತ್ತಿದೆ' ಎಂಬ ವದಂತಿ ಹಿನ್ನೆಲೆಯಲ್ಲಿ ಸುತ್ತಮುತ್ತಲಿನ ಸಾವಿರಾರು ಜನ ರಂಗಮಂದಿರದ ಬಳಿ ಸೇರಿದರು. ಗ್ರಾಮವನ್ನು ಬಂದ್ ಮಾಡಿ ತಾಲ್ಲೂಕು ಆಡಳಿತದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಶಾಸಕರ ವಿರುದ್ಧ ಘೋಷಣೆ ಕೂಗಿದರು. ಪ್ರತಿಭಟನೆಯಲ್ಲಿ ಬಿಜೆಪಿ, ಜೆಡಿಎಸ್ ಮುಖಂಡರೂ ಇದ್ದರು.

ಗಾಳಿಪಟ ಉತ್ಸವ... ಹುಬ್ಬಳ್ಳಿಯ ಆಕ್ಸ್‌ಫರ್ಡ್ ಕಾಲೇಜು ಪಕ್ಕದ ಮೈದಾನದಲ್ಲಿ ಕ್ಷಮತಾ ಸೇವಾ ಸಂಸ್ಥೆಯು ಶನಿವಾರ ಆಯೋಜಿಸಿದ್ದ ಅಂತರರಾಷ್ಟ್ರೀಯ ಗಾಳಿಪಟ ಉತ್ಸವದಲ್ಲಿ ಹುಲಿಯ ಗಾಳಿಪಟ ಕಂಡಿದ್ದು ಹೀಗೆ -ಪ್ರಜಾವಾಣಿ ಚಿತ್ರ/ ಗೋವಿಂದರಾಜ ಜವಳಿ

ನಿಗಮ– ಮಂಡಳಿ: ಕಾರ್ಯಕರ್ತರ ನೇಮಕ ಪಟ್ಟಿ ಶೀಘ್ರ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಗಮ ಮಂಡಳಿ ಅಧ್ಯಕ್ಷರನ್ನಾಗಿ 34 ಶಾಸಕರನ್ನು ನೇಮಕಮಾಡಿದ ಪಟ್ಟಿ ಪ್ರಕಟವಾಗುತ್ತಿದ್ದಂತೆಯೇ, ಕಾರ್ಯಕರ್ತರನ್ನೂ ನೇಮಕ ಮಾಡುವಂತೆ ಕಾಂಗ್ರೆಸ್‌ನಲ್ಲಿ ಒತ್ತಡ ಹೆಚ್ಚಿದೆ.

39 ಕಾರ್ಯಕರ್ತರನ್ನು ನಿಗಮ ಮಂಡಳಿಗಳಿಗೆ ನೇಮಿಸಿದ ಪಟ್ಟಿ ಕೂಡ ಕೆಲವು ದಿನಗಳಿಂದ ಕಾಂಗ್ರೆಸ್ ವಲಯದಲ್ಲಿ ಓಡಾಡುತ್ತಿದೆ. ಆದರೆ, ತಮ್ಮ ಅರಿವಿಗೆ ಇಲ್ಲದೆ ಕೆಲವು ಹೆಸರುಗಳು ಆ ಪಟ್ಟಿಯಲ್ಲಿ ಸೇರ್ಪಡೆ ಆಗಿರುವುದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು. ಹೀಗಾಗಿ ಪಟ್ಟಿಯನ್ನು ತಡೆಹಿಡಿಯಲಾಗಿತ್ತು.

ಇದೀಗ, ಆ ಪಟ್ಟಿಯಲ್ಲಿರುವ ಏಳು ಹೆಸರುಗಳನ್ನು ಕೈಬಿಟ್ಟು, ಹೊಸತಾಗಿ ಎರಡು ಹೆಸರು ಸೇರಿಸಿ ಪರಿಷ್ಕರಿಸಿ ಸಿದ್ಧಪಡಿಸಲಾಗಿದೆ. ಕಾರ್ಯಕರ್ತರನ್ನು ನೇಮಿಸಿದ ಅಧಿಕೃತ ಪಟ್ಟಿ ಯಾವಾಗ ಬೇಕಾದರೂ ಬಿಡುಗಡೆ ಆಗಬಹುದು ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

ಈಗಾಗಲೇ ಸಿದ್ಧವಾಗಿ ಸೋರಿಕೆಯಾಗಿದ್ದ 39 ಮಂದಿಯ ಪಟ್ಟಿಯಲ್ಲಿ ಕಲಬುರಗಿಯ ಕೆಲವು ಹೆಸರುಗಳು ಕಾಣಿಸಿಕೊಂಡಿದ್ದವು. ಈ ಹೆಸರುಗಳ ಸೇರ್ಪಡೆ ಕಾಂಗ್ರೆಸ್‌ನಲ್ಲಿ ಚರ್ಚೆಗೆ ಕಾರಣವಾಗಿತ್ತು. ಆ ಹೆಸರುಗಳನ್ನು ಕೈಬಿಡಲಾಗಿದೆ ಎಂದು ಗೊತ್ತಾಗಿದೆ.

'ಖರ್ಗೆ ಅಭಿಮಾನಿಗಳ ಸಂಘ'ದ ಅಧ್ಯಕ್ಷ ನರೇಂದ್ರ ಅವರ ಹೆಸರು ಸಚಿವ ಪ್ರಿಯಾಂಕ್ ಖರ್ಗೆ ಅವರ ಪ್ರಭಾವದಿಂದ ಪಟ್ಟಿಯಲ್ಲಿ ಸೇರ್ಪಡೆಯಾಗಿತ್ತು ಎಂದು ಹೇಳಲಾಗಿದೆ. ನರೇಂದ್ರ, ಐಶ್ವರ್ಯಾ ಮಹದೇವ್, ರಮೇಶ್ ಬಾಬು ಸೇರಿ 7 ಮಂದಿಯನ್ನು ಕೈಬಿಟ್ಟು ಹೊಸ ಪಟ್ಟಿ ತಯಾರಿಸಲಾಗಿದೆ. 32 ಕಾರ್ಯಕರ್ತರ ಪಟ್ಟಿಗೆ ಹೊಸದಾಗಿ ಇಬ್ಬರ ಹೆಸರು ಸೇರಿಸಲಾಗಿದ್ದು, 34 ಕಾರ್ಯಕರ್ತರಿಗೆ ನಿಗಮ, ಮಂಡಳಿ ಹಂಚಿಕೆಗೆ ಮಾಡಲು ತೀರ್ಮಾನಿಸಲಾಗಿದೆ ಎಂದೂ ಹೇಳಲಾಗಿದೆ.

ಮುನಿಸು ತಣಿಸಲು ಯತ್ನ

ನಿಗಮ ಮಂಡಳಿ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿದ್ದ ಕೆಲವು ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರು, ಪಟ್ಟಿಯಲ್ಲಿ ತಮ್ಮ ಹೆಸರಿಲ್ಲದ ಕಾರಣಕ್ಕೆ ಆಕ್ರೋಶಗೊಂಡಿದ್ದಾರೆ. ಪಟ್ಟಿಯಲ್ಲಿ ಹೆಸರಿರುವ ಕೆಲವು ಶಾಸಕರು ತಾವು ಕೇಳಿದ ನಿಗಮ ಮಂಡಳಿ ಸಿಗದ ಕಾರಣಕ್ಕೆ ಅತೃಪ್ತಿ ಹೊರಹಾಕಿದ್ದಾರೆ. ಕಾರ್ಯಕರ್ತರಿಗೆ ನಿಗಮ ಮಂಡಳಿ ಅಧ್ಯಕ್ಷಗಿರಿಯ ಪಟ್ಟಿ ಬಿಡುಗಡೆ ವಿಳಂಬ ಆಗಿರುವುದು ಕೂಡ ಕೆಲವರ ಅಸಮಾಧಾನಕ್ಕೆ ಕಾರಣವಾಗಿದೆ. ಸ್ಥಾನ ಸಿಗದೆ ಮುನಿಸಿಕೊಂಡಿರುವ ಶಾಸಕರು ಹಾಗೂ ತಮಗೆ ಬಯಸಿದ ಹುದ್ದೆ ಸಿಗದಿರುವುದಕ್ಕೆ ಅತೃಪ್ತಿ ಹೊರ ಹಾಕಿರುವ ಶಾಸಕರನ್ನು ಒಲೈಸುವ ಕೆಲಸವನ್ನು ಕಾಂಗ್ರೆಸ್ ನಾಯಕರು ಮಾಡುತ್ತಿದ್ದಾರೆ.

'ಎಲ್ಲರ ಅಭಿಪ್ರಾಯ ಪಡೆದೇ ನೇಮಕ'

ಬೆಂಗಳೂರು: 'ಎಲ್ಲರ ಅಭಿಪ್ರಾಯ ಸಂಗ್ರಹಿಸಿ, ಸುದೀರ್ಘ ಚರ್ಚೆ ಬಳಿಕವೇ ನಿಗಮ, ಮಂಡಳಿಗಳಿಗೆ ನೇಮಕ ಮಾಡಲಾಗಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಶನಿವಾರ ಮಾತನಾಡಿದ ಅವರು, 'ಇಂತಹವರಿಗೆ ಸ್ಥಾನ ನೀಡಬೇಕು ಎಂದು ಕೆಲವರು ಪಟ್ಟಿ ಕೊಟ್ಟಿದ್ದಾರೆ. ಅದನ್ನು ಬಹಿರಂಗಪಡಿಸಲು ಸಾಧ್ಯವಿಲ್ಲ' ಎಂದರು. ಕೆಲವರು ಅಸಮಾಧಾನ ವ್ಯಕ್ತಪಡಿಸಿರುವ ಬಗ್ಗೆ ಕೇಳಿದ ಪ್ರಶ್ನೆಗೆ, 'ಮಂತ್ರಿ ಆಗಬೇಕು, ದೊಡ್ಡ ನಿಗಮ–ಮಂಡಳಿ ಬೇಕೆಂಬ ಆಸೆ ಎಲ್ಲರಿಗೂ ಇರುತ್ತದೆ. ಎರಡು ವರ್ಷಗಳ ಅವಧಿ ಮುಗಿದ ನಂತರ ಬೇರೆಯವರಿಗೆ ಅವಕಾಶ ಮಾಡಿಕೊಡಬೇಕೆಂದು ಸೂಚನೆ ನೀಡಿದ್ದೇವೆ' ಎಂದರು.

ಫೆಬ್ರುವರಿ 2024

ಮಯೂರ
ಕೊಂಡು ಓದಿ, ಓದಿಸಿ

ಮಯೂರ ವಿಶೇಷ

ಬೇಂದ್ರೆ ಬರೆಯದ ಪುಸ್ತಕಗಳು
ದೇವು ಪತ್ತಾರ

ಕುಮಾರವ್ಯಾಸ ಭಾರತ ಅನುವಾದಕನ ಅನುಭವಗಳು
ಸಿ.ಎನ್. ರಾಮಚಂದ್ರನ್

ಲಲಿತ ಮಂಟಪ
ಕಲಾವಿದೆ, ಗುರು ನಿರ್ಮಲಾ ಪಣಿಕ್ಕರ್ ಸಂದರ್ಶನ

ಕಾವ್ಯಸಂಕ
ಇರಾನ್ ಕವಯಿತ್ರಿ, ರೋಜ಼ಾ ಜಮಾಲಿ
ಆರಿಫ್ ರಾಜಾ

ಪ್ರಬಂಧ
ತಡಿಯೆಂದರೆ ಬರಿ ತಡಿಯಲ್ಲವೊ
ಸಮುದ್ಯತಾ ವೆಂಕಟ್ರಾಮು

ಅಂಕಣಗಳು
ಕಾಡಿಗೆ ಕಣ್ಣು
ಕಲೀಮ್ ಉಲ್ಲಾ

ಪುರಾಣ ಕುತೂಹಲ
ಎಂ.ಎಸ್. ಶ್ರೀರಾಮ್

ಗೌರೀಶ ಕಾಯ್ಕಿಣಿ ಸಾಹಿತ್ಯ ಸಂಚಯ

ಕಥಾಮಾಲಿಕೆ
- ಆನಂದ್ ಋಗ್ವೇದಿ
- ಮಹಾಂತೇಶ ನವಲಕಲ್
- ಕರೀಗೌಡ ಬೀಚನಹಳ್ಳಿ
- ಅಲಕಾ ಕಟ್ಟೆಮನೆ
- ಎಚ್. ಆರ್. ರಮೇಶ
- ಉಷಾ ನರಸಿಂಹನ್
- ವಿ.ಚಂದ್ರಶೇಖರ ರಾವ್/ ಕನ್ನಡಕ್ಕೆ: ಸೃಜನ್
- ಮೋದೂರು ತೇಜ

ಮರುಕಳಿಕೆ
ಮದ್ರಾಸ್ ಕನಡಿಗನ ಕಾದಂಬರಿ ಪ್ರೇಮಾವತಿ
ಬಿ. ಜನಾರ್ದನ ಭಟ್

ಚಿತ್ತ ಕೆತ್ತಿದ ಚಿತ್ರ
ಕಿವಿಯ ಬಳಿಯೇ ದುಡಿ ಬಾರಿಸುವ 'ಚೋಮ'
ಫಾತಿಮಾ ರಲಿಯಾ

ಕಾವ್ಯಕುಸುಮ
- ಅಕ್ಷಯ ಕಾಂತಬೈಲು
- ಮಹಮೂದ್ ದರ್ವೀಶ್/ ಕೆ.ಫಣಿರಾಜ್
- ಕಾವ್ಯಾ ಕಡಮೆ
- ಸಂದೀಪ್ ಈಶಾನ್ಯ
- ವಿಕ್ರಮ ವಿಸಾಜಿ
- ಸದಾಶಿವ ಸೊರಟೂರು

₹15 editormy@mayura.co.in mayuraezine.com /mayuramonthly 080-45557333/264

ದೈವ ನರ್ತಕ ಸಾವು

ಮೂಲ್ಕಿ (ದಕ್ಷಿಣ ಕನ್ನಡ): ಹಳೆಯಂಗಡಿ ಸಮೀಪ ರಕ್ತೇಶ್ವರಿ ದೈವದ ಕೋಲದಲ್ಲಿ ದೈವ ನರ್ತನ ಮಾಡುತ್ತಿದ್ದಾಗಲೇ ಎದೆನೋವು ಕಾಣಿಸಿಕೊಂಡು ಮಂಗಳೂರಿನ ಪ್ರಸಿದ್ಧ ದೈವ ನರ್ತಕರೊಬ್ಬರು ಮೃತಪಟ್ಟಿದ್ದಾರೆ.

ಪದವಿನಂಗಡಿ ಗಂಧಕಾಡು ನಿವಾಸಿ ಅಶೋಕ್ ಬಂಗೇರ (47) ಮೃತರು. ಹಳೆಯಂಗಡಿ ಕೊಳುವೈಲು ರೆಂಜದಡಿ ಕುಟುಂಬಸ್ಥರ ದೈವಸ್ಥಾನದಲ್ಲಿ ಶುಕ್ರವಾರ ರಾತ್ರಿ ರಕ್ತೇಶ್ವರಿ ದೈವದ ಕೋಲ ಏರ್ಪಡಿಸಲಾಗಿತ್ತು. ಅಶೋಕ ಬಂಗೇರ ಅವರು ರಕ್ತೇಶ್ವರಿ ದೈವದ ವೇಷ, ತಲೆಪಟ್ಟ ಧರಿಸಿ ಸಜ್ಜಾಗಿದ್ದರು. ಗಗ್ಗರ ಸ್ವೀಕರಿಸುವ ಸಂಪ್ರದಾಯವೂ ನೆರವೇರಿತ್ತು. ಬಳಿಕ ದೈವದ ಗುಡಿಗೆ ಪ್ರದಕ್ಷಿಣೆ ಹಾಕಿ ದೈವ ನರ್ತನ ಆರಂಭಿಸಿದ ಕೆಲ ಹೊತ್ತಿನಲ್ಲಿ ಅವರಿಗೆ ಎದೆನೋವು ಕಾಣಿಸಿಕೊಂಡಿತ್ತು.

ಗಗ್ಗರವನ್ನು ಹಿಂದಕ್ಕೆ ಒಪ್ಪಿಸಿ, ವೇಷ ಕಳಚಿದ್ದರು. ತಕ್ಷಣವೇ ಅವರನ್ನು ಮಂಗಳೂರಿನ ಆಸ್ಪತ್ರೆಗೆ ಕರೆದೊಯ್ಯಲಾಯಿತು. ದಾರಿ ಮಧ್ಯೆಯೇ ಅವರು ಕೊನೆಯುಸಿರೆಳೆದಿದ್ದರು. ಕೋಲವನ್ನು ಅವರ ಬಂಧುವೊಬ್ಬರು ಪೂರ್ಣಗೊಳಿಸಿದ್ದರು ಎಂದು ಮೂಲಗಳು ತಿಳಿಸಿವೆ.

ಅಶೋಕ್ ಅವರು ಪದವಿನಂಗಡಿ ಕೊರಗಜ್ಜ ಕ್ಷೇತ್ರದ ದೈವಾರಾಧಕರಾಗಿದ್ದರು. ಜಿಲ್ಲೆಯಲ್ಲಿ ದೈವ ನರ್ತನಕ್ಕೆ ಹೆಸರುವಾಸಿಯಾಗಿದ್ದರು.

ಯತ್ನಾಳ ಕಾರ್ಖಾನೆಗೆ ₹ 1.5 ಕೋಟಿ ದಂಡ ವಿಧಿಸಿದ್ದ ಕೇಂದ್ರ ಸರ್ಕಾರ

'ಕಾರ್ಖಾನೆ ಮುಚ್ಚದಿದ್ದರೆ ಕ್ರಿಮಿನಲ್ ಪ್ರಕರಣ'

ಪ್ರಜಾವಾಣಿ ವಾರ್ತೆ

ಈಶ್ವರ ಖಂಡ್ರೆ

ಕಲಬುರಗಿ: 'ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಒಡೆತನದ ಚಿಂಚೋಳಿಯ ಸಿದ್ಧಸಿರಿ ಎಥೆನಾಲ್ ಹಾಗೂ ಪವರ್ ಘಟಕದಲ್ಲಿ ಪರವಾನಗಿ ಪಡೆಯದೇ ಲಕ್ಷಾಂತರ ಟನ್ ಕಬ್ಬು ನುರಿಸಲಾಗಿದೆ. ಬಾಯ್ಲರ್ ಅಳವಡಿಸಿದ್ದಾರೆ. ನಿಯಮಾವಳಿ ಪ್ರಕಾರ ನೋಟಿಸ್ ನೀಡಲಾಗಿದ್ದು, ಕಾರ್ಖಾನೆ ಬಂದ್ ಮಾಡಲೇಬೇಕು. ಇಲ್ಲದಿದ್ದರೆ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದು' ಎಂದು ಅರಣ್ಯ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಎಚ್ಚರಿಸಿದರು.

ಶನಿವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಘಟಕಕ್ಕೆ ಕೇಂದ್ರ ಪರಿಸರ ಸಚಿವಾಲಯ ಒಂದೂವರೆ ವರ್ಷದ ಹಿಂದೆ ₹1.5 ಕೋಟಿ ದಂಡ ವಿಧಿಸಿತ್ತು. ದಂಡ ಪಾವತಿಸಿದ ಬಳಿಕವೂ ಅಗತ್ಯ ಅನುಮತಿ ಪಡೆದಿರಲಿಲ್ಲ' ಎಂದರು.

'ಇದರಲ್ಲಿ ಯಾವುದೇ ರಾಜಕೀಯವಿಲ್ಲ. ಕಾಂಗ್ರೆಸ್ ಸರ್ಕಾರ ರಾಜಕೀಯ ಮಾಡುತ್ತಿದೆ ಎಂಬ ಯತ್ನಾಳ ಹೇಳಿಕೆಯೇ ಹಾಸ್ಯಾಸ್ಪದ. ಕೇಂದ್ರ ಪರಿಸರ ಸಚಿವಾಲಯ ದಂಡ ವಿಧಿಸಿರುವುದರ ಹಿಂದೆಯೂ ರಾಜಕೀಯ ಉದ್ದೇಶವಿತ್ತು ಎಂದು ಯತ್ನಾಳ ಹೇಳುತ್ತಾರೆಯೇ' ಎಂದು ಖಂಡ್ರೆ ಅವರು ಸರ್ಕಾರದ ಕ್ರಮವನ್ನು ಸಮರ್ಥಿಸಿಕೊಂಡರು.

'ಜಲ ಮತ್ತು ವಾಯು ಮಾಲಿನ್ಯ ಮಾಡುವ ಕಾರ್ಖಾನೆಗಳ ಬಗ್ಗೆ ವರದಿ ನೀಡುವಂತೆ ವಾರದ ಹಿಂದೆ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸೂಚಿಸಿದ್ದೆ. ಅದರಂತೆ ರಾಜ್ಯದ ವಿವಿಧ ಕಾರ್ಖಾನೆಗಳು ಕಾಯ್ದೆ ಉಲ್ಲಂಘಿಸಿದ್ದರಿಂದ ಕಾನೂನು ರೀತಿಯಲ್ಲಿ ನೋಟಿಸ್ ನೀಡಲಾಗಿದೆ. ಯತ್ನಾಳ ಅವರಿಗೆ ಸೇರಿದ ಕಾರ್ಖಾನೆಗಷ್ಟೇ ನೋಟಿಸ್ ಕೊಟ್ಟಿಲ್ಲ' ಎಂದು ಹೇಳಿದರು.

ಬೀದರ್: ಕಾರ್ಖಾನೆ ಬಂದ್‌ಗೆ ಆದೇಶ

ಬೀದರ್: ಜಿಲ್ಲೆಯ ಹುಮನಾಬಾದ್ ಸಮೀಪದ ಗಡವಂತಿ ಕೈಗಾರಿಕಾ ಪ್ರದೇಶದಲ್ಲಿ ಈಚೆಗೆ ವಿಷಾನಿಲ ಸೋರಿಕೆಯಿಂದ ಇಬ್ಬರು ಕಾರ್ಮಿಕರು ಮೃತಪಟ್ಟಿದ್ದ ಪ್ರಸನ್ನ ಪ್ರೀ ಪ್ರೊಸೆಸಿಂಗ್ ಲಿಮಿಟೆಡ್ ಕಾರ್ಖಾನೆಯನ್ನು ಬಂದ್ ಮಾಡುವಂತೆ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಆದೇಶಿಸಿದೆ.

'ನಿಯಮಗಳನ್ನು ಪಾಲಿಸದ ಕಾರಣ ಪ್ರಸನ್ನ ಪ್ರೀ ಪ್ರೊಸೆಸಿಂಗ್ ಲಿಮಿಟೆಡ್ ಕಾರ್ಖಾನೆ ಬಂದ್ ಮಾಡಿ ಜನವರಿ 25ರಂದು ಆದೇಶ ಹೊರಡಿಸಲಾಗಿದೆ. ವಾರದೊಳಗೆ ಕಾರ್ಖಾನೆಯ ತ್ಯಾಜ್ಯ ವಿಲೇವಾರಿ ಮಾಡಬೇಕು. ವಿದ್ಯುತ್ ಸಂಪರ್ಕ ಕಡಿತಗೊಳಿಸಬೇಕು. ತಕ್ಷಣವೇ ಕಾರ್ಖಾನೆ ಬಂದ್ ಮಾಡಿಸಬೇಕು ಎಂದು ಜಿಲ್ಲಾಧಿಕಾರಿಗೆ ಸೂಚನೆ ಕೊಡಲಾಗಿದೆ' ಎಂದು ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳು 'ಪ್ರಜಾವಾಣಿ'ಗೆ ಶನಿವಾರ ತಿಳಿಸಿದ್ದಾರೆ.

ಜನವರಿ 21ರ ರಾತ್ರಿ ಕಾರ್ಖಾನೆಯಲ್ಲಿ ವಿಷಾನಿಲ ಸೋರಿಕೆಯಾಗಿ ಹುಮನಾಬಾದ್ ತಾಲ್ಲೂಕಿನ ವಡ್ಡನಕೇರಾ ಗ್ರಾಮದ ಮೊಹಮ್ಮದ್ ಶಾಬಾದ್ (21) ಹಾಗೂ ಮಧ್ಯಪ್ರದೇಶದ ಇಂದ್ರಜೀತ್ (23) ಎಂಬ ಕಾರ್ಮಿಕರು ಮೃತಪಟ್ಟಿದ್ದರು. ಬಳಿಕ ತನಿಖೆಗೆ ಆದೇಶಿಸಲಾಗಿತ್ತು. ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ನಿಯಮಗಳನ್ನು ಪಾಲಿಸದಿರುವುದು ತನಿಖೆಯಿಂದ ಗೊತ್ತಾಗಿದ್ದರಿಂದ ಬಂದ್ ಮಾಡಲು ಆದೇಶಿಸಿದೆ. ಪ್ರಸನ್ನ ಪ್ರೊಸೆಸಿಂಗ್ ಕಾರ್ಖಾನೆಯಲ್ಲಿ ಕೈಗಾರಿಕೆಗಳ ತ್ಯಾಜ್ಯವನ್ನು ಸಂಸ್ಕರಿಸಲಾಗುತ್ತಿತ್ತು.

ಕಾನೂನು ಹೋರಾಟ: ಯತ್ನಾಳ

ವಿಜಯಪುರ: 'ರೈತರಿಗೆ ನೆರವಾಗಲು ಹಾಗೂ ಹಿಂದುಳಿದ ಪ್ರದೇಶದಲ್ಲಿ ಉದ್ಯೋಗ ಸೃಷ್ಟಿಸಲು ಕಾರ್ಖಾನೆ ಸ್ಥಾಪಿಸಲಾಗಿದೆ. ಆದರೆ, ಕಾಂಗ್ರೆಸ್ ಸರ್ಕಾರ ರಾಜಕೀಯವಾಗಿ ನನ್ನನ್ನು ಎದುರಿಸಲಾಗದೇ ಎಥೆನಾಲ್ ಕಾರ್ಖಾನೆಗೆ ನೋಟಿಸ್ ಕೊಡಿಸಿದೆ. ಈ ನೋಟಿಸ್, ಆದೇಶಗಳಿಗೆ ಹೆದರುವ ಜಾಯಮಾನ ನನ್ನದಲ್ಲ. ಕಾನೂನು ರೀತಿ ನ್ಯಾಯಾಲಯದಲ್ಲಿ ಇದನ್ನು ಪ್ರಶ್ನಿಸಲಾಗುವುದು' ಎಂದು ಚಿಂಚೋಳಿಯ ಸಿದ್ಧಸಿರಿ ಎಥೆನಾಲ್ ಹಾಗೂ ಪವರ್ ಘಟಕದ ಮಾಲೀಕರೂ ಆದ ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

'ರಾಜಕೀಯ ಒತ್ತಡಕ್ಕೆ ಮಣಿದು ನನ್ನ ಕಾರ್ಖಾನೆಯನ್ನು ಮುಚ್ಚಿಸುವುದರಿಂದ ಇವರಿಗೆ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಕಾರ್ಖಾನೆ ಮತ್ತೆ ತೆರೆಯುವುದು ನಿಶ್ಚಿತ. ಈ ನಿಟ್ಟಿನಲ್ಲಿ ಕಾನೂನು ಹೋರಾಟ ಮಾಡುತ್ತೇನೆ. ಕಾಂಗ್ರೆಸ್ ಆಡಳಿತದ ವಿರುದ್ಧ ಹೋರಾಟ ಮಾಡಲು ಶಕ್ತಿ ಇಮ್ಮಡಿಯಾಗಿದೆ' ಎಂದು ಹೇಳಿದ್ದಾರೆ.

ಕಾರ್ಖಾನೆ ಮುಚ್ಚಲು ಎ.ಸಿ ಸೂಚನೆ

ಚಿಂಚೋಳಿ: ಮಾಲಿನ್ಯ ನಿಯಂತ್ರಣ ಮಂಡಳಿ ನೋಟಿಸ್ ನೀಡಿದ ಬೆನ್ನಲ್ಲೇ ಸಿದ್ಧಸಿರಿ ಎಥೆನಾಲ್ ಹಾಗೂ ಪವರ್ ಘಟಕಕ್ಕೆ ಸೇಡಂ ಉಪವಿಭಾಗಾಧಿಕಾರಿ ಆಶಪ್ಪ ಪೂಜಾರಿ ನೇತೃತ್ವದ ಅಧಿಕಾರಿಗಳ ತಂಡ ಶನಿವಾರ ಭೇಟಿ ನೀಡಿ, ಕಾರ್ಖಾನೆ ಮುಚ್ಚುವಂತೆ ಸೂಚಿಸಿತು.

ಕಾರ್ಖಾನೆ ಆಡಳಿತ ಮಂಡಳಿ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಉಪವಿಭಾಗಾಧಿಕಾರಿ, ನಿಯಮಾವಳಿ ಪಾಲಿಸದಿರುವ ಬಗ್ಗೆ ಕಾರ್ಖಾನೆಯ ಅಧಿಕಾರಿಗಳನ್ನು ಪ್ರಶ್ನಿಸಿದರು.

ಕಬ್ಬು ನುರಿಸಿದ ವಿವರ ಹಾಗೂ ಕಬ್ಬಿನ ದಾಸ್ತಾನು ವಿವರ ಹಂಚಿಕೊಂಡ ಕಾರ್ಖಾನೆಯ ಅಧಿಕಾರಿಗಳು, 'ಸರ್ಕಾರದ ಆದೇಶಕ್ಕೆ ಬದ್ಧರಿದ್ದೇವೆ. ಕಾರ್ಖಾನೆ ಬಂದ್ ಮಾಡುತ್ತೇವೆ' ಎಂದು ತಿಳಿಸಿದರು.

ಬೆಂಗಳೂರಿನ ಅರಮನೆ ಮೈದಾನದಲ್ಲಿ ಶನಿವಾರ ನಡೆದ ಬಿಜೆಪಿ ಕಾರ್ಯಕಾರಿಣಿ ಸಭೆಯಲ್ಲಿ ಶ್ರೀರಾಮನ ವಿಗ್ರಹಕ್ಕೆ ಹಾಲಿನ ಅಭಿಷೇಕ ಮಾಡುವ ಮೂಲಕ ಉದ್ಘಾಟಿಸಲಾಯಿತು. (ಎಡದಿಂದ) ಜಗದೀಶ್ ಶೆಟ್ಟರ್, ಬಸವರಾಜ ಬೊಮ್ಮಾಯಿ, ಬಿ.ವೈ. ವಿಜಯೇಂದ್ರ, ಭೂಪೇಂದ್ರ ಯಾದವ್, ಪ್ರಲ್ಹಾದ ಜೋಶಿ, ಬಿ.ಎಸ್.ಯಡಿಯೂರಪ್ಪ, ಆರ್.ಅಶೋಕ, ಕೆ.ಎಸ್.ಈಶ್ವರಪ್ಪ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

'ವಿಶ್ರಾಂತಿಯ ಪ್ರಶ್ನೆಯೇ ಇಲ್ಲ'

'ನಾನೂ ಸೇರಿದಂತೆ ಪಕ್ಷದ ಯಾವುದೇ ಕಾರ್ಯಕರ್ತರು ಚುನಾವಣೆ ಮುಕ್ತಾಯ ಆಗುವವರೆಗೂ ವಿಶ್ರಾಂತಿ ಪಡೆಯುವ ಸಂದರ್ಭವೇ ಉದ್ಭವಿಸಬಾರದು' ಎಂದು ಬಿಜೆಪಿ ರಾಜ್ಯ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

'ಎದುರಾಳಿ ಅಭ್ಯರ್ಥಿಯನ್ನು ಹಗುರವಾಗಿ ಪರಿಗಣಿಸದೇ ಕೇಂದ್ರ ಸರ್ಕಾರದ ಸಾಧನೆಗಳನ್ನು ಜನರ ಮುಂದೆ ಪ್ರಸ್ತುತ ಪಡಿಸಬೇಕು' ಎಂದು ಸೂಚನೆ ನೀಡಿದರು.

ಅಯೋಧ್ಯೆ ರಾಮಮಂದಿರದಲ್ಲಿ ಬಾಲರಾಮನ ಪ್ರತಿಷ್ಠಾಪನೆ ವಿಷಯದಲ್ಲಿ ರಾಜ್ಯದ ಜನರು ಸಂತೋಷದಲ್ಲಿದ್ದರು. ಆದರೆ, ದುಷ್ಟ ಕಾಂಗ್ರೆಸ್ ಸರ್ಕಾರ ಹುಬ್ಬಳ್ಳಿಯ ಶ್ರೀಕಾಂತ ಪೂಜಾರಿ ಅವರನ್ನು ಬಂಧಿಸಿ, ಸೇಡು ತೀರಿಸುವ ಕೆಲಸ ಮಾಡಿತ್ತು' ಎಂದು ಅವರು ಕಿಡಿಕಾರಿದರು.

> ರಾಜ್ಯದ ಜನರ ದಿಕ್ಕು ತಪ್ಪಿಸಿ ಅಧಿಕಾರಕ್ಕೆ ಬಂದ ಕಾಂಗ್ರೆಸ್, ಕಲಹದಲ್ಲಿ ತೊಡಗಿದೆ. ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ
> **ಬಿ.ಎಸ್.ಯಡಿಯೂರಪ್ಪ**
> ಬಿಜೆಪಿ ಸಂಸದೀಯ ಮಂಡಳಿ ಸದಸ್ಯ

'ಆತ್ಮವಿಶ್ವಾಸ ಕಳೆದುಕೊಂಡ ಕಾಂಗ್ರೆಸ್': ಭೂಪೇಂದ್ರ • ಬಿಎಸ್‌ವೈ ಮೇಲುಗೈ ಪ್ರದರ್ಶಿಸಿದ ಸಭೆ

28 ಕ್ಷೇತ್ರ ಗೆಲ್ಲಲು ಬಿಜೆಪಿ ತಯಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ 28 ಲೋಕಸಭಾ ಕ್ಷೇತ್ರಗಳಲ್ಲೂ ಗೆಲ್ಲುವ ಗುರಿಯೊಂದಿಗೆ ಪಕ್ಷದ ಸಂಘಟನೆ, ರಾಜ್ಯ ಸರ್ಕಾರದ ವೈಫಲ್ಯ ಖಂಡಿಸಿ ನಾನಾ ರೀತಿಯ ಹೋರಾಟ, ಕೇಂದ್ರ ಸರ್ಕಾರದ ಸಾಧನೆ ಪರಿಚಯಿಸಲು ಮನೆ ಮನೆ ಪ್ರಚಾರ ಹಮ್ಮಿಕೊಳ್ಳಲು ಶನಿವಾರ ನಡೆದ ಬಿಜೆಪಿಯ ವಿಶೇಷ ರಾಜ್ಯ ಕಾರ್ಯಕಾರಿಣಿ ನಿರ್ಧಾರ ಕೈಗೊಂಡಿದೆ.

ಬಿ.ವೈ. ವಿಜಯೇಂದ್ರ ರಾಜ್ಯ ಘಟಕದ ಅಧ್ಯಕ್ಷರಾದ ಬಳಿಕ ನಡೆದ ಮೊದಲ ಕಾರ್ಯಕಾರಿಣಿ ಸಭೆ ಇದಾಗಿದೆ. ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿ ಸ್ಥಾನದಿಂದ ಇಳಿದ ಮೇಲೆ, ಪಕ್ಷ ಅಥವಾ ಸರ್ಕಾರದ ಕಾರ್ಯಕ್ರಮಗಳಲ್ಲಿ ಅವರಿಗೆ ಹೆಚ್ಚಿನ ಪ್ರಾಧಾನ್ಯ ಸಿಕ್ಕಿರಲಿಲ್ಲ. ಕಾರ್ಯಕಾರಿಣಿಯ ನಡಾವಳಿ, ಭಾವಚಿತ್ರಗಳು, ಫ್ಲೆಕ್ಸ್‌ಗಳಲ್ಲಿ ಪ್ರಧಾನಿ ನರೇಂದ್ರ ಮೋದಿ, ಪಕ್ಷದ ಅಧ್ಯಕ್ಷ ಜೆ.ಪಿ. ನಡ್ಡಾ, ಯಡಿಯೂರಪ್ಪ, ವಿಜಯೇಂದ್ರ ಹಾಗೂ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರೇ ರಾರಾಜಿಸುತ್ತಿದ್ದರು. ಬಿಜೆಪಿಯಲ್ಲಿ ಮತ್ತೆ ಯಡಿಯೂರಪ್ಪ ಮೇಲುಗೈ ಸಾಧಿಸಿರುವುದನ್ನು ಈ ಕಾರ್ಯಕಾರಿಣಿ ಬಿಂಬಿಸಿತು.

ಬಿಜೆಪಿಯ ತತ್ವ, ಸಿದ್ಧಾಂತವನ್ನು ಒಪ್ಪಿ ಬರುವ ನಾಯಕರನ್ನು ಸ್ವಾಗತಿಸುವ ಜತೆಗೆ ರಾಜ್ಯದಲ್ಲಿರುವ ಕಾಂಗ್ರೆಸ್ ಸರ್ಕಾರದ ವಿರುದ್ಧದ ಹೋರಾಟವನ್ನು ತೀವ್ರಗೊಳಿಸುವ ನಿರ್ಣಯವನ್ನೂ ಸಭೆ ಕೈಗೊಂಡಿತು.

'ಲೋಕಸಭೆ ಚುನಾವಣೆಯಲ್ಲಿ ಪ್ರಧಾನಿ ಮೋದಿಯವರ ಕೈ ಬಲಪಡಿಸುವುದೇ ನಮ್ಮ ಮೊದಲ ಆದ್ಯತೆ. ಅಭ್ಯರ್ಥಿ ಯಾರೆಂದು ವರಿಷ್ಠರು ತೀರ್ಮಾನಿಸುತ್ತಾರೆ. ಯಾರೇ ಅಭ್ಯರ್ಥಿಯಾಗಲಿ ಅವರನ್ನು ಗೆಲ್ಲಿಸುವುದಕ್ಕೆ ಎಲ್ಲರೂ ಶ್ರಮವಹಿಸಬೇಕು. ವೀಕ್ಷಕರು ಹಾಗೂ ಉಸ್ತುವಾರಿಗಳು ಕ್ಷೇತ್ರಕ್ಕೆ ಭೇಟಿ ನೀಡಿದಾಗ ಅಭ್ಯರ್ಥಿ ಯಾರಾಗಬೇಕು ಎಂಬುದರ ಅಭಿಪ್ರಾಯ ನೀಡಬಹುದು. 28 ಕ್ಷೇತ್ರಗಳನ್ನು ಗೆಲ್ಲುವುದೇ ನಮ್ಮ ಗುರಿಯಾಗಬೇಕು' ಎಂದು ನಾಯಕರು, ಪ್ರತಿನಿಧಿಗಳಿಗೆ ಸೂಚನೆ ನೀಡಿದರು.

ಕಾರ್ಯಕಾರಿಣಿ ಉದ್ಘಾಟಿಸಿದ ಕೇಂದ್ರ ಪರಿಸರ ಮತ್ತು ಹವಾಮಾನ ಬದಲಾವಣೆ ಖಾತೆ ಸಚಿವ ಭೂಪೇಂದ್ರ ಯಾದವ್, 'ಮಧ್ಯಪ್ರದೇಶ, ರಾಜಸ್ಥಾನ, ಛತ್ತೀಸಗಢದ ಜನರು ಕಾಂಗ್ರೆಸ್ ಸುಳ್ಳಿನ ಗ್ಯಾರಂಟಿಯನ್ನು ತಿರಸ್ಕರಿಸಿದ್ದರು. ಮೂರು ರಾಜ್ಯಗಳ ಚುನಾವಣೆ ಫಲಿತಾಂಶದ ಬಳಿಕ ಕಾಂಗ್ರೆಸ್ ಆತ್ಮವಿಶ್ವಾಸ ಕಳೆದುಕೊಂಡಿದೆ. ಪಶ್ಚಿಮ ಬಂಗಾಳ ಹಾಗೂ ಬಿಹಾರದಲ್ಲಿ ನಡೆಯುತ್ತಿರುವ ರಾಜಕೀಯ ಬೆಳವಣಿಗೆಯಿಂದ ಕಾಂಗ್ರೆಸ್ ಇನ್ನಷ್ಟು ಹತಾಶೆಗೆ ಒಳಗಾಗಿದೆ. ರಾಜ್ಯದಲ್ಲಿ ಬಿಜೆಪಿಗೆ ಉತ್ತಮ ವಾತಾವರಣವಿದ್ದು, 28 ಕ್ಷೇತ್ರಗಳಲ್ಲೂ ಬಿಜೆಪಿ ಗೆಲ್ಲಲಿದೆ' ಎಂದು ಹೇಳಿದರು.

'ಬಿಜೆಪಿಯದ್ದು 'ನೈಜ ಗ್ಯಾರಂಟಿ' ಎಂದು ದೇಶದ ಜನರು ಅರ್ಥೈಸಿಕೊಂಡಿದ್ದಾರೆ. ಕಾಂಗ್ರೆಸ್‌ನದ್ದು ಬರೀ ಸುಳ್ಳಿನ ಗ್ಯಾರಂಟಿ. ಜನರಿಗೆ ಸುಳ್ಳು ಹೇಳಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ದ್ರೋಹ ಎಸಗುತ್ತಿದೆ. ಕಾಂಗ್ರೆಸ್ ಸುಳ್ಳಿನ ಕಂತೆಯ ಬಗ್ಗೆ ಚುನಾವಣಾ ಪ್ರಚಾರದ ವೇಳೆ ಜನರಿಗೆ ನಮ್ಮ ಕಾರ್ಯಕರ್ತರು ಮನವರಿಕೆ ಮಾಡಿಕೊಡಬೇಕು' ಎಂದೂ ಕರೆ ನೀಡಿದರು.

ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ, 'ಕಳೆದ ಚುನಾವಣೆಯಲ್ಲಿ 26 ಸ್ಥಾನಗಳಲ್ಲಿ ಬಿಜೆಪಿ ಗೆದ್ದಿತ್ತು. ಈ ಬಾರಿ 28 ಕ್ಷೇತ್ರಗಳಲ್ಲಿ ಜಯ ಸಾಧಿಸಲಿದೆ. ಲೋಕಸಭೆ ಚುನಾವಣೆ ನಮಗೆ ಬಹುದೊಡ್ಡ ತಿರುವಿನ ಸತ್ವ ಪರೀಕ್ಷೆ' ಎಂದರು.

ಕಾಂಗ್ರೆಸ್ ಸರ್ಕಾರದ ಕುರಿತು ಜನರು ಬೇಸತ್ತಿದ್ದಾರೆ. ಈ ಸರ್ಕಾರಕ್ಕೆ ಬರಗಾಲದಲ್ಲಿ ರೈತರ ಕಣ್ಣೀರು ಒರೆಸಲು ಆಗಿಲ್ಲ. ಹೆಣ್ಣು ಮಕ್ಕಳ ಮಾನ ರಕ್ಷಿಸಲು ಸಾಧ್ಯವಾಗಿಲ್ಲ. ಸರ್ಕಾರದ ವಿರುದ್ಧ ಹೋರಾಟ ನಿರಂತರವಾಗಿ ನಡೆಯಲಿದೆ ಎಂದು ಹೇಳಿದರು.

ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ರಾಜೀವ್ ಚಂದ್ರಶೇಖರ್, ಭಗವಂತ ಖೂಬಾ, ರಾಜ್ಯ ಸಂಘಟನಾ ಪ್ರಧಾನ ಕಾರ್ಯದರ್ಶಿ ರಾಜೇಶ್ ಜಿ.ವಿ., ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ಶಾಸಕ ಬಸವರಾಜ ಬೊಮ್ಮಾಯಿ, ಸಿ.ಎನ್. ಅಶ್ವತ್ಥನಾರಾಯಣ್, ಮುಖಂಡರಾದ ಗೋವಿಂದ ಕಾರಜೋಳ, ಜಗದೀಶ ಶೆಟ್ಟರ್, ಕೆ.ಎಸ್. ಈಶ್ವರಪ್ಪ, ಸಿ.ಟಿ. ರವಿ, ಸಂಸದ ನಳಿನ್‌ಕುಮಾರ್ ಕಟೀಲ್, ವಿಧಾನ ಪರಿಷತ್ ವಿಪಕ್ಷ ನಾಯಕ ಕೋಟ ಶ್ರೀನಿವಾಸ ಪೂಜಾರಿ ಇದ್ದರು. ಇದೇ ವೇಳೆ ಲೇಖಕ ಪ್ರಕಾಶ್ ಶೇಷರಾಘವಾಚಾರ್ ಅವರು ಬರೆದ 'ಬದಲಾದ ಭಾರತ' ಕೃತಿಯನ್ನು ಬಿಡುಗಡೆ ಮಾಡಲಾಯಿತು.

ಪ್ರಭಾರಿಗಳಿಗೆ ಹೊಣೆ: ಲೋಕಸಭೆ ಚುನಾವಣೆಗೆ ಪಕ್ಷವನ್ನು ಸಜ್ಜುಗೊಳಿಸಲು ಕ್ಷೇತ್ರಕ್ಕೆ ಒಬ್ಬ ಪ್ರಭಾರಿ, ಸಂಚಾಲಕ ಮತ್ತು ಸಹ ಸಂಚಾಲಕರನ್ನು ನೇಮಕ ಮಾಡಲಾಗಿದೆ. ಮಾಜಿ ಸಚಿವರು, ಶಾಸಕರು, ಪಕ್ಷದ ವಿವಿಧ ಸ್ತರದ ಪದಾಧಿಕಾರಿಗಳಿಗೆ ಇದರ ಹೊಣೆ ವಹಿಸಲಾಗಿದೆ.

ಫೆ.25ರ ಒಳಗೆ 'ನಾರಿ ಶಕ್ತಿ ವಂದನಾ' ಕಾರ್ಯಕ್ರಮ

ಪ್ರಧಾನಿ ಮೋದಿ ಅವರಿಗೆ ಅಭಿನಂದನೆ, ಜಿಲ್ಲಾ ಕಾರ್ಯಕಾರಿಣಿ ಹಾಗೂ ನಾರಿ ಶಕ್ತಿ ವಂದನಾ ಕಾರ್ಯಕ್ರಮ ಆಯೋಜನೆ ಸೇರಿದಂತೆ ಹಲವು ಪ್ರಮುಖ ನಿರ್ಣಯಗಳನ್ನು ಸಭೆಯಲ್ಲಿ ಕೈಗೊಳ್ಳಲಾಗಿದೆ.

ಪತ್ರಿಕಾಗೋಷ್ಠಿಯಲ್ಲಿ ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಂಗೌಡ ಮಾತನಾಡಿ, 'ಕಾಂಗ್ರೆಸ್ ಸರ್ಕಾರವು ರೈತ ವಿರೋಧಿ, ದಲಿತ ವಿರೋಧಿ ನೀತಿ ಖಂಡಿಸಿ ನಿರ್ಣಯ ಅಂಗೀಕರಿಸಲಾಗಿದೆ. ದಲಿತ ಮತ್ತು ಶೋಷಿತ ವರ್ಗಕ್ಕೆ ಮೀಸಲಿಟ್ಟ ₹11 ಸಾವಿರ ಕೋಟಿಗೂ ಹೆಚ್ಚು ಹಣವನ್ನು ಗ್ಯಾರಂಟಿಗಾಗಿ ಉಪಯೋಗ ಮಾಡಿ ವಂಚಿಸಿದೆ. ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಲು ನಿರ್ಧರಿಸಿದ್ದೇವೆ' ಎಂದರು.

ರಾಜ್ಯ ಮುಖ್ಯ ವಕ್ತಾರ ಅಶ್ವತ್ಥನಾರಾಯಣ್ ಮಾತನಾಡಿ, ಫೆ.3ರಿಂದ 5ರವರೆಗೆ ಎಲ್ಲ ಜಿಲ್ಲೆಗಳಲ್ಲಿ ಜಿಲ್ಲಾ ಕಾರ್ಯಕಾರಿಣಿ ಸಭೆ ನಡೆಸಲು ನಿರ್ಧರಿಸಲಾಗಿದೆ. ಕೇಂದ್ರ ಸರ್ಕಾರದ ಫಲಾನುಭವಿಗಳಾದ ಮಹಿಳೆಯರು, ಸ್ವಸಹಾಯ ಸಂಘಗಳ ಸದಸ್ಯರ ಭೇಟಿ ಮಾಡುವುದು ಹಾಗೂ ಫಲಾನುಭವಿಗಳ ತಾಲ್ಲೂಕು, ಜಿಲ್ಲಾಮಟ್ಟದ ಸಮಾವೇಶ ನಡೆಸಲು ತೀರ್ಮಾನಿಸಲಾಗಿದೆ. ನಾನು ಸೇರಿದಂತೆ ಶಾಸಕಿ ಶಶಿಕಲಾ ಜೊಲ್ಲೆ, ಗೀತಾ ವಿವೇಕಾನಂದ, ಮಹಿಳಾ ಮೋರ್ಚಾದ ಅಧ್ಯಕ್ಷೆ ಮಂಜುಳಾ, ಭಾರತಿ ಮುಗ್ದುಂ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ. ಫೆ.25ರ ಒಳಗೆ 'ನಾರಿ ಶಕ್ತಿ ವಂದನಾ ಕಾರ್ಯಕ್ರಮ' ನಡೆಸಲು ತೀರ್ಮಾನಿಸಲಾಗಿದೆ ಎಂದು ಹೇಳಿದರು.

ಪ್ರತಿ ಬೂತ್‌ಮಟ್ಟದಲ್ಲಿ ಒಂದು ಅಥವಾ ಎರಡು ಕಡೆ ಗೋಡೆಬರಹ ಬರೆಯಲು ನಿಶ್ಚಯಿಸಲಾಗಿದೆ. ಇದನ್ನು ಆಂದೋಲನವಾಗಿ ನಡೆಸಲು ಸೂಚಿಸಲಾಗಿದೆ. ಈ ಆಂದೋಲನ ಯಶಸ್ಸು ಮಾಡಲು ತಂಡ ರಚಿಸಿದ್ದು, ನಂದೀಶ್ ರೆಡ್ಡಿ ಸಂಚಾಲಕರಾಗಿ ನೇಮಕಗೊಂಡಿದ್ದಾರೆ. ಶೈಲೇಂದ್ರ ಬೆಲ್ದಾಳೆ, ಮಹೇಂದ್ರ ಕವತಾಳ, ಹರಿಕೃಷ್ಣ ಸಹ ಸಂಚಾಲಕರಾಗಿದ್ದಾರೆ ಎಂದು ಹೇಳಿದರು.

ಅರುಣ್ ಸಿಂಗ್, ಎಸ್‌ಟಿಎಸ್, ಹೆಬ್ಬಾರ್, ಯತ್ನಾಳ ಗೈರು

ಬಿಜೆಪಿಯಲ್ಲಿ ಮಹತ್ವದ ರಾಜಕೀಯ ನಿರ್ಧಾರ ಕೈಗೊಳ್ಳುವ, ಮುಂದಿನ ರಾಜಕೀಯ ನಡೆಯನ್ನು ರೂಪಿಸಲು ನಡೆಸುವ ಕಾರ್ಯಕಾರಿಣಿ ಸಭೆಗೆ ವಿಶೇಷ ಮಹತ್ವ ಇದೆ.

ಕೇಂದ್ರದಿಂದ ನಿಯೋಜಿಸಲ್ಪಡುವ ನಾಯಕರ ಜತೆಗೆ, ರಾಜ್ಯ ಘಟಕದ ಉಸ್ತುವಾರಿಯಾಗಿದ್ದವರು ತಪ್ಪದೇ ಪಾಲ್ಗೊಳ್ಳುತ್ತಾರೆ. ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಭಾಗಿಯಾಗದೇ ಇರುವುದು ಪಕ್ಷದಲ್ಲೇ ಹಲವು ರೀತಿಯ ಚರ್ಚೆ ಹುಟ್ಟು ಹಾಕಿದೆ. ಪಕ್ಷದ ಚಟುವಟಿಕೆಯಿಂದ ಅಂತರ ಕಾಯ್ದುಕೊಂಡಿರುವ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ, ಎಸ್.ಟಿ.ಸೋಮಶೇಖರ್, ಶಿವರಾಂ ಹೆಬ್ಬಾರ್, ಮಾಜಿ ಸಚಿವ ವಿ.ಸೋಮಣ್ಣ ಕೂಡ ಸಭೆಗೆ ಗೈರಾಗಿದ್ದರು.

'ಇಂಡಿಯಾ'ಕ್ಕೆ ನೇತೃತ್ವವೇ ಇಲ್ಲ'

'ಇಂಡಿಯಾ ಒಕ್ಕೂಟದ ಮುಖಂಡರು ಒಂದು ಫೋಟೊಶೂಟ್ ಅಷ್ಟೇ ಮಾಡಿಕೊಂಡಿದ್ದರು. ಒಕ್ಕೂಟದ ಸಂಘಟನೆ ಅಷ್ಟಕ್ಕೇ ಸೀಮಿತವಾಗಿದೆ. ಆ ಒಕ್ಕೂಟದವರಿಗೆ ನೀತಿ, ನಿಯತ್ತು, ನೇತೃತ್ವ ಮೂರೂ ಇಲ್ಲ. ಆ ಒಕ್ಕೂಟ ನಿಧಾನವಾಗಿ ಮರೆಯಾಗಲಿದೆ' ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಹೇಳಿದರು.

'ಕಾಂಗ್ರೆಸ್ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಬಿಜೆಪಿ ಸಂಸದ ಬಿ.ವೈ. ರಾಘವೇಂದ್ರ ಅವರನ್ನು ಹೊಗಳಿದ್ದು ಬಿಜೆಪಿಗೆ ಆಶೀರ್ವಾದ ಇದ್ದಂತೆ' ಎಂದು ಹೇಳಿದರು.

ಸಿ.ಎಂ 'ಕೈ' ಬಲಕ್ಕೆ ಯತ್ನ

ಶೋಷಿತ ಸಮುದಾಯಗಳ ಶಕ್ತಿ ಪ್ರದರ್ಶನಕ್ಕೆ ಭಾರಿ ಸಿದ್ಧತೆ

• ಜಿ.ಬಿ.ನಾಗರಾಜ್

ಚಿತ್ರದುರ್ಗ: ಜಾತಿ ಗಣತಿ ವಿಚಾರದಲ್ಲಿ ನಡೆಯುತ್ತಿರುವ ಪರ–ವಿರೋಧ ಚರ್ಚೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ 'ಕೈ' ಬಲಪಡಿಸುವ ಉದ್ದೇಶದಿಂದ ಶೋಷಿತ ಸಮುದಾಯಗಳು ಶಕ್ತಿ ಪ್ರದರ್ಶನಕ್ಕೆ ಮುಂದಾಗಿವೆ. ಲೋಕಸಭಾ ಚುನಾವಣೆಯ ಹೊಸ್ತಿಲಲ್ಲಿ ನಡೆಯುತ್ತಿರುವ ಸಮಾವೇಶ ರಾಜಕೀಯ ಸಂದೇಶವನ್ನು ರವಾನಿಸುವ ಸಾಧ್ಯತೆ ಇದೆ.

ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ದಾವಣಗೆರೆಯಲ್ಲಿ ನಡೆಸಿದ ಮಹಾ ಅಧಿವೇಶನಕ್ಕೆ ಸಂವಾದಿಯಾಗಿ ಶೋಷಿತ ಸಮುದಾಯದ 30ಕ್ಕೂ ಅಧಿಕ ಜಾತಿಗಳು ಈ ಸಮಾವೇಶ ಆಯೋಜಿಸಿವೆ. ದಲಿತ, ಹಿಂದುಳಿದ, ಆದಿವಾಸಿ, ಅಲೆಮಾರಿ ಹಾಗೂ ಅಲ್ಪಸಂಖ್ಯಾತರು ಸಮಾವೇಶದ ಭಾಗವಾಗಿದ್ದಾರೆ. ಜಾತಿ ಗಣತಿ ವಿರೋಧಿಸುವ ಶಕ್ತಿಗಳಿಗೆ ಪ್ರತ್ಯುತ್ತರ ನೀಡಲು ಸಜ್ಜಾಗಿದ್ದಾರೆ.

'ಶೋಷಿತ ಸಮುದಾಯವನ್ನು ಜಾಗೃತಗೊಳಿಸುವ ಉದ್ದೇಶದಿಂದ ಸಂಘಟನೆ ಅಸ್ತಿತ್ವಕ್ಕೆ ಬಂದಿದೆ. ಸಮುದಾಯದ ಶಕ್ತಿಯನ್ನು ಹೆಚ್ಚಿಸಿಕೊಳ್ಳುವ ನಿಟ್ಟಿನಲ್ಲಿ ಸಮಾವೇಶ ಆಯೋಜಿಸಲಾಗಿದೆ. ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಧ್ಯಕ್ಷರಾಗಿದ್ದ ಎಚ್.ಕಾಂತರಾಜ ವರದಿ ಜಾರಿಗೆ ವಿರೋಧ ಏಕೆ ಎಂಬುದು ಅರ್ಥವಾಗುತ್ತಿಲ್ಲ. ದಾವಣಗೆರೆ, ಬೆಂಗಳೂರು ಸೇರಿ ಹಲವೆಡೆಯಿಂದ ರವಾನೆಯಾಗಿರುವ ಕೆರಳಿಸುವ ಸಂದೇಶಕ್ಕೆ ತಕ್ಕ ಉತ್ತರ ನೀಡುವುದು ನಿಶ್ಚಿತ' ಎಂದು ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟದ ಅಧ್ಯಕ್ಷ ಕೆ.ಎಂ. ರಾಮಚಂದ್ರಪ್ಪ ಸ್ಪಷ್ಟಪಡಿಸಿದ್ದಾರೆ.

ಎಚ್.ಕಾಂತರಾಜ ವರದಿಗೆ ಆಡಳಿತಾರೂಢ ಕಾಂಗ್ರೆಸ್ ಸರ್ಕಾರದಲ್ಲಿಯೇ ಪರ–ವಿರೋಧದ ನಿಲುವುಗಳಿವೆ. ಸಚಿವ ಸಂಪುಟದ ಸದಸ್ಯರು ಭಿನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಲಿಂಗಾಯತ ಹಾಗೂ ಒಕ್ಕಲಿಗ ಸಮುದಾಯಗಳು ಜಾತಿ ಗಣತಿ ವರದಿಗೆ ಪ್ರಬಲ ವಿರೋಧ ವ್ಯಕ್ತಪಡಿಸಿವೆ. ವರದಿ ಜಾರಿಗೆ ಒತ್ತಾಯಿಸುವ ಮೂಲಕ ಶೋಷಿತ ಸಮುದಾಯವು ಸಿದ್ದರಾಮಯ್ಯ ಅವರ ಬೆನ್ನಿಗಿದೆ ಎಂಬುದನ್ನು ಸಾಬೀತುಪಡಿಸುವ ಉದ್ದೇಶವನ್ನು ಸಮಾವೇಶ ಹೊಂದಿದೆ.

'ಕಾಂತರಾಜ ವರದಿಯನ್ನು ಸ್ವೀಕರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ತಯಾರಾಗಿದ್ದಾರೆ. ಆದರೆ, ಸಚಿವ ಸಂಪುಟದ ಸಹೋದ್ಯೋಗಿಗಳು ಸಹಮತ ವ್ಯಕ್ತಪಡಿಸುತ್ತಿಲ್ಲ. ಇಂತಹವರಿಗೆ ಎದುರುತ್ತರ ನೀಡುವ ಅಗತ್ಯವಿದೆ. 92 ವರ್ಷಗಳ ಬಳಿಕ ನಡೆದ ಜಾತಿ ಗಣತಿಯ ವರದಿ ಬಹಿರಂಗಗೊಂಡರೆ ಜಾತಿಗಳ ನಿಖರ ಮಾಹಿತಿ ಲಭ್ಯವಾಗಲಿದೆ. ವರದಿಯ ಬಗ್ಗೆ ಬಹಿರಂಗ ಚರ್ಚೆಗಳು ನಡೆಯುವ ಅಗತ್ಯವಿದೆ' ಎಂದು ರಾಮಚಂದ್ರಪ್ಪ ಅವರು ಶನಿವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಚಿತ್ರದುರ್ಗದ ಹೊರವಲಯದ ಮಾದಾರ ಚನ್ನಯ್ಯ ಗುರುಪೀಠದ ಬಳಿ ಆಯೋಜಿಸಿರುವ ಶೋಷಿತರ ಜಾಗೃತಿ ಸಮಾವೇಶಕ್ಕೆ ಶನಿವಾರ ಕುರ್ಚಿಗಳನ್ನು ಹಾಕಿ ಸಿದ್ಧತೆ ನಡೆಸಲಾಯಿತು –ಪ್ರಜಾವಾಣಿ ಚಿತ್ರ

> ಕಾಂತರಾಜ ವರದಿ ಕಳುವಾಗಿರುವುದಾಗಿ ಮಾಜಿ ಮುಖ್ಯಮಂತ್ರಿಯೊಬ್ಬರು ಪ್ರತಿಪಾದಿಸುತ್ತಿದ್ದಾರೆ. ಬಹುಶಃ 2019ರ ಅವರ ಅಧಿಕಾರಾವಧಿಯಲ್ಲಿ ಕಳವಿಗೆ ಯತ್ನ ನಡೆದಿರಬಹುದು
> **ಕೆ.ಎಂ.ರಾಮಚಂದ್ರಪ್ಪ**
> ಅಧ್ಯಕ್ಷ, ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ

ಲೋಕಸಭಾ ಚುನಾವಣೆಗೆ ತಯಾರಿ

ಸಿದ್ದರಾಮಯ್ಯ ಅವರ 75ನೇ ವರ್ಷದ ಜನ್ಮದಿನಾಚರಣೆಯನ್ನು ಅದ್ದೂರಿಯಾಗಿ ಆಯೋಜಿಸಿ ವಿಧಾನಸಭಾ ಚುನಾವಣೆಗೆ ಭರ್ಜರಿ ತಯಾರಿ ನಡೆಸಿದ್ದ ಕಾಂಗ್ರೆಸ್, ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಶೋಷಿತರ ಶಕ್ತಿಪ್ರದರ್ಶನ ನಡೆಸಿ ಪ್ರಚಾರಕ್ಕೆ ಮುನ್ನುಡಿ ಬರೆಯಲು ಸಜ್ಜಾಗಿದೆ.

ಸಮಾವೇಶದ ಆಯೋಜಕರಲ್ಲಿ ಸಿದ್ದರಾಮಯ್ಯ ಅವರ ಬೆಂಬಲಿಗರ ಸಂಖ್ಯೆ ಹೆಚ್ಚಿದೆ. ಶೋಷಿತ ಸಮುದಾಯಕ್ಕೆ ಸೇರಿದ ಕಾಂಗ್ರೆಸ್ ನಾಯಕರು ಸಮಾವೇಶಕ್ಕೆ ಸಂಪೂರ್ಣ ಸಹಕಾರ ನೀಡಿದ್ದಾರೆ.

'ಬಿಜೆಪಿ ಸೇರಿ ಎಲ್ಲ ರಾಜಕೀಯ ಪಕ್ಷಗಳ ಶೋಷಿತ ಸಮುದಾಯಗಳ ಮುಖಂಡರಿಗೆ ಆಹ್ವಾನ ನೀಡಲಾಗಿದೆ. ಆದರೆ, ಯಾರೊಬ್ಬರೂ ಸಮಾವೇಶದಲ್ಲಿ ಪಾಲ್ಗೊಳ್ಳಲು ಬಹಿರಂಗವಾಗಿ ಮುಂದೆ ಬಂದಿಲ್ಲ' ಎಂದು ಒಕ್ಕೂಟದ ಅಧ್ಯಕ್ಷ ರಾಮಚಂದ್ರಪ್ಪ ತಿಳಿಸಿದರು.

ಹಕ್ಕೊತ್ತಾಯಗಳೇನು

- ಎಚ್.ಕಾಂತರಾಜ ವರದಿಯನ್ನು ಸರ್ಕಾರ ಕೂಡಲೇ ಸ್ವೀಕರಿಸಿ ಯಥಾವತ್ತಾಗಿ ಜಾರಿಗೊಳಿಸಬೇಕು.
- ಕೇಂದ್ರ ಸರ್ಕಾರ ಜಾತಿವಾರು ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸಮೀಕ್ಷೆ ಮಾಡಿಸಬೇಕು.
- ಇಡಬ್ಲ್ಯುಎಸ್ ಮೀಸಲಾತಿಯನ್ನು ರದ್ದುಪಡಿಸಬೇಕು.
- ಮಹಿಳಾ ರಾಜಕೀಯ ಮೀಸಲಾತಿಯಲ್ಲಿ ಹಿಂದುಳಿದ ವರ್ಗ, ಅಲ್ಪಸಂಖ್ಯಾತ ಸಮುದಾಯಕ್ಕೆ ಒಳಮೀಸಲು ಸೌಲಭ್ಯ ಕಲ್ಪಿಸಬೇಕು.
- ಹಿಂದುಳಿದ ಮತ್ತು ಅಲ್ಪಸಂಖ್ಯಾತ ಸಮುದಾಯಕ್ಕೆ ರಾಜಕೀಯ ಮೀಸಲಾತಿ ನೀಡಬೇಕು.
- ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಪ್ರಮಾಣ ಹೆಚ್ಚಿಸಬೇಕು.

ಅಗರವಾಲ್ ಚುನಾವಣಾ ಉಸ್ತುವಾರಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಂಬರುವ ಲೋಕಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು 23 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಚುನಾವಣಾ ಉಸ್ತುವಾರಿಗಳು ಹಾಗೂ ಸಹ ಉಸ್ತುವಾರಿಗಳನ್ನು ಬಿಜೆಪಿ ಶನಿವಾರ ನೇಮಿಸಿದೆ.

ಕರ್ನಾಟಕ ರಾಜ್ಯದ ಉಸ್ತುವಾರಿಯಾಗಿ ಸಂಸದ ರಾಧಾಮೋಹನ್ ದಾಸ್ ಅಗರವಾಲ್ ಹಾಗೂ ಸಹ ಉಸ್ತುವಾರಿಯಾಗಿ ಸುಧಾಕರ ರೆಡ್ಡಿ ಅವರನ್ನು ನೇಮಿಸಲಾಗಿದೆ.

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ವಿನೋದ್ ತಾವ್ಡೆ ಅವರನ್ನು ಬಿಹಾರದ ಚುನಾವಣಾ ಉಸ್ತುವಾರಿಯಾಗಿ ನಿಯುಕ್ತಿಗೊಳಿಸಲಾಗಿದೆ. ರಾಜ್ಯಸಭಾ ಸದಸ್ಯ ದೀಪಕ್ ಪ್ರಕಾಶ್ ಸಹ ಉಸ್ತುವಾರಿಯಾಗಿ ನೇಮಕಗೊಂಡಿದ್ದಾರೆ. ಪುದುಚೆರಿ ಉಸ್ತುವಾರಿಯಾಗಿ ಕರ್ನಾಟಕದ ನಿರ್ಮಲ್ ಕುಮಾರ್ ಸುರಾನಾ ಅವರನ್ನು ನಿಯೋಜಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ನಿತೀಶ್ ರಾಜೀನಾಮೆ ಇಂದು?

ಒಂದನೇ ಪುಟದಿಂದ...

ಒಂದೆಡೆ, 'ಇಂಡಿಯಾ' ಮೈತ್ರಿಕೂಟ ಛಿದ್ರಗೊಳ್ಳಲು ಕಾಂಗ್ರೆಸ್ ಕಾರಣ ಎಂದು ಜೆಡಿಯು ರಾಜಕೀಯ ಸಲಹೆಗಾರ ಹಾಗೂ ವಕ್ತಾರ ಕೆ.ಸಿ. ತ್ಯಾಗಿ ಆರೋಪಿಸಿದರು. ಇನ್ನೊಂದೆಡೆ, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ನಿತೀಶ್ ಅವರನ್ನು ಸಂಪರ್ಕಿಸಲು ಎರಡು ಬಾರಿ ಪ್ರಯತ್ನಿಸಿದರು. ಅವರು ಪ್ರತಿಕ್ರಿಯಿಸಲಿಲ್ಲ ಎಂದು ಕಾಂಗ್ರೆಸ್ ಸ್ಪಷ್ಟನೆ ನೀಡಿದೆ.

ಇದಕ್ಕೂ ಮುನ್ನ, ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಕೂಡ ನಿತೀಶ್ ಅವರನ್ನು ಸಂಪರ್ಕಿಸಲು ಯತ್ನಿಸಿದ್ದರು. ಆದರೆ, ಅದು ಫಲ ಕೊಟ್ಟಿರಲಿಲ್ಲ.

ಬಘೇಲ್ ಬಿಹಾರ ವೀಕ್ಷಕ: ಈ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಕಾಂಗ್ರೆಸ್ ಕೂಡ ತನ್ನ ರಾಜಕೀಯ ಪ್ರಯತ್ನಗಳನ್ನು ಬಲಗೊಳಿಸಿದ್ದು, ಛತ್ತೀಸಗಢದ ಮಾಜಿ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರನ್ನು ಬಿಹಾರದ 'ಭಾರತ ಜೋಡೊ ನ್ಯಾಯ ಯಾತ್ರೆ' ಹಾಗೂ ಪಕ್ಷದ ಇತರ ಚಟುವಟಿಕೆಗಳಿಗೆ ಹಿರಿಯ ವೀಕ್ಷಕರನ್ನಾಗಿ ನೇಮಿಸಿದೆ. ಅಲ್ಲದೆ, ತನ್ನ ಪಕ್ಷದ 19 ಶಾಸಕರ ಪೈಕಿ 10 ಮಂದಿ ಬಿಜೆಪಿಯೊಂದಿಗೆ ಸಂಪರ್ಕದಲ್ಲಿದ್ದಾರೆ ಎಂಬ ವದಂತಿಯನ್ನು ಅಲ್ಲಗಳೆದಿದೆ.

ಪಟ್ನಾದಲ್ಲಿ ಆರ್‌ಜೆಡಿ ಮುಖಂಡರು ಸಭೆ ನಡೆಸಿ ಮಹಾಮೈತ್ರಿಕೂಟದ ಸರ್ಕಾರ ಉಳಿಸುವ ಪ್ರಯತ್ನಗಳನ್ನು ಮಾಡಿದರು. ನಿತೀಶ್ ಅವರ ಇತ್ತೀಚಿನ ನಡೆಗಳಿಂದ ಅತೃಪ್ತಗೊಂಡಿರುವ ಜೆಡಿಯು ಶಾಸಕರನ್ನು ಸೆಳೆಯುವ ಕುರಿತು ಸಮಾಲೋಚಿಸಿದರು. ಮೈತ್ರಿ ಸರ್ಕಾರವನ್ನು ರಕ್ಷಿಸಲು ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳುವ ಅಧಿಕಾರವನ್ನು ಆರ್‌ಜೆಡಿ ಮುಖ್ಯಸ್ಥ ಲಾಲುಪ್ರಸಾದ್ ಅವರಿಗೆ ಸಭೆ ನೀಡಿತು. ಜತೆಗೆ, ಜಿತೇನ್ ರಾಮ್ ಮಾಂಝಿ ಅವರ 'ಎಚ್‌ಎಎಂ' ಅನ್ನು ಈ ಮೈತ್ರಿಕೂಟಕ್ಕೆ ಸೆಳೆಯುವ ಪ್ರಯತ್ನಗಳು ಆರಂಭವಾಗಿವೆ.

ಕಾರ್ಯಕ್ರಮಗಳಲ್ಲಿ ನಿತೀಶ್ ಭಾಗಿ: ಮೈತ್ರಿಕೂಟದ ಇತರ ಪಕ್ಷಗಳ ನಾಯಕರು ಸಭೆಗಳಲ್ಲಿ ನಿರತರಾಗಿದ್ದ ಸಂದರ್ಭದಲ್ಲಿ ಮುಖ್ಯಮಂತ್ರಿ ಅವರು ಪಟ್ನಾದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಗ್ನಿಶಾಮಕ ದಳದ ಎಂಜಿನ್‌ಗಳಿಗೆ ಚಾಲನೆ ನೀಡಿದರು. ಬಳಿಕ ಕೇಂದ್ರ ಸಚಿವ, ಬಿಜೆಪಿ ನಾಯಕ ಅಶ್ವಿನಿ ಕುಮಾರ್ ಚೌಬೆ ಸಮ್ಮುಖದಲ್ಲಿ ಪ್ರಖ್ಯಾತ ದೇವಾಲಯದ ನವೀಕರಣಕ್ಕೆ ಶಂಕುಸ್ಥಾಪನೆ ನೆರವೇರಿಸಿದರು. ಇದು ಉಪಮುಖ್ಯಮಂತ್ರಿ ತೇಜಸ್ವಿ ಯಾದವ್ ಅವರ ಪ್ರವಾಸೋದ್ಯಮ ಇಲಾಖೆಗೆ ಸೇರಿದ ಯೋಜನೆ. ಆದರೆ, ತೇಜಸ್ವಿ ಅವರು ಸಮಾರಂಭದಲ್ಲಿ ಭಾಗಿಯಾಗಿರಲಿಲ್ಲ.

ಬಿಹಾರದ ರಾಜಕೀಯ ಸಾಧ್ಯಾಸಾಧ್ಯತೆಗಳು

ಸಾಧ್ಯತೆ 1: ಜೆಡಿಯು ಬಿಜೆಪಿಯೊಂದಿಗೆ ಕೈಜೋಡಿಸಿ ಶೀಘ್ರದಲ್ಲಿ ಸರ್ಕಾರ ರಚಿಸಬಹುದು. ನಿತೀಶ್ ಅವರು ಮುಖ್ಯಮಂತ್ರಿಯಾಗಿ ಮುಂದುವರಿಯಬಹುದು. ಬಿಜೆಪಿಯಿಂದ ಇಬ್ಬರು ಉಪಮುಖ್ಯಮಂತ್ರಿಗಳು ಅಧಿಕಾರ ಸ್ವೀಕರಿಸಬಹುದು. ಬಿಜೆಪಿಯು ಸುಶೀಲ್ ಕುಮಾರ್ ಮೋದಿ ಅವರನ್ನು ಉಪಮುಖ್ಯಮಂತ್ರಿಯಾಗಿ ಘೋಷಿಸಲಿದೆಯೇ ಎಂಬುದನ್ನು ಕಾದುನೋಡಬೇಕು. ಜೆಡಿಯು ಮತ್ತು ಬಿಜೆಪಿ ಬಹುಮತ ಪಡೆಯಬಹುದು ಹಾಗೂ ಸರ್ಕಾರವನ್ನು ಇನ್ನಷ್ಟು ಸುಭದ್ರಗೊಳಿಸಲು ಕಾಂಗ್ರೆಸ್‌ನ ಕೆಲವು ಶಾಸಕರನ್ನು ಸೆಳೆಯಬಹುದು.

ಸಾಧ್ಯತೆ 2: ನಿತೀಶ್ ಅವರು ರಾಜೀನಾಮೆ ಕೊಟ್ಟು ಎನ್‌ಡಿಎ ಸೇರಬಹುದು. ಆರ್‌ಜೆಡಿ ಮತ್ತು ಕಾಂಗ್ರೆಸ್ ಪಕ್ಷಗಳು ಜೆಡಿಯುವಿನ ಕೆಲವು ಶಾಸಕರನ್ನು ಪಕ್ಷಾಂತರ ಮಾಡಲು ಸಫಲವಾಗಬಹುದು. ಕಾಂಗ್ರೆಸ್– ಆರ್‌ಜೆಡಿ ಮಿತ್ರಕೂಟಕ್ಕೆ ಬಹುಮತಕ್ಕೆ ಬೇಕಿರುವ 122 ಸ್ಥಾನಗಳನ್ನು ಪಡೆಯಲು ಏಳು ಶಾಸಕರ ಕೊರತೆ ಇದೆ. ಜೆಡಿಯು ಶಾಸಕರ ಪ್ರಯತ್ನದಲ್ಲಿ ಸಫಲರಾದರೆ ತೇಜಸ್ವಿ ಯಾದವ್ ಮುಖ್ಯಮಂತ್ರಿಯಾಗಬಹುದು. ಸ್ಪೀಕರ್ ಆರ್‌ಜೆಡಿಗೆ ಸೇರಿದವರು ಇರುವುದರಿಂದ ಜೆಡಿಯು ಹಾಗೂ ಬಿಜೆಪಿಗೆ ಪರಿಸ್ಥಿತಿ ನಿಭಾಯಿಸುವುದು ಕಠಿಣ ಆಗಬಹುದು.

ಸಾಧ್ಯತೆ 3: ಜಿತೇನ್ ರಾಮ್ ಮಾಂಝಿ ಅವರ ಎಚ್‌ಎಎಂ ಅನ್ನು ಮೈತ್ರಿಕೂಟಕ್ಕೆ ಸೆಳೆಯುವ ಪ್ರಯತ್ನದಲ್ಲಿ ಕಾಂಗ್ರೆಸ್ ಹಾಗೂ ಆರ್‌ಜೆಡಿ ನಿರತವಾಗಿದೆ. ಉಪಮುಖ್ಯಮಂತ್ರಿ ಸ್ಥಾನವನ್ನು ಎಚ್‌ಎಎಂಗೆ ನೀಡುವ ಸಂಭವ ಇದೆ. ಅದಲ್ಲದೆ, ಮಾಂಝಿ ಅವರಿಗೆ ಮುಖ್ಯಮಂತ್ರಿ ಸ್ಥಾನವನ್ನು ನೀಡುವ ಆಮಿಷ ಒಡ್ಡಲಾಗಿದೆ ಎಂಬ ವರದಿಗಳಿವೆ. ಇದು ಸಾಧ್ಯವಾದರೆ, 10 ವರ್ಷಗಳ ಬಳಿಕ ಮಾಂಝಿ ಮತ್ತೊಮ್ಮೆ ಮುಖ್ಯಮಂತ್ರಿಯಾಗಲಿದ್ದಾರೆ.

ಸಾಧ್ಯತೆ 4: ಪಕ್ಷಾಂತರ ನಡೆದು ಒಂದು ವೇಳೆ ಮತ್ತೆ ಅಧಿಕಾರಕ್ಕೆ ಏರಲು ಸಾಧ್ಯವಾಗದಿದ್ದರೆ ನಿತೀಶ್ ಅವರು ವಿಧಾನಸಭೆ ವಿಸರ್ಜಿಸಿ ರಾಷ್ಟ್ರಪತಿ ಆಳ್ವಿಕೆಗೆ ಶಿಫಾರಸು ಮಾಡಬಹುದು. 17ನೇ ವಿಧಾನಸಭೆಯ ಅವಧಿ 2025ರ ನವೆಂಬರ್ ವರೆಗೆ ಇದೆ. ಅಂತಹ ಸನ್ನಿವೇಶ ಎದುರಾದಲ್ಲಿ, ಸರ್ಕಾರ ರಚನೆ ಕೆಲ ಕಾಲ ವಿಳಂಬವಾಗಬಹುದು. ನಿತೀಶ್ ಅವರು ತಕ್ಷಣ ಚುನಾವಣೆಗೆ ಹೋಗಲು ಒಲವು ಹೊಂದಿದ್ದಾರೆ. ಆದರೆ, ಆರ್‌ಜೆಡಿ ಉತ್ಸುಕವಾಗಿಲ್ಲ.

ಟಿಎಂಸಿ 'ಇಂಡಿಯಾ'ದ ಭಾಗವೇ ಆಗಿದೆ: ಮಮತಾ

ಕೋಲ್ಕತ್ತ (ಪಿಟಿಐ): ತೃಣಮೂಲ ಕಾಂಗ್ರೆಸ್ (ಟಿಎಂಸಿ) ರಾಷ್ಟ್ರ ಮಟ್ಟದಲ್ಲಿ 'ಇಂಡಿಯಾ' ಮೈತ್ರಿಕೂಟದ ಭಾಗವೇ ಆಗಿದೆ ಎಂದು ಪಕ್ಷವು ಸ್ಪಷ್ಟಪಡಿಸಿದೆ.

ಟಿಎಂಸಿ ಪಶ್ಚಿಮ ಬಂಗಾಳದಲ್ಲಿ ಲೋಕಸಭಾ ಚುನಾವಣೆಯಲ್ಲಿ ಏಕಾಂಗಿಯಾಗಿ ಸ್ಪರ್ಧಿಸಲಿದೆ ಎನ್ನುವ ನಿಲುವು ತಳೆದಿದೆಯೇ ಹೊರತು ನಾಯಕಿ ಮಮತಾ ಬ್ಯಾನರ್ಜಿ ರಾಷ್ಟ್ರ ಮಟ್ಟದಲ್ಲಿ ಎಂದಿಗೂ 'ಇಂಡಿಯಾ' ಮೈತ್ರಿಕೂಟದಿಂದ ಹೊರಹೋಗುವ ಸೂಚನೆ ನೀಡಿಲ್ಲ ಎಂದು ಪಕ್ಷವು ತಿಳಿಸಿದೆ.

'ಟಿಎಂಸಿ ವಿರೋಧ ಪಕ್ಷಗಳ 'ಇಂಡಿಯಾ' ಮೈತ್ರಿಕೂಟದ ಭಾಗವಲ್ಲವೆಂದು ಎಂದೂ ಹೇಳಿಲ್ಲ. ವಿರೋಧಿ ಒಕ್ಕೂಟಕ್ಕೆ 'ಇಂಡಿಯಾ' ಎನ್ನುವ ಹೆಸರನ್ನು ನೀಡಿದವರೇ ಅವರು. ಕಾಂಗ್ರೆಸ್ ಪಕ್ಷದ ಅಸಮರ್ಥನೀಯ ಬೇಡಿಕೆ ಮತ್ತು ಪಶ್ಚಿಮ ಬಂಗಾಳದ ಕಾಂಗ್ರೆಸ್ ಅಧ್ಯಕ್ಷ ಅಧೀರ್ ರಂಜನ್ ಚೌಧರಿ ವರ್ತನೆಯಿಂದ ನಾವು ರಾಜ್ಯದಲ್ಲಿ ಏಕಾಂಗಿಯಾಗಿ ಸ್ಪರ್ಧಿಸುವ ಇರಾದೆ ವ್ಯಕ್ತಪಡಿಸಿದೆವು' ಎಂದು ಟಿಎಂಸಿ ವಕ್ತಾರ ಕುನಾಲ್ ಘೋಷ್ ಹೇಳಿದ್ದಾರೆ.

ಚುನಾವಣೆಗೆ ತಯಾರಿ ನಡೆಸಿದ್ದೇನೆ: ಜೋಶಿ

ಹುಬ್ಬಳ್ಳಿ: 'ಧಾರವಾಡ ಲೋಕಸಭಾ ಕ್ಷೇತ್ರದಲ್ಲಿ ನಾನು ಈಗಾಗಲೇ ಚುನಾವಣಾ ತಯಾರಿ ನಡೆಸಿದ್ದೇನೆ. ನಮ್ಮ ಎಲ್ಲಾ ಶಾಸಕರು, ಮಾಜಿ ಶಾಸಕರು ಮತ್ತು ಕಾರ್ಯಕರ್ತರು ಸಿದ್ಧತೆಗೆ ಈಗಾಗಲೇ ಕೈಜೋಡಿಸಿದ್ದಾರೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

'ಧಾರವಾಡ ಲೋಕಸಭಾ ಕ್ಷೇತ್ರಕ್ಕೆ ನನಗೆ ಗೊತ್ತಿರುವ ಮಟ್ಟಿಗೆ ನಾನೇ ಅಭ್ಯರ್ಥಿ. ಆದರೆ, ಅಭ್ಯರ್ಥಿಗಳ ಘೋಷಣೆಗೂ ಮುನ್ನ ನಾವು ಹಾಗೆಲ್ಲ ಹೇಳಬಾರದು. ನನಗೆ ಯಾವುದೇ ಸಂಶಯವಿಲ್ಲ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

'ಜಗದೀಶ ಶೆಟ್ಟರ್ ವಾಪಸ್ ಬಿಜೆಪಿಗೆ ಬಂದಿದ್ದರಿಂದ ಖುಷಿಯಾಗಿದೆ. ಮೋದಿ ಅವರನ್ನು ಮತ್ತೊಮ್ಮೆ ಪ್ರಧಾನಿ ಮಾಡಲು ಒಟ್ಟಾಗಿ ಕೆಲಸ ಮಾಡುತ್ತೇವೆ' ಎಂದರು.

'ಹೆಚ್ಚು ಸ್ಥಾನ ಗೆದ್ದರೆ ಸಿ.ಎಂಗೆ ಬಲ'

ಮತ್ತೆ ಹೇಳಿಕೆ ನೀಡಿದ ಯತೀಂದ್ರ

ಪ್ರಜಾವಾಣಿ ವಾರ್ತೆ

ಗುಂಡ್ಲುಪೇಟೆ (ಚಾಮರಾಜನಗರ): 'ಮುಂಬರುವ ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಹೆಚ್ಚು ಸ್ಥಾನಗಳನ್ನು ಗೆದ್ದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ರಾಜಕೀಯವಾಗಿ ಹೆಚ್ಚು ಶಕ್ತಿ ಬರಲಿದೆ. ಇನ್ನೂ ಐದು ವರ್ಷಗಳ ಕಾಲ ಅವರು ಬಡವರು, ದಲಿತರು ಮತ್ತು ಮಹಿಳೆಯರ ಪರವಾಗಿ ದಿಟ್ಟ ನಿರ್ಧಾರ ತೆಗೆದುಕೊಳ್ಳಲು ಅನುಕೂಲವಾಗುತ್ತದೆ' ಎಂದು ವರುಣ ಕ್ಷೇತ್ರದ ಆಶ್ರಯ ಸಮಿತಿ ಅಧ್ಯಕ್ಷ ಡಾ.ಯತೀಂದ್ರ ಸಿದ್ದರಾಮಯ್ಯ ಶನಿವಾರ ಪುನರುಚ್ಚರಿಸಿದರು.

ಪಟ್ಟಣದಲ್ಲಿ ಶನಿವಾರ ನಡೆದ ಕನಕದಾಸ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿ, 'ಸರ್ಕಾರ ರಚನೆಯಾದ ಎಂಟು ತಿಂಗಳಲ್ಲೇ ಐದೂ ಗ್ಯಾರಂಟಿಗಳನ್ನು ಈಡೇರಿಸಲಾಗಿದೆ. ಈ ಯೋಜನೆಗಳು ಐದು ವರ್ಷಗಳ ಕಾಲ ಮುಂದುವರಿಯಬೇಕೆಂದರೆ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಹೆಚ್ಚು ಬೆಂಬಲ ಕೊಡಬೇಕು' ಎಂದರು.

ಅಧಿಕಾರದಿಂದ ಕೆಳಗಿಳಿಸಲು ಹುನ್ನಾರ: ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ ಮಾತನಾಡಿ, 'ಬಡವರ, ಹಿಂದುಳಿದವರ ಮತ್ತು ಅಲ್ಪಸಂಖ್ಯಾತರ ಪರವಿರುವ ಸಿದ್ದರಾಮಯ್ಯ ಅವರನ್ನು ಅಧಿಕಾರದಿಂದ ಕೆಳಗಿಳಿಸುವ ಹುನ್ನಾರ ನಡೆಯುತ್ತಿದೆ. ಆದರೆ, ಅದು ಸಫಲವಾಗುವುದಿಲ್ಲ' ಎಂದು ಅವರು ಹೇಳಿದರು.

ಉತ್ತರ ಪ್ರದೇಶ: ಸೀಟು ಹಂಚಿಕೆಯ ಮಾತುಕತೆ ಹೊಣೆ ಹಿರಿಯ ನಾಯಕ ಅಶೋಕ ಗೆಹಲೋತ್‌ಗೆ

ಕಾಂಗ್ರೆಸ್‌ಗೆ 11 ಕ್ಷೇತ್ರ ಕೊಡಲು ಒಪ್ಪಿದ ಎಸ್‌ಪಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಹತ್ವದ ರಾಜಕೀಯ ಬೆಳವಣಿಗೆಯಲ್ಲಿ, ಲೋಕಸಭಾ ಚುನಾವಣೆಯಲ್ಲಿ ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್‌ಗೆ 11 ಕ್ಷೇತ್ರಗಳನ್ನು ಬಿಟ್ಟುಕೊಡುವುದಾಗಿ ಸಮಾಜವಾದಿ ಪಕ್ಷ (ಎಸ್‌ಪಿ) ಶನಿವಾರ ಪ್ರಕಟಿಸಿದೆ. ಸೀಟು ಹಂಚಿಕೆಯ ಹೆಚ್ಚಿನ ಮಾತುಕತೆ ಹೊಣೆಯನ್ನು ಹಿರಿಯ ನಾಯಕ ಅಶೋಕ ಗೆಹಲೋತ್ ಅವರಿಗೆ ಕಾಂಗ್ರೆಸ್ ಪಕ್ಷ ವಹಿಸಿದೆ.

ಕಾಂಗ್ರೆಸ್‌ಗೆ ಹೆಚ್ಚಿನ ಸ್ಥಾನಗಳು ಬೇಕಿದ್ದರೆ ಕಾಂಗ್ರೆಸ್‌ನ ರಾಷ್ಟ್ರೀಯ ಮೈತ್ರಿ ಸಮಿತಿಯ ಸದಸ್ಯರು ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರೊಂದಿಗೆ ನೇರ ಮಾತುಕತೆ ನಡೆಸಬೇಕು ಎಂದು ಎಸ್‌ಪಿ ಮುಖಂಡರು ಹೇಳಿದರು. ಅದರ ಬೆನ್ನಲ್ಲೇ, ಕಾಂಗ್ರೆಸ್ ಪಕ್ಷವು ಗೆಹಲೋತ್ ಅವರಿಗೆ ಮಾತುಕತೆಯ ಹೊಣೆ ವಹಿಸಿತು.

'ಅಖಿಲೇಶ್ ಅವರೊಂದಿಗೆ ಗೆಹಲೋತ್ ಮಾತುಕತೆ ನಡೆಸುತ್ತಿದ್ದಾರೆ. ಮಾತುಕತೆಯು ಸಕಾರಾತ್ಮಕ ಹಾಗೂ ರಚನಾತ್ಮಕವಾಗಿ ನಡೆಯುತ್ತಿದೆ. ಅಖಿಲೇಶ್ ಅವರನ್ನು ಗೆಹಲೋತ್ ಶೀಘ್ರ ಭೇಟಿಯಾಗಲಿದ್ದಾರೆ. ಸೀಟು ಹಂಚಿಕೆ ಸೂತ್ರ ಅಂತಿಮಗೊಂಡ ನಂತರ ನಾವು ತಿಳಿಸುತ್ತೇವೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ತಿಳಿಸಿದರು. ಕಾಂಗ್ರೆಸ್‌ನ ಉತ್ತರ ಪ್ರದೇಶದ ರಾಜ್ಯ ಘಟಕದ ಅಧ್ಯಕ್ಷ ಅಜಯ್ ರೈ, 'ಎಸ್‌ಪಿಯೊಂದಿಗೆ ಯಾವುದೇ ಒಪ್ಪಂದ ಮಾಡಿಕೊಂಡಿಲ್ಲ. ಮಾತುಕತೆ ಮುಂದುವರಿದಿದೆ' ಎಂದು ಸ್ಪಷ್ಟಪಡಿಸಿದರು.

ಕಾಂಗ್ರೆಸ್ ಮತ್ತು ಸಮಾಜವಾದಿ ಪಕ್ಷದ ಮೈತ್ರಿ ಕುರಿತಂತೆ ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ಪೋಸ್ಟ್ ಹಂಚಿಕೊಂಡಿರುವ ಅಖಿಲೇಶ್, 'ರಾಜ್ಯದ 11 ಪ್ರಮುಖ ಲೋಕಸಭಾ ಸ್ಥಾನಗಳಲ್ಲಿ ಕಾಂಗ್ರೆಸ್‌ನೊಂದಿಗೆ ಸಮಾಜವಾದಿ ಪಕ್ಷದ ಮೈತ್ರಿಯು ಉತ್ತಮ ಆರಂಭ. ಇದು ಗೆಲುವಿನ ಸಮೀಕರಣದೊಂದಿಗೆ ಮುಂದುವರಿಯಲಿದೆ. ಇಂಡಿಯಾ ತಂಡ ಹಾಗೂ ಪಿಡಿಎ (ಹಿಂದುಳಿದವರು, ದಲಿತರು ಹಾಗೂ ಆದಿವಾಸಿಗಳು) ಕಾರ್ಯತಂತ್ರವು ಇತಿಹಾಸವನ್ನು ಬದಲಿಸಲಿದೆ' ಎಂದು ಹೇಳಿದ್ದಾರೆ.

ಕಾಂಗ್ರೆಸ್ ಪಕ್ಷಕ್ಕೆ 20ಕ್ಕೂ ಅಧಿಕ ಕ್ಷೇತ್ರಗಳನ್ನು ನೀಡಬೇಕು ಎಂದು ಉತ್ತರ ಪ್ರದೇಶದ ಉಸ್ತುವಾರಿ ಅವಿನಾಶ್ ಪಾಂಡೆ ಹಾಗೂ ಅಜಯ್ ರೈ ಪಟ್ಟು ಹಿಡಿದಿದ್ದರು. 'ನಮ್ಮ ಪಕ್ಷವು ಪ್ರಬಲವಾಗಿರುವ ಕ್ಷೇತ್ರಗಳನ್ನೇ ಬಿಟ್ಟುಕೊಡುವಂತೆ ಈ ಇಬ್ಬರು ನಾಯಕರು ಹೇಳಿದ್ದಾರೆ. ಇದು ಅವಾಸ್ತವಿಕ ಬೇಡಿಕೆ. ಗರಿಷ್ಠ ಏಳೆಂಟು ಕ್ಷೇತ್ರಗಳನ್ನು ಕಾಂಗ್ರೆಸ್‌ಗೆ ನೀಡಬಹುದು' ಎಂದು ಎಸ್‌ಪಿ ನಾಯಕರು ಹೇಳಿದ್ದರು.

ಮಧ್ಯಪ್ರದೇಶ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಎಸ್‌ಪಿ ಮೈತ್ರಿ ಮಾಡಿಕೊಳ್ಳಲು ಕಾಂಗ್ರೆಸ್ ನಾಯಕರು ಒಪ್ಪಿರಲಿಲ್ಲ. ಇದರಿಂದ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅಸಮಾಧಾನಗೊಂಡಿದ್ದರು.

ರಾಜ್ಯದಲ್ಲಿ 80 ಲೋಕಸಭಾ ಕ್ಷೇತ್ರಗಳಿವೆ. ಸೀಟು ಹಂಚಿಕೆ ಸಂಬಂಧ ಜಯಂತ್ ಸಿಂಗ್ ನೇತೃತ್ವದ ರಾಷ್ಟ್ರೀಯ ಲೋಕದಳ (ಆರ್‌ಎಲ್‌ಡಿ) ಮುಖಂಡರು ಕಳೆದ ವಾರ ಮಾತುಕತೆ ನಡೆಸಿದ್ದರು. ಜಾಟ್ ಪ್ರಾಬಲ್ಯವಿರುವ ಪಶ್ಚಿಮ ಉತ್ತರ ಪ್ರದೇಶದಲ್ಲಿ ಏಳು ಕ್ಷೇತ್ರಗಳನ್ನು ಆರ್‌ಎಲ್‌ಡಿಗೆ ನೀಡಲು ಎಸ್‌ಪಿ ಒಪ್ಪಿತ್ತು. ಮೈತ್ರಿಕೂಟವು ದಲಿತ ನಾಯಕ ಚಂದ್ರಶೇಖರ್ ಅಜಾದ್ ಅಲಿಯಾಸ್ ರಾವಣ ಅವರ ಭೀಮ್ ಆರ್ಮಿ ಪಕ್ಷಕ್ಕೆ ಒಂದೆರಡು ಕ್ಷೇತ್ರಗಳನ್ನು ಬಿಟ್ಟುಕೊಡಲು ಒಲವು ಹೊಂದಿದೆ. ಚಂದ್ರಶೇಖರ್ ಅವರು ಪಶ್ಚಿಮ ಜಿಲ್ಲೆಗಳಾದ ಸಹರನ್‌ಪುರ, ಮುಜಾಪುರನಗರ, ಶಾಮ್ಲಿ ಮತ್ತಿತರ ಜಿಲ್ಲೆಗಳಲ್ಲಿ ಪ್ರಭಾವ ಹೊಂದಿದ್ದಾರೆ. ಕಾಂಗ್ರೆಸ್ 11 ಕ್ಷೇತ್ರಗಳಿಗೆ ಸಮ್ಮತಿ ಸೂಚಿಸಿದರೆ ಸಮಾಜವಾದಿ ಪಕ್ಷವು 60ರಿಂದ 61 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಲಿದೆ.

ಕಾಂಗ್ರೆಸ್‌ಗೆ ಕಠಿಣ ಕ್ಷೇತ್ರಗಳು

- 2019ರ ಲೋಕಸಭಾ ಚುನಾವಣೆಯಲ್ಲಿ ಉತ್ತರ ಪ್ರದೇಶದಲ್ಲಿ ರಾಯ್‌ಬರೇಲಿಯಲ್ಲಷ್ಟೇ ಗೆಲುವು ಸಾಧಿಸಿತ್ತು. ಸಮಾಜವಾದಿ ಪಕ್ಷವು ಐದು ಕ್ಷೇತ್ರಗಳಲ್ಲಿ ಜಯ ಗಳಿಸಿತ್ತು.
- ಕಾಂಗ್ರೆಸ್ ಪಕ್ಷಕ್ಕೆ ಈ ಸಲ ಅಮೇಥಿ, ರಾಯ್‌ಬರೇಲಿ, ಗಾಜಿಯಾಬಾದ್, ವಾರಾಣಸಿ, ಗೋರಖ್‌ಪುರ, ಬನ್ಸ್‌ಗಾಂವ್, ಝೂನ್ಸಿ, ಕುಶಿನಗರ, ಲಖನೌ, ಮಹಾರಾಜ್‌ಗಂಜ್, ಪ್ರಯಾಗ್‌ರಾಜ್ ಬಿಟ್ಟುಕೊಡಲಾಗಿದೆ. ಇದರಲ್ಲಿ ಹಲವು ಕ್ಷೇತ್ರಗಳಲ್ಲಿ ಕಾಂಗ್ರೆಸ್‌ಗೆ ನೆಲೆಯೇ ಇಲ್ಲ. ಈ ಕ್ಷೇತ್ರಗಳಲ್ಲಿ ಎಸ್‌ಪಿ ಬೆಂಬಲದೊಂದಿಗೆ ಕಾಂಗ್ರೆಸ್ ಗೆಲ್ಲುವುದು ಕಷ್ಟ ಎಂಬ ಸ್ಥಿತಿ ಇದೆ. ವಾರಾಣಸಿಯನ್ನು ಪ್ರಧಾನಿ ನರೇಂದ್ರ ಮೋದಿ ಪ್ರತಿನಿಧಿಸುತ್ತಿದ್ದಾರೆ. ಗೋರಖ್‌ಪುರ ಕ್ಷೇತ್ರವು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ತವರು. ಅಮೇಥಿಯಲ್ಲಿ ಕಳೆದ ಬಾರಿ ರಾಹುಲ್ ಗಾಂಧಿ ಸೋತಿದ್ದರು.
- ರಾಜ್ಯದ ಬಾಗ್‌ಪತ್, ಮಥುರಾ, ಅಮ್ರೋಹಾ, ಬಿಜ್ನೋರ್, ಮುಜಾಫರ್‌ನಗರ, ಮೀರತ್ ಮತ್ತು ಕೈರಾನಾ ಲೋಕಸಭಾ ಕ್ಷೇತ್ರಗಳಿಂದ ಆರ್‌ಎಲ್‌ಡಿ ಸ್ಪರ್ಧಿಸುವ ಸಾಧ್ಯತೆಯಿದೆ. ಆರ್‌ಎಲ್‌ಡಿಗೆ ನೀಡಿದ ಬಹುತೇಕ ಸ್ಥಾನಗಳಲ್ಲಿ ಮುಸ್ಲಿಂ ಮತ್ತು ಜಾಟ್ ಮತದಾರರು ಗಣನೀಯ ಪ್ರಮಾಣದಲ್ಲಿದ್ದಾರೆ.
- ಮಧ್ಯಪ್ರದೇಶದಲ್ಲಿ ಕಾಂಗ್ರೆಸ್‌ನೊಂದಿಗೆ ಮೈತ್ರಿಗೆ ಎಸ್‌ಪಿ ಇಂಗಿತ. ರಾಜ್ಯದಲ್ಲಿ ಒಂದು ಕ್ಷೇತ್ರ ಬಿಟ್ಟುಕೊಡುವಂತೆ ಕಾಂಗ್ರೆಸ್‌ಗೆ ಎಸ್‌ಪಿ ಪ್ರಸ್ತಾವ. 2019ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು 3.5 ಲಕ್ಷ ಮತಗಳ ಅಂತರದಿಂದ ಸೋತಿರುವ ಟಿಕಂಗಢ ಕ್ಷೇತ್ರದಲ್ಲಿ ಸ್ಪರ್ಧೆಗೆ ಎಸ್‌ಪಿ ಒಲವು.

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹570
12 ಮೊಟ್ಟೆಗೆ	₹75

ಮೈಸೂರು

100 ಮೊಟ್ಟೆಗೆ	₹572

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹160
ಆರ್‌ಎಸ್‌ಎಸ್-5	₹155
ಗುಡ್ ಲಾಟ್	₹138

(ಪ್ರತಿ ಕೆ.ಜಿಗೆ)

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1520 (1530)
ಸೋಯಾ (ರಿಫೈನ್ಡ್)	₹905 (900)
ಸೂರ್ಯಕಾಂತಿ (ರಿಫೈನ್ಡ್)	₹925 (920)
ಪಾಮೋಲಿನ್	₹868 (862)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹211-465

ದ್ವಿತಳಿ (ಬಿ.ವಿ) ₹222-566

ಮುಂಬೈ ಧಾರಣೆ

ಶೇಂಗಾ

27-01-2024

ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10900-11000
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10400-10500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1520 (1540)
ಒಂದು ವಾರದ ಡೆಲಿವರಿ	1515 (1535)
ಸೋಯಾ ಕಚ್ಚಾ	867 (863)
ಪಾಮ್ ವಾರದ ಡೆಲಿವರಿ	866 (860)
ಸೂರ್ಯಕಾಂತಿ ಎಣ್ಣೆ ಕಚ್ಚಾ	870 (870)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

₹ 62,150 (62,350)

ಬೆಳ್ಳಿ ಕೆ.ಜಿ ₹71,100 (71,100)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸಾಲಕ್ಕಾಗಿ ಚೀನಾಕ್ಕೆ ಪಾಕ್ ಮೊರೆ

ಇಸ್ಲಾಮಾಬಾದ್ (ಪಿಟಿಐ): ಆರ್ಥಿಕ ಬಿಕ್ಕಟ್ಟಿನ ಸುಳಿಗೆ ಸಿಲುಕಿರುವ ಪಾಕಿಸ್ತಾನವು, ಚೀನಾದಿಂದ ಮತ್ತೆ ₹16 ಸಾವಿರ ಕೋಟಿ ಸಾಲ ಪಡೆಯಲು ಮುಂದಾಗಿದೆ ಎಂದು ದಿ ಎಕ್ಸ್‌ಪ್ರೆಸ್ ಟ್ರಿಬ್ಯೂನ್ ಪತ್ರಿಕೆ ಶನಿವಾರ ವರದಿ ಮಾಡಿದೆ.

ಆರ್ಥಿಕ ನೆರವು ಕೋರಿ ಪಾಕ್‌ನ ಹಂಗಾಮಿ ಪ್ರಧಾನಿ ಅನ್ವರ್ ಉಲ್ ಹಕ್ ಕಾಕರ್ ಅವರು, ಚೀನಾ ಪ್ರಧಾನಿ ಲೀ ಕಿಯಾಂಗ್‌ಗೆ ಪತ್ರ ಬರೆದಿದ್ದಾರೆ ಎಂದು ಹೇಳಿದೆ.

ಬಾಹ್ಯ ಸಾಲ ಪಾವತಿ ಹಾಗೂ ವಿದೇಶಿ ವಿನಿಮಯ ಮೀಸಲು ನಿಧಿಯ ಸ್ಥಿರತೆ ಕಾಪಾಡಿಕೊಳ್ಳಲು ಪಾಕಿಸ್ತಾನವು ಈಗಾಗಲೇ ಚೀನಾದಿಂದ ₹33 ಸಾವಿರ ಕೋಟಿ ಸಾಲ ಪಡೆದಿದೆ. ಇದರ ನಿಶ್ಚಿತ ಅವಧಿಯು ಮಾರ್ಚ್ 23ಕ್ಕೆ ಪೂರ್ಣಗೊಳ್ಳಲಿದೆ. ಈ ಸಾಲದ ಹೊರತಾಗಿ ಒಂದು ವರ್ಷಕ್ಕೆ ಪುನಃ ಹೊಸದಾಗಿ ಸಾಲ ಪಡೆಯಲು ನಿರ್ಧರಿಸಿದೆ ಎಂದು ತಿಳಿಸಿದೆ.

ಈ ತಿಂಗಳ ಆರಂಭದಲ್ಲಿ ಯುಎಇ ₹16 ಸಾವಿರ ಕೋಟಿ ಸಾಲ ನೀಡಿತ್ತು. ಪಾಕ್‌ನ ವಿದೇಶಿ ವಿನಿಮಯ ಮೀಸಲು ಕುಸಿದಿದ್ದರಿಂದ ಸೌದಿ ಅರೇಬಿಯಾವು ಸ್ಟೇಟ್ ಬ್ಯಾಂಕ್ ಆಫ್ ಪಾಕಿಸ್ತಾನದಲ್ಲಿ ₹41 ಸಾವಿರ ಕೋಟಿಯನ್ನು ಠೇವಣಿ ಇರಿಸಿದೆ. ಯುಎಇ ನೆರವಿನ ಬಳಿಕವೂ ಪಾಕಿಸ್ತಾನವು ಆರ್ಥಿಕ ನೆರವು ಕೋರಿ ಅಂತರರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ಮೊರೆಹೋಗಿದೆ. ಈಗಾಗಲೇ, ಘೋಷಿಸಿರುವ ಆರ್ಥಿಕ ಪ್ಯಾಕೇಜ್ ಕೊನೆಯ ಕಂತಾದ ₹9,900 ಕೋಟಿ ಸಾಲವನ್ನು ತ್ವರಿತವಾಗಿ ನೀಡುವಂತೆ ಮನವಿ ಮಾಡಿದೆ.

ಉಪ ಮುಖ್ಯಮಂತ್ರಿ ಡಿಕೆಶಿ- ಸೂರಜ್ ಭೇಟಿ

ಬೆಂಗಳೂರು: ಎಚ್.ಡಿ. ರೇವಣ್ಣ ಅವರ ಪುತ್ರ, ವಿಧಾನ ಪರಿಷತ್ ಜೆಡಿಎಸ್ ಸದಸ್ಯ ಸೂರಜ್ ರೇವಣ್ಣ ಅವರು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಶನಿವಾರ ಭೇಟಿ ಮಾಡಿ ಕೆಲಹೊತ್ತು ಚರ್ಚೆ ನಡೆಸಿದರು.

ಸದಾಶಿವನಗರದಲ್ಲಿರುವ ತಮ್ಮ ಮನೆಗೆ ಬೆಳಿಗ್ಗೆ ಬಂದ ಸೂರಜ್ ಜೊತೆ ಶಿವಕುಮಾರ್ ಗೋಪ್ಯವಾಗಿ ಮಾತುಕತೆ ನಡೆಸಿದರು. ಯಾವ ಉದ್ದೇಶಕ್ಕೆ ಶಿವಕುಮಾರ್ ಅವರನ್ನು ಸೂರಜ್ ಭೇಟಿ ಮಾಡಿದರು ಎಂಬ ಮಾಹಿತಿ ಲಭ್ಯವಾಗಿಲ್ಲ.

ಮುಂಬರುವ ಲೋಕಸಭೆ ಚುನಾವಣೆಗೆ ಬಿಜೆಪಿ ಜೊತೆ ಜೆಡಿಎಸ್ ಮೈತ್ರಿ ಮಾಡಿಕೊಂಡಿದೆ. ಈಗಾಗಲೇ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರು ಬಿಜೆಪಿ ನಾಯಕರ ಜೊತೆ ಸೀಟು ಹಂಚಿಕೆಗೆ ಸಂಬಂಧಿಸಿದಂತೆ ಪ್ರಾಥಮಿಕ ಚರ್ಚೆಯಲ್ಲಿ ತೊಡಗಿದ್ದು, ಈ ಸಂದರ್ಭದಲ್ಲಿ ಸೂರಜ್ ಅವರು ಕೆಪಿಸಿಸಿ ಅಧ್ಯಕ್ಷರ ಭೇಟಿ ರಾಜಕೀಯ ವಲಯದಲ್ಲಿ ಕುತೂಹಲ ಮೂಡಿಸಿದೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಸೂರಜ್ ರೇವಣ್ಣ ಭೇಟಿ ಮಾಡಿದರು

ತುಮಕೂರು: ಒಂದು ಕ್ವಿಂಟಲ್‌ಗೆ ₹12 ಸಾವಿರದಿಂದ ₹24 ಸಾವಿರ ಧಾರಣೆ

ಹುಣಸೆ ಹಣ್ಣು ಇಳುವರಿ ಕುಸಿತ?

• ಕೆ.ಎಚ್. ಓಬಳೇಶ್

ಬೆಂಗಳೂರು: ಪ್ರಸಕ್ತ ಮಾರುಕಟ್ಟೆ ಋತುವಿನ ಆರಂಭದಲ್ಲಿಯೇ ಹುಣಸೆ ಹಣ್ಣಿಗೆ ಉತ್ತಮ ಧಾರಣೆಯಿದೆ. ಆದರೆ, ಕಳೆದ ವರ್ಷಕ್ಕೆ ಹೋಲಿಸಿದರೆ ಹಣ್ಣಿನ ತಿರುಳಿನ ದಪ್ಪ ಕಡಿಮೆ ಇರುವುದರಿಂದ ರೈತರಿಗೆ ಇಳುವರಿ ಕುಸಿತದ ಆತಂಕ ಎದುರಾಗಿದೆ.

ರಾಜ್ಯದಲ್ಲಿಯೇ ತುಮಕೂರು ಜಿಲ್ಲೆಯಲ್ಲಿ ಅತಿಹೆಚ್ಚು ಹುಣಸೆ ಹಣ್ಣು ಉತ್ಪಾದನೆಯಾಗುತ್ತದೆ. ಪ್ರಮುಖವಾಗಿ ಈ ಜಿಲ್ಲೆಯ ಶಿರಾ, ಮಧುಗಿರಿ, ಕೊರಟಗೆರೆ, ಪಾವಗಡ ತಾಲ್ಲೂಕಿನ ನೂರಾರು ಎಕರೆ ಪ್ರದೇಶದಲ್ಲಿ ಹುಣಸೆ ಗಿಡಗಳಿವೆ.

ಆದರೆ, ಕಳೆದ ಮುಂಗಾರು ಹಂಗಾಮಿನಲ್ಲಿ ಉತ್ತಮ ಮಳೆ ಸುರಿಯಲಿಲ್ಲ. ಇದು ಇಳುವರಿ ಕುಸಿತಕ್ಕೆ ಕಾರಣವಾಗಿದ್ದು, ಬೆಳೆಗಾರರಿಗೆ ನಷ್ಟವಾಗುವ ಆತಂಕ ಕಾಡುತ್ತಿದೆ.

‘ಮಳೆ ಕೊರತೆಯಿಂದಾಗಿ ಹುಣಸೆ ಮರಗಳಲ್ಲಿ ಸಾಧಾರಣ ಪ್ರಮಾಣದಲ್ಲಿ ಕಾಯಿಗಳಿವೆ. ಮರದಿಂದ ಹಣ್ಣು ಕಿತ್ತು ಸಿಪ್ಪೆ, ಬೀಜ, ನಾರು ಬೇರ್ಪಡಿಸಿ ಮಾರುಕಟ್ಟೆಗೆ ತರಲು ರೈತರಿಗೆ ಒಂದು ಕ್ವಿಂಟಲ್‌ಗೆ ₹5 ಸಾವಿರದಿಂದ ₹6 ಸಾವಿರ ಖರ್ಚಾಗುತ್ತದೆ. ಕಳೆದ ವರ್ಷ 5ರಿಂದ 6 ಚೀಲದಷ್ಟು ಹಣ್ಣಾದ ಹುಣಸೆ ಕಾಯಿಗಳನ್ನು ಸಂಸ್ಕರಿಸಿದರೆ ಒಂದು ಕ್ವಿಂಟಲ್ ಹಣ್ಣು ದೊರೆಯುತ್ತಿತ್ತು. ಈ ಬಾರಿ 9ರಿಂದ 10 ಚೀಲಕ್ಕೆ ಒಂದು ಕ್ವಿಂಟಲ್ ಹಣ್ಣು ಸಿಗುತ್ತಿದೆ’ ಎನ್ನುತ್ತಾರೆ ವರ್ತಕ ರಮೇಶ್.

ಸದ್ಯ ತುಮಕೂರು ಎಪಿಎಂಸಿಯಲ್ಲಿ ಹುಣಸೆ ಹಣ್ಣು ವಹಿವಾಟು ಆರಂಭಗೊಂಡಿದ್ದು, ಮೇ ತಿಂಗಳವರೆಗೂ ನಡೆಯಲಿದೆ. ಇಲ್ಲಿಂದ ತಮಿಳುನಾಡು ಮತ್ತು ಆಂಧ್ರಪ್ರದೇಶಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಪೂರೈಕೆಯಾಗುತ್ತದೆ. ಅಲ್ಲಿನ ಖರೀದಿದಾರರು ನೇರವಾಗಿ ಎಪಿಎಂಸಿಗೆ ಬಂದು ಖರೀದಿಸುತ್ತಾರೆ.

ಕಳೆದ ವರ್ಷಕ್ಕೆ ಹೋಲಿಸಿದರೆ ಧಾರಣೆಯಲ್ಲೂ ಅಷ್ಟೇನು ವ್ಯತ್ಯಾಸವಾಗಿಲ್ಲ. ಮಾರುಕಟ್ಟೆಯಲ್ಲಿ ಸೋಮವಾರ ಮತ್ತು ಗುರುವಾರ ಹರಾಜು ನಡೆಯುತ್ತದೆ. ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಹಣ್ಣಿನ ಪೂರೈಕೆ ಹೆಚ್ಚಿರುತ್ತದೆ. ಆ ವೇಳೆ ರಜಾ ದಿನ ಹೊರತುಪಡಿಸಿ ಉಳಿದ ಎಲ್ಲಾ ದಿನಗಳಲ್ಲಿಯೂ ವಹಿವಾಟು ನಡೆಯುತ್ತದೆ ಎನ್ನುತ್ತಾರೆ ವರ್ತಕರು.

ಸದ್ಯ ಒಂದು ಕ್ವಿಂಟಲ್ ಹುಣಸೆ ಹಣ್ಣಿಗೆ ₹12 ಸಾವಿರದಿಂದ ₹24 ಸಾವಿರದವರೆಗೆ ಬೆಲೆ ಇದೆ. ಹಣ್ಣಿನ ಗುಣಮಟ್ಟದ ಆಧಾರದ ಮೇಲೆ ಧಾರಣೆಯಲ್ಲಿ ಏರಿಳಿತವಾಗುತ್ತದೆ ಎಂಬುದು ಅವರ ವಿವರಣೆ.

ಶೈತ್ಯಾಗಾರ ನಿರ್ಮಾಣಕ್ಕೆ ಸಿದ್ಧತೆ

ತುಮಕೂರು ಎಪಿಎಂಸಿಯು ರಾಜ್ಯದ ಅತಿದೊಡ್ಡ ಹುಣಸೆ ಹಣ್ಣು ಮಾರುಕಟ್ಟೆ ಎಂಬ ಹೆಗ್ಗಳಿಕೆ ಪಡೆದಿದೆ. ಆದರೆ, ಇಲ್ಲಿ ಸುಸಜ್ಜಿತ ಶೈತ್ಯಾಗಾರ (ಕೋಲ್ಡ್ ಸ್ಟೋರೇಜ್) ಇಲ್ಲ. ಇದರ ನಿರ್ಮಾಣ ಸಂಬಂಧ ಸರ್ಕಾರಕ್ಕೂ ಯಾವುದೇ ಪ್ರಸ್ತಾವ ಸಲ್ಲಿಕೆಯಾಗಿಲ್ಲ.

ಶೈತ್ಯಾಗಾರ ಇದ್ದರೆ ಬೆಲೆ ಕುಸಿತದ ಸಂದರ್ಭದಲ್ಲಿ ಹುಣಸೆ ಹಣ್ಣನ್ನು ದೀರ್ಘಕಾಲದವರೆಗೆ ಕಾಪಿಟ್ಟು ಧಾರಣೆ ಏರಿಕೆಯಾದಾಗ ಮಾರಾಟ ಮಾಡಿದರೆ ಲಾಭ ಸಿಗುತ್ತದೆ. ಹಾಗಾಗಿ, ಸರ್ಕಾರ ಈ ನಿಟ್ಟಿನಲ್ಲಿ ಕ್ರಮವಹಿಸಬೇಕು ಎಂಬುದು ಬೆಳೆಗಾರರ ಒತ್ತಾಯ.

ಸದ್ಯ ಜಿಲ್ಲೆಯ ದೊಡ್ಡ ಬೆಳೆಗಾರರು ಮತ್ತು ವರ್ತಕರು ಇಲ್ಲಿ ಬೆಳೆದ ಹಣ್ಣನ್ನು ನೆರೆಯ ಆಂಧ್ರಪ್ರದೇಶದ ಮಡಕಶಿರಾ ಮತ್ತು ಹಿಂದೂಪುರದಲ್ಲಿ ಇರುವ ಕೋಲ್ಡ್ ಸ್ಟೋರೇಜ್‌ಗಳಲ್ಲಿಟ್ಟು ಮಾರಾಟ ಮಾಡುತ್ತಾರೆ.

‘ಜಿಲ್ಲೆಯ ಬೆಳೆಗಾರರಿಗೆ ಅನುಕೂಲ ಕಲ್ಪಿಸುವ ಸಂಬಂಧ ಶೈತ್ಯಾಗಾರ ನಿರ್ಮಾಣಕ್ಕೆ ಸಿದ್ಧತೆ ನಡೆದಿದೆ. ಇತ್ತೀಚೆಗೆ ನಡೆದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಸಭೆಯಲ್ಲೂ ಈ ಕುರಿತು ಚರ್ಚಿಸಲಾಗಿದೆ’ ಎಂದು ಎಪಿಎಂಸಿ ಕಾರ್ಯದರ್ಶಿ ಸುಮಾ ‘ಪ್ರಜಾವಾಣಿ’ಗೆ ತಿಳಿಸಿದರು.

‘ಶೈತ್ಯಾಗಾರ ನಿರ್ಮಾಣಕ್ಕೆ ಕನಿಷ್ಠ 10 ಸಾವಿರ ಚದರ ಅಡಿಯಷ್ಟು ನಿವೇಶನ ಬೇಕಿದೆ. ಸಮಿತಿ ವ್ಯಾಪ್ತಿಯಲ್ಲಿ ಅಷ್ಟು ವಿಸ್ತೀರ್ಣದ ನಿವೇಶನವಿಲ್ಲ. ಸೂಕ್ತ ಸ್ಥಳದ ಹುಡುಕಾಟ ನಡೆದಿದೆ. ಮುಂದಿನ ತಿಂಗಳೊಳಗೆ ಇದಕ್ಕೆ ಕಾರ್ಯರೂಪ ನೀಡುತ್ತೇವೆ’ ಎಂದು ಪ್ರತಿಕ್ರಿಯಿಸಿದರು.

ಹುಲಿ ವೇಷ ನವದೆಹಲಿಯ ಕಾರ್ಯಪ್ಪ ಮೈದಾನದಲ್ಲಿ ಶನಿವಾರ ನಡೆದ ಪ್ರಧಾನ ಮಂತ್ರಿ ಎನ್‌ಸಿಸಿ ರ‍್ಯಾಲಿಯಲ್ಲಿ ಹುಲಿ ವೇಷ ಧರಿಸಿದ್ದ ಎನ್‌ಸಿಸಿ ಕೆಡೆಟ್‌ವೊಬ್ಬರು ಪ್ರದರ್ಶನ ನೀಡಿದರು –ಪಿಟಿಐ ಚಿತ್ರ

ವಿಮಾನದ ರೆಕ್ಕೆ ಮೇಲೆ ನಡೆದಾಡಿದ ಪ್ರಯಾಣಿಕ!

ಮೆಕ್ಸಿಕೊ ಸಿಟಿ (ಎಪಿ): ಇಲ್ಲಿನ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಟೇಕಾಫ್ ಆಗಲು ಕಾಯುತ್ತಿದ್ದ ವಿಮಾನವೊಂದರ ತುರ್ತು ನಿರ್ಗಮನ ಬಾಗಿಲು ತೆರೆದು ಹೊರಹೋದ ಪ್ರಯಾಣಿಕರೊಬ್ಬರು ಅದರ ರೆಕ್ಕೆಯ ಮೇಲೆ ನಡೆದಾಡಿದ್ದಾರೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಗ್ವಾಟೆಮಾಲಾಕ್ಕೆ ತೆರಳಲಿದ್ದ ‘ಏರೋ ಮೆಕ್ಸಿಕೊ’ ವಿಮಾನದಲ್ಲಿ 77 ಮಂದಿ ಪ್ರಯಾಣಿಕರಿದ್ದರು. ಬಾಗಿಲು ತೆರೆದ ಪ್ರಯಾಣಿಕನನ್ನು ಪೊಲೀಸರ ವಶಕ್ಕೆ ನೀಡಿದ್ದೇವೆ ಎಂದಿದ್ದಾರೆ.

‘ವಿಮಾನವು ಟೇಕಾಫ್‌ಗಾಗಿ ನಾಲ್ಕು ಗಂಟೆ ಕಾದಿತ್ತು. ಕುಡಿಯುವ ನೀರು ಸಹ ನೀಡಿಲ್ಲ. ಸೆಕೆಯಿಂದ ನಾವು ಬಳಲಿದ್ದೆವು’ ಎಂದು ಇತರ ಪ್ರಯಾಣಿಕರು ದೂರಿದ್ದಾರೆ.

ತುರ್ತು ನಿರ್ಗಮನ ಬಾಗಿಲು ತೆರೆಯಲು ನಾವೂ ಸಹಕರಿಸಿದ್ದೇವೆ ಎಂದು ಸಾಮಾಜಿಕ ಮಾಧ್ಯಮಗಳಲ್ಲಿ ಬರೆದುಕೊಂಡಿರುವ ಸಹ ಪ್ರಯಾಣಿಕರು, ವಿಮಾನದೊಳಗಿನ ದೃಶ್ಯಗಳಿರುವ ವಿಡಿಯೊ ಹಾಗೂ ಫೋಟೊಗಳನ್ನೂ ಹಂಚಿಕೊಂಡಿದ್ದಾರೆ.

ವಿಮಾನದ ವಾತಾಯನ ವ್ಯವಸ್ಥೆ ಸರಿ ಇರಲಿಲ್ಲ. ಇದು ಪ್ರಯಾಣಿಕರ ಆರೋಗ್ಯದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇತ್ತು. ಈ ಕಾರಣಕ್ಕೆ ಪ್ರಯಾಣಿಕರೊಬ್ಬರು ಬಾಗಿಲು ತೆಗೆದಿದ್ದಾರೆ ಎಂದೂ ಸಮರ್ಥಿಸಿಕೊಂಡಿದ್ದಾರೆ.

ಈ ಕುರಿತು ‘ಏರೋ ಮೆಕ್ಸಿಕೊ’ ವಿಮಾನಯಾನ ಸಂಸ್ಥೆಯು ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಪಿಟಿಐ ಮುಖ್ಯಸ್ಥರಿಗೆ ಸ್ಪರ್ಧಿಸಲು ‘ಸುಪ್ರೀಂ’ ಅನುಮತಿ

ಇಸ್ಲಾಮಾಬಾದ್ (ಪಿಟಿಐ): ಜೈಲಿನಲ್ಲಿರುವ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ಪಾಕಿಸ್ತಾನ್ ತೆಹ್ರೀಕ್ ಎ ಇನ್ಸಾಫ್ (ಪಿಟಿಐ) ಪಕ್ಷದ ಅಧ್ಯಕ್ಷ ಪರ್ವೇಜ್ ಇಲಾಹಿ ಸೇರಿದಂತೆ ಕೆಲ ಹಿರಿಯ ನಾಯಕರಿಗೆ ಫೆಬ್ರುವರಿ 8ರಂದು ನಡೆಯುವ ಸಾರ್ವತ್ರಿಕ ಚುನಾವಣೆಯಲ್ಲಿ ಸ್ಪರ್ಧಿಸಲು ಅಲ್ಲಿನ ಸುಪ್ರೀಂಕೋರ್ಟ್ ಅನುಮತಿ ನೀಡಿದೆ.

ತಮ್ಮ ಉಮೇದುವಾರಿಕೆಯನ್ನು ತಿರಸ್ಕರಿಸಿದ್ದ ಚುನಾವಣಾ ಆಯೋಗ ಮತ್ತು ಲಾಹೋರ್ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಪರ್ವೇಜ್ ಇಲಾಹಿ ಅವರು ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದರು.

ಸಂಕ್ಷಿಪ್ತ ಸುದ್ದಿ

ವಿಮಾನ ಸ್ಫೋಟಿಸುವ ಬೆದರಿಕೆ: ಭಾರತದ ವ್ಯಕ್ತಿ ಖುಲಾಸೆ

ಲಂಡನ್ (ಪಿಟಿಐ): ತಾನು ತಾಲಿಬಾನ್ ಸಂಘಟನೆಯ ಸದಸ್ಯನಾಗಿದ್ದು, ವಿಮಾನವನ್ನು ಸ್ಫೋಟಿಸುವುದಾಗಿ ಸ್ನೇಹಿತರ ಬಳಿ ತಮಾಷೆಗೆ ಹೇಳಿಕೊಂಡಿದ್ದ ಆರೋಪಿಯನ್ನು ಸ್ಪೇನ್ ನ್ಯಾಯಾಲಯವು ಶುಕ್ರವಾರ ಖುಲಾಸೆಗೊಳಿಸಿದೆ. ಆರೋಪಿ ಬ್ರಿಟಿಷ್–ಭಾರತೀಯ ವ್ಯಕ್ತಿ.

ಈ ಕುರಿತು ವಿಚಾರಣೆ ನಡೆಸಿದ ಮ್ಯಾಡ್ರಿಡ್ ನ್ಯಾಯಾಧೀಶ, ಭೀತಿಯೊಡ್ಡಲು ಕಾರಣವಾಗುವ ಯಾವುದೇ ಸ್ಫೋಟಕ ಪತ್ತೆಯಾಗಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಆರೋಪಿ ಆದಿತ್ಯ ವರ್ಮಾ ಅವರನ್ನು ದೋಷಮುಕ್ತಗೊಳಿಸಲಾಗಿದೆ.

2022ರ ಜುಲೈನಲ್ಲಿ ಸ್ನಾಪ್‌ಚಾಟ್‌ನೊಂದಿಗೆ ತನ್ನ ಜೊತೆ ಸಮಾಲೋಚನೆ ನಡೆಸುತ್ತಿದ್ದ ಸ್ನೇಹಿತರಿಗೆ, ತಾನು ತಾಲಿಬಾನ್ ಸಂಘಟನೆಯ ಸದಸ್ಯನಾಗಿದ್ದು, ಲಂಡನ್‌ನ ಗಾಟ್ವಿಕ್‌ನಿಂದ ಸ್ಪೇನ್‌ನ ಮೆನೋರ್ಕಾಗೆ ತೆರಳುವ ವಿಮಾನವನ್ನು ಸ್ಫೋಟಿಸುವುದಾಗಿ ತಮಾಷೆಗೆ ಹೇಳಿದ್ದ. ಈ ಹಿನ್ನೆಲೆಯಲ್ಲಿ ವಿಮಾನ ಹತ್ತುವ ಮುನ್ನವೇ ಬ್ರಿಟನ್ ಭದ್ರತಾ ಸಿಬ್ಬಂದಿ, ಆರೋಪಿ ವರ್ಮಾನನ್ನು ವಶಕ್ಕೆ ಪಡೆದಿದ್ದರು. ಜೊತೆಗೆ ಈ ಮಾಹಿತಿಯನ್ನು ಸ್ಪೇನ್ ಅಧಿಕಾರಿಗಳಿಗೆ ನೀಡಿದ್ದರು. ಈ ಹಿನ್ನೆಲೆಯಲ್ಲಿ ಆಗ 18 ವರ್ಷದನಾಗಿದ್ದ ವರ್ಮಾನನ್ನು ಸ್ಪೇನ್ ಪೊಲೀಸರು ಬಂಧಿಸಿದ್ದರು. ಆ ಬಳಿಕ ಜಾಮೀನಿನ ಮೇರೆಗೆ ಆರೋಪಿ ಬಿಡುಗಡೆಯಾಗಿದ್ದ.

ಪಾಕಿಸ್ತಾನ: ನ್ಯುಮೋನಿಯಾ ಸಮಸ್ಯೆಯಿಂದ 220 ಮಕ್ಕಳ ಸಾವು

ಲಾಹೋರ್: ಕಳೆದ ಮೂರು ವಾರಗಳಲ್ಲಿ ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿ ನ್ಯುಮೋನಿಯಾದಿಂದ 220 ಮಕ್ಕಳು ಮೃತಪಟ್ಟಿವೆ. ತೀವ್ರ ಚಳಿಯ ವಾತಾವರಣವೂ ಇದಕ್ಕೆ ಕಾರಣವಾಗಿದೆ ಎಂದು ಸರ್ಕಾರ ದೃಢಪಡಿಸಿದೆ.

ಮೃತಪಟ್ಟ ಹೆಚ್ಚಿನ ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದರು ಹಾಗೂ ನ್ಯುಮೋನಿಯಾ ಲಸಿಕೆ ಪಡೆದಿರಲಿಲ್ಲ ಎಂದು ಸ್ಥಳೀಯ ಸರ್ಕಾರ ಹೇಳಿದೆ. ಹವಾಮಾನ ವೈಪರೀತ್ಯದ ಕಾರಣ ಈ ಪ್ರಾಂತ್ಯದಲ್ಲಿ ಜನವರಿ 31ರವರೆಗೆ ಬೆಳಿಗ್ಗೆ ತರಗತಿ ನಡೆಸದಂತೆ ಸರ್ಕಾರ ಈಗಾಗಲೇ ಶಾಲೆಗಳಿಗೆ ಸೂಚಿಸಿದೆ.

ಜನವರಿ 1ರಿಂದ ಪಂಜಾಬ್ ಪ್ರಾಂತ್ಯದಲ್ಲಿ ಒಟ್ಟು 10,520 ನ್ಯುಮೋನಿಯಾ ಪ್ರಕರಣಗಳು ವರದಿಯಾಗಿವೆ. 220 ಮಕ್ಕಳು ಮೃತಪಟ್ಟಿದ್ದು, ಅವರೆಲ್ಲರೂ 5 ವರ್ಷದೊಳಗಿನವರು ಎಂದು ಸರ್ಕಾರ ತಿಳಿಸಿದೆ. ಪಂಜಾಬ್‌ನ ಪ್ರಾಂತೀಯ ರಾಜಧಾನಿ ಲಾಹೋರ್‌ನಲ್ಲಿಯೇ 47 ಮಕ್ಕಳು ಮೃತಪಟ್ಟಿವೆ.

ವಿಶ್ವದ ಅತಿದೊಡ್ಡ ಹಡಗುಯಾನ ಶುರು

ಮಿಯಾಮಿ (ಎಪಿ): ಸುಮಾರು 10 ಸಾವಿರ ಜನರನ್ನು ಹೊತ್ತೊಯ್ಯುವ ಸಾಮರ್ಥ್ಯ ಹೊಂದಿರುವ ವಿಶ್ವದ ಅತಿದೊಡ್ಡ ಹಡಗು ತನ್ನ ಮೊದಲ ಪ್ರಯಾಣವನ್ನು ಮಿಯಾಮಿ ಬಂದರಿನಿಂದ ಶನಿವಾರ ಆರಂಭಿಸಿದೆ.

1200 ಅಡಿ ಉದ್ದದ ಈ ಹಡಗು ದಕ್ಷಿಣ ಫ್ಲಾರಿಡಾದಿಂದ ಏಳು ದಿನಗಳ ಮೊದಲ ಯಾನ ಆರಂಭಿಸಿದೆ.

ಈ ಕುರಿತು ಪ್ರತಿಕ್ರಿಯಿಸಿದ ರಾಯಲ್ ಕೆರಿಬಿಯನ್ ಗ್ರೂಪ್ ಅಧ್ಯಕ್ಷ ಮತ್ತು ಕಾರ್ಯ ನಿರ್ವಾಹಕ ಅಧಿಕಾರಿ ಜಾಸನ್ ಲಿಬರ್ಟ ಅವರು, ‘ವಿಶ್ವದ ಜನತೆಗೆ ಅತ್ಯುತ್ತಮವಾದ ಪಯಾಣದ ಅನುಭವಗಳನ್ನು ನೀಡಬೇಕೆಂಬುದು ಐವತ್ತಕ್ಕಿಂತ ಹೆಚ್ಚಿನ ವರ್ಷಗಳ ಕನಸಾಗಿತ್ತು’ ಎಂದು ಹೇಳಿದ್ದಾರೆ.

ಈ ಹಡಗಿನ ಮೇಲಿನ 20 ಡೆಕ್‌ಗಳನ್ನು ಎಂಟು ಭಾಗಗಳನ್ನಾಗಿ ವಿಂಗಡಿಸಲಾಗಿದೆ. ಏಳು ಈಜುಕೊಳಗಳು, ಆರು ವಾಟರ್‌ಸ್ಲೈಡ್‌ಗಳು, ಐಸ್ ಸ್ಕೇಟಿಂಗ್ ರಿಂಕ್, ಥಿಯೇಟರ್ ಮತ್ತು 40ಕ್ಕೂ ಹೆಚ್ಚು ರೆಸ್ಟೋರೆಂಟ್‌ಗಳು, ಬಾರ್‌ಗಳು ಮತ್ತು ಲಾಂಜ್‌ಗಳನ್ನು ಒಳಗೊಂಡಿರುವ ಈ ಹಡಗು, 2350 ಸಿಬ್ಬಂದಿ ಹಾಗೂ ಗರಿಷ್ಠ 7600 ಪ್ರಯಾಣಿಕರನ್ನು ಹೊತ್ತೊಯ್ಯುವ ಸಾಮರ್ಥ್ಯ ಹೊಂದಿದೆ.

ಯುದ್ಧ ನಿಲ್ಲಿಸಿ, ಕೈದಿಗಳನ್ನು ಬಿಟ್ಟರೆ ಮಾತ್ರ ಒತ್ತೆಯಾಳು ಬಿಡುಗಡೆ- ಹಮಾಸ್ ಷರತ್ತು

ವೈಮಾನಿಕ ದಾಳಿ: ಮೂವರ ಸಾವು

ರಫಾ (ಗಾಜಾ ಪಟ್ಟಿ) (ಎಪಿ): ಗಾಜಾದ ದಕ್ಷಿಣದಲ್ಲಿ ಜನವಸತಿ ಪ್ರದೇಶದ ಮೇಲೆ ಇಸ್ರೇಲ್ ಸೇನೆ ಶನಿವಾರ ನಸುಕಿನಲ್ಲಿ ನಡೆಸಿದ ವೈಮಾನಿಕ ದಾಳಿಯಲ್ಲಿ ಇಬ್ಬರು ಮಹಿಳೆಯರೂ ಸೇರಿ ಮೂವರು ಮೃತಪಟ್ಟಿದ್ದಾರೆ.

ಗಾಜಾದಲ್ಲಿ ಸಾವು, ವಿನಾಶ ಮತ್ತು ಯಾವುದೇ ನರಮೇಧದ ಕೃತ್ಯಗಳನ್ನು ತಡೆಯಲು ಸಾಧ್ಯವಿರುವ ಎಲ್ಲವನ್ನೂ ಅನುಸರಿಸುವಂತೆ ಮತ್ತು ಈ ಸಂಬಂಧ ತಿಂಗಳೊಳಗೆ ಅನುಪಾಲನಾ ವರದಿ ಸಲ್ಲಿಸುವಂತೆ ಇಸ್ರೇಲ್‌ಗೆ ಅಂತರರಾಷ್ಟ್ರೀಯ ನ್ಯಾಯಾಲಯವು (ಐಸಿಜೆ) ಆದೇಶಿಸಿದ ಮರು ದಿನವೇ ಈ ದಾಳಿ ನಡೆದಿದೆ.

ಇಸ್ರೇಲ್ ಸೇನೆಯು, ದಕ್ಷಿಣ ಗಾಜಾದ ಖಾನ್ ಯೂನಿಸ್‌ನಲ್ಲಿ ಹಲವಾರು ಭಯೋತ್ಪಾದಕರ ನೆಲೆಗಳ ಮೇಲೆ ದಾಳಿ ನಡೆಸಿದೆ. ಹಲವು ಭಯೋತ್ಪಾದಕರನ್ನು ಕೊಲ್ಲಲಾಗಿದೆ ಎಂದು ಶನಿವಾರ ಹೇಳಿದೆ.

ನಾಗರಿಕ ಬಳಕೆಯ ಕಟ್ಟಡಗಳಲ್ಲಿ ಉಗ್ರರು ಅವಿತುಕೊಂಡಿದ್ದಾರೆ ಎಂದು ಇಸ್ರೇಲ್ ವಾದಿಸುವ ಮೂಲಕ, ನಾಗರಿಕರ ಸಾವುನೋವುಗಳಿಗೆ ಹಮಾಸ್‌ಮೇಲೆ ಹೊಣೆ ಹೊರಿಸಿದೆ. ಗಾಜಾದಲ್ಲಿ ವಾಯು ಮತ್ತು ಭೂ ದಾಳಿಯಲ್ಲಿ ಈವರೆಗೆ 9 ಸಾವಿರಕ್ಕೂ ಹೆಚ್ಚು ಭಯೋತ್ಪಾದಕರನ್ನು ಕೊಲ್ಲಲಾಗಿದೆ ಎಂದು ಇಸ್ರೇಲ್ ಹೇಳಿದೆ.

ಯುದ್ಧದಲ್ಲಿ ಪ್ಯಾಲೆಸ್ಟೀನಿಯನ್ನರ ಸಾವಿನ ಸಂಖ್ಯೆ ಶನಿವಾರದ ವೇಳೆಗೆ 26,257ಕ್ಕೆ ಏರಿದೆ. ಕಳೆದ 24 ತಾಸುಗಳಲ್ಲಿ 174 ಮಂದಿ ಹತರಾಗಿದ್ದಾರೆ ಎಂದು ಗಾಜಾದ ಆರೋಗ್ಯ ಸಚಿವಾಲಯ ತಿಳಿಸಿದೆ. ಗಾಯಾಳುಗಳ ಸಂಖ್ಯೆ 64 ಸಾವಿರ ದಾಟಿದೆ ಎಂದು ಅದು ಹೇಳಿದೆ.

ಯುದ್ಧ ನಿಲ್ಲಿಸಿದರೆ ಮತ್ತು ಇಸ್ರೇಲ್ ವಶದಲ್ಲಿರುವ ಹೆಚ್ಚಿನ ಸಂಖ್ಯೆಯ ಪ್ಯಾಲೆಸ್ಟೀನ್ ಕೈದಿಗಳನ್ನು ಬಿಡುಗಡೆ ಮಾಡಿದರೆ ಮಾತ್ರ ಒತ್ತೆಯಾಳುಗಳನ್ನು ಬಿಡುಗಡೆ ಮಾಡುವುದಾಗಿ ಹಮಾಸ್ ಸ್ಪಷ್ಟಪಡಿಸಿದೆ.

ದಕ್ಷಿಣ ಆಫ್ರಿಕಾವು ಇಸ್ರೇಲ್ ಸೇನೆಯಿಂದ ಗಾಜಾದಲ್ಲಿ ನರಮೇಧ ನಡೆದಿದೆ ಎಂದು ಆರೋಪಿಸಿ ಐಸಿಜೆಯಲ್ಲಿ ಪ್ರಕರಣ ದಾಖಲಿಸಿ, ಯುದ್ಧ ನಿಲ್ಲಿಸಲು ಇಸ್ರೇಲ್‌ಗೆ ಆದೇಶಿಸಬೇಕು ಎಂದು ಕೋರಿತ್ತು. ಈ ಅರ್ಜಿ ವಿಚಾರಣೆ ನಡೆಸಿ ಶುಕ್ರವಾರ ಮಧ್ಯಂತರ ಆದೇಶ ಹೊರಡಿಸಿದ ಐಸಿಜೆಯ 17 ನ್ಯಾಯಮೂರ್ತಿಗಳಿದ್ದ ಪೀಠವು, ಗಾಜಾದಲ್ಲಿ ಹಮಾಸ್ ವಿರುದ್ಧ ಸುಮಾರು 4 ತಿಂಗಳ ಸುದೀರ್ಘ ಯುದ್ಧದಲ್ಲಿ ಇದುವರೆಗೆ ಇಸ್ರೇಲ್ ಸೇನೆ ಅನುಸರಿಸಿದ ಕ್ರಮವನ್ನು ಖಂಡಿಸಿದೆ. ಆದರೆ, ಕದನ ವಿರಾಮಕ್ಕೆ ಆದೇಶಿಸಲಿಲ್ಲ. ಇದಕ್ಕೆ ಗಾಜಾದ ಕೆಲವು ನಿವಾಸಿಗಳು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಹುಥಿ ಪಡೆಯ ಕ್ಷಿಪಣಿ ಹೊಡೆದುರುಳಿಸಿದ ಅಮೆರಿಕ

ಜೆರುಸಲೇಂ (ಪಿಟಿಐ): ಯೆಮೆನ್‌ನ ಹುಥಿ ಬಂಡುಕೋರರ ನೌಕೆ ಧ್ವಂಸಕ ಕ್ಷಿಪಣಿಯನ್ನು ಹೊಡೆದುರುಳಿಸಿರುವುದಾಗಿ ಅಮೆರಿಕ ತಿಳಿಸಿದೆ.

ಅಡೆನ್ ಖಾರಿಯಲ್ಲಿ ಗಸ್ತು ಕಾರ್ಯದಲ್ಲಿದ್ದ ಅಮೆರಿಕದ ಯುದ್ಧನೌಕೆಯನ್ನು ಗುರಿಯಾಗಿಸಿಕೊಂಡು ಬಂಡುಕೋರರು ಶುಕ್ರವಾರ ಕ್ಷಿಪಣಿ ದಾಳಿ ನಡೆಸಿದ್ದರು. ಅದೇ ದಿನ ರಾತ್ರಿ ಕೆಂಪು ಸಮುದ್ರದಲ್ಲಿ ಬ್ರಿಟನ್‌ನ ತೈಲ ಸಾಗಣೆ ಹಡಗಿನ ಮೇಲೆ ದಾಳಿ ನಡೆಸಿದ್ದರು. ಹಡಗು ಹೊತ್ತಿ ಉರಿದಿತ್ತು. ಈ ದಾಳಿಗಳ ಬೆನ್ನಲ್ಲೇ ಅಮೆರಿಕ ಈ ಕ್ರಮ ಕೈಗೊಂಡಿದೆ.

ಕೆಂಪು ಸಮುದ್ರದಲ್ಲಿ ಸರಕು ಸಾಗಣೆ ಹಡಗುಗಳನ್ನು ಗುರಿಯಾಗಿಸಿ ದಾಳಿ ನಡೆಸಲು ಹುಥಿ ಪಡೆಗಳು ನಿಯೋಜಿಸಿದ್ದ ಯುದ್ಧನೌಕೆ ಧ್ವಂಸಕ ಕ್ಷಿಪಣಿ ಮೇಲೆ ಅಮೆರಿಕ ಪಡೆ ಶನಿವಾರ ಬೆಳಿಗ್ಗೆ ದಾಳಿ ನಡೆಸಿದೆ ಎಂದು ಅಮೆರಿಕ ಸೇನೆ ತಿಳಿಸಿದೆ.

ಯೆಮೆನ್‌ನ ಬಂದರು ಪಟ್ಟಣ ಅಲ್– ಹುಡೇದ್ದ ಬಳಿ ಕ್ಷಿಪಣಿ ಮೇಲೆ ದಾಳಿ ನಡೆದಿದೆ ಎಂದು ಹುಥಿ ನೇತೃತ್ವದ ಅಲ್– ಮಸೀರ ಸುದ್ದಿವಾಹಿನಿ ಸುದ್ದಿ ಬಿತ್ತರಿಸಿದೆ. ಆದರೆ ದಾಳಿಯಿಂದ ಉಂಟಾಗಿರುವ ನಷ್ಟದ ಕುರಿತು ಮಾಹಿತಿ ನೀಡಿಲ್ಲ.

ಕೆಂಪು ಸಮುದ್ರದಲ್ಲಿ ಕಾರ್ಯಾಚರಿಸುವ ಹಡಗುಗಳನ್ನು ಗುರಿಯಾಗಿಸಿಕೊಂಡು ಹುಥಿ ಬಂಡುಕೋರ ಪಡೆಯು ಅಕ್ಟೋಬರ್‌ನಿಂದಲೂ ದಾಳಿ ನಡೆಸುತ್ತಿದೆ. ಆದರೆ, ಅದು ಇದೇ ಮೊದಲ ಬಾರಿಗೆ ಅಮೆರಿಕದ ಹಡಗನ್ನು ನೇರವಾಗಿ ಗುರಿಯಾಗಿಸಿ ದಾಳಿ ನಡೆಸಿದ್ದು, ಈ ದಾಳಿಗೆ ಅಮೆರಿಕ ಪ್ರತ್ಯುತ್ತರ ನೀಡಿದೆ.

ಈ ಮೂಲಕ ಕೆಂಪು ಸಮುದ್ರದಲ್ಲಿ ಅಮೆರಿಕ– ಹುಥಿ ನಡುವಿನ ಸಂಘರ್ಷವು ಮತ್ತಷ್ಟು ತೀವ್ರವಾಗಲಿದೆ ಎಂದು ಅಂದಾಜಿಸಲಾಗಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಎಂದೆಂದಿಗೂ ನಮ್ಮ ಹೃದಯದಲ್ಲಿ

ಶ್ರೀಮತಿ ಉಮಾ ವಿಶ್ವನಾಥ್
ಜನನ: 18.06.1958 – ಮರಣ: 28.01.2022
ಶ್ರೀಮತಿ ಉಮಾ ವಿಶ್ವನಾಥ್ ಒಬ್ಬ ಉದ್ಯಮಿ, ಪತ್ನಿ, ಅಜ್ಜಿ ಮತ್ತು ಆರ್. ವಿಶ್ವನಾಥ್‌ರವರ ಧರ್ಮಪತ್ನಿಯಾದ ನೀವು ಎಂದೆಂದಿಗೂ ನಮ್ಮ ಹೃದಯದಲ್ಲಿ
ನಿಮ್ಮ ನಿರ್ಭಯ ನಡೆ, ನುಡಿ ಮತ್ತು ನಿಮ್ಮ ಸದ್ಗುಣಗಳಿಂದ ಎಲ್ಲರನ್ನು ಸೆಳೆಯುತ್ತಿದ್ದ ರೀತಿ, ಶಕ್ತಿ, ನಮ್ಮೆಲ್ಲರ ಬಾಳಿಗೆ ದಾರಿದೀಪವಾಗಿದೆ.
ದುಃಖತಪ್ತರು:
ಆರ್. ವಿಶ್ವನಾಥ್, ಮಕ್ಕಳು, ಮೊಮ್ಮಕ್ಕಳು ಮತ್ತು ನಂದಾವನಮ್ ಕುಟುಂಬ.
ಮೊಬೈಲ್: 9448077259

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Domestic Helpers / Housekeeping
ಮಹಿಳಾ ಗೃಹ ಸಹಾಯಕರು ಬೇಕಾಗಿದ್ದಾರೆ. ವೇತನ ತಿಂಗಳಿಗೆ 35000, ಊಟ ವಸತಿ ಮತ್ತು ವೈದ್ಯಕೀಯ ಸೌಲಭ್ಯವಿದೆ. 9665807478

Teachers/ Professors

WANTED STAFF
PEST CONTROL TECHNICIAN
Freshers can also apply
Good Salary
Send your CV in Whatsapp
91084 60948

SVC EDUCATIONAL INSTITUTIONS
Kushtagi - 583277, Koppal District
Apply Immediately
PG Teachers
Qualification and Experience: PG with BEd and minimum of 3 years of experience in CBSE and State Schools
Subject: English, Hindi, Kannada, Social Studies, Science, Mathematics, Physical Education Instructors, Computers & ICT.
Trained Graduate Teachers / Primary Teachers
Subjects: English, Hindi, Kannada, Social Stuides, Mathematics, Art, Music, Counselor, Science, Physical Education.
Qualification and Experience: Any Degree with BEd with minimum of 3 years of experience in CBSE and State Schools.
Retired teachers and undergraduate and postgraduate candidates with passion for teaching may also apply.
Librarian: Degree or PG in Library and Information Sciences.
Accountant: A Bachelor's Degree in Commerce, Accounting or a related field.
Pay Scale: Attractive salary package commensurate with experience and qualification.
Mastery over English Language, Computer and other Technical skills will carry additional weightage.
Contact: +91 9686163536 / 9606044849
Email your profiles to : ceo@svcerdt.com, academicdirector@svcerdt.com

Wanted
ಉದ್ಯೋಗ ಎಚ್ಚರಿಕೆ! ಮನೆಗೆಲಸದವರು, ಅಡುಗೆಯವರು, ಚಾಲಕರು, ಶಿಶುಪಾಲಕರು, ಕಾವಲುಗಾರ. Ph - 8150011124

ITI FRESHERS ಬೇಕಾಗಿದ್ದಾರೆ. ಬೆಂಗಳೂರಿನ ಪ್ರತಿಷ್ಠಿತ ಕಂಪನಿಯಲ್ಲಿ ಕೆಲಸ ಮಾಡಲು ಸುವರ್ಣಾವಕಾಶ. Mobile: 9916664549- Harish, 9482690555- Uday Kumar Email : kamadhenucncsolutions@gmail.com

Security & Detectives
ಭದ್ರತಾ ಏಜೆನ್ಸಿಗೆ ತಕ್ಷಣವೇ ಸಿಬ್ಬಂದಿಗಳು ಬೇಕಾಗಿದ್ದಾರೆ. ಸೆಕ್ಯೂರಿಟಿ ಗಾರ್ಡ್, ಸಹಾಯಕ ಭದ್ರತಾ ಅಧಿಕಾರಿಗಳು (ASO), ವಯಸ್ಸಿನ ಮಿತಿ 45 ವರ್ಷಗಳು. ಅನುಭವಕ್ಕೆ ಅನುಗುಣವಾಗಿ ಸಂಬಳ. ಸಂದರ್ಶನಕ್ಕಾಗಿ G5S ಸೌಲಭ್ಯ ನಿರ್ವಹಣಾ ಸೇವೆಯ 9482517645ಗೆ ಕರೆ ಮಾಡಿ.

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

Kempegowda Layout
KEMPEGOWDA LAYOUT BDA 1st Auction 1800 Sqft NW corner site. Block 1, Sec H. Rs. 7250 per Sqft. Genuine buyers only . Brokers excuse. 9686111709

Vishweshwariah Layout
VISHWESHWARAIAH LAYOUT 8th Block A Khata 1200 Sqft site. Near NPS West with borewell. Rs. 11000 per Sqft. Genuine buyers only . Brokers excuse. 9686111709

Koppal
ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕು, ಹನುಮಸಾಗರ ಪಟ್ಟಣದಲ್ಲಿ, ರಾಜ್ಯ ಹೆದ್ದಾರಿ 59 ಕುಷ್ಟಗಿ ಮುಖ್ಯರಸ್ತೆಗೆ ಹೊಂದಿಕೊಂಡಿರುವ 6 ಸೈಟ್ ಗಳು ಮಾರಾಟಕ್ಕಿವೆ. (ಒಟ್ಟು 8400 ಚದುರ ಅಡಿ) ಮಾಹಿತಿಗಾಗಿ ಸಂಪರ್ಕಿಸಿ: 9901594833, 8431173450.

Adugodi
2 ಜಮೀನು ಮಾರಾಟಕ್ಕಿದೆ 42x40, 42x40=3360 ವಿಳಾಸ : ನೋ.32 & 33 ಆನೆಪಾಳ್ಯ, 13ನೆಯ ಕ್ರಾಸ್,ಅಯ್ಯಪ್ಪ ದೇವಸ್ಥಾನ ಪಕ್ಕದ್ದು ಬೆಂಗಳೂರು:560025 ಫೋನ್ ನೋ:9844349701 ಗೂಗಲ್ ಪಿನ್: 12.950194, 77.607813

ಭವಿಷ್ಯ
Astrology
★॥ಶ್ರೀಅನ್ನಪೂರ್ಣೇಶ್ವರಿ॥★ ಜ್ಯೋತಿಷ್ಯಕೇಂದ್ರ" ಸ್ತ್ರೀಪುರುಷ ವಶೀಕರಣ, ಸಂಭೋಗ ವಶೀಕರಣ, ಸಾಲಬಾಧೆ ಇನ್ನೂಯಾವುದೇ ಸಮಸ್ಯೆಗಳಿಗೆ 11ಗಂಟೆಗಳಲ್ಲಿ ಶಾಶ್ವತ ಪರಿಹಾರ. "ರಾಘವೇಂದ್ರಭಟ್". 8050061378

ವೈವಾಹಿಕ
Matrimonial Bureaus
ಬ್ರಾಹ್ಮಣ ವಧೂವರನ್ವೇಷಣೆಗೆ ಎಷ್ಟೇ ವಯಸ್ಸಿನ ಕನ್ಯೆಯರಿದ್ದರೂ ಸೂಕ್ತ Doctor / Engineer/ Business/ Govt Private ವರಗಳಿದ್ದಾರೆ. ನರಹರಿ ಸುಮಧ್ವ. ಸುಮಧ್ವ ಮ್ಯಾಟ್ರಿಮೊನಿ. 7975950334, 9042729165

ವ್ಯಾಪಾರ
Business to Business
Home Stay
ಮನೆಯ ಸ್ವಾಹಾರ ಊಟೋಪಚಾರದೊಂದಿಗೆ ಮಲೆನಾಡಿನ ಪ್ರಕೃತಿ ಸೌಂದರ್ಯವನ್ನು ಸವಿಯಲು, ಹೋಂಸ್ಟೇನಲ್ಲಿ ವಿಶ್ರಾಂತಿ ಪಡೆಯಲು 2/3 ದಿನಗಳ ಪ್ರವಾಸಕ್ಕಾಗಿ ವಿಚಾರಿಸಿರಿ. ಸನ್ ಶೈನ್ ಹೋಂಸ್ಟೇ ಸಂಸ್ಥೆ ಕುದುರೆಮುಖ. 9481682498 9916910655

ಪ್ರವಾಸ
Travel
9 ದಿನಗಳ ಕಾಶಿ,ಅಯೋಧ್ಯ. 13ದಿನಗಳ ಉತ್ತರಭಾರತ. 8 ದಿನಗಳ ಸಿಕ್ಕಿಂ,ಡಾರ್ಜಲಿಂಗ. 13ದಿನಗಳ ಚಾರ್‌ಧಾಮ್‌ಯಾತ್ರೆ. ಸಂಪರ್ಕಿಸಿ: ಶ್ರೀನಂದಿ ಹಾಲಿಡೇಸ್. ರಾಜಾಜಿನಗರ ಬೆಂಗಳೂರು.10 9980270467 9740228186

24/03/2024 ಅಯೋಧ್ಯ 12 ದಿನಗಳ ಪ್ರವಾಸ ನೇಪಾಳ ಮತ್ತು ಮುಕ್ತಿನಾಥ. 23/05/2024 ಚಾರಧಾಮ್ 14 ದಿನಗಳ ಪ್ರವಾಸ ಟ್ರೈಟ್ ಹಾಲಿಡೇಸ್ ಸಂಪರ್ಕಿಸಿ: 8088559962

ಅಯೋಧ್ಯಯಾತ್ರೆ, ದೆಹಲಿ ಆಗ್ರಾ ಅಲಹಾಬಾದ್ ಅಯೋಧ್ಯ ಕಾಶಿ,ಗಯಾ 27.03.2024 10 ದಿನಗಳು. ಸಂಪರ್ಕಿಸಿ: ವಿಜಯ ಟ್ರಾವಲ್ಸ್ ಮಲ್ಲೇಶ್ವರಂ ಬೆಂಗಳೂರು. 9448294477

ವಿಮಾನ ಪ್ರವಾಸ: 11.2.2024 ನಾಲ್ಕು ಜ್ಯೋತಿರ್ಲಿಂಗ ಗುಜರಾತ್, ಉಜ್ಜಯಿನಿ. 23.3.24 ಶಿರಡಿ, ಮೂರು ಜ್ಯೋತಿರ್ಲಿಂಗ. 12.4.24 ಅಯೋಧ್ಯೆ, ಕಾಶಿ, ದೆಹಲಿ. ಮಲ್ಲಿಕಾರ್ಜುನ ಪ್ಯಾಕೇಜ್ ತುಮಕೂರು. 8496044942

Pilgrimage Tours
★ಆರ್.ಗಾಂಧಿ ಟೂರ್ಸ್★ 1.02.2024 13ದಿನಗಳು ಕಾಶಿ ಹರಿದ್ವಾರ, 9ದಿನಗಳು ಆಂಧ್ರ ಭದ್ರಾಚಲಂ. 22.02.2024 10ದಿನಗಳು ಗುಜರಾತ್ ಉಜ್ಜೈನ್,ಓಂಕಾರೇಶ್ವರ. 9945445809/ 9902433500

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳಿಗೆ ಸೂಕ್ತ ವೇದಿಕೆ!
ಇಂದೇ ನಿಮ್ಮ ಜಾಹೀರಾತು ಬುಕ್ ಮಾಡಿರಿ.
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9901641752
+91 9845114560 | +91 9900428036
+91 9731810277 | 080- 45557163/164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ರಸ್ತೆ ಬದಿಯಲ್ಲಿ ಕುಳಿತ ರಾಜ್ಯಪಾಲ

ಕೇರಳ: ಎಸ್‌ಎಫ್‌ಐ ಕಾರ್ಯಕರ್ತರು, ಸಿ.ಎಂ. ವಿರುದ್ಧ ಆರಿಫ್ ಮೊಹಮ್ಮದ್ ಖಾನ್ ಆಕ್ರೋಶ

ಕೊಲ್ಲಂ (ಪಿಟಿಐ): ಕೇರಳದ ಕೊಲ್ಲಂ ಜಿಲ್ಲೆಯ ನಿಲಮೇಲ್‌ನಲ್ಲಿ ಶನಿವಾರ ನಾಟಕೀಯ ಬೆಳವಣಿಗೆಗಳು ನಡೆದವು. ಎಸ್‌ಎಫ್‌ಐ ಕಾರ್ಯಕರ್ತರ ಪ್ರತಿಭಟನೆಗೆ ಗುರಿಯಾದ ರಾಜ್ಯದ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು ತಮ್ಮ ಕಾರಿನಿಂದ ಇಳಿದು, ಕಪ್ಪು ಬಾವುಟ ಪ್ರದರ್ಶಿಸಿ ಪ್ರತಿಭಟನೆ ನಡೆಸುತ್ತಿದ್ದ ವಿದ್ಯಾರ್ಥಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಅಲ್ಲದೆ, ರಸ್ತೆ ಬದಿಯಲ್ಲಿ ಕುಳಿತು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ವಿರುದ್ಧ ಹರಿಹಾಯ್ದರು. ವಿಜಯನ್ ಅವರು 'ರಾಜ್ಯದಲ್ಲಿ ಅರಾಜಕತೆಗೆ ಇಂಬುಗೊಡುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು. ಎಸ್‌ಎಫ್‌ಐ ಕಾರ್ಯಕರ್ತರು 'ಗೂಂಡಾಗಳು', 'ದಿನಗೂಲಿಯವರು' ಎಂದು ಖಾನ್ ಸಿಟ್ಟು ಹೊರಹಾಕಿದರು.

ಎಸ್‌ಎಫ್‌ಐ ಕಾರ್ಯಕರ್ತರ ವಿರುದ್ಧ ಕ್ರಮ ಜರುಗಿಸಬೇಕು ಎಂದು ಕೋರಿದ ಖಾನ್, ನಂತರ ಅದಕ್ಕೆ ಸಂಬಂಧಿಸಿದ ಎಫ್‌ಐಆರ್ ಪ್ರತಿಯನ್ನು ತೋರಿಸಬೇಕು ಎಂದು ಪೊಲೀಸರನ್ನು ಒತ್ತಾಯಿಸಿದರು.

ತಾವು ಪ್ರತಿಭಟನೆ ನಡೆಸಿಲ್ಲ, ಎಫ್‌ಐಆರ್ ಪ್ರತಿಗಾಗಿ ಕಾಯುತ್ತಿರುವುದಾಗಿ ರಸ್ತೆ ಬದಿಯಲ್ಲಿ ಕುಳಿತಿದ್ದ ಖಾನ್ ಹೇಳಿದರು. 17 ಮಂದಿ ಎಸ್‌ಎಫ್‌ಐ ಕಾರ್ಯಕರ್ತರ ವಿರುದ್ಧ ದಾಖಲಿಸಲಾದ ಎಫ್‌ಐಆರ್‌ನ ಪ್ರತಿಯನ್ನು ಪೊಲೀಸರು ತೋರಿಸಿದ ನಂತರ ಖಾನ್ ಅವರು ಅಲ್ಲಿಂದ ತೆರಳಿದರು.

ಪ್ರತಿಭಟನೆಯಲ್ಲಿ ತೊಡಗಿದ್ದ ಎಸ್‌ಎಫ್‌ಐ ಕಾರ್ಯಕರ್ತರು ತಮ್ಮ ಕಾರಿಗೆ ಗುದ್ದಿದ್ದಾರೆ ಎಂದು ಖಾನ್ ಆರೋಪಿಸಿದರು.

ತಿರುವನಂತಪುರದಿಂದ ಕೊಟ್ಟಾರಕ್ಕರಕ್ಕೆ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳಲು ತೆರಳುತ್ತಿದ್ದ ರಾಜ್ಯಪಾಲರು, ನೀಲಮೇಲ್ ಸನಿಹದಲ್ಲಿ ರಸ್ತೆ ಬದಿಯಲ್ಲಿ ಕಪ್ಪುಬಾವುಟ ಪ್ರದರ್ಶಿಸಿದ ಎಸ್‌ಎಫ್‌ಐ ಕಾರ್ಯಕರ್ತರನ್ನು ಗಮನಿಸಿದರು. ರಾಜ್ಯಪಾಲರನ್ನು ವಿರೋಧಿಸಿ ಈ ಕಾರ್ಯಕರ್ತರು, 'ಸಂಘಿ ರಾಜ್ಯಪಾಲರೇ ವಾಪಸ್ ಹೋಗಿ' ಎಂಬ ಬರಹ ಇದ್ದ ಭಿತ್ತಿಪತ್ರ ಹಿಡಿದಿದ್ದರು. ಇದರಿಂದ ಕುಪಿತಗೊಂಡ ಖಾನ್, ಕಾರಿನಿಂದ ಇಳಿದರು. ಎಸ್‌ಎಫ್‌ಐ ಕಾರ್ಯಕರ್ತರನ್ನು ಉದ್ದೇಶಿಸಿ 'ಬನ್ನಿ' ಎನ್ನುತ್ತ ಅವರೆಡೆ ಸಾಗಿದರು.

ಆಗ ಅಲ್ಲಿದ್ದ ಪೊಲೀಸ್ ಸಿಬ್ಬಂದಿ, ಖಾನ್ ಮತ್ತು ಎಸ್‌ಎಫ್‌ಐ ಕಾರ್ಯಕರ್ತರ ನಡುವೆ ಅಡ್ಡವಾಗಿ ನಿಂತರು. ಪೊಲೀಸರು ಪ್ರತಿಭಟನಕಾರರನ್ನು ಅಲ್ಲಿಂದ ಬೇರೆ ಕಳುಹಿಸಿದ ನಂತರ, ಹತ್ತಿರದ ಚಹಾ ಅಂಗಡಿಯೊಂದರಿಂದ ಕುರ್ಚಿ ತರಿಸಿಕೊಂಡು ಖಾನ್ ಅಲ್ಲಿಯೇ ಕುಳಿತರು. ಪ್ರತಿಭಟನೆ ನಡೆಸಿದವರ ವಿರುದ್ಧ ಕ್ರಮಕ್ಕೆ ಆಗ್ರಹಿಸಿದರು.

ಪ್ರಯಾಣ ಮುಂದುವರಿಸುವಂತೆ ಅಲ್ಲಿದ್ದ ಅಧಿಕಾರಿಗಳು ಮನವಿ ಮಾಡಿದಾಗ, 'ನಾನು ಹೋಗುವುದಿಲ್ಲ. ನೀವು (ಪೊಲೀಸರು) ಪ್ರತಿಭಟನಕಾರರಿಗೆ ರಕ್ಷಣೆ ನೀಡುತ್ತಿದ್ದೀರಿ' ಎಂದು ಖಾನ್ ಹೇಳಿದರು. 'ಪೊಲೀಸರೇ ಕಾನೂನು ಉಲ್ಲಂಘಿಸಿದರೆ ಕಾನೂನನ್ನು ಎತ್ತಿಹಿಡಿಯುವ ಕೆಲಸ ಯಾರು ಮಾಡುತ್ತಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಇದು ಪ್ರತಿಭಟನೆ ಅಲ್ಲ. ನಾನು ಯಾಕೆ ಪ್ರತಿಭಟನೆ ನಡೆಸಬೇಕು? ನಾನೇ ಕ್ರಮ ಕೈಗೊಳ್ಳಬಲ್ಲೆ. ಎಫ್‌ಐಆರ್ ಪ್ರತಿಯು ಬರಲೆಂದು ಕಾಯುತ್ತಿದ್ದೆ' ಎಂದು ಖಾನ್ ಅವರು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರವಾಗಿ ಹೇಳಿದರು.

ಎಸ್‌ಎಫ್‌ಐ ಕಾರ್ಯಕರ್ತರ ವಿರುದ್ಧ ಕ್ರಮ ಕೈಗೊಂಡಿರುವುದಕ್ಕೆ ಸಾಕ್ಷಿಯಾಗಿ ಎಫ್‌ಐಆರ್ ಪ್ರತಿಯನ್ನು ತೋರಿಸಬೇಕು ಎಂದು ಪಟ್ಟುಹಿಡಿದು ಕೇರಳ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು ನಿಲಮೇಲ್‌ನಲ್ಲಿ ರಸ್ತೆಬದಿಯ ಚಹಾ ಅಂಗಡಿ ಎದುರು ಕುಳಿತಿದ್ದರು —ಪಿಟಿಐ ಚಿತ್ರ

ರಾಜ್ಯಪಾಲರಿಗೆ ಝೆಡ್ ಪ್ಲಸ್ ಭದ್ರತೆ

ತಿರುವನಂತರಪುರ/ಕೊಲ್ಲಂ (ಪಿಟಿಐ): ಆರಿಫ್ ಮೊಹಮ್ಮದ್ ಖಾನ್ ಅವರಿಗೆ ನೀಡಿದ್ದ ಭದ್ರತೆಯನ್ನು ಕೇಂದ್ರ ಸರ್ಕಾರವು ಝೆಡ್ ಪ್ಲಸ್ ಶ್ರೇಣಿಗೆ ಹೆಚ್ಚಿಸಿದೆ.

ನಿಲಮೇಲ್‌ನಲ್ಲಿನ ಬೆಳವಣಿಗೆಗಳ ಒಂದು ಗಂಟೆಯೊಳಗೆ ಕೇರಳ ರಾಜಭವನವು ಈ ವಿಷಯವನ್ನು ಪ್ರಕಟಿಸಿದೆ. ಕೇಂದ್ರ ಗೃಹ ಸಚಿವಾಲಯವು ಖಾನ್ ಅವರಿಗೆ ಸಿಆರ್‌ಪಿಎಫ್ ಸಿಬ್ಬಂದಿಯಿಂದ ರಕ್ಷಣೆ ಒದಗಿಸಲಿದೆ ಎಂದು ತಿಳಿಸಿದೆ.

ಕೇಂದ್ರ ವಿದೇಶಾಂಗ ವ್ಯವಹಾರಗಳ ಖಾತೆಯ ರಾಜ್ಯ ಸಚಿವ ವಿ. ಮುರಳೀಧರನ್ ಅವರು, 'ಕೇರಳದ ಗೃಹ ಇಲಾಖೆ ಮತ್ತು ಅದರ ಮುಖ್ಯಸ್ಥರಾಗಿರುವ ಪಿಣರಾಯಿ ವಿಜಯನ್ ಅವರು ತಮ್ಮ ಸಾಂವಿಧಾನಿಕ ಹೊಣೆ ನಿರ್ವಹಿಸುವಲ್ಲಿ ವಿಫಲರಾಗಿದ್ದಾರೆ ಎಂಬುದನ್ನು ಈ ಘಟನೆಯು ತೋರಿಸುತ್ತಿದೆ' ಎಂದು ಹೇಳಿದ್ದಾರೆ.

ಮೀಸಲು ವರ್ಗ ಪ್ರಮಾಣಪತ್ರ ಅಕ್ರಮ ಪ್ರಕರಣ

ವಿಚಾರಣೆಗೆ 'ಸುಪ್ರೀಂ' ತಡೆ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ಮೀಸಲು ವರ್ಗಗಳಿಗೆ ಪ್ರಮಾಣಪತ್ರ ನೀಡುವಲ್ಲಿ, ಎಂಬಿಬಿಎಸ್ ವಿದ್ಯಾರ್ಥಿಗಳಿಗೆ ಸರ್ಕಾರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಗಳಿಗೆ ಪ್ರವೇಶ ನೀಡುವಲ್ಲಿ ಅಕ್ರಮಗಳು ನಡೆದಿವೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಕಲ್ಕತ್ತಾ ಹೈಕೋರ್ಟ್‌ನಲ್ಲಿರುವ ಪ್ರಕರಣಗಳ ವಿಚಾರಣೆಗೆ ಸುಪ್ರೀಂ ಕೋರ್ಟ್ ಶನಿವಾರ ತಡೆ ನೀಡಿದೆ.

ಸ್ವಯಂಪ್ರೇರಿತವಾಗಿ ಪ್ರಕರಣದ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ನೇತೃತ್ವದ ಐದು ಸದಸ್ಯರ ಪೀಠವು, ಪಶ್ಚಿಮ ಬಂಗಾಳ ಸರ್ಕಾರ ಮತ್ತು ಮೂಲ ಅರ್ಜಿದಾರರಿಗೆ ನೋಟಿಸ್ ಜಾರಿಗೆ ಆದೇಶಿಸಿದೆ. ಕಲ್ಕತ್ತಾ ಹೈಕೋರ್ಟ್‌ನ ಏಕಸದಸ್ಯ ಪೀಠ ಹಾಗೂ ವಿಭಾಗೀಯ ಪೀಠ ನೀಡಿದ್ದ ಆದೇಶಗಳಿಗೆ ಸುಪ್ರೀಂ ಕೋರ್ಟ್ ತಡೆ ನೀಡಿದೆ. ಶನಿವಾರ ಕೋರ್ಟ್ ಕಲಾಪ ಇಲ್ಲದಿದ್ದರೂ, ಈ ಪ್ರಕರಣದ ವಿಚಾರಣೆಗಾಗಿ ಪೀಠವು ವಿಶೇಷ ಕಲಾಪ ನಡೆಸಿತು.

'ನಾವು ಎಲ್ಲ ಪ್ರಕ್ರಿಯೆಗಳಿಗೆ ತಡೆ ನೀಡುತ್ತಿದ್ದೇವೆ. ವಿಚಾರಣೆಯನ್ನು ಮತ್ತೆ ಸೋಮವಾರ ಕೈಗೆತ್ತಿಕೊಳ್ಳಲಿದ್ದೇವೆ' ಎಂದು ಪೀಠವು ಹೇಳಿದೆ. ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ, ಬಿ.ಆರ್. ಗವಾಯಿ, ಸೂರ್ಯ ಕಾಂತ್ ಮತ್ತು ಅನಿರುದ್ಧ ಬೋಸ್ ಅವರೂ ಈ ಪೀಠದಲ್ಲಿದ್ದಾರೆ. ಸಿಬಿಐ ತನಿಖೆಗೆ ಆದೇಶಿಸಿ ಏಕಸದಸ್ಯ ಪೀಠ ನೀಡಿದ್ದ ಆದೇಶ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲಾಗುವುದು ಎಂದು ಪಶ್ಚಿಮ ಬಂಗಾಳ ಸರ್ಕಾರದ ಪರವಾಗಿ ಹಾಜರಾಗಿದ್ದ ಹಿರಿಯ ವಕೀಲ ಕಪಿಲ್ ಸಿಬಲ್ ತಿಳಿಸಿದರು.

ನ್ಯಾಯಮೂರ್ತಿ ಅಭಿಜಿತ್ ಗಂಗೋಪಾಧ್ಯಾಯ ಅವರು ಇದ್ದ ಕಲ್ಕತ್ತಾ ಹೈಕೋರ್ಟ್‌ನ ಏಕಸದಸ್ಯ ಪೀಠವು, ನ್ಯಾಯಮೂರ್ತಿಗಳಾದ ಸೌಮೆನ್ ಸೆನ್ ಮತ್ತು ಉದಯಕುಮಾರ್ ಅವರು ಇದ್ದ ವಿಭಾಗೀಯ ಪೀಠದ ನೀಡಿದ್ದ ಆದೇಶವು ಸಂಪೂರ್ಣ ಕಾನೂನುಬಾಹಿರ ಎಂದೂ ಅದನ್ನು ನಿರ್ಲಕ್ಷಿಸಬೇಕು ಎಂದೂ ಗುರುವಾರ ಹೇಳಿತ್ತು.

ಇದಕ್ಕೂ ಮೊದಲು, ಬುಧವಾರ ಇದೇ ಏಕಸದಸ್ಯ ಪೀಠವು, ಮೀಸಲಾತಿ ಪ್ರವರ್ಗಗಳ ಅಡಿಯಲ್ಲಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಗಳಿಗೆ ಪ್ರವೇಶ ನೀಡುವಲ್ಲಿ ಅಕ್ರಮಗಳು ನಡೆದಿವೆ ಎಂದು ದೂರಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿ, ಸಿಬಿಐ ತನಿಖೆಗೆ ಆದೇಶಿಸಿತ್ತು. ರಾಜ್ಯದ ಪೊಲೀಸರಲ್ಲಿ ತನಗೆ ನಂಬಿಕೆ ಇಲ್ಲ ಎಂದೂ ಹೇಳಿತ್ತು.

ಪಶ್ಚಿಮ ಬಂಗಾಳ ಸರ್ಕಾರವು ಗುರುವಾರ ದ್ವಿಸದಸ್ಯ ಪೀಠದ ಎದುರು ಮೇಲ್ಮನವಿ ಸಲ್ಲಿಸಿತ್ತು. ದ್ವಿಸದಸ್ಯ ಪೀಠವು ಏಕಸದಸ್ಯ ಪೀಠದ ಆದೇಶಕ್ಕೆ ಮಧ್ಯಂತರ ತಡೆ ನೀಡಿತ್ತು. ಇದಾದ ನಂತರ, ಅದೇ ದಿನ ಮತ್ತೆ ವಿಚಾರ ಕೈಗೆತ್ತಿಕೊಂಡ ನ್ಯಾಯಮೂರ್ತಿ ಗಂಗೋಪಾಧ್ಯಾಯ ಅವರು, ಮೇಲ್ಮನವಿ ಮೆಮೊ ಇಲ್ಲದಿದ್ದಾಗ ವಿಭಾಗೀಯ ಪೀಠವು ಆದೇಶ ಹೊರಡಿಸಿದ್ದು ಹೇಗೆ ಎಂದು ಪ್ರಶ್ನಿಸಿದ್ದರು.

'ವಿಭಾಗೀಯ ಪೀಠದ ಆದೇಶವನ್ನು ನಿರ್ಲಕ್ಷಿಸದೆ ನನಗೆ ಬೇರೆ ಮಾರ್ಗ ಇಲ್ಲ...' ಎಂದು ಕೂಡ ಗಂಗೋಪಾಧ್ಯಾಯ ಅವರು ಹೇಳಿದ್ದರು. 'ನ್ಯಾಯಮೂರ್ತಿ ಸೆನ್ ಅವರು ರಾಜ್ಯದ ಕೆಲವು ರಾಜಕೀಯ ಪಕ್ಷಗಳಿಗಾಗಿ ಕೆಲಸ ಮಾಡುತ್ತಿರುವುದು ಸ್ಪಷ್ಟ. ಹೀಗಾಗಿ, ಸುಪ್ರೀಂ ಕೋರ್ಟ್ ಬಯಸಿದರೆ, ರಾಜ್ಯ ಸರ್ಕಾರವೂ ಪಾಲುದಾರ ಆಗಿರುವ ಪ್ರಕರಣಗಳಲ್ಲಿ ನೀಡಿರುವ ಆದೇಶಗಳನ್ನು ಪುನರವಲೋಕಿಸಬೇಕಿದೆ' ಎಂದು ಗಂಗೋಪಾಧ್ಯಾಯ ಹೇಳಿದ್ದರು. ಪಶ್ಚಿಮ ಬಂಗಾಳದಲ್ಲಿ ಅಧಿಕಾರದಲ್ಲಿರುವ ಪಕ್ಷವನ್ನು ಪಾರುಮಾಡಲು ನ್ಯಾಯಮೂರ್ತಿ ಸೆನ್ ತಮ್ಮ ಹಿತಾಸಕ್ತಿಯನ್ನು ಮುಂದಕ್ಕೆ ತಂದಿದ್ದಾರೆ ಎಂದು ಆರೋಪಿಸಿದ್ದರು.

ಹೀಗಾಗಿ ಅವರ ನಡೆ ದುರ್ನಡತೆಗೆ ಸಮ ಎಂದಿದ್ದರು. '2 ವರ್ಷಗಳಿಗೂ ಹಿಂದೆಯೇ ಈ ಕೋರ್ಟ್‌ನಿಂದ ಒಡಿಶಾ ಹೈಕೋರ್ಟ್‌ಗೆ ವರ್ಗಾವಣೆ ಆದೇಶ ಪಡೆದಿರುವ ನ್ಯಾಯಮೂರ್ತಿ ಸೆನ್, ಸುಪ್ರೀಂ ಕೋರ್ಟ್‌ನ ಕೊಲಿಜಿಯಂ ಶಿಫಾರಸು ಉಲ್ಲಂಘಿಸಿ ಇಲ್ಲಿ ನ್ಯಾಯಮೂರ್ತಿಯಾಗಿ ಹೇಗೆ ಕೆಲಸ ಮಾಡುತ್ತಿದ್ದಾರೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಅವರನ್ನು ವರ್ಗಾವಣೆಯಿಂದ ಪಾರು ಮಾಡುತ್ತಿರುವುದು ಯಾರು' ಎಂದು ಗಂಗೋಪಾಧ್ಯಾಯ ಅವರು ಆದೇಶದಲ್ಲಿ ಹೇಳಿದ್ದಾರೆ.

'ಸರ್ಕಾರ ಉರುಳಿಸಲು ಸಂಚು'

ನವದೆಹಲಿ (ಪಿಟಿಐ): ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ನೇತೃತ್ವದ ಸರ್ಕಾರವನ್ನು ಉರುಳಿಸುವ ಬೆದರಿಕೆ ಒಡ್ಡಲು ಮತ್ತು ಎಎಪಿ ತೊರೆಯಲು ಪಕ್ಷದ ಏಳು ಶಾಸಕರಿಗೆ ತಲಾ ₹25 ಕೋಟಿ ನೀಡುವುದಾಗಿ ಬಿಜೆಪಿಯು ಆಮಿಷ ಒಡ್ಡಿದೆ ಎಂದು ಎಎಪಿ ಶನಿವಾರ ಗಂಭೀರ ಆರೋಪ ಮಾಡಿದೆ.

ಅರವಿಂದ ಕೇಜ್ರಿವಾಲ್

ಆರೋಪವನ್ನು ಅಲ್ಲಗಳೆದಿರುವ ಬಿಜೆಪಿ, ಶಾಸಕರ ಹೆಸರನ್ನು ಬಹಿರಂಗಪಡಿಸಲಿ ಎಂದು ಸವಾಲು ಹಾಕಿದೆ.

'ವ್ಯಕ್ತಿಯೊಬ್ಬರುಎಎಪಿಶಾಸಕರೊಬ್ಬರನ್ನು ಸಂಪರ್ಕಿಸಿ ಆಮಿಷ ಒಡ್ಡಿರುವ ದೂರವಾಣಿ ದಾಖಲೆ ಲಭ್ಯವಿದ್ದು, ಅದನ್ನು ನಂತರದಲ್ಲಿ ಬಹಿರಂಗಪಡಿಸುತ್ತೇವೆ' ಎಂದು ಎಎಪಿ ಹೇಳಿದೆ.

ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು 'ಎಕ್ಸ್'ನಲ್ಲಿ, ''ಅವರು' ನಮ್ಮ ಪಕ್ಷದ 7 ಶಾಸಕರನ್ನು ಸಂಪರ್ಕಿಸಿದ್ದರು. ಅವರನ್ನು ಶೀಘ್ರವೇ ಬಂಧಿಸಲಾಗುವುದು' ಎಂದು ಎಚ್ಚರಿಸಿದ್ದಾರೆ.

'ನಮ್ಮ ಶಾಸಕರಿಗೆ ಕರೆ ಮಾಡಿರುವ ವ್ಯಕ್ತಿಯೊಬ್ಬರು ತಮ್ಮೊಂದಿಗೆ 21 ಎಎಪಿ ಶಾಸಕರು ಸಂಪರ್ಕದಲ್ಲಿ ಇರುವುದಾಗಿ ಹೇಳಿಕೊಂಡಿದ್ದಾರೆ. ಸರ್ಕಾರ ಪತನಗೊಂಡ ನಂತರ ಚುನಾವಣೆಯಲ್ಲಿ ಸ್ಪರ್ಧಿಸಲು ಶಾಸಕರಿಗೆ ತಲಾ ₹25 ಕೋಟಿ ಹಣ ಮತ್ತು ಬಿಜೆಪಿಯಿಂದ ಟಿಕೆಟ್ ನೀಡುವುದಾಗಿ ಭರವಸೆ ನೀಡಿದ್ದಾರೆ. ನಮ್ಮ 7 ಶಾಸಕರು ಆಮಿಷವನ್ನು ತಿರಸ್ಕರಿಸಿದ್ದಾರೆ' ಎಂದಿದ್ದಾರೆ.

'ಅಬಕಾರಿ ನೀತಿ ಹಗರಣದಲ್ಲಿ ನನ್ನನ್ನು ಬಂಧಿಸುವ ಮತ್ತು ಸರ್ಕಾರವನ್ನು ಉರುಳಿಸುವ ಹಲವು ಪ್ರಯತ್ನಗಳನ್ನು ನಡೆಸಲಾಗುತ್ತಿದೆ. ಇದೇ ಕಾರಣಕ್ಕಾಗಿ ಕಳೆದ ಒಂಬತ್ತು ವರ್ಷಗಳಲ್ಲಿ ಹಲವು ಪಿತೂರಿಗಳನ್ನು ನಡೆಸಿದ್ದಾರೆ. ಆದರೆ, ಅವೆಲ್ಲವೂ ವಿಫಲವಾಗಿವೆ' ಎಂದು ಹೇಳಿದ್ದಾರೆ.

ಇದಕ್ಕೆ ಪ್ರತಿಕ್ರಿಯೆ ನೀಡಿರುವ ದೆಹಲಿ ಬಿಜೆಪಿ ಅಧ್ಯಕ್ಷ ವೀರೇಂದ್ರ ಸಚ್‌ದೇವ್, 'ಕೇಜ್ರಿವಾಲ್ ಅವರು ರಾಜಕೀಯವಾಗಿ ಎಷ್ಟೊಂದು ಹತಾಶರಾಗಿದ್ದಾರೆ ಎಂಬುದನ್ನು ಈ ಹೇಳಿಕೆ ತೋರಿಸುತ್ತದೆ. ರಾಜಕೀಯವಾಗಿ ಇನ್ನೂ ಬದುಕುಳಿದಿದ್ದೇನೆ ಎಂದು ತೋರಿಸಲು ಇಂಥ ನಿರಾಧಾರ ಆರೋಪ ಮಾಡುತ್ತಿದ್ದಾರೆ' ಎಂದು ತಿರುಗೇಟು ನೀಡಿದ್ದಾರೆ.

ಜ್ಞಾನವಾಪಿ ಮಸೀದಿ: ಪೂಜೆಗೆ ವಿಎಚ್‌ಪಿ ಆಗ್ರಹ

ನವದೆಹಲಿ/ಭೋಪಾಲ್ (ಪಿಟಿಐ): ಜ್ಞಾನವಾಪಿ ಮಸೀದಿ ಸಂಕೀರ್ಣದ ವೈಜ್ಞಾನಿಕ ಸಮೀಕ್ಷೆಯಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯು (ಎಎಸ್‌ಐ) ಕಂಡುಕೊಂಡಿರುವ ಅಂಶಗಳು ಅಲ್ಲಿ ದೇವಾಲಯ ಇತ್ತೆಂಬುದನ್ನು ಪುಷ್ಟೀಕರಿಸಿವೆ. ಆ ಪ್ರದೇಶದ ವಜುಖಾನಾದಲ್ಲಿ ಪತ್ತೆಯಾಗಿರುವ ಲಿಂಗಕ್ಕೆ ಸೇವಾ ಪೂಜೆ ನೆರವೇರಿಸಲು ಅನುಮತಿ ನೀಡಬೇಕು ಎಂದು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಶನಿವಾರ ಆಗ್ರಹಿಸಿದೆ.

ಮಸೀದಿಯ ಆಡಳಿತ ನಿರ್ವಹಿಸುತ್ತಿರುವ ಇಂತೆಜಾಮಿಯಾ ಸಮಿತಿಯು ಮಸೀದಿಯನ್ನು ಗೌರವಯುತವಾಗಿ ಬೇರೆಡೆಗೆ ಸ್ಥಳಾಂತರಿಸಲು ಒಪ್ಪಿಗೆ ನೀಡಬೇಕು. ಜ್ಞಾನವಾಪಿ ಮಸೀದಿ ಇರುವ ಸ್ಥಳವನ್ನು ಹಿಂದೂಗಳಿಗೆ ಹಸ್ತಾಂತರಿಸಬೇಕು ಎಂದು ವಿಎಚ್‌ಪಿ ಕಾರ್ಯಾಧ್ಯಕ್ಷ ಅಲೋಕ್ ಕುಮಾರ್ ಪತ್ರಿಕಾ ಹೇಳಿಕೆಯಲ್ಲಿ ಆಗ್ರಹಿಸಿದ್ದಾರೆ.

ಮಸೀದಿ ಸಂಕೀರ್ಣದ ವೈಜ್ಞಾನಿಕ ಸಮೀಕ್ಷೆಯಲ್ಲಿ ಎಎಸ್‌ಐ ಕಂಡುಕೊಂಡಿರುವ ಅಂಶಗಳನ್ನು ಇಡೀ ಜಗತ್ತೇ ಒಪ್ಪಿಕೊಳ್ಳಲಿದೆ ಎಂದು ಮಧ್ಯಪ್ರದೇಶ ಸಚಿವ ಪ್ರಹ್ಲಾದ್ ಪಟೇಲ್ ಹೇಳಿದ್ದಾರೆ. ದೇವಾಲಯವನ್ನು ಧ್ವಂಸ ಮಾಡಿ, ಮಸೀದಿ ನಿರ್ಮಿಸಲಾಗಿದೆ ಎಂದು ಹಿಂದೂ ಅರ್ಜಿದಾರರ ಪರ ವಕೀಲ ವಿಷ್ಣು ಶಂಕರ್ ಜೈನ್ ಹೇಳಿರುವುದನ್ನು ಉಲ್ಲೇಖಿಸಿ ಪಟೇಲ್ ಅವರು ಈ ಹೇಳಿಕೆ ನೀಡಿದ್ದಾರೆ.

ಜಬಲ್‌ಪುರದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ನ್ಯಾಯಾಲಯಕ್ಕೆ ಎಎಸ್‌ಐ ಸಲ್ಲಿಸಿರುವ ವರದಿಯು ಎಲ್ಲರ ಜ್ಞಾನವನ್ನು ಹೆಚ್ಚಿಸುವಂತಿದೆ ಎಂದಿದ್ದಾರೆ.

ಮನೋಜ್ ಜಾರಾಂಗೆ ನಡೆಸುತ್ತಿದ್ದ ಉಪವಾಸ ಸತ್ಯಾಗ್ರಹ ಅಂತ್ಯ

ಮರಾಠ ಮೀಸಲಿಗೆ ಸರ್ಕಾರದ ನಿರ್ಧಾರ

ಮುಂಬೈನ ವಾಶಿಯಲ್ಲಿ ಮರಾಠ ಮೀಸಲಾತಿಗೆ ಆಗ್ರಹಿಸಿ ಪ್ರತಿಭಟನೆ ನಡೆಸಿದ ಸಮುದಾಯದ ಸದಸ್ಯರು —ಪಿಟಿಐ ಚಿತ್ರ

ಮುಂಬೈ (ಪಿಟಿಐ): ಮರಾಠ ಸಮುದಾಯಕ್ಕೆ ಮೀಸಲಾತಿ ನೀಡಬೇಕೆಂಬ ಆಗ್ರಹ ಈಡೇರಿಸುವುದಾಗಿ ಮಹಾರಾಷ್ಟ್ರ ಸರ್ಕಾರದಿಂದ ಭರವಸೆ ದೊರೆತ ಬಳಿಕ ಸಾಮಾಜಿಕ ಕಾರ್ಯಕರ್ತ ಮನೋಜ್ ಜಾರಾಂಗೆ ಅವರು ತಮ್ಮ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹವನ್ನು ಶನಿವಾರ ಕೈಬಿಟ್ಟರು.

ಮುಖ್ಯಮಂತ್ರಿ ಏಕನಾಥ ಶಿಂದೆ ಅವರು, 'ಮರಾಠ ಸಮುದಾಯಕ್ಕೆ ಮೀಸಲಾತಿ ದೊರಕುವವರೆಗೆ ಇತರೆ ಹಿಂದುಳಿದ ವರ್ಗಕ್ಕೆ (ಒಬಿಸಿ) ಲಭ್ಯವಿರುವ ಎಲ್ಲ ಸೌಲಭ್ಯ ಮತ್ತು ಹಕ್ಕುಗಳನ್ನು ಪಡೆಯಲು ಅವರು ಅರ್ಹರು' ಎಂದು ಘೋಷಿಸಿದ ನಂತರ ಚಳವಳಿಯನ್ನು ಅಂತ್ಯಗೊಳಿಸಿದರು.

'ಸರ್ಕಾರ ತಮ್ಮ ಎಲ್ಲ ಬೇಡಿಕೆಗಳನ್ನು ಈಡೇರಿಸುತ್ತಿರುವ ಕಾರಣ ಪ್ರತಿಭಟನೆ ಹಿಂಪಡೆಯುತ್ತಿದ್ದೇನೆ' ಎಂದು ಜಾರಾಂಗೆ ತಿಳಿಸಿದರು.

ಜಾರಾಂಗೆ ಅವರು ಕಳೆದ ಶನಿವಾರ ದಿಂದಲೇ ಅಂತರವಾಲಿ ಸಾರಥಿ ಗ್ರಾಮದಿಂದ ಪ್ರತಿಭಟನಾ ಮೆರವಣಿಗೆ ಆರಂಭಿಸಿದ್ದರು. ಜ.26ರಂದು ದಕ್ಷಿಣ ಮುಂಬೈನ ಆಜಾದ್ ಮೈದಾನ ತಲುಪಿ ಅಲ್ಲಿ ಉಪವಾಸ ಸತ್ಯಾಗ್ರಹ ಕೈಗೊಳ್ಳುವ ಯೋಜನೆ ರೂಪಿಸಿದ್ದರು. ಆದರೆ ಬೃಹತ್ ಸಂಖ್ಯೆಯ ಪ್ರತಿಭಟನಕಾರರಿಗೆ ದಕ್ಷಿಣ ಮುಂಬೈನಲ್ಲಿ ಸ್ಥಳಾವಕಾಶ ಇಲ್ಲ ಎಂದು ಪೊಲೀಸರು ಸೂಚಿಸಿದ್ದ ಕಾರಣ ವಾಶಿಯಲ್ಲಿಯೇ ಶುಕ್ರವಾರ ಸತ್ಯಾಗ್ರಹ ಆರಂಭಿಸಿದ್ದರು.

ಈ ವೇಳೆ ಜನರನ್ನು ಉದ್ದೇಶಿಸಿ ಮಾತನಾಡಿದ್ದ ಜಾರಾಂಗೆ, ಬೇಡಿಕೆಗಳು ಈಡೇರದಿದ್ದರೆ ಬೆಂಬಲಿಗರೊಂದಿಗೆ ಶನಿವಾರ ಮುಂಬೈ ಪ್ರವೇಶಿಸುವುದಾಗಿ ಎಚ್ಚರಿಸಿದ್ದರು.

ಈ ಬೆನ್ನಲ್ಲೇ ಸರ್ಕಾರ ಅವರ ಮನವೊಲಿಕೆಗೆ ಯತ್ನಿಸಿತ್ತು. ಅವರೊಂದಿಗೆ ಮಾತುಕತೆ ನಡೆಸಲು ನಿಯೋಗವನ್ನೂ ಕಳುಹಿಸಿತ್ತು. ಬೇಡಿಕೆಗಳನ್ನು ಕುರಿತ ಸುಗ್ರೀವಾಜ್ಞೆಯ ಕರಡು ಪ್ರತಿಯನ್ನೂ ನಿಯೋಗದೊಂದಿಗೆ ಕಳುಹಿಸಿತ್ತು.

ರಕ್ತಸಂಬಂಧಿಗಳು: ಕುಣಬಿ ಜಾತಿಗೆ ಸಂಬಂಧಿಸಿದ ದಾಖಲೆಗಳನ್ನು ಹೊಂದಿರುವ ಮರಾಠ ಸಮುದಾಯದ ಎಲ್ಲಾ ಸದಸ್ಯರನ್ನು ಕುಣಬಿಗಳ ರಕ್ತ ಸಂಬಂಧಿಗಳು ಎಂದು ಪರಿಗಣಿಸುವುದಾಗಿ ಸರ್ಕಾರ ಅಧಿಸೂಚನೆ ಹೊರಡಿಸಿತು. ಕುಣಬಿ ಎನ್ನುವುದು ರೈತಾಪಿ ಸಮುದಾಯವಾಗಿದ್ದು, ಇತರೆ ಹಿಂದುಳಿದ ವರ್ಗಗಳ ವ್ಯಾಪ್ತಿಗೆ ಸೇರುತ್ತದೆ. ಮರಾಠ ಸಮುದಾಯಕ್ಕೂ ಕುಣಬಿ ಜಾತಿ ಪ್ರಮಾಣಪತ್ರವನ್ನು ನೀಡಬೇಕೆಂದು ಆಗ್ರಹಿಸಿ ಜಾರಾಂಗೆ ಅವರು ಪ್ರತಿಭಟನೆ ನಡೆಸುತ್ತಿದ್ದರು.

ಈ ಬೆಳವಣಿಗೆಗಳ ಬಳಿಕ ಮುಖ್ಯಮಂತ್ರಿ ಶಿಂದೆ ಶನಿವಾರ ಬೆಳಿಗ್ಗೆ ಪ್ರತಿಭಟನಾ ಸ್ಥಳಕ್ಕೆ ತೆರಳಿ, ಜಾರಾಂಗೆ ಅವರಿಗೆ ಹಣ್ಣಿನ ರಸ ನೀಡಿದರು.

'ಹಿಂಬಾಗಿಲ ಪ್ರವೇಶ': ಮರಾಠ ಮೀಸಲು ವಿಚಾರವಾಗಿ ಸರ್ಕಾರ ಅಧಿಸೂಚನೆ ಹೊರಡಿಸಿದ ಬೆನ್ನಲ್ಲೇ ಸಚಿವ ಸಂಪುಟದಲ್ಲಿ ಭಿನ್ನಾಭಿಪ್ರಾಯ ವ್ಯಕ್ತವಾಗಿದೆ. ರಾಜ್ಯ ಸರ್ಕಾರದ ನಿರ್ಧಾರಕ್ಕೆ ಸಚಿವ, ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿ ಬಣದ ಸದಸ್ಯ ಛಗನ್ ಭುಜಬಲ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ. 'ಮರಾಠ ಸಮುದಾಯಕ್ಕೆ ಹಿಂಬಾಗಿಲ ಮೂಲಕ ಒಬಿಸಿ ವರ್ಗಕ್ಕೆ ಪ್ರವೇಶ ನೀಡಿದಂತಾಗಿದೆ. ಇದೊಂದು ಕಣ್ಣೊರೆಸುವ ತಂತ್ರ' ಎಂದು ಅವರು ಆರೋಪಿಸಿದ್ದಾರೆ.

'ಒಬಿಸಿಗಳು ಆತಂಕ ಪಡುವ ಅಗತ್ಯವಿಲ್ಲ'

ಮರಾಠ ಮೀಸಲಾತಿ ವಿಚಾರವಾಗಿ ರಾಜ್ಯ ಸರ್ಕಾರ ಕೈಗೊಂಡ ನಿರ್ಣಯದಿಂದ ಇತರೆ ಹಿಂದುಳಿದ ವರ್ಗಗಳು (ಒಬಿಸಿ) ಆತಂಕ ಪಡುವ ಅಗತ್ಯವಿಲ್ಲ ಎಂದು ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಒಬಿಸಿಗೆ ಯಾವುದೇ ಅನ್ಯಾಯ ಮಾಡಿಲ್ಲ. ಕುಣಬಿ ದಾಖಲೆ ಇರುವ ಅಫಿಡವಿಟ್ ಸಲ್ಲಿಸದವರಿಗೆ ಕುಣಬಿ ಜಾತಿ ಪ್ರಮಾಣಪತ್ರ ನೀಡುವುದಿಲ್ಲ' ಎಂದು ಸ್ಪಷ್ಟಪಡಿಸಿದರು. ಮೀಸಲಾತಿ ಹೋರಾಟದ ವೇಳೆ ಸಾರ್ವಜನಿಕ ಆಸ್ತಿ–ಪಾಸ್ತಿ ಹಾನಿ ಮಾಡಿದವರ ವಿರುದ್ಧ ದಾಖಲಾಗಿರುವ ಎಫ್‌ಐಆರ್ ಹಿಂಪಡೆಯುವುದಿಲ್ಲ ಎಂದು ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಪ್ರಧಾನಿ ಅವಹೇಳನ ಹೈಕೋರ್ಟ್ ಸಿಬ್ಬಂದಿ ಅಮಾನತು

ಕೊಚ್ಚಿ (ಪಿಟಿಐ): ಗಣರಾಜ್ಯೋತ್ಸವದ ದಿನ ಪ್ರದರ್ಶಿಸಿದ ಕಿರುನಾಟಕವೊಂದರಲ್ಲಿ ಅವಹೇಳನಕಾರಿ ಸಂಗತಿಗಳನ್ನು ಪ್ರದರ್ಶಿಸಿದ, ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಸರ್ಕಾರವನ್ನು ಟೀಕಿಸಿದ ಆರೋಪದ ಅಡಿಯಲ್ಲಿ ಕೇರಳ ಹೈಕೋರ್ಟ್ ತನ್ನ ಇಬ್ಬರು ಅಧಿಕಾರಿಗಳನ್ನು ಅಮಾನತು ಮಾಡಿದೆ.

ಸಹಾಯಕ ರಿಜಿಸ್ಟ್ರಾರ್ (ಹಿರಿಯ ಶ್ರೇಣಿ) ಮತ್ತು ಇನ್ನೊಬ್ಬ ಅಧಿಕಾರಿ (ಕೋರ್ಟ್ ಕೀಪರ್) ಅಮಾನತುಗೊಂಡವರು ಎಂದು ಹೈಕೋರ್ಟ್‌ನ ರಿಜಿಸ್ಟ್ರಾರ್ ಜನರಲ್ ತಿಳಿಸಿದ್ದಾರೆ.

ಮೊದಲ ಮಹಿಳಾ ಸುಬೇದಾರ್ ಪ್ರೀತಿ ರಜಾಕ್

ನವದೆಹಲಿ (ಪಿಟಿಐ): ಚಾಂಪಿಯನ್ ಶೂಟರ್ ಹವಿಲ್ದಾರ್ ಪ್ರೀತಿ ರಜಾಕ್ ಅವರು ಭಾರತೀಯ ಸೇನೆಯ ಮೊದಲ ಮಹಿಳಾ ಸುಬೇದಾರ್ ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ.

ಪ್ರೀತಿ 2022 ಡಿಸೆಂಬರ್‌ನಲ್ಲಿ ಸೇನೆಗೆ ಸೇರಿದ್ದರು.

'ಪ್ರೀತಿ ಪದೋನ್ನತಿ ಹೊಂದಿರುವುದು ಭಾರತೀಯ ಸೇನೆ ಮತ್ತು ಮಹಿಳೆಯರಿಗೆ ಹೆಮ್ಮೆಯ ವಿಷಯ. ಅವರ ಸಾಧನೆಯು ನಾರಿಶಕ್ತಿಯ ಪ್ರತೀಕ' ಎಂದು ಸೇನೆ ತಿಳಿಸಿದೆ.

ತೆಲಂಗಾಣದಲ್ಲೂ ಜಾತಿಗಣತಿ

ಹೈದರಾಬಾದ್: ಆಂಧ್ರಪ್ರದೇಶ ನಂತರ, ತೆಲಂಗಾಣ ಕೂಡ ಜಾತಿ ಗಣತಿ ಮಾಡಲು ಮುಂದಾಗಿದೆ.

ಶನಿವಾರ ನಡೆದ ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು ಹಾಗೂ ಬುಡಕಟ್ಟು ಕಲ್ಯಾಣ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ, ಮುಖ್ಯಮಂತ್ರಿ ರೇವಂತ ರೆಡ್ಡಿ ಅವರು ಜಾತಿ ಗಣತಿ ನಡೆಸುವುದಕ್ಕೆ ಅಗತ್ಯವಿರುವ ಕ್ರಮಗಳನ್ನು ತೆಗೆದುಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಎಸ್‌ಸಿಬಿ–ಮಹಾರಾಷ್ಟ್ರ ಹಣಾಹಣಿ ಇಂದು

ಬೆಂಗಳೂರು: ಭಾನುವಾರ ಬೆಂಗಳೂರು ಫುಟ್‌ಬಾಲ್ ಕ್ಲಬ್ ಕ್ರೀಡಾಂಗಣದಲ್ಲಿ ನಡೆಯಲಿರುವ ಐ ಲೀಗ್ –2 ಟೂರ್ನಿಯ ಪಂದ್ಯದಲ್ಲಿ ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ಮತ್ತು ಮಹಾರಾಷ್ಟ್ರ ಆರೆಂಜ್ ಫುಟ್‌ಬಾಲ್ ಕ್ಲಬ್ ಮುಖಾಮುಖಿಯಾಗಲಿವೆ.

ಮಧ್ಯಾಹ್ನ 3.30ಕ್ಕೆ ಪಂದ್ಯ ನಡೆಯಲಿದೆ. ಹಲವು ಯುವ ಪ್ರತಿಭೆಗಳಿಗೆ ಅವಕಾಶ ನೀಡಲಾಗಿದೆ. ಆಟಗಾರರು ದೈಹಿಕವಾಗಿ ಫಿಟ್ ಆಗಿದ್ದು, ಪಂದ್ಯ ಗೆಲ್ಲುವ ವಿಶ್ವಾಸ ಇದೆ ಎಂದು ಎಸ್‌ಸಿಬಿ ಕೋಚ್ ಚಂದ್ರಶೇಖರ್ ಚಿಂತನ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಹಿಂದಿನ ಪಂದ್ಯಗಳಲ್ಲಿ ಆಗಿರುವ ತಪ್ಪುಗಳನ್ನು ಸರಿಪಡಿಸಿಕೊಂಡು ಗೆಲ್ಲುವ ಕಡೆ ಗಮನ ಹರಿಸಲಾಗುವುದು. ಈ ಟೂರ್ನಿಯಲ್ಲಿ ಎಂಟು ತಂಡಗಳು ಪಾಲ್ಗೊಂಡಿದ್ದು, ತವರಿನ ಪಂದ್ಯದ ಬಳಿಕ ಫೆ.1ರಂದು ಗೋವಾದಲ್ಲಿ ಟೆಂಪೊ ಎಫ್‌ಸಿ ವಿರುದ್ಧ ಆಡಲಾಗುವುದು. ಮೊದಲ ಎರಡು ತಂಡಗಳು ಐಲೀಗ್‌ನಲ್ಲಿ ಪಾಲ್ಗೊಳ್ಳುವ ಅರ್ಹತೆ ಗಳಿಸಲಿವೆ ಎಂದರು.

ಪಟ್ನಾ–ಪುಣೆ ಪಂದ್ಯ ಟೈ

ಪಟ್ನಾ(ಪಿಟಿಐ): ಪಟ್ನಾ ಪೈರೇಟ್ಸ್ ಮತ್ತು ಪುಣೇರಿ ಪಲ್ಟನ್ ತಂಡಗಳ ನಡುವೆ ಶನಿವಾರ ರಾತ್ರಿ ಪ್ರೊ ಕಬಡ್ಡಿ ಟೂರ್ನಿಯಲ್ಲಿ ನಡೆದ ಪಂದ್ಯವು ಟೈ ಆಯಿತು. ಪುಣೇರಿ ತಂಡದ ನಾಯಕ ಅಸ್ಲಂ ಇನಾಮದಾರ್ (13 ಅಂಕ) ಮತ್ತು ಪಟ್ನಾ ತಂಡದ ನಾಯಕ ಸಚಿನ್ (9 ಅಂಕ) ಅವರ ಹೋರಾಟದಿಂದಾಗಿ ಪಂದ್ಯವು 32–32ರಿಂದ ಟೈ ಆಯಿತು.

ಆತಿಥೇಯ ಪಟ್ನಾ ತಂಡದ ಮಯೂರ್ ಕದಂ ಟ್ಯಾಕ್ಲಿಂಗ್‌ನಲ್ಲಿ ಐದು ಅಂಕ ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ದಬಂಗ್ ಡೆಲ್ಲಿ ತಂಡವು 36–27ರಿಂದ ಯುಪಿ ಯೋಧಾಸ್ ವಿರುದ್ಧ ಜಯಗಳಿಸಿತು. ದಬಂಗ್ ತಂಡದ ನಾಯಕ ಆಶು ಮಲೀಕ್ 11 ಅಂಕಗಳನ್ನು ಗಳಿಸಿದರು.

ಶೂಟಿಂಗ್: ಅನುರಾಧಾ ದೇವಿಗೆ ಬೆಳ್ಳಿ

ನವದೆಹಲಿ (ಪಿಟಿಐ): ಭಾರತದ ಅನುರಾಧಾ ದೇವಿ ಅವರು ತಮ್ಮ ಪದಾರ್ಪಣೆಯ ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್‌ನಲ್ಲಿ ಬೆಳ್ಳಿ ಪದಕ ಗೆದ್ದರು.

ಈಜಿಪ್ಟ್‌ನ ಕೈರೊದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಶನಿವಾರ ಮಹಿಳೆಯರ 10 ಮೀಟರ್ಸ್ ಏರ್ ಪಿಸ್ತೂಲ್ ವಿಭಾಗದಲ್ಲಿ ಈ ಸಾಧನೆ ಮಾಡಿದರು.

33 ವರ್ಷದ ಅನುರಾಧಾ ಅವರು ರಿಯೊ ಒಲಿಂಪಿಕ್ ಚಾಂಪಿಯನ್, ಗ್ರೀಸ್‌ನ ಅನಾ ಕೊರಾಕಾಕಿ ಅವರಿಗೆ ನಿಕಟ ಪೈಪೋಟಿಯೊಡ್ಡಿದರು. ಅನಾ ಅವರು ಚಿನ್ನದ ಪದಕಕ್ಕೆ ಕೊರಳೊಡ್ಡಿದರು.

ಒಲಿಂಪಿಕ್ ಕೋಟಾ ನಡೆಯಲಿರುವ ಈ ವರ್ಷದ ಮೊದಲ ವಿಶ್ವಕಪ್ ಸ್ಪರ್ಧೆ ಇದಾಗಿದೆ.ಇದರಲ್ಲಿ ಮೊದಲ ಪದಕ ಗೆದ್ದುಕೊಡುವಲ್ಲಿ ಅನುರಾಧಾ ಯಶಸ್ವಿಯಾದರು.

ಅನುರಾಧಾ ದೇವಿ

ಪುರುಷರ 10 ಮೀ ಏರ್ ಪಿಸ್ತೂಲ್ ವಿಭಾಗದಲ್ಲಿ ಭಾರತದ ಸಾಗರ್ ಡಂಗಿ ಫೈನಲ್ ತಲುಪಿದರು. ಆದರೆ ಆರನೇ ಸ್ಥಾನ ಪಡೆದರು.

ಪ್ಯಾರಿಸ್ ಕೋಟಾ ಪಡೆದಿರುವ ರಿದಂ ಸಂಗ್ವಾನ್ ಅವರು ಮಹಿಳೆಯರ ವಿಭಾಗದ ಫೈನಲ್ ತಲುಪಿದರು. ಅವರು ಅರ್ಹತಾ ಸುತ್ತಿನಲ್ಲಿ 584 ಅಂಕಗಳೊಂದಿಗೆ ಮೊದಲ ಸ್ಥಾನ ಗಳಿಸಿದ್ದರು. ಇದೇ ಸುತ್ತಿನಲ್ಲಿ ಅನುರಾಧಾ 575 ಅಂಕಗಳನ್ನು ಗಳಿಸಿದ್ದರು.

ಫೈನಲ್‌ನಲ್ಲಿ ಅನುರಾಧಾ ಅವರು 239.9 ಸ್ಕೋರ್ ಗಳಿಸಿದರು. ಅವರು ಅನಾ ಕೊಕಾಕೊಕಿ ಅವರಿಂದ ಕೇವಲ 1.2 ಅಂಕ ಹಿನ್ನಡೆಯಲ್ಲಿದ್ದರು.

ಭಾರತದ ಇನ್ನುಳಿದ ಶೂಟರ್‌ಗಳಲ್ಲಿ ಮನು ಭಾಕರ್ ಪಿಸ್ತೂಲ್ ವಿಭಾಗದಲ್ಲಿ 572 ಗಳಿಸಿ 15ನೇ ಸ್ಥಾನ ಪಡೆದರು.

ಪುರುಷರ ಟ್ರ್ಯಾಪ್‌ನಲ್ಲಿ ಜೋರಾವರ್ ಸಂಧು ಅವರು ಮೂರು ಸುತ್ತುಗಳಲ್ಲಿ 70 ಸ್ಕೋರ್ ಮಾಡಿದರು. 15ನೇ ಸ್ಥಾನ ಪಡೆದರು. ಮಹಿಳೆಯರ ಟ್ರ್ಯಾಪ್‌ನಲ್ಲಿ ರಾಜೇಶ್ವರಿ ಕುಮಾರಿ 19ನೇ ಸ್ಥಾನ ಪಡೆದರು.

ಪುರುಷರ ಹಾಕಿ: ದಕ್ಷಿಣ ಆಫ್ರಿಕಾ ಮಣಿಸಿದ ಭಾರತ

ಕೇಪ್‌ಟೌನ್ (ಪಿಟಿಐ): ದಕ್ಷಿಣ ಆಫ್ರಿಕಾ ಪ್ರವಾಸದಲ್ಲಿ ಗೆಲುವಿನ ಓಟ ಮುಂದುವರಿಸಿದ ಭಾರತ ಪುರುಷರ ಹಾಕಿ ತಂಡವು ಆತಿಥೇಯರ ವಿರುದ್ಧ 3-0 ಅಂತರದ ಸುಲಭ ಗೆಲುವು ದಾಖಲಿಸಿತು.

ನಾಯಕ ಹರ್ಮನ್ ಪ್ರೀತ್ ಸಿಂಗ್ (2ನೇ ನಿಮಿಷ), ಅಭಿಷೇಕ್ (13ನೇ ನಿಮಿಷ) ಮತ್ತು ಸುಮಿತ್ (30ನೇ ನಿಮಿಷ) ಗೋಲು ಗಳಿಸಿದರು.

ಆಕ್ರಮಣಕಾರಿ ಆಟ ಪ್ರಾರಂಭಿಸಿದ ಭಾರತ ಆಟಗಾರರು, ಆರಂಭಿಕ ಪೆನಾಲ್ಟಿ ಕಾರ್ನರ್‌ನಲ್ಲಿ ಹರ್ಮನ್ ಪ್ರೀತ್ ಪ್ರಬಲ ಡ್ರ್ಯಾಗ್ ಫ್ಲಿಕ್ ಮೂಲಕ ಪರಿವರ್ತಿಸಿ ಮುನ್ನಡೆ ಸಾಧಿಸಿದರು.

ಮೊದಲ ಕ್ವಾರ್ಟರ್ ನಲ್ಲಿ ಒಂದೆರಡು ನಿಮಿಷಗಳು ಬಾಕಿ ಇರುವಾಗ ಅಭಿಷೇಕ್ ಆಕ್ರಮಣಕಾರಿ ಶೈಲಿಯ ಆಟದಲ್ಲಿ ಯಶಸ್ವಿಯಾದರು.

ಎರಡನೇ ಕ್ವಾರ್ಟರ್‌ನಲ್ಲಿ ಎದುರಾಳಿ ತಂಡದ ಉತ್ತಮ ದಾಳಿಗಳ ಹೊರತಾಗಿಯೂ, ಭಾರತದ ರಕ್ಷಣೆ ಕೋಟೆಯನ್ನು ದಾಟಲು ಸಾಧ್ಯವಾಗಲಿಲ್ಲ.

ಪಂದ್ಯದ ಮೊದಲಾರ್ಧದಲ್ಲಿ ಸುಮಿತ್ ಮತ್ತೊಂದು ಗೋಲ್ ಬಾರಿಸಿ ಭಾರತಕ್ಕೆ 3-0 ಮುನ್ನಡೆ ತಂದುಕೊಟ್ಟರು.

ಮೂರನೇ ಕ್ವಾರ್ಟರ್‌ನಲ್ಲಿ ಎರಡೂ ಕಡೆಯಿಂದ ಸಾಕಷ್ಟು ಆಟ ಕಂಡುಬಂದರೂ, ಗೋಲು ಗಳಿಸಲು ಆಗಲಿಲ್ಲ. ಪಂದ್ಯದ ಕೊನೆಯ 15 ನಿಮಿಷಗಳಲ್ಲಿ ದಕ್ಷಿಣ ಆಫ್ರಿಕಾ ಗೋಲು ಗಳಿಸುವ ಪ್ರಯತ್ನವನ್ನು ಭಾರತ ತಪ್ಪಿಸಿತು.

ಭಾರತ ಭಾನುವಾರ ನೆದರ್ಲೆಂಡ್ಸ್ ವಿರುದ್ಧ ಸೆಣಸಲಿದೆ.

ಅಭ್ಯಾಸ ಆರಂಭಿಸಿದ ಹಾರ್ದಿಕ್ ಪಾಂಡ್ಯ

ವಡೋದರಾ(ಪಿಟಿಐ): ಭಾರತ ತಂಡದ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರು ಗಾಯದಿಂದ ಚೇತರಿಸಿಕೊಂಡಿದ್ದು ಶನಿವಾರ ನೆಟ್ಸ್‌ನಲ್ಲಿ ಬೌಲಿಂಗ್ ಅಭ್ಯಾಸ ಮಾಡಿದರು.

ಹಾರ್ದಿಕ್ ಪಾಂಡ್ಯ

ಹೋದ ವರ್ಷ ನಡೆದ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಆಡುವಾಗ ಅವರ ಹಿಮ್ಮಡಿಗೆ ಗಾಯವಾಗಿತ್ತು. ಅದರ ನಂತರ ಅವರು ಚಿಕಿತ್ಸೆ ಮತ್ತು ಆರೈಕೆ ಪಡೆಯುತ್ತಿದ್ದರು.

'17 ವರ್ಷದ ಹಿಂದೆ ನನ್ನ ಕ್ರಿಕೆಟ್ ಪಯಣ ಆರಂಭವಾಗಿದ್ದ ಇದೇ ಕ್ರೀಡಾಂಗಣಕ್ಕೆ ಮರಳಿರುವುದು ಸಂತಸವಾಗುತ್ತಿದೆ' ಎಂಬ ಹೇಳಿಕೆ ಇರುವ ವಿಡಿಯೊವೊಂದನ್ನು ಹಾರ್ದಿಕ್ ಇನ್ಸ್ಟಾಗ್ರಾಮ್‌ನಲ್ಲಿ ಹಂಚಿಕೊಂಡಿದ್ದಾರೆ.

ಗಾಯದಿಂದಾಗಿ ಅವರು ಈಚೆಗೆ ಅಫ್ಗಾನಿಸ್ತಾನ ವಿರುದ್ಧ ನಡೆದ ಟಿ20 ಸರಣಿಯಲ್ಲಿಯೂ ಆಡಿರಲಿಲ್ಲ.

ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಮುಂಬೈ ಇಂಡಿಯನ್ಸ್ ತಂಡದ ನಾಯಕರನ್ನಾಗಿ ಅವರನ್ನು ಈಚೆಗೆ ನೇಮಕ ಮಾಡಲಾಗಿದೆ. ಅವರು ಹೋದ ಋತುವಿನಲ್ಲಿ ಗುಜರಾತ್ ಟೈಟನ್ಸ್‌ನಲ್ಲಿ ಆಡಿದ್ದರು. ಈ ವರ್ಷ ಮತ್ತೆ ಮುಂಬೈ ತಂಡಕ್ಕೆ ಮರಳಿದ್ದಾರೆ.

ಕೌಶಿಕ್ ದಾಳಿ; ಮುನ್ನಡೆ ಸನಿಹ ಕರ್ನಾಟಕ

ಮಯಂಕ್ ಪಡೆ ಓಟಕ್ಕೆ ದೇವನಾಥ್ ಅಡ್ಡಿ; ವೈಶಾಖ, ವಿದ್ವತ್‌ಗೆ ತಲಾ 2 ವಿಕೆಟ್

ಅಗರ್ತಲಾ: ಕರ್ನಾಟಕದ ಮಧ್ಯಮ ವೇಗಿ ವಾಸುಕಿ ಕೌಶಿಕ್ ಮತ್ತೊಮ್ಮೆ ಮಿಂಚಿದರು.

ಇಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಕರ್ನಾಟಕ ತಂಡವು ಕೌಶಿಕ್ (19–6–34–4) ಪರಿಣಾಮಕಾರಿ ಬೌಲಿಂಗ್ ಬಲದಿಂದ ತ್ರಿಪುರ ಎದುರು ಮೊದಲ ಇನಿಂಗ್ಸ್ ಮುನ್ನಡೆಯ ಸನಿಹ ಬಂದು ನಿಂತಿದೆ.

ಪಂದ್ಯದ ಎರಡನೇ ದಿನವಾದ ಶನಿವಾರ ಕರ್ನಾಟಕ ತಂಡವು ಮೊದಲ ಇನಿಂಗ್ಸ್‌ನಲ್ಲಿ 241 ರನ್ ಗಳಿಸಿ ಆಲೌಟ್ ಆಯಿತು. ಆತಿಥೇಯ ತಂಡವು ಇದಕ್ಕುತ್ತರವಾಗಿ 79 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 198 ರನ್ ಗಳಿಸಿತು.

ಆದರೆ, ದೊಡ್ಡ ಅಂತರದ ಮುನ್ನಡೆ ಗಳಿಸುವ ಕರ್ನಾಟಕದ ಆಸೆಗೆ ತ್ರಿಪುರದ ದೇವನಾಥ್ (ಬ್ಯಾಟಿಂಗ್ 57) ಮತ್ತು ಮಣಿಶಂಕರ್ ಮುರಾಸಿಂಗ್ (39 ರನ್) ಅಡ್ಡಿಯಾದರು. 96 ರನ್‌ಗಳಿಗೆ 6 ವಿಕೆಟ್ ಕಳೆದುಕೊಂಡಿದ್ದ ತ್ರಿಪುರ ತಂಡಕ್ಕೆ ಅವರಿಬ್ಬರೂ ಆಸರೆಯಾದರು.

ಪಂದ್ಯದ ಮೂರನೇ ದಿನವಾದ ಭಾನುವಾರ ಬೆಳಿಗ್ಗೆ ಆದಷ್ಟು ಬೇಗನೆ ಕೊನೆಯ ವಿಕೆಟ್ ಕಬಳಿಸಿದರೆ ಅಲ್ಪ ಅಂತರದ ಮುನ್ನಡೆ ಗಳಿಸಿ, ಎರಡನೇ ಇನಿಂಗ್ಸ್‌ನಲ್ಲಿ ದೊಡ್ಡ ಮೊತ್ತದ ಗುರಿ ನೀಡುವ ಅವಕಾಶವಂತೂ ಮಯಂಕ್ ಬಳಗಕ್ಕೆ ಈಗ ಇದೆ.

ಏಳನೇ ಕ್ರಮಾಂಕದ ಬ್ಯಾಟರ್ ದೇವನಾಥ್ ಮತ್ತು ಮುರಾಸಿಂಗ್ ಅವರು ಎಂಟನೇ ವಿಕೆಟ್ ಜೊತೆಯಾಟದಲ್ಲಿ 76 ರನ್ ಸೇರಿಸಿದರು. 66ನೇ ಓವರ್‌ನಲ್ಲಿ ಮುರಾಸಿಂಗ್ ಅವರನ್ನು ಔಟ್ ಮಾಡಿದ ಕೌಶಿಕ್ ಜೊತೆಯಾಟ ಮುರಿದರು.

ವಾಸುಕಿ ಕೌಶಿಕ್

ಇದಕ್ಕೂ ಮುನ್ನ ಆರಂಭಿಕ ಬ್ಯಾಟರ್ ಬಿಕ್ರಂ ಘೋಷ್ (44; 114ಎ) ಮುನ್ನ ನಾಯಕ ವೃದ್ಧಿಮಾನ್ ಸಹಾ (28; 67ಎ) ಅವರು ತಂಡದ ಕುಸಿತ ತಡೆಯುವ ಪ್ರಯತ್ನ ಮಾಡಿದ್ದರು.

ತ್ರಿಪುರದ ಕೊನೆಯ ಬ್ಯಾಟರ್ ಅಭಿಜಿತ್ ಸರ್ಕಾರ್ (ಬ್ಯಾಟಿಂಗ್ 5) ಅವರನ್ನು ಔಟ್ ಮಾಡಲು ದಿನದಾಟದ ಕೊನೆಯವರೆಗೂ ಬೌಲರ್‌ಗಳಿಗೆ ಸಾಧ್ಯವಾಗಲಿಲ್ಲ. ಸರ್ಕಾರ್ 20 ಎಸೆತಗಳನ್ನು ಎದುರಿಸಿದ್ದು, ಕ್ರೀಸ್‌ನಲ್ಲಿದ್ದಾರೆ.

ಕೌಶಿಕ್ ಆರಂಭಿಕ ಪೆಟ್ಟು: ಈ ಬಾರಿಯ ಟೂರ್ನಿಯ ಎಲ್ಲ ಪಂದ್ಯಗಳಲ್ಲಿಯೂ ವಿಕೆಟ್ ಗಳಿಸುವಲ್ಲಿ ಮುಂಚೂಣಿಯಲ್ಲಿರುವ ಕೌಶಿಕ್ ಇಲ್ಲಿ ತ್ರಿಪುರ ತಂಡಕ್ಕೆ ಆರಂಭಿಕ ಪೆಟ್ಟು ಕೊಟ್ಟರು. ಅವರು ಇನಿಂಗ್ಸ್‌ನ ಎಂಟನೇ ಓವರ್‌ನಲ್ಲಿ ವಿಕ್ರಂ ಕುಮಾರ್ ದಾಸ್ ವಿಕೆಟ್ ಕಬಳಿಸಿದರು. ಶ್ರೀಧಾಮ್ ಪಾಲ್ ಮತ್ತು ಅರ್ಧಶತಕದತ್ತ ಹೆಜ್ಜೆಹಾಕಿದ್ದ ಘೋಷ್ ವಿಕೆಟ್‌ಗಳನ್ನೂ ತಮ್ಮ ಬುಟ್ಟಿಗೆ ಹಾಕಿಕೊಂಡರು.

ಇನ್ನೊಂದೆಡೆ ವೈಶಾಖ ವಿಜಯಕುಮಾರ್ ಮತ್ತು ವಿದ್ವತ್ ಕಾವೇರಪ್ಪ ತಲಾ ಎರಡು ವಿಕೆಟ್ ಗಳಿಸಿ ಮಧ್ಯಮ ಕ್ರಮಾಂಕವನ್ನು ದುರ್ಬಲಗೊಳಿಸಿದರು.

ಹೆಚ್ಚದ ಮೊತ್ತ: ಶುಕ್ರವಾರ ದಿನದಾಟದ ಮುಕ್ತಾಯಕ್ಕೆ 78 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 241 ರನ್ ಗಳಿಸಿದ್ದ ಕರ್ನಾಟಕ ತಂಡವು ಎರಡನೇ ದಿನದಾಟದಲ್ಲಿ ಒಂದೂ ರನ್ ಗಳಿಸಲಿಲ್ಲ.

ಉಳಿದ ಎರಡು ವಿಕೆಟ್‌ಗಳೂ ಪತನಗೊಂಡವು. ಮುರಾಸಿಂಗ್ ಹಾಕಿದ ಮೊದಲ ಓವರ್‌ನಲ್ಲಿಯೇ ವೈಶಾಖ ಮತ್ತು ಕೌಶಿಕ್ ಔಟಾದರು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಕರ್ನಾಟಕ 241 (78.4 ಓವರ್‌ಗಳಲ್ಲಿ)

ವೈಶಾಖ ಬಿ ಮುರಾಸಿಂಗ್ 50 (64ಎ, 4X7)
ಶಶಿಕುಮಾರ್ ಎಲ್‌ಬಿಡಬ್ಲ್ಯು ಬಿ ಮುರಾಸಿಂಗ್ 19 (50ಎ, 4X3)
ವಿದ್ವತ್ ಔಟಾಗದೆ 4 (4ಎ)
ಕೌಶಿಕ್ ಬಿ ಮುರಾಸಿಂಗ್ 0 (1ಎ)
ಇತರೆ: 15 (ಬೈ 2, ಲೆಗ್‌ಬೈ 13)
ವಿಕೆಟ್ ಪತನ: 8–224 (ಶಶಿಕುಮಾರ್; 76.3), 9–241 (ವೈಶಾಖ ವಿಜಯಕುಮಾರ್; 78.3), 10–241 (ವಿ.ಕೌಶಿಕ್; 78.4)
ಬೌಲಿಂಗ್: ಎಂ.ಬಿ. ಮುರಾಸಿಂಗ್ 19.4–7–35–4, ರಾಣಾ ದತ್ತಾ 15–7–32–3, ಅಭಿಜಿತ್ ಸರ್ಕಾರ್ 14–3–55–2, ದೇವನಾಥ್ 13–3–50–1, ಪರ್ವೇಜ್ ಸುಲ್ತಾನ್ 17–3–54–0

ಮೊದಲ ಇನಿಂಗ್ಸ್ ತ್ರಿಪುರ 9ಕ್ಕೆ198 (79 ಓವರ್‌ಗಳಲ್ಲಿ)

ಘೋಷ್ ಎಲ್‌ಬಿಡಬ್ಲ್ಯು ಬಿ ಕೌಶಿಕ್ 44 (114ಎ, 4X8)
ದಾಸ್ ಸಿ ಶರತ್ ಬಿ ಕೌಶಿಕ್ 4 (23ಎ, 4X1)
ಶ್ರೀಧಾಮ್ ಎಲ್‌ಬಿಡಬ್ಲ್ಯು ಕೌಶಿಕ್ 1 (17ಎ)
ಸುದೀಪ್ ಸಿ ಶರತ್ ಬಿ ವೈಶಾಖ 1 (9ಎ)
ಗಣೇಶ್ ಸಿ ಶರತ್ ಬಿ ವಿದ್ವತ್ 6 (19ಎ, 4X1)
ಸಹಾ ಎಲ್‌ಬಿಡಬ್ಲ್ಯು ಹಾರ್ದಿಕ್ 28 (67ಎ, 4X3, 6X1)
ದೇವನಾಥ್ ಔಟಾಗದೆ 57 (131ಎ, 4X7)
ಮುರಾಸಿಂಗ್ ಸಿ ಶರತ್ ಬಿ ಕೌಶಿಕ್ 39 (61ಎ, 4X4)
ಪರ್ವೇಜ್ ಸಿ ಶರತ್ ಬಿ ವಿದ್ವತ್ 0 (7ಎ)
ರಾಣಾ ಸಿ ಕಿಶನ್ ಬಿ ವೈಶಾಖ 4 (12ಎ, 4X1)
ಸರ್ಕಾರ್ ಔಟಾಗದೆ 5 (20ಎ, 4X1)
ಇತರೆ: 9 (ಲೆಗ್‌ಬೈ 2, ವೈಡ್ 1, ನೋಬಾಲ್ 6)
ವಿಕೆಟ್ ಪತನ: 1–6 (ವಿಕ್ರಂಕುಮಾರ್ ದಾಸ್; 7.6), 2–20 (ಶ್ರೀಧಾಮ್ ಪಾಲ್; 13.2), 3–26 (ಸುದೀಪ್ ಚಟರ್ಜಿ; 16.2), 4–37 (ಗಣೇಶ್ ಸತೀಶ್; 23.2), 5–81 (ವಿಕ್ರಂ ಘೋಷ್ 39.3), 6–96 (ವೃದ್ಧಿಮಾನ್ ಸಹಾ; 44.2), 7–172 (ಮಣಿಶಂಕರ್ ಮುರಾಸಿಂಗ್; 65.2), 8–174 (ಪರ್ವೇಜ್ ಸುಲ್ತಾನ್; 66.3), 9–183 (ರಾಣಾ ದತ್ತಾ; 69.4)
ಬೌಲಿಂಗ್: ವಿದ್ವತ್ ಕಾವೇರಪ್ಪ 21–8–38–2, ವಿ. ಕೌಶಿಕ್ 19–6–34–4, ವೈಶಾಖ ವಿಜಯಕುಮಾರ್ 19–4–64–2, ಹಾರ್ದಿಕ್ ರಾಜ್ 12–2–43–1, ಕೆ.ಶಶಿಕುಮಾರ್ 8–2–17–0

ಇಂಗ್ಲೆಂಡ್ ಲಯನ್ಸ್ ಎದುರು ಭಾರತ ಎ ತಂಡಕ್ಕೆ ಜಯ

ಅಹಮದಾಬಾದ್ (ಪಿಟಿಐ): ಸೌರಭ್ ಕುಮಾರ್ ಸ್ಪಿನ್ ದಾಳಿಯ ಬಲದಿಂದ ಭಾರತ ಎ ತಂಡವು ಇಂಗ್ಲೆಂಡ್ ಲಯನ್ಸ್ ಎದುರಿನ 'ಟೆಸ್ಟ್'ನಲ್ಲಿ ಇನಿಂಗ್ಸ್ ಮತ್ತು 16 ರನ್‌ಗಳಿಂದ ಗೆದ್ದಿತು.

ಇದರೊಂದಿಗೆ ಮೂರು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಇಂಗ್ಲೆಂಡ್ ಲಯನ್ಸ್: 152. ಭಾರತ: 111.1 ಓವರ್‌ಗಳಲ್ಲಿ 489. ಎರಡನೇ ಇನಿಂಗ್ಸ್: ಇಂಗ್ಲೆಂಡ್: 321 (ಒಲಿ ರಾಬಿನ್ಸನ್ 85, ಟಾಮ್ ಲಾವಿಸ್ 32, ಸೌರಭ್ 5ಕ್ಕೆ104, ಆಕಾಶ್ ದೀಪ್ 7ಕ್ಕೆ2)
ಫಲಿತಾಂಶ: ಭಾರತ ಎ ತಂಡಕ್ಕೆ ಇನಿಂಗ್ಸ್ ಮತ್ತು 16 ರನ್‌ಗಳ ಜಯ.

ರಾಮ ಮಂದಿರದ ಸಮ್ಮೋಹನ
ಜ್ವಲಂತ ಸಮಸ್ಯೆಗಳು ಗೌಣ 14

ಅಜ್ಜನ ಜಾತ್ರೆ ಮಹಾದಾಸೋಹ

ದಾಸೋಹದ ಮನೆಯಲ್ಲಿ ಸಾಂಬಾರು ತಯಾರಿ ಕಾರ್ಯ ಪರಿಶೀಲಿಸಿದ ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ

ಚಿತ್ರಗಳು: ಭರತ್ ಕಂದಕೂರ

ಮೊದಲು ಧಾರ್ಮಿಕ ಕಾರ್ಯಕ್ರಮಗಳಿಗೆ ಸೀಮಿತವಾಗಿದ್ದ ಕೊಪ್ಪಳದ ಗವಿಮಠದ ಜಾತ್ರೆ ಹಿಂದಿನ ಎರಡು ದಶಕಗಳಿಂದೀಚೆಗೆ ನಾವೀನ್ಯತೆ ಪಡೆದುಕೊಂಡಿದೆ. ಜಾತ್ರೆ ಪೂರ್ವದಲ್ಲಿಯೇ ಹಳ್ಳಿಗಳಲ್ಲಿ ಹಬ್ಬದ ಸಂಭ್ರಮ ಕಂಡುಬರುತ್ತದೆ. 'ಅಜ್ಜನ ಸೇವೆ' ಎನ್ನುವ ಸಾರ್ಥಕ ಭಾವ ಭಕ್ತರಲ್ಲಿರುವ ಪರಿಣಾಮವೇ ದಾಸೋಹ ಮಹಾದಾಸೋಹವಾಗಿ ಬದಲಾಗಿದ್ದು, ಇದು ಫೆಬ್ರುವರಿ 9 ರವರೆಗೆ ಕನಿಷ್ಠ 30 ಲಕ್ಷ ಭಕ್ತರಿಗೆ ಸಮರ್ಪಣೆಯಾಗುತ್ತದೆ...

ಪ್ರಮೋದ

ಸೂರ್ಯೋದಯಕ್ಕೂ ಮೊದಲು ಎದ್ದು ಮೈ ಹಣ್ಣಾಗುವಂತೆ ದಿನಪೂರ್ತಿ ದುಡಿದು ದಣಿಯುವ ರೈತಾಪಿ ವರ್ಗದ ಹಳ್ಳಿ ಜನರಿಗೆ ಅದಾಗಲೇ ಮಲಗುವ ಹೊತ್ತಾಗಿದ್ದರೂ ಯಾರೂ ಮಲಗಿರಲಿಲ್ಲ. ಹೊತ್ತು ಏರುತ್ತಿದ್ದಂತೆ ಜೋಳದ ರೊಟ್ಟಿ ತಟ್ಟುವ ಸದ್ದು ಜೋರಾಗಿ ಕೇಳುತ್ತಿತ್ತು. ನಿಗಿನಿಗಿ ಕೆಂಡವಾಗಿದ್ದ ಕಟ್ಟಿಗೆಯ ಒಲೆಯ ಮುಂದೆ ಕುಳಿತಿದ್ದ ಮಹಿಳೆಯರಿಗೆ ಅದರ ಶಾಖ ತಟ್ಟಿದರೂ ಅದರತ್ತ ಗಮನ ಕೊಡದೆ ರೊಟ್ಟಿ ತಟ್ಟುತ್ತಿದ್ದರು.

ತಮ್ಮ ಪಾಲಿನ ಕೊನೆಯ ರೊಟ್ಟಿ ಮಾಡಿ ಮುಗಿಸಿ ಕೈಗೆ ಅಂಟಿಕೊಂಡಿದ್ದ ಹಿಟ್ಟನ್ನು ನೀರಿನಿಂದ ತೊಳೆದುಕೊಳ್ಳುತ್ತಿದ್ದ ಕೊಪ್ಪಳ ತಾಲ್ಲೂಕಿನ ಹಟ್ಟಿ ಗ್ರಾಮದ ಹನುಮವ್ವಗೆ 'ಎಷ್ಟಾದರೂ ಹಿಟ್ಟು ಕೊಡಿ, ರೊಟ್ಟಿ ಮಾಡಿಕೊಡುತ್ತೇನೆ' ಎನ್ನುವ ಅತ್ಯುತ್ಸಾಹ. 'ಒಂದು ರೊಟ್ಟಿ ಮಾಡಲು ಎಷ್ಟು ಹಣ ತೆಗೆದುಕೊಳ್ಳುತ್ತೀರಿ' ಎನ್ನುವ ಪ್ರಶ್ನೆಗೆ 'ನಯಾಪೈಸೆಯೂ ಇಲ್ಲ' ಎನ್ನುವ ಜೊತೆಗೆ 'ಅಜ್ಜನ ಜಾತ್ರೆಗೆ ಸಣ್ಣ ಸೇವೆ' ಎಂದು ತಮ್ಮ ಎದುರಿದ್ದ ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ ಫೋಟೊಕ್ಕೆ ನಮಸ್ಕರಿಸಿದರು.

ಹಟ್ಟಿ ಗ್ರಾಮದಲ್ಲಿ 300 ಕುಟುಂಬಗಳಿವೆ. ದಶಕದಿಂದಲೂ ಡಿಸೆಂಬರ್ ಕೊನೆ ಅಥವಾ ಜನವರಿ ಮೊದಲ ವಾರದಲ್ಲಿ ರಾತ್ರಿ ವೇಳೆಯಲ್ಲಿ ಎಲ್ಲ ಮನೆಗಳಲ್ಲಿಯೂ ರೊಟ್ಟಿ ತಟ್ಟುವ ಸದ್ದು ಮಾರ್ದನಿಸುತ್ತದೆ.

ಜಿಲ್ಲೆಯಲ್ಲಿ ಈಗ ಬರಗಾಲವಿದೆ. ಬಿತ್ತಿದ ಬೆಳೆ ಹೊಲದಲ್ಲಿಯೇ ಒಣಗಿ ಹೋಗಿದೆ. ಕೂಲಿ ಕೆಲಸವೂ ಸಿಗುತ್ತಿಲ್ಲ. ಒಪ್ಪೊತ್ತಿನ ಊಟ ಹೇಗೆ ಎನ್ನುವ ಚಿಂತೆಯೂ ಇದೆ. ಆದರೂ ಅವರಲ್ಲಿ ವರ್ಷಾಂತ್ಯ ಬಂದರೆ ಭಾರಿ ಸಂಭ್ರಮ. ಇದಕ್ಕೆಲ್ಲ ಕಾರಣ 'ಅಜ್ಜನ ಜಾತ್ರೆ' ಹಾಗೂ 'ರೊಟ್ಟಿ ಜಾತ್ರೆ' ಎಂದು ಕರೆಯಿಸಿಕೊಳ್ಳುವ ಕೊಪ್ಪಳದ ಗವಿಸಿದ್ಧೇಶ್ವರ ಮಠದ ಜಾತ್ರಾ ಮಹೋತ್ಸವ. ಇದು ಹಳ್ಳಿ ಜನರ ಬದುಕಿನ ನೋವುಗಳನ್ನು ಮರೆಯಿಸಿ ಸಂಭ್ರಮ ಮೂಡಿಸುತ್ತಿದೆ.

ದಿನ ದೂಡುವುದೇ ಕಷ್ಟವೆನ್ನುವ ಪರಿಸ್ಥಿತಿಯಿದ್ದರೂ ಹನುಮವ್ವಗೆ 'ಸೇವೆ' ಮಾಡಲು ಒಂದಿನಿತೂ ಬೇಸರವಿಲ್ಲ. 'ಅಜ್ಜನ (ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ) ಆಶೀರ್ವಾದವಿದ್ದರೆ ಬರಗಾಲ ಕೂಡ ಸಿರಿಗಾಲವಾಗುತ್ತದೆ' ಎಂಬ ಅವರ ಮಾತು ಮಠದ ಮೇಲಿನ ಭಕ್ತಿಗೆ ಸಾಕ್ಷಿಯಂತಿತ್ತು. ಮಠಕ್ಕೆ ತಲುಪಬೇಕಾದ ಮೆಕ್ಕೆಜೋಳ, ಸಜ್ಜೆ, ಜೋಳ, ಗೋಧಿ, ತರಕಾರಿ–ಹೀಗೆ ಎಲ್ಲವನ್ನೂ ಸ್ವಚ್ಛಗೊಳಿಸುವ ಕಾಯಕವನ್ನು ಹಟ್ಟಿ ಗ್ರಾಮದ ಮಹಿಳೆಯರು ಮಾಡುತ್ತಿದ್ದರು.

ಮಹಿಳೆಯರು ಊರಲ್ಲಿದ್ದುಕೊಂಡು ಈ ಕೆಲಸಗಳನ್ನು ಮಾಡಿದರೆ, ಯುವಕರು ಹಾಗೂ ಊರಿನ ಹಿರಿಯರು ದವಸ, ಧಾನ್ಯಗಳನ್ನು ಟ್ರ್ಯಾಕ್ಟರ್‌ಗಳಲ್ಲಿ, ಚಕ್ಕಡಿಗಳಲ್ಲಿ ಹಾಕಿಕೊಂಡು ಅದಕ್ಕೊಂದಷ್ಟು ಅಲಂಕಾರ ಮಾಡಿ ಮೆರವಣಿಗೆ ಮೂಲಕ ಮಠಕ್ಕೆ ಒಪ್ಪಿಸುತ್ತಾರೆ. ಹಟ್ಟಿ ಗ್ರಾಮದ ಊರ ದೇವಿಯ ಜಾತ್ರೆಯ ಸಮಯದಲ್ಲಿ ಜನರಿಂದ ಸಂಗ್ರಹಿಸುವ ಹಣದಲ್ಲಿ ಉಳಿದದ್ದನ್ನು ಕೆಲವರಿಗೆ ಹಂಚುತ್ತಾರೆ. ಆಗ ಹಣ ಪಡೆದವರು ಗವಿಮಠದ ಜಾತ್ರೆ ವೇಳೆಗೆ ದುಪ್ಪಟ್ಟು ಕೊಡಬೇಕು. ಹೀಗೆ ದಶಕದ ಹಿಂದೆ ನೂರು ರೂಪಾಯಿಯಿಂದ ಆರಂಭವಾದ 'ಧನ ಸೇವೆ' ಈಗ ಲಕ್ಷಾಂತರ ರೂಪಾಯಿ ಲೆಕ್ಕಕ್ಕೆ ಬಂದಿದೆ. ಇದೇ ಹಣದಿಂದ ದಿನಸಿ ಖರೀದಿಸಿ ರೊಟ್ಟಿಗಳನ್ನು ತಯಾರಿಸಲಾಗುತ್ತಿದೆ.

ಇದು ಹಟ್ಟಿ ಗ್ರಾಮದ ಕಥೆಯಷ್ಟೇ ಅಲ್ಲ. ಗವಿಮಠದ ಜಾತ್ರೆಗೂ ಮೊದಲೇ ಕೊಪ್ಪಳ, ವಿಜಯನಗರ, ಬಳ್ಳಾರಿ, ರಾಯಚೂರು ಜಿಲ್ಲೆಗಳ ಬಹುತೇಕ ಹಳ್ಳಿಗಳಲ್ಲಿ ಇದೇ ರೀತಿಯ ಸಂಭ್ರಮ ಮನೆ ಮಾಡುತ್ತದೆ. ಜಾತ್ರೆ ಮೂರು ದಿನ ನಡೆದರೆ ಹಳ್ಳಿಗಳಲ್ಲಿ ದಿನಸಿ ತಯಾರಿಯಿಂದ ಹಿಡಿದು ಜಾತ್ರೆಯ ಮಹಾ ರಥೋತ್ಸವ ಮುಗಿಯುವ ತನಕ ಸುಮಾರು ಎರಡು ತಿಂಗಳು ಸಡಗರ ಕಂಡು ಬರುತ್ತದೆ.

ಸಿಂಧನೂರು, ಕಾರಟಗಿ ಹಾಗೂ ಮಸ್ಕಿ ತಾಲ್ಲೂಕುಗಳ ಸುತ್ತಮುತ್ತಲಿನ 50 ಗ್ರಾಮಗಳ ಭಕ್ತರು 15 ದಿನ ಖುಷಿಯಿಂದಲೇ ಎಂಟು ಲಕ್ಷ ಹೋಳಿಗೆ ತಯಾರಿಸಿದ್ದಾರೆ. ಹೋಳಿಗೆ ತಯಾರಿಸಲು ಬೇಕಾದ ಸಾಮಗ್ರಿಗಳನ್ನು ಪ್ಯಾಕೆಟ್ ಮಾಡಿ ಹಳ್ಳಿಗಳ ಪ್ರತಿ ಮನೆ ಮನೆಗೂ ಹಂಚಲಾಗುತ್ತದೆ. ಮನೆಯಲ್ಲಿ ತಯಾರಾಗುವ ಹೋಳಿಗೆಗಳನ್ನು ಗ್ರಾಮದ ದೇವಸ್ಥಾನ ಅಥವಾ ಸಮುದಾಯ ಭವನದಲ್ಲಿ ಸಂಗ್ರಹಿಸಿಟ್ಟು ಗವಿಮಠಕ್ಕೆ ತರಲಾಗುತ್ತದೆ. ಹಲವು ಸಿರಿವಂತರು ಈ ಕಾರ್ಯಕ್ಕೆ ನೆರವು ನೀಡುತ್ತಾರೆ. ಹಲವು ಗ್ರಾಮಗಳ ಸಾವಿರಾರು ಕುಟುಂಬಗಳಿಗೆ ಕೆಲಸ ಹಂಚಿಕೆಯಾಗುವುದರಿಂದ ಸೇವೆ ಯಾರಿಗೂ ಹೊರೆ ಎನಿಸುವುದಿಲ್ಲ.

ಮಹಾದಾಸೋಹಕ್ಕೆ ಅಡುಗೆ ಮಾಡುವವರು, ತರಕಾರಿ ಹೆಚ್ಚುವವರ ಕೊರತೆಯಾಗುವುದಿಲ್ಲ. ಜಿಲ್ಲೆ ಹಾಗೂ ಹೊರ ಜಿಲ್ಲೆಗಳ ಜನ ಸ್ವಯಂಪ್ರೇರಿತರಾಗಿ ಬಂದು ಹಗಲಿರುಳು ಸೇವೆ ಮಾಡುತ್ತಾರೆ. 15 ದಿನ ನಡೆಯುವ ಮಹಾದಾಸೋಹಕ್ಕೆ ಸೇವೆ ಸಲ್ಲಿಸಲು ಎರಡ್ಮೂರು ತಿಂಗಳು ಮೊದಲೇ ಹೆಸರು ನೋಂದಣಿ ಮಾಡಿಸುವ ಸಂಘಗಳು ಹಾಗೂ ಊರುಗಳು ಇವೆ. ಮಠ ಅವರಿಗೆ ಜವಾಬ್ದಾರಿ ಹಂಚುತ್ತದೆ.

ಅಜ್ಜನ ಜಾತ್ರೆಗೆ ನಮ್ಮದೂ ಒಂದಷ್ಟು ಸೇವೆ ಇರಲಿ ಎನ್ನುವ ಭಕ್ತಿಯೇ ಯುವಕರ, ಮಹಿಳೆಯರ, ಹಿರಿಯರನ್ನು 'ಮಹಾದಾಸೋಹ'ದ ಮನೆಯಲ್ಲಿ ಒಂದುಗೂಡಿಸುತ್ತದೆ. ಮಹಿಳಾ ಸ್ವಸಹಾಯ ಸಂಘದವರು, ಪತ್ರಕರ್ತರು, ವಿದ್ಯಾರ್ಥಿಗಳು, ಸ್ನೇಹಿತರು– ಹೀಗೆ ಪ್ರತಿಯೊಬ್ಬರೂ ಸೇವೆ ಮಾಡುತ್ತಾರೆ.

ನಾಲ್ಕೂವರೆ ಲಕ್ಷ ಮಿರ್ಚಿ

ಆರೇಳು ವರ್ಷಗಳ ಹಿಂದಿನಿಂದಲೂ ಜಾತ್ರೆಯಲ್ಲಿ ಮಿರ್ಚಿ ಮಾಡಲಾಗುತ್ತಿದೆ. ಇದಕ್ಕಾಗಿ 'ಮಿರ್ಚಿ ಬಳಗ' ಮಾಡಿಕೊಂಡಿರುವ ಕೊಪ್ಪಳದ ಸಮಾನ ಮನಸ್ಕ ಸ್ನೇಹಿತರು ಈ ಬಾರಿ ನಾಲ್ಕೂವರೆ ಲಕ್ಷ ಮಿರ್ಚಿ ತಯಾರಿಸಲು ಸಿದ್ಧತೆ ಮಾಡಿಕೊಂಡಿದ್ದು, 400 ಜನ ಬಾಣಸಿಗರು ಏಕಕಾಲಕ್ಕೆ ಮಿರ್ಚಿ ತಯಾರು ಮಾಡುವರು.

ಮಠಕ್ಕೆ ಹೀಗೆ ಹರಿದು ಬರುವ ಆಹಾರ ಪದಾರ್ಥಗಳ 'ಸಾಗರ' ಒಂದಡೆಯಾದರೆ, ಅಚ್ಚುಕಟ್ಟಾಗಿ ಭಕ್ತರಿಗೆ ತಲುಪಿಸುವ ವ್ಯವಸ್ಥೆ ಕೂಡ ಅಷ್ಟೇ ಶಿಸ್ತುಬದ್ಧ. ಅಡುಗೆ ತಯಾರಿಸಲು ಬಳಸುವ ಬೃಹತ್ ಗಾತ್ರದ ಕೊಪ್ಪರಿಕೆಗಳು ದೊಡ್ಡ ಈಜುಕೊಳಗಳಂತೆ ಭಾಸವಾಗುತ್ತವೆ. ಜಿಲ್ಲೆ ಹಾಗೂ ಹೊರ ಜಿಲ್ಲೆಗಳ ಉದ್ಯಮಿಗಳು, ಸಿರಿವಂತರು ಟನ್ ಲೆಕ್ಕದಲ್ಲಿ ನೀಡುವ ಅಕ್ಕಿ ಮಠಕ್ಕೆ ಬರುವ ಪ್ರತಿ ಭಕ್ತರ ಹಸಿವು ನೀಗಿಸುತ್ತವೆ. ಜಾತ್ರೆಯ 15 ದಿನಗಳ ಅವಧಿಯಲ್ಲಿ ಕಟ್ಟಿಗೆಯ ಒಲೆ ನಿರಂತರವಾಗಿ 'ಮಹಾದಾಸೋಹ ಜ್ಯೋತಿ'ಯಾಗಿ ಉರಿಯುತ್ತಲೇ ಇರುತ್ತದೆ. ಮಠದ ದಾಸೋಹ ವ್ಯವಸ್ಥೆ ಸಮಗ್ರ ಉಸ್ತುವಾರಿಯನ್ನು ಖುದ್ದು ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿಯೇ ನೋಡಿಕೊಳ್ಳುತ್ತಾರೆ. ಹೀಗಾಗಿ ಮಠಕ್ಕೆ ಬರುವ ಕೊನೆಯ ಭಕ್ತನ ಊಟವಾಗುವ ತನಕ ಕಾಯುವ ಪ್ರಸಾದದ ಕೌಂಟರ್ ಸದಾ ಅನ್ನಪೂರ್ಣೆಯಂತೆ ಕಾಣಿಸುತ್ತದೆ. ❖

ಇಷ್ಟೆಲ್ಲ ರಸದೌತಣ!

● ಮಾದಲಿ ● ಹೋಳಿಗೆ ● ಕರದಂಟು ● ಮೈಸೂರು ಪಾಕ್ ● ರವೆಉಂಡೆ ● ಜಾಮೂನು ಪದಾರ್ಥಗಳೇ **800** ಕ್ವಿಂಟಲ್‌ನಷ್ಟು ಸಂಗ್ರಹವಾಗಿದೆ.

19-20 ಲಕ್ಷ ರೊಟ್ಟಿ

300 ಕ್ವಿಂಟಲ್ ತರಕಾರಿ

300 ಕ್ವಿಂಟಲ್ ದವಸ ಧಾನ್ಯ

15 ಕ್ವಿಂಟಲ್ ತುಪ್ಪ

15 ಸಾವಿರ ಲೀಟರ್ ಹಾಲು ಹಾಗೂ ಮೊಸರು

6 ಸಾವಿರ ಕೆ.ಜಿ. ಉಪ್ಪಿನಕಾಯಿ

700 ಕ್ವಿಂಟಲ್ ಕೆಂಪು ಚಟ್ನಿ, ಪುಟಾಣಿ ಪುಡಿ, ಅಗಸಿಪುಡಿ

ಮಠದಲ್ಲಿ ತಯಾರಾದ ಮಿರ್ಚಿ

'ಜನರ ಭಕ್ತಿಯ ಸೇವೆಗೆ ನಿರುತ್ತರ'

ಭಕ್ತರ ಮಹಾದಾಸೋಹಕ್ಕಾಗಿ ಕಾಳು ಕಡಿ ತಂದುಕೊಡಿ ಎಂದು ಯಾರನ್ನೂ ಕೇಳಲಿಲ್ಲ. ರೊಟ್ಟಿ ತಯಾರಿಸಿ, ಹೋಳಿಗೆ ನೀಡಿ ಎಂದು ಯಾರ ಬಳಿಯೂ ಗೋಗರೆಯಲಿಲ್ಲ. ಆದರೆ ನಮ್ಮೂರ ಮಠ, ನಮ್ಮ ಜಾತ್ರೆ ಎನ್ನುವ ಭಕ್ತಿಯಿಂದ ದೊಡ್ಡ ಪ್ರಮಾಣದಲ್ಲಿ ಮಠಕ್ಕೆ ದವಸ, ಧಾನ್ಯ, ರೊಟ್ಟಿಗಳು ಬರುತ್ತಿವೆ. ಅವರ ಪ್ರೀತಿಗೆ, ಭಕ್ತಿಯ ಭಾವಕ್ಕೆ, ಅರ್ಪಣಾ ಮನೋಭಾವಕ್ಕೆ ಏನೆಂದು ಹೇಳಬೇಕು? ಏನು ಹೇಳಿದರೂ ಅದು ಕಡಿಮೆಯೇ. ಹೀಗಾಗಿ ಏನನ್ನೂ ಹೇಳದೆ ಅವರು ತೋರುವ ಭಕ್ತಿಗೆ, ಪ್ರೀತಿಗೆ ಶರಣಾಗಿ ನಿರುತ್ತರನಾಗಿದ್ದೇನೆ.

–**ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ,** ಗವಿಮಠ ಕೊಪ್ಪಳ

ರಬ್ಬುಳಿಗೆಯಿಂದ ಭಕ್ಷ್ಯ ಭೋಜನದವರೆಗೆ

ಅನ್ನ, ಅಕ್ಷರ ಹಾಗೂ ಆಧ್ಯಾತ್ಮವನ್ನು ಆದರ್ಶವಾಗಿಟ್ಟುಕೊಂಡ ಗವಿಮಠದಲ್ಲಿ 208 ವರ್ಷಗಳಿಂದ ಕಾರ್ಯಕ್ರಮಗಳು ನಡೆಯುತ್ತಿವೆ. ಮಠದ ಸಂಪ್ರದಾಯ ಆಚರಣೆ, ಧಾರ್ಮಿಕ ಕಾರ್ಯಕ್ರಮಗಳಿಗೆ ಜಾತ್ರೆ ಸೀಮಿತವಾಗಿತ್ತು. ಮಠದಲ್ಲಿಯೇ ಜೋಳ ಬೀಸಿ ಮಾಡಲಾಗುತ್ತಿದ್ದ ರಬ್ಬುಳಿಗೆ (ಜೋಳದ ಅನ್ನ), ಸಜ್ಜಕ, ಬದನೇಕಾಯಿ ಪಲ್ಲೆ ಎರಡು ದಶಕಗಳ ಹಿಂದಿನ ದಾಸೋಹವಾಗಿತ್ತು. ಮಠಕ್ಕೆ ಭಕ್ತರಿಂದ ಬರುತ್ತಿದ್ದ ದಿನಸಿ ಕಡಿಮೆ ಪ್ರಮಾಣದಲ್ಲಿತ್ತು.

2002ರಲ್ಲಿ ಗವಿಮಠಕ್ಕೆ 18ನೇ ಪೀಠಾಧಿಪತಿಯಾಗಿ ಈಗಿನ ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ ಪಟ್ಟಾಧಿಕಾರ ವಹಿಸಿಕೊಂಡ ನಂತರದ ಎರಡ್ಮೂರು ವರ್ಷಗಳಲ್ಲಿ ಜಾತ್ರೆಯ ಸ್ವರೂಪ ಸಂಪೂರ್ಣವಾಗಿ ಬದಲಿಸಿದರು. ಅವರು ಮಠದ ವಿದ್ಯಾರ್ಥಿಯೇ ಆಗಿ ಒಳ–ಹೊರಗನ್ನು ತಿಳಿದಿದ್ದರಿಂದ ಜಾತ್ರೆಯನ್ನು ಸಾಮಾಜಿಕ ಜಾಗೃತಿ ಯಾತ್ರೆಯಾಗಿ ಮಾಡಿದರು. ಜಾತ್ರೆ ಸಮಯದಲ್ಲಿ ಮೂರು ದಿನಕ್ಕೆ ಸೀಮಿತವಾಗಿದ್ದ ದಾಸೋಹವನ್ನು 15 ದಿನಗಳಿಗೆ ವಿಸ್ತರಿಸಿದರು.

ಮಠದ ದಾಸೋಹ ಭವನದಲ್ಲಿ ಜೋಳದ ರೊಟ್ಟಿಗಳ ರಾಶಿ

ಜೀತದಿಂದ 'ಪದ್ಮಶ್ರೀ'ವರೆಗೆ...

ಎಂ. ಮಹೇಶ

ಸೋಮಣ್ಣ ಅವರು ಬುಡಕಟ್ಟು ಜನರ ಶ್ರೇಯೋಭಿವೃದ್ಧಿಗೆ ನಾಲ್ಕು ದಶಕಗಳಿಂದಲೂ ಶ್ರಮಿಸುತ್ತಾ ಬಂದಿದ್ದಾರೆ. ಇವರ ನಿಸ್ವಾರ್ಥ ಸೇವೆಗೆ ಕೇಂದ್ರ ಸರ್ಕಾರವು ಈ ಸಾಲಿನ ಪದ್ಮಶ್ರೀ ಪ್ರಶಸ್ತಿ ನೀಡಿದೆ. ಅಲ್ಲದೇ ರಾಜ್ಯ ಸರ್ಕಾರ ಕೊಡುವ 2023ರ ವಾಲ್ಮೀಕಿ ಪ್ರಶಸ್ತಿಗೂ ಭಾಜನರಾಗಿದ್ದಾರೆ.

ಜೀತದಾಳಾಗಿದ್ದ ವ್ಯಕ್ತಿ ಅದರಿಂದ ವಿಮುಕ್ತಿ ಪಡೆದ ಮೇಲೆ ಏನು ಮಾಡಬಹುದು? ತನ್ನ ಬದುಕನ್ನಷ್ಟೇ ನೋಡಿಕೊಂಡು ಸುಮ್ಮನಿರಬಹುದಿತ್ತು. ಆದರೆ, ಸೋಮಣ್ಣ ತಮ್ಮ ಪರಂಪರೆಯ ಮೂಲ ಬೇರುಗಳಂತಿರುವ ಬುಡಕಟ್ಟು ಜನರಿಗೆ ಘನತೆಯ ಬದುಕು ಕಲ್ಪಿಸಲು ಹೋರಾಡುತ್ತಾ ಅವರ ಪಾಲಿನ ಆಶಾಕಿರಣವಾಗಿದ್ದಾರೆ.

ಸೋಮಣ್ಣ, ಮೈಸೂರು ಜಿಲ್ಲೆ ಎಚ್‌.ಡಿ. ಕೋಟೆ ತಾಲ್ಲೂಕಿನ ಆಲತ್ತಾಳಹುಂಡಿಯವರು. ಈಗ ಮೊತ್ತ ಹಾಡಿಯಲ್ಲಿ ವಾಸವಿದ್ದಾರೆ. 66 ವರ್ಷದ ಇವರು 'ಪದ್ಮಶ್ರೀ' ಗೌರವಕ್ಕೆ ಭಾಜನವಾಗುವ ತನಕ ಸವೆಸಿದ ಹಾದಿ ಸುಲಭವಾದುದೇನಲ್ಲ. ನಾಲ್ಕು ದಶಕಗಳಿಂದ ಬುಡಕಟ್ಟು ಜನರ ಪರ ಧ್ವನಿ ಎತ್ತುತ್ತಾ ಬಂದಿದ್ದಾರೆ; ಅವರ ಬದುಕಿಗೆ ನೆರವಾಗುತ್ತಿದ್ದಾರೆ.

ಅವರಿಗಾಗ ಸುಮಾರು ಎಂಟು ವರ್ಷ. ತಾಯಿ ಹುಲ್ಲು ಕೊಯ್ದುಕೊಂಡು ಸರಗೂರಿಗೋ, ಎಚ್‌.ಡಿ. ಕೋಟೆಗೂ ತೆಗೆದುಕೊಂಡು ಹೋಗಿ ಮಾರಿ ಹಣ ತಂದರಷ್ಟೆ ಎಲ್ಲರ ಹೊಟ್ಟೆ ತುಂಬುತ್ತಿತ್ತು. ಒಮ್ಮೆ ಹೀಗೆ ಹೋಗುವಾಗ ಜಾರಿ ಬಿದ್ದರು. ಅವರ ಮೇಲೆ ಹುಲ್ಲಿನಹೊರೆ ಬಿದ್ದು ಆರೋಗ್ಯ ಹದಗೆಟ್ಟಿತು. ಆಗ ತಂದೆ ಕುನ್ನಯ್ಯ, ಸೋಮಣ್ಣನವರನ್ನು ಒಬ್ಬರ ಮನೆಗೆ ಜೀತಕ್ಕೆ ಇರಿಸಿದರು. ಒಂದು ವರ್ಷ ಊಟಕ್ಕಷ್ಟೆ ಜೀತ ಮಾಡಿದ ಸೋಮಣ್ಣಗೆ ಮುಂದಿನ ವರ್ಷ ಸಿಕ್ಕ ಕೂಲಿ ಹದಿನಾರೂವರೆ ರೂಪಾಯಿಗಳು! ಪ್ರತಿ ವರ್ಷ ಕೂಲಿ ಪ್ರಮಾಣ ಜಾಸ್ತಿಯಾಗುತ್ತಾ ಹೋಯಿತಾದರೂ ಜೀತ ನಿಲ್ಲಲಿಲ್ಲ. ಆಗ, ಜಾರಿಗೆ ಬಂದ ಜೀತ ವಿಮುಕ್ತಿ ಕಾಯ್ದೆ ಪರಿಣಾಮ ಸೋಮಣ್ಣ ಸ್ವತಂತ್ರರಾದರು. ಕೃಷಿಯೇ ಬದುಕಿಗೆ ಆಧಾರವಾಯಿತು.

ಹೋರಾಟದ ಹಾದಿ...: ಸೋಮಣ್ಣನವರನ್ನು ತಾಯಿ ಆಗಾಗ ಹಾಡಿಗಳಿಗೆ ಕರೆದುಕೊಂಡು ಹೋಗಿ ತಮ್ಮ ಬಂಧುಗಳನ್ನು ಪರಿಚಯಿಸುತ್ತಿದ್ದರು. ಅವರು ಎದುರಿಸುತ್ತಿದ್ದ ಸಂಕಷ್ಟಗಳು ಬಾಲಕನ ಮನಸ್ಸನ್ನು ಕಲಕುತ್ತಿದ್ದವು. ಆದಿವಾಸಿಗಳು ಅರಣ್ಯಕ್ಕೆ ಹೋಗಿ ಊಟಕ್ಕೆ ಬೇಕಾದ ಸೊಪ್ಪನ್ನು ಕೊಯ್ದುಕೊಂಡು ಬರಲು ಅರಣ್ಯ ಇಲಾಖೆಯವರು ಬಿಡುತ್ತಿರಲಿಲ್ಲ. ರೈತರ ಬಳಿ ಕೇಳಲು ಹೋದರೆ ಕಳವು ಮಾಡಲು ಬಂದಿದ್ದಾರೆ ಎಂದು ತಪ್ಪಾಗಿ ಭಾವಿಸಿ ಥಳಿಸುತ್ತಾರೆಂಬ ಭಯ. ಪರಿಣಾಮ ಹಸಿವಿನಿಂದ ನರಳಬೇಕಿತ್ತು. ಇದು, ಸೋಮಣ್ಣನವರ ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರಿತು. 'ನನ್ನ ಜನರಿಗೆ ಏನಾದರೂ ಮಾಡಬೇಕು' ಎನಿಸುತ್ತಲೇ ಇತ್ತು. ಅದಕ್ಕೆ ಅವರು ಆಯ್ದುಕೊಂಡ ಮಾರ್ಗವೇ 'ಹೋರಾಟ'.

ಸೋಮಣ್ಣ

1970ರಲ್ಲಿ ವನ್ಯಜೀವಿ ಸಂರಕ್ಷಣಾ ಕಾಯ್ದೆಯನ್ನು ಸರ್ಕಾರ ಜಾರಿಗೆ ತಂದ ನಂತರ ಬುಡಕಟ್ಟು ಜನರನ್ನು ಅರಣ್ಯದಿಂದ ಒಕ್ಕಲೆಬ್ಬಿಸುವ ಪ್ರಯತ್ನ ಆರಂಭಿಸಲಾಯಿತು. ಅದರ ವಿರುದ್ಧ ಹೋರಾಟದ ಪಣ ತೊಟ್ಟರು. ಇದಕ್ಕೆ ಬೆನ್ನೆಲುಬಾಗಲೆಂದು ದಲಿತ ಸಂಘರ್ಷ ಸಮಿತಿ ಕೂಡಿಕೊಂಡರು. ಅವರಿಗೆ ಕ್ಷೀರಸಾಗರ, ಕೋಟಿಗಾನಹಳ್ಳಿ ರಾಮಯ್ಯ, ಸಿದ್ದಲಿಂಗಯ್ಯ, ದೇವನೂರ ಮಹಾದೇವ, ಲಿಂಗದೇವರು ಹಳೇಮನೆ ಮೊದಲಾದವರು ಪ್ರೇರಣೆಯಾದರು.

ಕೆಲವು ವರ್ಷಗಳ ನಂತರ ತಮ್ಮದೇ ಆದ ಸಂಘಟನೆ ಕಟ್ಟಲು ನಿರ್ಧರಿಸಿದ ಅವರಿಗೆ ನೆರವಾದುದು ಹುಣಸೂರಿನ ಡೀಡ್ ಸಂಸ್ಥೆ. ಸಂಸ್ಥೆಯವರು ಸೋಮಣ್ಣ ಹಾಗೂ ಸಂಗಡಿಗರನ್ನು ಒಂದು ವರ್ಷ ಪರೀಕ್ಷೆಗೆ ಒಳಪಡಿಸಿದರು. ಮೊದಲಿಗೆ ಅನುಮಾನದಿಂದ ನೋಡಿದ್ದ ಅವರಿಗೆ ನಿಧಾನಕ್ಕೆ ವಿಶ್ವಾಸ ಮೂಡಿತು. ಆರ್ಥಿಕ ಸಹಾಯ ಮಾಡಿದರು. ಸೋಮಣ್ಣ ಹಾಗೂ ಮೂವರು ಸ್ನೇಹಿತರು ಹಾಡಿ, ಹಾಡಿಗಳಿಗೆ ಹೋದರು. ಅಲ್ಲಿನ ಬುಡಕಟ್ಟು ಜನರು ದಿನದೂಡುವುದೇ ಕಷ್ಟವಾಗಿತ್ತು. ಊಟಕ್ಕೆ ಪರದಾಡುತ್ತಿದ್ದರು. ಮಳೆಗಾಲದಲ್ಲಂತೂ ತೀವ್ರ ತೊಂದರೆ ಅನುಭವಿಸುತ್ತಾರೆ ಎನ್ನುವುದು ಗಮನಕ್ಕೆ ಬಂದಿತು. ಸಂಘಟನೆಯ ಕಿಚ್ಚು ಹೆಚ್ಚಾಯಿತು.

14ನೇ ಪುಟಕ್ಕೆ...

ಮಂಗಟ್ಟೆ ಮೋಹದಲ್ಲಿ ರಜನಿ

ಕೆ.ಎಚ್. ಓಬಳೇಶ್

ದಾಂಡೇಲಿ, ಜೋಯಿಡಾ ಅಂದಾಕ್ಷಣ ಥಟ್ಟನೆ ನೆನಪಾಗೋದು ದಟ್ಟ ಕಾಡು. ಇಲ್ಲಿ ಕೆಲಕಾಲ ಮೌನವಾಗಿ ಕುಳಿತರೆ ಕಾನನದೊಳಗೆ ಅಪರಿಚಿತರು ಗಹಗಹಿಸಿ ನಕ್ಕಂತೆ ಶಬ್ದ ಕೇಳುತ್ತದೆ. ಸಾಮೂಹಿಕವಾಗಿ ಕೇಳುವ ಈ ವಿಕಟ ಶಬ್ದಕ್ಕೆ ಹೊಸಬರಾದರೆ ಬೆಚ್ಚಿಬೀಳುವುದು ನಿಶ್ಚಿತ.

ಅಂದಹಾಗೆ ಅದು ಮಂಗಟ್ಟೆ (ಹಾರ್ನ್‌ಬಿಲ್) ಹಕ್ಕಿಗಳ ಕೂಗು! ಒಮ್ಮೆ ಕತ್ತೆತ್ತಿ ನೋಡಿದರೆ ಆಗಸದಲ್ಲಿ ತೇಲುತ್ತಾ ಬರುವ ಮಂಗಟ್ಟೆಗಳು ಕಾಣುತ್ತವೆ. ಮರದ ಟೊಂಗೆಗಳ ಮೇಲೆ ಕುಳಿತು ಅವು ಆಹಾರ ಅರಸುವ ಪರಿಯನ್ನು ನೋಡುವುದೇ ಆನಂದ.

ಅತಿ ದೊಡ್ಡದಾದ ಉದ್ದನೆಯ ಕೊಕ್ಕು ಹೊಂದಿದ ಅಪರೂಪದ ಹಕ್ಕಿ ಇದು. ಒಮ್ಮೆ ನೋಡಿದರೆ ಸ್ಮೃತಿಪಟಲದಿಂದ ಮರೆಯಾಗುವುದೇ ಇಲ್ಲ. ಹಳೆಯ ಮರಗಳ ಪೊಟರೆಯೇ ಇವುಗಳ ಗೂಡು. ಸಂತಾನೋತ್ಪತ್ತಿ ಕಾಲದಲ್ಲಿ ಪೊಟರೆವೊಕ್ಕುವ ಹೆಣ್ಣುಹಕ್ಕಿ ತನ್ನ ಮಲ ಮತ್ತು ಪೊಟರೆಯೊಳಗೆ ಕೆರೆದು ತೆಗೆದ ಪುಡಿಯನ್ನು ಹಿಟ್ಟಿನಂತೆ ಕಲಸಿ ಕೊಕ್ಕು ಹೊರಬರುವಷ್ಟು ಜಾಗವನ್ನಷ್ಟೇ ಬಿಟ್ಟು ಪೊಟರೆಯ ಬಾಗಿಲನ್ನು ಮುಚ್ಚುತ್ತದೆ.

ಬಳಿಕ ಹೆಣ್ಣಿಗೆ ಆಹಾರ ಪೂರೈಸುವುದೇ ಗಂಡುಹಕ್ಕಿಯ ಕೆಲಸ. ಈ ವೇಳೆ ಗಂಡು ಸಾವನ್ನಪ್ಪಿದರೆ ಇಡೀ ಮಂಗಟ್ಟೆ ಕುಟುಂಬವೇ ನಾಶವಾಗುತ್ತದೆ. ಇವುಗಳ ಬದುಕು ಪಕ್ಷಿಪ್ರಿಯರಿಗೆ ವಿಸ್ಮಯ ಮೂಡಿಸುತ್ತದೆ.

ದೊಡ್ಡ ದಾಸ ಮಂಗಟ್ಟೆ

ದಾಂಡೇಲಿಯ ರಜನಿ ರಾವ್ ಅವರು ಮಂಗಟ್ಟೆಯ ಈ ಜೀವನ ಕ್ರಮಕ್ಕೆ ಮನಸೋತಿದ್ದರ ಹಿಂದೆಯೂ ಕುತೂಹಲದ ಕಥನ ಇದೆ. ಅವರು ಖಾಸಗಿ ಹೈಸ್ಕೂಲ್‌ವೊಂದರಲ್ಲಿ ಶಿಕ್ಷಕಿಯಾಗಿದ್ದರು. ಆ ವೇಳೆ ಅರಣ್ಯ ಇಲಾಖೆಯಿಂದ ನಡೆಯುತ್ತಿದ್ದ ಹಾರ್ನ್‌ಬಿಲ್ ಫೆಸ್ಟಿವಲ್, ನೇಚರ್ ಕ್ಯಾಂಪ್‌ಗಳಲ್ಲಿ ಭಾಗವಹಿಸುತ್ತಿದ್ದರು. ಅಲ್ಲಿ ಪಕ್ಷಿತಜ್ಞರು ಮಂಗಟ್ಟೆಗಳ ಜೀವನಗಾಥೆ ಬಗ್ಗೆ ನೀಡುತ್ತಿದ್ದ ಮಾಹಿತಿಯಿಂದ ಆ ಪಕ್ಷಿ ಸಂಕುಲ ಕುರಿತು ಅವರಲ್ಲಿ ಕುತೂಹಲದ ಬೀಜ ಮೊಳಕೆಯೊಡೆಯಿತು.



ರಜನಿ ರಾವ್

ಬಳಿಕ ಸಮಯ ಸಿಕ್ಕಿದಾಗಲೆಲ್ಲಾ ಮಕ್ಕಳೊಟ್ಟಿಗೆ ಕಾಡು ಸುತ್ತುವುದು ಅವರ ಹವ್ಯಾಸವಾಯಿತು. ಈ ವೇಳೆ ಅವರಿಗೆ ದಾಂಡೇಲಿಗೆ ವಿವಿಧೆಡೆಯಿಂದ ಬರುತ್ತಿದ್ದ ನ್ಯಾಚುರಲಿಸ್ಟ್‌ಗಳ ಪರಿಚಯವೂ ಆಯಿತು. ಅವರೊಟ್ಟಿಗಿನ ಒಡನಾಟದಿಂದ 2017ರಲ್ಲಿ ಬೋಧನಾ ವೃತ್ತಿ ತೊರೆದು ಪೂರ್ಣ ಪ್ರಮಾಣದಲ್ಲಿ ಪಕ್ಷಿ ವೀಕ್ಷಕರಿಗೆ ಮಾರ್ಗದರ್ಶಿಯಾಗಿ ತೊಡಗಿಸಿಕೊಳ್ಳಲು ನಿರ್ಧರಿಸಿದರು.

ಸದ್ಯ ದಾಂಡೇಲಿಗೆ ಬರುವ ನೂರಾರು ಪ್ರವಾಸಿಗರು, ವಿದ್ಯಾರ್ಥಿಗಳಿಗೆ ಮಂಗಟ್ಟೆಗಳ ಬಗ್ಗೆ ಮಾರ್ಗದರ್ಶನ ನೀಡುತ್ತಿದ್ದಾರೆ. ಅವುಗಳ ಸಂರಕ್ಷಣೆಯಲ್ಲಿಯೂ ತೊಡಗಿಸಿಕೊಂಡಿದ್ದಾರೆ. ಶಾಲಾ ಮಕ್ಕಳನ್ನು ಕಾಡಿನೊಳಗೆ ಕರೆದೊಯ್ದು ಅಲ್ಲಿನ ಜೀವ ಪರಿಸರದ ಕೌತುಕಗಳ ಬಗ್ಗೆ ಮಾಹಿತಿ ನೀಡುತ್ತಾರೆ. ಇಲ್ಲಿಯವರೆಗೂ ಏಳು ಸಾವಿರಕ್ಕೂ ಹೆಚ್ಚು ಪ್ರವಾಸಿಗರು, ವಿದ್ಯಾರ್ಥಿಗಳಿಗೆ ಪಕ್ಷಿಗಳ ಬಗ್ಗೆ ಮಾರ್ಗದರ್ಶನ ನೀಡಿರುವುದು ಅವರ ಹೆಗ್ಗಳಿಕೆ.

ಕಾನೂನು ಪದವಿ ಶಿಕ್ಷಣ ಪೂರೈಸಿರುವ ರಜನಿ ರಾವ್, ಬಿಡುವು ಸಿಕ್ಕಿದಾಗ ದಾಂಡೇಲಿ- ಹಳಿಯಾಳದ ಕೋರ್ಟ್‌ನಲ್ಲಿ ವಕೀಲರಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ, ಪಕ್ಷಿ ವೀಕ್ಷಣೆಗೆ ಬರುವ ಪ್ರವಾಸಿಗರು, ವನ್ಯಜೀವಿ ಛಾಯಾಗ್ರಾಹಕರಿಗೆ ಮಾರ್ಗದರ್ಶನಕ್ಕೆ ಹೆಚ್ಚಿನ ಸಮಯ ಮೀಸಲಿಡುತ್ತಾರೆ.

13ನೇ ಪುಟಕ್ಕೆ...

ಡಿ.ಬಿ.ಹಳ್ಳಿಯ ಪುಟ್ಟ ಮಕ್ಕಳ ದೊಡ್ಡ ಸಾಧನೆ

ವೆಂಕಟೇಶ ಜಿ.ಎಚ್

ಭದ್ರಾ ನದಿ ಸಮೀಪದ ಪುಟ್ಟ ಹಳ್ಳಿಯೊಂದರ ಶಾಲಾ ಮಕ್ಕಳು ಮುಂಬೈನಲ್ಲಿ ನಡೆದ ರಾಷ್ಟ್ರಮಟ್ಟದ ವಿಜ್ಞಾನ ನಾಟಕ ಸ್ಪರ್ಧೆಯಲ್ಲಿ 'ವಿಶೇಷ ಜ್ಯೂರಿ ಪ್ರಶಸ್ತಿ'ಗೆ ಭಾಜನರಾದ ಯಶೋಗಾಥೆ ಇಲ್ಲಿದೆ...

ಭದ್ರಾವತಿ ತಾಲ್ಲೂಕಿನ ಪುಟ್ಟ ಊರು ದೊಂಬರ ಬೈರನಹಳ್ಳಿ (ಡಿ.ಬಿ.ಹಳ್ಳಿ). ಅಲ್ಲಿನ ಪದ್ಮದೀಪ ಪಬ್ಲಿಕ್ ಶಾಲೆಯ ಮಕ್ಕಳು ಮುಂಬೈನ ನೆಹರೂ ವಿಜ್ಞಾನ ಕೇಂದ್ರದಲ್ಲಿ ಕಳೆದ ವಾರ ಕೇಂದ್ರ ಸಂಸ್ಕೃತಿ ಸಚಿವಾಲಯ ಆಯೋಜಿಸಿದ್ದ ರಾಷ್ಟ್ರಮಟ್ಟದ ವಿಜ್ಞಾನ ನಾಟಕ ಸ್ಪರ್ಧೆಯಲ್ಲಿ 'ವಿಶೇಷ ಜ್ಯೂರಿ ಪ್ರಶಸ್ತಿ'ಗೆ ಭಾಜನರಾಗಿ ದೂರದ ಅರಬ್ಬೀ ಸಮುದ್ರದ ತಟದಲ್ಲಿ 'ಕನ್ನಡ ಡಿಂಡಿಮ' ಬಾರಿಸಿದ್ದಾರೆ.

ಭದ್ರಾ ನದಿಯ ಒಡಲ ಹಾದಿಯಿಂದಾಗಿ ಹಸಿರ ಸಮೃದ್ಧಿ ಹೊದ್ದ ದೊಂಬರ ಬೈರನಹಳ್ಳಿ ಹಾಗೂ ಸುತ್ತಲಿನ ಊರುಗಳಲ್ಲಿ ಅಡಿಕೆ ಬೆಳೆಯದ್ದೇ ಪಾರಮ್ಯ. ಬೆಳೆ ಮಾತ್ರವಲ್ಲ, ಅಡಿಕೆ ಕೇಣಿ (ವಹಿವಾಟು) ಮಾಡಿಯೂ ಊರವರು ಬೆಚ್ಚನೆಯ ಬದುಕು ಕಟ್ಟಿಕೊಂಡಿದ್ದಾರೆ. ಹೀಗಾಗಿ ವರ್ಷವಿಡೀ ಇಲ್ಲಿ ಅಡಿಕೆ ಧಾರಣೆಯ ಏರಿಳಿತದ್ದೇ ಸುದ್ದಿ. ಆದರೆ ಈ ಹಂಗಾಮಿನಲ್ಲಿ ಅಡಿಕೆ ಧಾರಣೆಯ ಸದ್ದನ್ನೂ ಊರ ಮಕ್ಕಳ ಈ ಸಾಧನೆ ಮಂಕಾಗಿಸಿದೆ. ಹತ್ತು ರಾಜ್ಯಗಳ ಪೈಪೋಟಿಯ ನಡುವೆ ಜ್ಯೂರಿಗಳ ಮೆಚ್ಚುಗೆಯ ಪ್ರಶಸ್ತಿ ಪಡೆದದ್ದು ಭದ್ರೆಯ ಸೀಮೆಯಲ್ಲಿ ಚರ್ಚೆಯ ಸಂಗತಿ ಆಗಿದೆ.

ಹೇಳಿಕೇಳಿ ಇದು (2024-25) ರಾಷ್ಟ್ರೀಯ ಸಿರಿಧಾನ್ಯಗಳ ವರ್ಷ. ಹೀಗಾಗಿ ಡಿ.ಬಿ.ಹಳ್ಳಿ ಶಾಲೆಯ ಮಕ್ಕಳು ಸಿರಿಧಾನ್ಯಗಳ ಮಹತ್ವ ಬಿಂಬಿಸುವ 'ಸಿರಿಧಾನ್ಯವೇ ಸರಿಧಾನ್ಯ' ಹೆಸರಿನ ನಾಟಕವನ್ನೇ ತಮ್ಮ ರಂಗಪಯಣಕ್ಕೆ ಆಯ್ದುಕೊಂಡಿದ್ದರು. ಶಾಲೆಯ ಪ್ರಾಚಾರ್ಯ ಕೆ.ತಂಗರಾಜು ಅದಕ್ಕೆ ಒತ್ತಾಸೆಯಾಗಿ ನಿಂತರೆ, ನೀನಾಸಂ ಪ್ರತಿಭೆ ಅಜಯ್ ಹಾಗೂ ಸಜಿ ಆರ್., ಮಾರ್ಗದರ್ಶನ ಮಾಡಿದ್ದರು.

ಸಾಂಪ್ರದಾಯಿಕವಾಗಿ ಭಾರತೀಯರ ಆಹಾರ ಪದ್ಧತಿಯ ಅಸ್ಮಿತೆಯೇ ಆಗಿದ್ದ ಸಿರಿಧಾನ್ಯಗಳು (ನವಣೆ, ಊದಲು, ಆರ್ಕ, ಸಾಮೆ, ಕೊರ್ಲೆ ಜತೆಗೆ ಸಜ್ಜೆ, ರಾಗಿ, ಬರಗು, ಜೋಳ) ನಂತರ ಆಧುನಿಕ ಬದುಕಿನಲ್ಲಿ 'ಹೈಬ್ರೀಡ್' ಧಾನ್ಯಗಳ ಗದ್ದಲದಲ್ಲಿ ಕಳೆದು ಹೋಗಿದ್ದವು. ಆದರೆ ಈಗ ಅವು ಹೇಗೆ ಬಹುರಾಷ್ಟ್ರೀಯ ಕಂಪನಿಗಳ 'ವ್ಯಾಪಾರಿ' ಹುನ್ನಾರಕ್ಕೆ ಸಿಲುಕಿವೆ. ಸಹಜ ಬದುಕಿನ ಭಾಗವಾಗಬೇಕಿದ್ದ ಈ ಧಾನ್ಯಗಳು ಪಥ್ಯ ಆಹಾರದ ನೆಪದಲ್ಲಿ ಸಿರಿವಂತರ ಪಾಲಾಗುತ್ತಿವೆ. ಅವು ಪಥ್ಯ ಅಲ್ಲ ಬದಲಿಗೆ ಸಹಜ ಆಹಾರ ಎಂಬುದನ್ನು 25 ನಿಮಿಷದ ಈ ನಾಟಕ ಮನೋಜ್ಞವಾಗಿ ಕಟ್ಟಿಕೊಡುತ್ತದೆ.

ಪ್ರೇಕ್ಷಕರಲ್ಲಿ ಎಚ್ಚರದ ದನಿ ಆಗುವ ಗಾದೆ ಮುದುಕಿ, ಆಕೆಯ ಆಪ್ತ ಬಳಗವಾದ ಇರುವೆಗಳು ನಾಟಕದಲ್ಲಿ ಸಿರಿಧಾನ್ಯಗಳನ್ನು ಪ್ರತಿನಿಧಿಸಿದರೆ, ಆಹಾರ ಮಾರುಕಟ್ಟೆಯ ವ್ಯಾಪಾರೀ ಹುನ್ನಾರದ ರೂಪಕಗಳಾಗಿ ರಣಹದ್ದು, ಇಲಿ, ಹೆಗ್ಗಣ ಬಳಕೆಯಾಗಿವೆ. ಎರಡೂ ಸಂಗತಿಗಳನ್ನು ಇಲ್ಲಿ ನಿರ್ದೇಶಕ ಮುಖಾಮುಖಿ ಆಗಿಸಿದ್ದಾರೆ. ಹೀಗಾಗಿ ನಾಟಕದ ಕಥೆ ಚಿಂತನೆಗೆ ಹಚ್ಚುತ್ತದೆ.

'ಶಾಲೆಯ ಮಕ್ಕಳು ಕಳೆದ ವರ್ಷ ವಿಜ್ಞಾನ ನಾಟಕ ಸ್ಪರ್ಧೆಯ ದಕ್ಷಿಣ ಭಾರತ ಮಟ್ಟದಲ್ಲಿ ಪ್ರಶಸ್ತಿಯ ಸುತ್ತು ತಲುಪಿರಲಿಲ್ಲ. ಆಗ ನಿಗದಿತ ಅವಧಿಯಲ್ಲಿ ರಂಗ ಸಜ್ಜಿಕೆ ಸಿದ್ಧಗೊಳಿಸಿ ಪ್ರದರ್ಶನ ನೀಡುವಾಗ ಆಗಿದ್ದ ಲೋಪಗಳು ಪ್ರಶಸ್ತಿ ಹಂತಕ್ಕೆ ತೆರಳಲು ಅಡ್ಡಿಯಾಗಿದ್ದವು. ಅದನ್ನು ಈ ವರ್ಷ ತಿದ್ದಿಕೊಂಡೆವು. ಇದರಿಂದ ದಕ್ಷಿಣ ಭಾರತ ಮಟ್ಟದ ಸ್ಪರ್ಧೆಯಲ್ಲಿ ಆರು ರಾಜ್ಯಗಳ 12 ತಂಡಗಳನ್ನು ಎದುರಿಸಿ ಪ್ರಥಮ ಸ್ಥಾನ ಪಡೆದೆವು' ಎಂದು ಪದ್ಮದೀಪ ಶಾಲೆಯ ಪ್ರಾಚಾರ್ಯ ಕೆ.ತಂಗರಾಜು ಹೆಮ್ಮೆಯಿಂದ ಹೇಳುತ್ತಾರೆ.

ರಾಷ್ಟ್ರಮಟ್ಟದ ಸ್ಪರ್ಧೆಯ ಅಂತಿಮ ಹಂತದಲ್ಲಿ ನಿಗದಿತ 30 ನಿಮಿಷಗಳ ಅವಧಿಯಲ್ಲಿ ಮಕ್ಕಳೇ ರಂಗಸಜ್ಜಿಕೆ ಸಿದ್ಧಪಡಿಸಿಕೊಂಡು ನಾಟಕ ಪ್ರದರ್ಶಿಸಬೇಕಿತ್ತು. ನಾಟಕದ ಕಥೆ ಮಾತ್ರವಲ್ಲದೇ ಮಕ್ಕಳ ಅಭಿನಯವೂ ಪ್ರಭಾವಿ ಆಗಿ ಜ್ಯೂರಿಗಳ ಮನಮುಟ್ಟಿತು. ಗಾದೆ ಮುದುಕಿ ಆಗಿ ನಟಿಸಿದ್ದ 8ನೇ ತರಗತಿಯ ಪ್ರೇರಣಾ ವಿ.ಸ್ವರ ಉತ್ತಮ ನಟಿ ಪ್ರಶಸ್ತಿಯ ಶ್ರೇಯಕ್ಕೂ ಪಾತ್ರಳಾದಳು. ಅದು ಪ್ರಶಸ್ತಿಯ ಸಂಭ್ರಮ ಇಮ್ಮಡಿಗೊಳಿಸಿದೆ.

'ಸಿರಿಧಾನ್ಯವೇ ಸರಿಧಾನ್ಯ' ನಾಟಕದ ಒಂದು ದೃಶ್ಯ

ರಂಗ ಭೂಮಿ

'ದಕ್ಷಿಣ ಭಾರತ ಮಟ್ಟದ ಸ್ಪರ್ಧೆಯಲ್ಲಿ ನಾಟಕ ನೋಡಲು ಬಂದಿದ್ದ ರಂಗಕರ್ಮಿ, ಚಿತ್ರ ನಿರ್ದೇಶಕ ಬಿ.ಸುರೇಶ್ ನಮ್ಮ ಗಾದೆ ಮುದುಕಿಯ (ಪ್ರೇರಣಾ) ಎತ್ತಿಕೊಂಡು ಬೆನ್ನು ತಟ್ಟಿದ್ದರು' ಎಂದು ನೆನಪಿಸಿಕೊಂಡರು.

ಗಾದೆ ಹೇಳುತ್ತಾ, ಘಾಟಿತನ ತೋರುತ್ತಾ ಮುದುಕಿಯ ಪಾತ್ರದಲ್ಲಿ ಪ್ರೇಕ್ಷಕರನ್ನು ಹಿಡಿದಿಡುವ ಪ್ರೇರಣಾ ಸ್ವರ ನಿಜಾರ್ಥದಲ್ಲಿ ಕಥೆಯ ನಾಯಕಿಯೂ ಹೌದು. 'ಮನೆಯಲ್ಲಿ ಅಜ್ಜಿ, ಮುತ್ತಜ್ಜಿ ಇಬ್ಬರೂ ಇದ್ದು, ಅವರನ್ನು ನೋಡುತ್ತಾ ಬೆಳೆದ ನನಗೆ ನಾಟಕದಲ್ಲಿ ಅವರ ಹಾವಭಾವ ಅನುಕರಿಸಲು ನೆರವಾಯಿತು' ಎನ್ನುತ್ತಾಳೆ.

ನಾಟಕದಲ್ಲಿ ಸಿರಿಧಾನ್ಯಗಳ ಮಹತ್ವದ ಬಗ್ಗೆ ಪ್ರೇಕ್ಷಕರೊಂದಿಗೆ ಸರಳವಾಗಿ ಸಂವಾದಿಸಲು ನಿರ್ದೇಶಕ ಅಜಯ್ ನೀನಾಸಂ ಸರ್ವಜ್ಞನ ತ್ರಿಪದಿಗಳ ಬಳಕೆ ಮಾಡಿಕೊಂಡಿದ್ದಾರೆ. ಹೀಗಾಗಿ ಕೂತರೂ ನಿಂತರೂ ಅಡಿಕೆಯ ಚೊಗರನ್ನೇ ಧ್ಯಾನಿಸುವ ಡಿ.ಬಿ.ಹಳ್ಳಿಯ ಜನರು ಈಗ ಸಿರಿಧಾನ್ಯಗಳ ಮಹತ್ವದ ಬಗ್ಗೆ ಮಾತಾಡುತ್ತಾರೆ. ಅದರಲ್ಲಿನ ಪೋಷಕಾಂಶಗಳ ವಿಚಾರವನ್ನು ಪ್ರಮಾಣಬದ್ಧವಾಗಿ ಹೇಳುತ್ತಾರೆ.

'ನಾಟಕದ ಪಯಣದಲ್ಲಿ ಮಕ್ಕಳಿಗೆ ಬ್ರಮೆ ಬಾರದ ರೀತಿಯಲ್ಲಿ ನೋಡಿಕೊಂಡೆವು. ಸಹಜವಾಗಿ ಮೊದಲ ಬಾರಿಗೆ ನಾಟಕ ಮಾಡಲು ಬರುತ್ತಿದ್ದೇವೆ ಎಂಬ ಭಾವದಲ್ಲಿಯೇ ಮಕ್ಕಳು ಅಭಿನಯಿಸಿದ್ದರು. ಹೀಗಾಗಿ ಪ್ರಶಸ್ತಿ ಪಡೆಯಲು ಸಾಧ್ಯವಾಯಿತು' ಎನ್ನುತ್ತಾರೆ ನಿರ್ದೇಶಕ ಅಜಯ್ ನೀನಾಸಂ.

ಮಲ್ಲಾಡಿಹಳ್ಳಿ ಶ್ರೀ ರಾಘವೇಂದ್ರ ಸ್ವಾಮಿ ತಿರುಕ ರಂಗ ತಂಡದ ಹೆಸರಿನಲ್ಲಿ ಎಂಟು ಮಕ್ಕಳು ಅಭಿನಯಿಸಿದ್ದಾರೆ. ರಣಹದ್ದು ಪಾತ್ರದಲ್ಲಿ ಧನ್ಯಶ್ರೀ ಗಮನ ಸೆಳೆಯುತ್ತಾಳೆ. ಇರುವೆ, ಇಲಿ, ಹೆಗ್ಗಣಗಳಾಗಿ ಆಗಿ ಪ್ರಜ್ಞಾ, ಧೀಮಂತ್, ಟಿ.ಎಲ್.ತಿಲಕ್, ಅವಿನಾಶ್, ವರ್ಷಿಣಿ, ವಿಕಾಸ್, ಶಿವಪ್ರಸಾದ್ ಕುಂಬಾರ್ (ವೇದಿಕೆ ಸಹಾಯಕ) ಅಭಿನಯಿಸಿದ್ದಾರೆ. ಜ್ಞಾನದೀಪ ಸಂಸ್ಥೆಯ ಅಧ್ಯಕ್ಷ ಎಸ್.ಯು.ಕಿರಣ್‌ಕುಮಾರ್ ಹಾಗೂ ರಂಗ ಶಿಕ್ಷಕ ಕೆ. ವೆಂಕಟೇಶ್ವರ ನೆರವಿಗೆ ನಿಂತಿದ್ದಾರೆ.

ಭದ್ರಾವತಿ ತಾಲ್ಲೂಕಿನ ಡಿ.ಬಿ.ಹಳ್ಳಿ ಪದ್ಮದೀಪ ಪಬ್ಲಿಕ್ ಶಾಲೆಯ ಮಕ್ಕಳು ಪ್ರದರ್ಶಿಸಿದ 'ಸಿರಿಧಾನ್ಯವೇ ಸರಿಧಾನ್ಯ' ನಾಟಕ ಚಿತ್ರಗಳು: ಶಿವಮೊಗ್ಗ ನಾಗರಾಜ್

ಫ್ಯೂಷನ್-ನೃತ್ಯ ಜುಗಲಬಂದಿ ಜೋಶ್

ಉಮಾ ಅನಂತ್

ಜಗತ್ತು ಡಿಜಿಟಲ್ ಯುಗದತ್ತ ಮುಖ ಮಾಡಿದಂತೆ ಸಾಂಸ್ಕೃತಿಕ ಲೋಕದಲ್ಲೂ ಹೊಸತನದ ಹೊಳಪು. ಸಾಂಪ್ರದಾಯಿಕ ಶಾಸ್ತ್ರೀಯ ಸಂಗೀತದ ಜೊತೆಗೆ ವಿಶ್ವ ವ್ಯಾಪಿ ಫ್ಯೂಷನ್ ತಳುಕು ಹಾಕಿಕೊಂಡಿದೆ. ಅದೇ ರೀತಿ ಪಾರಂಪರಿಕ ಭರತನಾಟ್ಯ, ಕಥಕ್ ನೃತ್ಯಗಳ ಜೊತೆಗೆ ಫ್ಯೂಷನ್ ನೃತ್ಯ, ಸಮಕಾಲೀನ ನೃತ್ಯಗಳು ಒಂದರೊಳಗೊಂದು ಬೆಸೆದು ಅದ್ಭುತ ರಸಪಾಕ ಸೃಷ್ಟಿಸುತ್ತಿವೆ.

ಷಡ್ಜ, ರಿಷಭ, ಗಾಂಧಾರ... ಆಧಾರಿತ ಶಾಸ್ತ್ರೀಯ ಸಂಗೀತದ ಜೊತೆಗೆ ಫ್ಯೂಷನ್, ಶಾಸ್ತ್ರೀಯ ನೃತ್ಯದ ಜೊತೆಗೆ ಫ್ಯೂಷನ್ ನೃತ್ಯಗಳೆರಡೂ ಸಮಾಗಮವಾಗಿ ಕೇಳುಗ-ನೋಡುಗರಲ್ಲಿ ಸಂಚಲನ ಮೂಡಿಸಿದ್ದು ಕಳೆದ ವಾರವಿಡೀ ಬೆಂಗಳೂರಿನಲ್ಲಿ ನಡೆದ ಫ್ಯೂಷನ್ ಸಂಗೀತ ಮತ್ತು ನೃತ್ಯ ಉತ್ಸವ.

ಭಾರತೀಯ ವಿದ್ಯಾ ಭವನ ಸಭಾಂಗಣದಲ್ಲಿ ಉತ್ಸವ ಆಯೋಜಿಸಿ ಸಂಗೀತಕ್ಕೆ, ನೃತ್ಯಕ್ಕೆ ಒಟ್ಟಾರೆಯಾಗಿ 'ಲಲಿತ ಕಲೆಗೆ ಯಾವುದೇ ಎಲ್ಲೆ ಇಲ್ಲ, ಕಲಾಸ್ವಾದನೆಯೇ ಎಲ್ಲ' ಎಂಬುದನ್ನು ಸಾಬೀತುಪಡಿಸಿತು. ಈ ಉತ್ಸವದಲ್ಲಿ 75 ಕಲಾವಿದರು ಭಾಗವಹಿಸಿದ್ದು, 16 ವಿವಿಧ ಕಾರ್ಯಕ್ರಮಗಳು ನಡೆದು ರಂಜಿಸಿದವು.

ಹಾಗೆ ನೋಡಿದರೆ ಬೆಂಗಳೂರೂ ಸೇರಿದಂತೆ ರಾಜ್ಯದ ಯಾವುದೇ ಭಾಗಗಳಲ್ಲಿ ಫ್ಯೂಷನ್ ಸಂಗೀತ ಪ್ರತ್ಯೇಕವಾಗಿ ನಡೆಯುವುದು ಕಡಿಮೆಯೇ. ಜೊತೆಗೆ ಇದು 'ಥೀಮ್ ಆಧಾರಿತ' ಕಾರ್ಯಕ್ರಮಗಳಾಗಿದ್ದು, ನಶಿಸಿ ಹೋಗುತ್ತಿವೆ ಎಂಬ ಆತಂಕದಲ್ಲಿರುವ ನಮ್ಮ ಸಂಗೀತ, ಪರಂಪರೆಯನ್ನು ಪುನಶ್ಚೇತನಗೊಳಿಸಲೆಂದೇ ಆಯೋಜಿಸಿದ ಕಾರಣ ಈ ಸಂಗೀತ ಉತ್ಸವಕ್ಕೆ ಮಹತ್ವ ಬಂದಿದೆ.

ವೈವಿಧ್ಯಮಯ ಕಛೇರಿಗಳು: ಏಳು ದಿನಗಳ ಸಂಗೀತ-ನೃತ್ಯ ಹಬ್ಬದಲ್ಲಿ ಥರಾವರಿ ಕಾರ್ಯಕ್ರಮಗಳು ಮುದ ನೀಡುವಂತಿದ್ದವು. ಬ್ಯಾಗ್‌ಪೈಪರ್ಸ್ ಸಂಗೀತ, ಕಿಂಗ್ಸ್ ಬ್ಯಾಂಡ್ ಜೈಪುರ ಫ್ಯೂಷನ್ ಸಂಗೀತ, ಶ್ರೀಧರ ಸಾಗರ ಅವರ ಸ್ಯಾಕ್ಸೊಫೋನ್ ಜೊತೆಗೆ ಒಡಿಸ್ಸಿ ನೃತ್ಯ ಕಲಾವಿದೆ ಮಧುಲಿತಾ ಮೊಹಾಪಾತ್ರ ಅವರ ನೃತ್ಯ, ಪ್ರವೀಣ್ ಡಿ. ರಾವ್ ತಂಡದಿಂದ ಚಕ್ರಫೋನಿಕ್ಸ್ ಟ್ರಯೊ, ಮಧು ನಟರಾಜ್ ತಂಡದಿಂದ ಪಾಲಿಂಪ್ಸೆಸ್ಟ್ ನೃತ್ಯ ಕಲಾರಸಿಕರಿಗೆ ವಿಭಿನ್ನ ಅನುಭವ ನೀಡಿತು.

ಮರಳು ಕಲಾವಿದ ರಾಘವೇಂದ್ರ ಹೆಗಡೆ ಅವರ ಮರಳು ಮಾಧುರ್ಯ ಮತ್ತು ಮೌನ ರಾಮಚಂದ್ರ ಅವರ ಗಾಯನ, ಸಂಧ್ಯಾ ಉಡುಪ ತಂಡದವರಿಂದ 'ನವರಾತ್ರಿ' ನೃತ್ಯ, ಅಮಿತ್ ನಾಡಿಗ್ ಕೊಳಲು, ಮಥಿಯಾಸ್ ಸ್ಕ್ರಿಫ್ಲ್ ಟ್ರಂಪೆಟ್, ಮುತ್ತು ಕುಮಾರ್ ತಬಲಾ ಮತ್ತು ತಂಡದಿಂದ ಮಥಿಯಾಸ್ ಸ್ಕ್ರಿಫ್ಲ್ ಒಳಗೊಂಡ ಮಿಸ್ಟಿಕ್ ವೈಬ್ಸ್ ಕೂಡ ಫ್ಯೂಷನ್ ಸಂಗೀತದ ಅಸ್ತಿತ್ವವನ್ನು ಒತ್ತಿ ಹೇಳಿದಂತಿತ್ತು. 'ಸಖಿ' ಶೀರ್ಷಿಕೆಯ ನೃತ್ಯ ಕಾರ್ಯಕ್ರಮ ಚಿತ್ರಾ ಅರವಿಂದ್ ತಂಡದಿಂದ ನೃತ್ಯ ಮತ್ತೊಂದು ಕಾರ್ಯಕ್ರಮ ಆಸ್ವಾದಿಸುವ ಅವಕಾಶ ಸಹೃದಯರಿಗೆ ಒದಗಿತು.

ರವೀಂದ್ರ ಕಾಟೋಟಿ ಮತ್ತು ತಂಡದವರಿಂದ ಹಾರ್ಮೋನಿಯಂ ಮತ್ತು ಅಕಾರ್ಡಿಯನ್ ಫ್ಯೂಷನ್ ನಂತರ ಅಭಿಷೇಕ್ ಅಯ್ಯಂಗಾರ್ ಅವರ ನಿರ್ದೇಶನದ 'ಬೈ 2 ಕಾಫಿ' ನಾಟಕವೂ ಸಾಂಸ್ಕೃತಿಕ ಲೋಕದಲ್ಲಿ ಹೊಸ ಭಾಷ್ಯ ಬರೆಯಿತು. ಕೆ.ಜೆ.ದಿಲೀಪ್ ಮತ್ತು ತಂಡದಿಂದ ಪಿಟೀಲು ಮತ್ತು ಪಿಯಾನೊ ನಂತರ ಶ್ರೀವಿದ್ಯಾ ಅಂಗಾರ, ಗೌರಿ ಮತ್ತು ಶುಭಾ ನಾಗರಾಜನ್ ಮತ್ತು ತಂಡದಿಂದ ಜಯದೇವರ ಗೀತ ಗೋವಿಂದ ಮೂಲಕ 'ಸಮ್ಯಾನ' ಎಂಬ ನೃತ್ಯ ಕಾರ್ಯಕ್ರಮ, ಕೂಚಿಪುಡಿ, ಒಡಿಸ್ಸಿ ಮತ್ತು ಭರತನಾಟ್ಯದ ಮೂಲಕ ಅಷ್ಟಪದಿಗಳ ಪ್ರದರ್ಶನ, ಪ್ರವೀಣ್ ಗೋಡ್ಖಿಂಡಿ ಅವರ ಕೊಳಲು 'ರಾಗ್ ರಂಗ್ ಫ್ಯೂಷನ್' ಕಛೇರಿ ನಾದಲೋಕದಲ್ಲಿ ವಿಹರಿಸುವಂತಿತ್ತು.

ನಾಡಿನ ಭಾಷೆ, ಸಂಸ್ಕೃತಿ, ಸಂಗೀತವನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಇನ್ಫೋಸಿಸ್ ಹಾಗೂ ಭಾರತೀಯ ವಿದ್ಯಾ ಭವನ ಎರಡೂ ಸಂಸ್ಥೆಗಳ ನಡುವಿನ ಸಂಬಂಧಕ್ಕೆ 25 ವರ್ಷ ಕಳೆದಿದೆ. ಇದರ ನೆನಪಿಗಾಗಿ ದೇಶದಾದ್ಯಂತ ವರ್ಷವಿಡೀ ಹಲವು ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಪಾರಂಪರಿಕ ಸಂಗೀತದ ಜೊತೆಗೆ ಫ್ಯೂಷನ್ ಬೆಸೆದಿದೆ. ಸಾಂಪ್ರದಾಯಿಕ ನೃತ್ಯದ ಜೊತೆಗೆ ಸಮಕಾಲೀನ ನೃತ್ಯ ತಳುಕು ಹಾಕಿಕೊಂಡಿದೆ. ಈ ವಿಭಿನ್ನ ಫ್ಯೂಷನ್ ಸಂಗೀತ ಉತ್ಸವ ನಡೆದದ್ದು ಬೆಂಗಳೂರಿನಲ್ಲಿ

ರವೀಂದ್ರ ಕಾಟೋಟಿ ಮತ್ತು ತಂಡದವರಿಂದ ಹಾರ್ಮೋನಿಯಂ ಮತ್ತು ಅಕಾರ್ಡಿಯನ್ ಫ್ಯೂಷನ್

ರೀಡ್ಸ್ ವಾದ್ಯಗಳ ಚಮತ್ಕಾರ

ಎರಡೂ ವಾದ್ಯಗಳು ಯುರೋಪ್ ಮೂಲದ್ದು. ಹಾರ್ಮೋನಿಯಂ ಭಾರತೀಯ ಶಾಸ್ತ್ರೀಯ ಸಂಗೀತದೊಂದಿಗೆ ಹಾಸುಹೊಕ್ಕಾಗಿದೆ. ನಮ್ಮ ಸಂಸ್ಕೃತಿಗೆ ಒಗ್ಗಿಕೊಂಡಿದೆ. ಅಕಾರ್ಡಿಯನ್‌ನಲ್ಲಿ ನಾದದ ಹೊಂದಾಣಿಕೆ ಇರುತ್ತದೆ. ಇದರಲ್ಲಿ ಯುರೋಪಿನ ಪಾಪ್ ಸಂಗೀತವನ್ನು ಮಾಧುರ್ಯಭರಿತವಾಗಿ ನುಡಿಸಬಹುದು. ರಾಗ ಮತ್ತು ಸ್ಕೇಲ್ ಅನ್ನು ಮ್ಯಾಚ್ ಮಾಡಿಕೊಂಡು ಫ್ಯೂಷನ್ ಸಂಗೀತವನ್ನು ನುಡಿಸಿದಾಗ ಕೇಳುಗರಲ್ಲಿ ವಿಶಿಷ್ಟ ಮೂಡ್ ಸೃಷ್ಟಿಯಾಗುತ್ತದೆ.

ಹಾರ್ಮೋನಿಯಂನಲ್ಲಿ ಪಂ. ರವೀಂದ್ರ ಕಾಟೋಟಿ ಅವರು ಜನಪ್ರಿಯ ವಾದಕ. ಎಂ.ಬಿ. ಪ್ರಕಾಶ್ ಹಾಗೂ ರವಿ ಬೆಣ್ಣೆ ಅವರು ಅಕಾರ್ಡಿಯನ್‌ನಲ್ಲಿ ಪಳಗಿದವರು. ಸುಮಾರು ಒಂದು ಗಂಟೆ ಕಾಲ ನಡೆದ ಕಛೇರಿಯಲ್ಲಿ ಹಾರ್ಮೋನಿಯಂನಲ್ಲಿ ಕಾಟೋಟಿ ಅವರು ರಾಗ ಕಿರವಾಣಿ, ಬಿಹಾಗ್ ಹಾಗೂ ಪಹಾಡಿಯನ್ನು ನುಡಿಸಿದರು. ಹಾಗೂ ಸ್ವತಂತ್ರವಾಗಿ ರಾಗ ಪೂರಿಯಾ ಧನಾಶ್ರೀ ಆಪ್ಯಾಯಮಾನವಾಗಿತ್ತು.

ರಾಗಕ್ಕೆ ತಕ್ಕಂತೆ ಅಕಾರ್ಡಿಯನ್ ಮಧುರಾತಿಮಧುರವಾಗಿ ನಾದದ ಹೊನಲನ್ನು ಹರಿಸಿದ್ದು 'ಫ್ಯೂಷನ್ ಸಂಗೀತ'ದ ಸವಿಯನ್ನು ಕೇಳುಗರು ಕೊಂಡಾಡುವಂತಾಯಿತು. ಈ ಕಛೇರಿಯ ಹೆಸರು 'ಧಾತ್ರಿ'. ಹೊಸ ಪರಿಕಲ್ಪನೆ. ಇದು ಹಾರ್ಮೋನಿಯಂ ಹಾಗೂ ಅಕಾರ್ಡಿಯನ್‌ಗಳೆರಡರ ನಾದವನ್ನೂ ಬೆಸೆಯುವ ಹೊಸ ಪ್ರಯೋಗ. ಎರಡೂ ವಾದ್ಯಗಳಲ್ಲಿ ಇರುವ ರೀಡ್ಸ್ ಒಂದೇ ತೆರನವು. ವಾದನಕ್ರಮವೂ ಹೆಚ್ಚು ಕಡಿಮೆ ಒಂದೇ. ಹಿಂದೂಸ್ತಾನಿ ಸಂಗೀತ ಹಾರ್ಮೋನಿಯಂನ ಮೊಳಗಿದರೆ, ಜಾನಪದ ಸಂಗೀತದ ಸೊಗಡು ಅಕಾರ್ಡಿಯನ್‌ನಲ್ಲಿ ವಿಜೃಂಭಿಸಿತು.

ಮಲೆದಾಸ ಮಂಗಟ್ಟೆ

ಮಂಗಟ್ಟೆ ಮೋಹದಲ್ಲಿ ರಜನಿ

12ನೇ ಪುಟದಿಂದ...

'ರಾಜ್ಯದ ವಿವಿಧೆಡೆಯಿಂದ ಶಾಲಾ ವಿದ್ಯಾರ್ಥಿಗಳು ಇಲ್ಲಿಗೆ ಬರುತ್ತಾರೆ. ಅವರಿಗೆ ಮಂಗಟ್ಟೆಗಳ ಬದುಕಿನ ಕಥೆ ಹೇಳುತ್ತೇನೆ. ಇಲ್ಲಿರುವ ಅಮೂಲ್ಯ ಖಗ ಸಂಪತ್ತಿನ ಬಗ್ಗೆಯೂ ವಿವರಿಸುತ್ತೇನೆ. ಬಾಲ್ಯದಲ್ಲಿಯೇ ಮಕ್ಕಳಲ್ಲಿ ಪರಿಸರ ಸಂರಕ್ಷಣೆ ಬಗ್ಗೆ ಜಾಗೃತಿ ಮೂಡಿಸಬೇಕು. ಆಗಷ್ಟೇ ಭವಿಷ್ಯದಲ್ಲಿ ಪರಿಸರ, ವನ್ಯಜೀವಿಗಳ ಉಳಿವು ಸಾಧ್ಯ' ಎನ್ನುವುದು ಅವರ ದೃಢವಾದ ನಂಬಿಕೆ.

'ಸಂತಾನೋತ್ಪತ್ತಿ ವೇಳೆ ಮಂಗಟ್ಟೆ ಹೆಣ್ಣುಹಕ್ಕಿ 110 ದಿನಗಳ ಕಾಲ ಗೂಡಿನಲ್ಲಿ ಇರುತ್ತದೆ. ಅಲ್ಲಿಯವರೆಗೂ ಅದು ಹೊರಗೆ ಬರುವುದಿಲ್ಲ. ಆಗ ಅದರ ಪುಕ್ಕಗಳು ಉದುರಿ ಹೋಗುತ್ತವೆ. ಅದಕ್ಕೆ ಆಹಾರ ತಂದುಕೊಡಲು ಗಂಡುಹಕ್ಕಿ ಹತ್ತಾರು ಕಿಲೊಮೀಟರ್ ದೂರ ಹೋಗುತ್ತದೆ. ಮಂಗಟ್ಟೆ ಸರ್ವಭಕ್ಷಕ ಪಕ್ಷಿ. ಅವುಗಳ ಆಹಾರದ ಕ್ರಮವನ್ನೂ ದಾಖಲಿಸಿದ್ದೇನೆ' ಎನ್ನುತ್ತಾರೆ ಅವರು.

ಸದ್ಯ ಕರ್ನಾಟಕದಲ್ಲಿ ನಾಲ್ಕು ಪ್ರಭೇದಕ್ಕೆ ಸೇರಿದ ಮಂಗಟ್ಟೆ ಹಕ್ಕಿಗಳು ಕಾಣಸಿಗುತ್ತವೆ. ಆ ಪೈಕಿ ದೊಡ್ಡ ದಾಸ ಮಂಗಟ್ಟೆಗಳು ದಾಂಡೇಲಿಯ ಪ್ರಮುಖ ಆಕರ್ಷಣೆ. ಸದ್ಯ ಇಲ್ಲಿ ಅವುಗಳ ಸಂಖ್ಯೆಯೂ ಹೆಚ್ಚಾಗಿದೆ. ಪಕ್ಷಿ ವೀಕ್ಷಕರಿಗೆ ಎಲ್ಲೆಡೆ ಕಂಡು ಬರುತ್ತಿವೆ ಎನ್ನುವುದು ಅವರ ಖುಷಿ.

ರಜನಿ ಅವರು ಪಕ್ಷಿ ವೀಕ್ಷಣೆ ಬಗ್ಗೆ ನೀಡುವ ಮಾರ್ಗದರ್ಶನದ ಬಗ್ಗೆ ಪ್ರವಾಸಿಗರಿಂದಲೂ ಮೆಚ್ಚುಗೆ ವ್ಯಕ್ತವಾಗುತ್ತಿದೆ.

'ಮಂಗಟ್ಟೆಗಳ ವಿಸ್ಮಯ ಬದುಕಿನ ಬಗ್ಗೆ ನನಗೆ ಗೊತ್ತಿರಲಿಲ್ಲ. ಅವರು ಅವುಗಳ ಬಗ್ಗೆ ಅಧ್ಯಯನ ಮಾಡಿದ್ದಾರೆ. ಅವರು ನೀಡಿದ ಮಾಹಿತಿಯು ನನಗೆ ಬೆರಗು ಮೂಡಿಸಿತು. ಪಕ್ಷಿ ಸಂಕುಲದ ಉಳಿವಿನ ಮಹತ್ವ ಕುರಿತು ಜಾಗೃತಿ ಮೂಡಿಸುತ್ತಿರುವುದು ಹೆಮ್ಮೆಯ ಸಂಗತಿ' ಎನ್ನುತ್ತಾರೆ ಇತ್ತೀಚೆಗೆ ದಾಂಡೇಲಿಗೆ ಭೇಟಿ ನೀಡಿದ್ದ ಬೆಂಗಳೂರಿನ ಅನನ್ಯ ಟ್ರಸ್ಟ್‌ನ ಸದಸ್ಯೆ ಹರ್ಷಾ.

ಮುನ್ನೋಟ 28-01-2024 ರಿಂದ -03-02-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ನಿಮ್ಮ ವ್ಯಕ್ತಿತ್ವದ ಬಗ್ಗೆ ನಿಮಗೆ ಅನುಮಾನ ಬೇಡ. ದೃಢ ನಿರ್ಧಾರದೊಂದಿಗೆ ಮುನ್ನಡೆಯಿರಿ. ನಿಮ್ಮ ಧನ ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ಕೆಲಸ-ಕಾರ್ಯಗಳನ್ನು ಮಾಡಲು ಆಲಸಿತನ ಕಾಡಿದರೂ, ಒತ್ತಾಯಪೂರ್ವಕವಾಗಿ ಮಾಡುವಿರಿ. ಕೃಷಿಕರಿಗೆ ಉತ್ತಮ ಆದಾಯವಿದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಲಭಿಸುತ್ತದೆ. ವೃತ್ತಿಯಲ್ಲಿ ನಿಮ್ಮ ಶ್ರಮಕ್ಕೆ ತಕ್ಕ ಫಲ ಇರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಕಲಾವಿದರುಗಳಿಗೆ ಸ್ವಲ್ಪ ಬೇಡಿಕೆ ಕ ಡಿ ಮೆ ಯಾ ಗ ಬ ಹು ದು . ಹಣದ ಒಳ ಹರಿವು ಮಂದಗತಿಯಲ್ಲಿರುತ್ತದೆ. ನಿಮ್ಮ ಚಟುವಟಿಕೆಗಳಿಂದ ಹೆಸರು ಗಳಿಸುವಿರಿ. ಹೈನುಗಾರಿಕೆ ಮಾಡುವವರಿಗೆ ಹೆಚ್ಚು ಅಭಿವೃದ್ಧಿ ಇರುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಯಶಸ್ಸು ಇರುವುದಿಲ್ಲ. ಧರ್ಮ ವಿದ್ಯೆಯನ್ನು ಕಲಿಯುತ್ತಿರುವವರಿಗೆ ಹೆಚ್ಚಿನ ಯಶಸ್ಸು ಇರುತ್ತದೆ. ಪ್ರೀತಿಗೆ ಹಿರಿಯರ ಒಪ್ಪಿಗೆ ಸಿಗುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ನಿಮ್ಮ ಕೆಲಸ ಕಾರ್ಯಗಳಿಂದ ಧನ ಸಂಪಾದನೆ ಮಾಡುವ ಯೋಗವಿದೆ. ಹೆಚ್ಚು ಚಟುವಟಿಕೆಯಿಂದ ಕೆಲಸಮಾಡುವಿರಿ. ಕೃಷಿ ವಿಸ್ತರಣೆಯನ್ನು ಮಾಡಬಹುದು. ಹರಿತವಾದ ಆಯುಧಗಳನ್ನು ಬಳಸುವಾಗ ಪತ್ನಿ ಎಚ್ಚರ ವಹಿಸಬೇಕು. ಪತ್ನಿ ಮಾಡುವ ವ್ಯವಹಾರಗಳಲ್ಲಿ ಹೆಚ್ಚಿನ ಲಾಭವಿರುತ್ತದೆ. ವಿದೇಶದಲ್ಲಿ ಉದ್ಯೋಗದಲ್ಲಿರುವವರಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಮನಸ್ಸಿನಲ್ಲಿ ಉಲ್ಲಾಸವಿರುತ್ತದೆ. ಧನ ಆದಾಯವು ನಿಮ್ಮ ನಿರೀಕ್ಷೆಯ ಮಟ್ಟಕ್ಕೆ ಇರುತ್ತದೆ. ನಿಮ್ಮ ಕೆಲಸ ಕಾರ್ಯಗಳಲ್ಲಿನ ಉತ್ಸಾಹ ಕಡಿಮೆಯಾದಂತೆ ಕಾಣುತ್ತದೆ. ಸಂಗಾತಿಯಿಂದ ಸಂಸಾರದಲ್ಲಿ ಕಾವೇರಿದ ಮಾತುಗಳಾಗುತ್ತವೆ. ಸಂಗಾತಿ ಮಾಡುವ ಖರ್ಚು ಸ್ವಲ್ಪ ಹೆಚ್ಚಾಗುತ್ತದೆ. ಸರ್ಕಾರಿ ಕೆಲಸ ಕಾರ್ಯಗಳು ಸರಾಗವಾಗಿ ಆಗುತ್ತವೆ. ಗಣಿ ಉದ್ಯಮವನ್ನು ನಡೆಸುವವರಿಗೆ ಸ್ವಲ್ಪ ಹಿನ್ನಡೆ ಉಂಟಾಗುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ನಿಮ್ಮ ನಿರೀಕ್ಷೆಯಂತೆ ಕೆಲವು ಕೆಲಸಗಳು ನಡೆದು ಮನಸ್ಸಿಗೆ ಆನಂದವಾಗುತ್ತದೆ. ಧನ ಆದಾಯವು ಕಡಿಮೆ ಇದ್ದು, ಅದರಲ್ಲೇ ತೂಗಿಸಲು ಪ್ರಯತ್ನಿಸುವಿರಿ. ನಿಮ್ಮ ಎಲ್ಲಾ ನಡವಳಿಕೆಯಲ್ಲಿ ಹಣ ಗಳಿಸುವ ಇರಾದೆ ಇರುತ್ತದೆ. ನಿಮ್ಮ ಸೋದರಿಯರಿಂದ ಉತ್ತಮ ಸಹಕಾರ ದೊರೆಯುತ್ತದೆ. ಕೃಷಿಭೂಮಿಯನ್ನು ಹೆಚ್ಚು ಅಭಿವೃದ್ಧಿಪಡಿಸುವಿರಿ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಯಶಸ್ಸು ಇರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ನಿರೀಕ್ಷೆ ಇಟ್ಟಿದ್ದ ಕೆಲಸವೊಂದು ಆಗದೆ ಮನಸ್ಸಿಗೆ ಸ್ವಲ್ಪ ಬೇಸರವಾಗುತ್ತದೆ. ಕೆಲವು ಬಂಧುಗಳ ಸಹಕಾರ ನಿಮಗೆ ದೊರೆತರೂ, ಇನ್ನು ಕೆಲವರು ನಿಮ್ಮ ಕೆಲಸ ಕಾರ್ಯಕ್ಕೆ ಅಡ್ಡಿಪಡಿಸುವರು. ಆಸ್ತಿ ಖರೀದಿಗೆ ನಾನಾ ತಂತ್ರಗಳನ್ನು ಬಳಸುವಿರಿ. ವಿವಾಹಿತರು ವಿದೇಶದಲ್ಲಿರುವ ಅವರ ಬಾಳ ಸಂಗಾತಿಯನ್ನು ಈಗ ಹೋಗಿ ಸೇರಿಕೊಳ್ಳಬಹುದು. ಹೈನುಗಾರಿಕೆ ಮಾಡುವವರಿಗೆ ಲಾಭವಿದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ನೀವು ಶ್ರೇಷ್ಠನೆಂಬ ಮನೋಭಾವ ನಿಮ್ಮಲ್ಲಿ ಬೆಳೆದಿರುತ್ತದೆ. ಮಾತಿನಲ್ಲಿ ಸ್ವಲ್ಪ ಕಠಿಣತೆ ಇರುತ್ತದೆ. ನಿಮ್ಮ ನಡವಳಿಕೆಯಲ್ಲಿ ಧನ ಸಂಪಾದನೆ ಅತಿಮುಖ್ಯವಾಗಿರುತ್ತದೆ. ಸರ್ಕಾರಿ ಆಸ್ತಿ ಮಾಡಿಕೊಳ್ಳಲು ಪ್ರಯತ್ನ ಪಡುವವರಿಗೆ ಸ್ವಲ್ಪ ಹಿನ್ನಡೆಯಾಗುತ್ತದೆ. ಮಕ್ಕಳಿಂದ ಸೂಕ್ತ ಗೌರವ ದೊರೆಯದಿರಬಹುದು. ಮೂಳೆ ತೊಂದರೆ ಇರುವವರಿಗೆ ಯಾತನೆ ಜಾಸ್ತಿಯಾಗಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಶಿಸ್ತುಬದ್ಧ ವ್ಯಕ್ತಿಯಾಗಿ ಇರುವಿರಿ. ಹಣದ ಒಳಹರಿವು ನಿಮ್ಮ ನಿರೀಕ್ಷೆಯನ್ನು ತಲುಪುತ್ತದೆ. ಆದರೆ ಖರ್ಚಿನ ಬಗ್ಗೆ ಹೆಚ್ಚಿನ ಗಮನವಹಿಸುವುದು ಅಗತ್ಯ. ಹಿರಿಯರ ಸಹಕಾರಗಳು ನಿಮಗೆ ದೊರೆಯುತ್ತವೆ. ಕೃಷಿ ಮಾಡುವುದರಲ್ಲಿ ಹೆಚ್ಚು ಸಂತೋಷವನ್ನು ಕಾಣುವಿರಿ. ವಾಹನಗಳನ್ನ ರಿಪೇರಿ ಮಾಡುವವರಿಗೆ ಹೆಚ್ಚು ಕೆಲಸ ದೊರೆಯುತ್ತದೆ. ಹಣಕಾಸಿನ ವ್ಯವಹಾರಗಳಲ್ಲಿ ಲಾಭವಿರುವುದಿಲ್ಲ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ವಾರದ ಆರಂಭದಲ್ಲಿ ಬಹಳ ಉತ್ಸಾಹವಿರುತ್ತದೆ. ಹಣದ ಒಳಹರಿವು ಉತ್ತಮವಾಗಿರುತ್ತದೆ. ಸರ್ಕಾರದಲ್ಲಿ ಸಲಹೆಗಾರರಾಗಿರುವವರಿಗೆ ಸ್ಥಾನ ಹೆಚ್ಚುತ್ತದೆ. ಶತ್ರುಗಳು ನಿಮ್ಮ ತಂಟೆಗೆ ಬರುವುದಿಲ್ಲ. ಆಸ್ತಿ ವಿಚಾರಗಳಲ್ಲಿ ಮುಂದುವರೆಯಲು ಈಗ ಸಕಾಲ ಅಲ್ಲ. ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ಸಿಗುವ ಕಾಲ. ಶಿಕ್ಷಣ ಸಂಸ್ಥೆಗಳನ್ನು ನಡೆಸುವವರಿಗೆ ಹೆಚ್ಚು ಅಭಿವೃದ್ಧಿ ಇರುತ್ತದೆ. ಪ್ರಸೂತಿ ತಜ್ಞರಿಗೆ ಬೇಡಿಕೆ ಬರುತ್ತದೆ. ಸಂಗಾತಿಯ ಜೊತೆ ಕೂಡಿ ಮಾಡಿದ ವ್ಯವಹಾರಗಳಲ್ಲಿ ಹೆಚ್ಚು ಲಾಭವಿರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಯಾವುದೇ ರೀತಿಯ ಒತ್ತಡವಿದ್ದರೂ ಶ್ರದ್ಧೆಯಿಂದ ಕೆಲಸ ಮಾಡಿ ಮುಗಿಸುವಿರಿ. ಆಮದು ಮತ್ತು ರಫ್ತು ವ್ಯವಹಾರಗಳನ್ನು ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಹಿರಿಯರ ಬೆಂಬಲ ನಿಮಗೆ ಸದಾಕಾಲ ದೊರೆಯುತ್ತದೆ. ಸಂಸಾರದಲ್ಲಿ ಒಂದು ರೀತಿಯ ನೆಮ್ಮದಿ ಇರುತ್ತದೆ. ಕೆಲವು ರಾಜಕೀಯ ನಾಯಕರುಗಳು ನಿಮ್ಮ ಸಹಾಯಕ್ಕೆ ಬರುವರು. ಕೃಷಿಕರಿಗೆ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಯಶಸ್ಸು ಇರುತ್ತದೆ. ಪಾಲುದಾರಿಕೆ ವ್ಯವಹಾರಗಳಲ್ಲಿ ನಿಮ್ಮ ಪಾಲಿನ ಲಾಭ ದೊರೆಯುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಕೆಲಸಗಳಲ್ಲಿ ಒತ್ತಡ ಹೆಚ್ಚಾಗುವ ಸಾಧ್ಯತೆ ಇದೆ. ಸ್ಥಿರ ಮನಸ್ಸಿನಿಂದ ಕೆಲಸ ಮಾಡುವುದು ಬಹಳ ಉತ್ತಮ. ಧನ ಆದಾಯವು ಮಂದಗತಿಯಲ್ಲಿದ್ದರೂ ಆರ್ಥಿಕ ತೊಂದರೆಯಾಗುವುದಿಲ್ಲ. ಖರ್ಚಿನ ಬಗ್ಗೆ ಗಮನವಿರಲಿ. ವಿದೇಶಗಳಲ್ಲಿ ದುಡಿಯುತ್ತಿರುವವರಿಗೆ ಆದಾಯ ಹೆಚ್ಚುತ್ತದೆ. ಸಮೂಹದಲ್ಲಿ ನೀವು ಮಾತನಾಡುವಾಗ ಎಚ್ಚರವಿರಲಿ. ಹಿರಿಯರಿಂದ ಸಾಕಷ್ಟು ಸಲಹೆಗಳು ಸಿಗುತ್ತವೆ. ಆಸ್ತಿ ಖರೀದಿ ವಿಚಾರದಲ್ಲಿ ಮುಂದುವರೆಯಬಹುದು. ವಿದ್ಯಾರ್ಥಿಗಳಿಗೆ ಮಧ್ಯಮ ಗತಿಯ ಫಲಿತಾಂಶ ಇರುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಬಹಳಷ್ಟು ವಿಷಯಗಳಿಗೆ ಕೋಪ ಮಾಡಿಕೊಳ್ಳುವಿರಿ, ಇದರಿಂದ ನಿಮಗೆ ಹಾನಿ. ನಿಮ್ಮ ನಡವಳಿಕೆಯಲ್ಲಿ ಒಂದು ರೀತಿಯ ಗತ್ತು ಇರುತ್ತದೆ. ಆಸ್ತಿ ವಿಚಾರಗಳಲ್ಲಿ ಹಣ ಕಳೆದುಕೊಳ್ಳುವ ಸಾಧ್ಯತೆ ಇದೆ. ಎಚ್ಚರ ವಹಿಸಿರಿ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಶ್ರದ್ಧೆ ಕಡಿಮೆಯಾಗಬಹುದು. ಶೀತಬಾಧೆ ಇರುವವರು ಸಾಕಷ್ಟು ಎಚ್ಚರ ವಹಿಸಲೇಬೇಕು. ಸಂಗಾತಿಯಿಂದ ಸಿಗುತ್ತಿದ್ದ ಧನಸಹಾಯಗಳು ನಿಲ್ಲುವ ಸಾಧ್ಯತೆಗಳಿವೆ. ಸೈನಿಕರಿಗೆ ಬೇಕಾದ ಸೂಕ್ತ ಸವಲತ್ತುಗಳು ದೊರೆಯುತ್ತವೆ.

ಪದಬಂಧ 2826



ಮೇಲಿನಿಂದ ಕೆಳಕ್ಕೆ

1. ವಾಸಿಸುವ ಮನೆಗೆ ತಿಂಗಳಿಗೆ ಹಣ ಪಾವತಿಸುವವ 5
2. ಮತ್ತೆ ಮತ್ತೆ ಘಮ್ಮೆನ್ನುವ ಪೂಜಾ ಪತ್ರೆ 3
3. ಮನವನ್ನು ಸೆಳೆಯುವ ನಡಿಗೆ 3
4. ಡೊಂಕು ಮಾರ್ಗ, ನೇರವಾಗಿ ನಡೆಯಲಾಗದ ಸ್ಥಿತಿ 4
5. ಕುದುರೆಗಳೆಳೆವ ಮೊಟಕು ಬಂಡಿ 3
6. ಕೊನೆಯ ಜನಕ್ಕೆ ಪ್ರೋತ್ಸಾಹವೇ ಇಲ್ಲ 5
7. ಕೊರವಂಜಿ ಹೇಳುವ ಶಕುನ 2
10. ನಾಲ್ಕು ತಲೆಯಷ್ಟು ಬುದ್ಧಿಯಿರುವ ಬ್ರಹ್ಮ 4
13. ಸುಸಂಸ್ಕೃತರ ದಂತ ಪಂಕ್ತಿ 3
14. ಶ್ರೀರಾಮನನ್ನು ಅಳಿಯನನ್ನಾಗಿ ಮಾಡಿಕೊಂಡ ತಂದೆಯ ಪುರಾತನ ನಗರಿ 5
15. ಹೀಗೆ ನಡೆಯಿತೆಂದು ಭೂತಕಾಲದ ಮಾಹಿತಿ ಕೊಡುವ ಪಠ್ಯ ವಿಷಯ 4
16. ಆಸನಕ್ಕಾಗಿ ಇದನ್ನು ಹರಡು 2
19. ವಿರಳವಾದ ಯಜ್ಞ 3
20. ಮತ್ಸರಕ್ಕೆ ಹೆಸರಾದ ಸೋದರ ವರ್ಗ 3

ಎಡದಿಂದ ಬಲಕ್ಕೆ

1. ಅಯೋಧ್ಯೆಗೆ ಮಗುವಾಗಿ ಬಂದ ಕೌಸಲ್ಯಾ ಪುತ್ರ 4
3. ಸಂವಿಧಾನದಂತೆ ಗುಂಪು ರಾಜ್ಯಗಳ ಮಹಾ ಸಂಭ್ರಮ 6
5. ವಿಶ್ವವನ್ನೇ ಪೋಷಿಸುವ ಮಹಾಮಾತೆ 5
7. ದ್ರೌಪದಿ ವೇಷಧಾರಿ ಎತ್ತುವ ಹೂವು ಕಳಶ 3
8. ಮಹಾಶಿವನ ಪ್ರಾಣ ಪ್ರಿಯೆ 3
9. ಪೆಟ್ಟು ಬೀಳುವುದನ್ನು ತಪ್ಪಿಸುವ ಲೋಹದ ಉಡುಗೆ 5
11. ಮಹಾರಾಷ್ಟ್ರದ ತುಳಸೀ ಸಂಜಾತ 3
12. ನಮ್ಮ ಗ್ರಾಮಕ್ಕೆ ಇವನೇ ದೊರೆ 5
15. ಕರ್ನಾಟಕದ ನಗುವ ಜಿಲ್ಲೆ 3
17. ತಿಂಡಿಯ ಜೊತೆ ಇದು ರೋಚಕ 3
18. ಕಣ್ಣಿನ ಕೊಡುಗೆಗೆ ಇದೊಂದು ಪರ್ಯಾಯ 5
21. ಕೃತಕತೆಯನ್ನು ಬಿಟ್ಟ ಸರಳ ನೈಸರ್ಗಿಕ ಬದುಕು 5
22. ಪ್ರತಿ ದಿನ ನಡೆದದ್ದನ್ನು ಸ್ವಗತಕ್ಕೆ ಬರೆದಿಡುವ ದಾಖಲೆ 4

ಪದಬಂಧ ಉತ್ತರ -2825

ಮೇಲಿಂದ ಕೆಳಕ್ಕೆ

1.ಶ್ರೀಕರ 2.ದ್ರವಿಣ 3.ವಿದೇಶ 5.ತಲ್ಲಣ 7.ಕಿಚಡಿ 9.ನವಭಾರತ 10.ಶತಾವಧಾನ 11.ಅರಸು 12.ಗದಗ 16.ಯೋಚನೆ 17.ಒಳಿತು 19.ಕರಮ 20.ಸಲಗ 21.ಪುರಾಣ

ಎಡದಿಂದ ಬಲಕ್ಕೆ

1.ಶ್ರೀರಾಮಚಂದ್ರ 3.ವಿಧೇಯಕ 4.ವಿಚಲಿತ 6.ರವಿಕಿರಣ 8.ಶಕುನ 10.ಶರಣ 11.ಅಡಿಗ 13.ಭಾಸ್ಕರ 14.ದರವ 15.ಸುಯೋಗ 17.ಒಮ್ಮತ 18.ನಡುಕ 20.ಸವಿನೆನಪು 22.ತುರುಬಲ 23.ರಾಮರಾಮ 24.ಗಜಕರಣ

ರಾಮ ಮಂದಿರದ ಸಮ್ಮೋಹನ ಜ್ವಲಂತ ಸಮಸ್ಯೆಗಳು ಗೌಣ



ಡಾ.ಪರಕಾಲ ಪ್ರಭಾಕರ್ ರಾಜಕೀಯ ಅರ್ಥಶಾಸ್ತ್ರಜ್ಞ, ರಾಜಕಾರಣಿ ಹಾಗೂ ರಾಜಕೀಯ ವ್ಯಾಖ್ಯಾನಕಾರ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಪತಿಯೂ ಆಗಿರುವ ಅವರು ಬಿಜೆಪಿ ಸರ್ಕಾರದ ನೀತಿ, ಆರ್ಥಿಕತೆ ಮತ್ತು ರಾಜಕೀಯವನ್ನು ನಿರಂತರವಾಗಿ ಟೀಕಿಸುತ್ತಾ ಬಂದಿದ್ದಾರೆ. ವಿಚಾರ ಸಂಕಿರಣದಲ್ಲಿ ಪಾಲ್ಗೊಳ್ಳುವ ಸಲುವಾಗಿ ರಾಮನಗರ ಜಿಲ್ಲೆಯ ಮಾಗಡಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಬಂದಿದ್ದ ಅವರು, 'ಭಾನುವಾರದ ಪುರವಣಿ' ಜೊತೆ ದೇಶದ ರಾಜಕೀಯ, ಆರ್ಥಿಕ ಸ್ಥಿತಿ ಹಾಗೂ ಸಾಮಾಜಿಕ ವಿಷಯಗಳ ಕುರಿತು ತಮ್ಮ ಅಭಿಪ್ರಾಯ ಹಂಚಿಕೊಂಡರು. ಅದರ ಆಯ್ದ ಭಾಗ ಇಲ್ಲಿದೆ.

ಸಂದರ್ಶನ: ಓದೇಶ ಸಕಲೇಶಪುರ

• ರಾಮ ಮಂದಿರ ಉದ್ಘಾಟನೆ ಸುತ್ತಲಿನ ಚುನಾವಣಾ ರಾಜಕಾರಣವನ್ನು ಹೇಗೆ ವಿಶ್ಲೇಷಿಸುತ್ತೀರಿ?

ಲೋಕಸಭಾ ಚುನಾವಣೆಗೆ ಮಂದಿರವೇ ಬಿಜೆಪಿಯ ಅಸ್ತ್ರ. ದೇಶದ ಜ್ವಲಂತ ಸಮಸ್ಯೆಗಳನ್ನು ಗೌಣವಾಗಿಸಿ ಜನರ ಗಮನವನ್ನು ಬೇರೆಡೆಗೆ ಸೆಳೆಯಲು ಚುನಾವಣೆ ಹೊಸ್ತಿಲಲ್ಲಿ ಮಂದಿರ ಉದ್ಘಾಟನೆ ಮಾಡಿದ್ದಾರೆ. ಬೆಲೆ ಏರಿಕೆ, ರೂಪಾಯಿ ಮೌಲ್ಯ ಕುಸಿತ, ಏದುಸಿರು ಬಿಡುತ್ತಿರುವ ಆರ್ಥಿಕತೆ, ಚೀನಾದಿಂದ ಭೂಮಿ ಅತಿಕ್ರಮಣ, ಕಪ್ಪುಹಣ ವಾಪಸ್‌ಗೆ ಕ್ರಮ ಸೇರಿದಂತೆ ದೇಶದ ಸಮಸ್ಯೆಗಳಿಗೆ ಇವರು ಮಾಡಿದ್ದೇನು ಎಂಬುದರ ಬಗ್ಗೆ ಮಾತನಾಡುತ್ತಿಲ್ಲ. ಹತ್ತು ವರ್ಷಗಳ ಹಿಂದೆ ಭಾರತವು ನೆರೆಯ ದೇಶಗಳೊಂದಿಗೆ ಉತ್ತಮ ಬಾಂಧವ್ಯ ಹೊಂದಿತ್ತು. ಈಗ ಅವರೆಲ್ಲರೂ ಅಂತರ ಕಾಯ್ದುಕೊಳ್ಳುತ್ತಿದ್ದಾರೆ. ಮತದಾರರು ಬಿಜೆಪಿಯ ಮಂದಿರ ಸಾಧನೆಗೆ ಮಣೆ ಹಾಕುತ್ತಾರೊ ಅಥವಾ ಸಮಸ್ಯೆಗಳ ಕಡೆಗಣನೆಗೆ ಬುದ್ಧಿ ಕಲಿಸುತ್ತಾರೊ ಕಾದು ನೋಡಬೇಕು.

• ದೇಶದ ಆರ್ಥಿಕ ಸ್ಥಿತಿ ಯಾವ ಹಾದಿಯಲ್ಲಿದೆ?

ದೇಶದ ಆರ್ಥಿಕ ವ್ಯವಸ್ಥೆ ಕೆಟ್ಟ ಸ್ಥಿತಿಯಲ್ಲಿದೆ. ಆದರೆ, ಆರ್ಥಿಕತೆ ವೇಗವಾಗಿ ಬೆಳೆಯುತ್ತಿದೆ ಎಂದು ಸರ್ಕಾರ ಬಿಂಬಿಸುತ್ತಿದೆ. ದೇಶದಲ್ಲಿ ಶೇ 24ರಷ್ಟು ನಿರುದ್ಯೋಗವಿದೆ. ನೆರೆಯ ಬಾಂಗ್ಲಾದೇಶದಲ್ಲಿ ನಿರುದ್ಯೋಗ ಪ್ರಮಾಣ ಕೇವಲ ಶೇ 12ರಷ್ಟಿದೆ. ರೂಪಾಯಿ ಮೌಲ್ಯ ಕುಸಿತ, ಪ್ರಾಮುಖ್ಯತೆ ಕಳೆದುಕೊಳ್ಳುತ್ತಿರುವ ಕೃಷಿ, ದೇಶಿಯ ಉಳಿತಾಯ ಕುಸಿತದ ಜೊತೆಗೆ ಖಾಸಗಿ ವಲಯದಲ್ಲಿ ಹೂಡಿಕೆ ಶೇ 19ರಷ್ಟು ತಗ್ಗಿದೆ. ಕಳೆದ 70 ವರ್ಷಗಳಲ್ಲಿ ₹50 ಲಕ್ಷ ಕೋಟಿ ಇದ್ದ ದೇಶದ ಸಾಲವು, ಕಳೆದ ಹತ್ತು ವರ್ಷಗಳಲ್ಲೇ ₹100 ಲಕ್ಷ ಕೋಟಿ ತಲುಪಿದೆ. ಈ ಕುರಿತ ನೈಜ ದತ್ತಾಂಶ ಮತ್ತು ಅಂಕಿಅಂಶಗಳನ್ನು ತಿರುಚಿರುವ ಸರ್ಕಾರ, ದೇಶ ಅಭಿವೃದ್ಧಿಯತ್ತ ಸಾಗುತ್ತಿದೆ ಎಂಬ ಭ್ರಮೆ ಬಿತ್ತಿದೆ. 2020–21ರಲ್ಲಿ ಕೋವಿಡ್‌ನಿಂದಾಗಿ ಆರ್ಥಿಕತೆ ಎರಡು ವರ್ಷ ಹದಗೆಟ್ಟಿತ್ತು. ಅದಕ್ಕೂ ಮುಂಚೆ ನೋಟು ಅಮಾನ್ಯೀಕರಣದಿಂದಾಗಿ ನೆಲ ಕಚ್ಚಿತ್ತು. ಇವೆರಡರಿಂದ ಹಲವು ಕ್ಷೇತ್ರಗಳು ಇಂದಿಗೂ ಚೇತರಿಸಿಕೊಂಡಿಲ್ಲ.

• ಬಿಜೆಪಿ ಸವಾಲನ್ನು ಇಂಡಿಯಾ ಮೈತ್ರಿಕೂಟ ಎದುರಿಸಬಲ್ಲದೆ?

ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ 2014ರಲ್ಲಿ ಪಡೆದ ಮತ ಪ್ರಮಾಣ ಶೇ 33 ಇದ್ದರೆ, 2019ರಲ್ಲಿ ಶೇ 37ಕ್ಕೆ ಏರಿಕೆಯಾಯಿತು. ಇದಕ್ಕೆ ಅದರ ಮಿತ್ರಪಕ್ಷಗಳ ಕಾಣಿಕೆ ಬಹಳ ಇದೆ. ಎನ್‌ಡಿಎ ವಿರುದ್ಧ ಇಂಡಿಯಾ ಮೈತ್ರಿಕೂಟ ತಲೆ ಎತ್ತಿರುವುದು ಉತ್ತಮ ಬೆಳವಣಿಗೆ. ಅಲ್ಲಿರುವ ಪಕ್ಷಗಳು ತಮ್ಮ ವೈಯಕ್ತಿಕ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು, ಪ್ರಜಾಪ್ರಭುತ್ವದ ಉಳಿವಿಗಾಗಿ ಹೋರಾಡಿದರೆ, ಯಶಸ್ಸು ಕಾಣಬಲ್ಲರು.

• ಕರ್ನಾಟಕದ ಗ್ಯಾರಂಟಿ ಯೋಜನೆಗಳ ಪರಿಣಾಮ ಕುರಿತು ನಿಮ್ಮ ಅಭಿಪ್ರಾಯವೇನು?

ಕರ್ನಾಟಕದ ಸೋಲು ಬಿಜೆಪಿಗೆ ದಿಗ್ಭ್ರಮೆಯನ್ನುಂಟು ಮಾಡಿದೆ. ಪ್ರಧಾನಿಯೇ ರಾಜ್ಯದಲ್ಲಿ ರೋಡ್ ಶೋ ಮತ್ತು ಸಮಾವೇಶ ನಡೆಸಿದರೂ ಗೆಲ್ಲಲು ಆಗಲಿಲ್ಲ. ಚುನಾವಣೆಯಲ್ಲಿ ಗೆದ್ದ ಕಾಂಗ್ರೆಸ್ ಪ್ರಯೋಗಿಸಿದ ಗ್ಯಾರಂಟಿ ಯೋಜನೆಗಳು ಬಿಜೆಪಿಯನ್ನು ವಿಚಲಿತಗೊಳಿಸಿವೆ. ಅದರ ಪರಿಣಾಮವನ್ನು ಬೇಗನೆ ಅರಿತ ಬಿಜೆಪಿ, ಕೇಂದ್ರ ಮತ್ತು ತಮ್ಮ ಪಕ್ಷ ಅಧಿಕಾರದಲ್ಲಿರುವ ರಾಜ್ಯಗಳಲ್ಲಿಯೂ ಗ್ಯಾರಂಟಿ ಅನುಕರಣೆ ಮಾಡತೊಡಗಿದೆ. ಇದಾದ ಬಳಿಕವೇ ಕೇಂದ್ರ ಸರ್ಕಾರ ದೇಶದ 81 ಕೋಟಿ ಜನರಿಗೆ ಉಚಿತ ಆಹಾರ–ಧಾನ್ಯ ವಿತರಣೆಯನ್ನು ವಿಸ್ತರಿಸಿತು. ಜನರ ಅಗತ್ಯಕ್ಕೆ ಸ್ಪಂದಿಸಿದರೆ ಅಧಿಕಾರ ಎಂಬ ಸ್ಪಷ್ಟ ಸಂದೇಶವನ್ನು ಕರ್ನಾಟಕದ ಜನ ಬಿಜೆಪಿಗೆ ಕೊಟ್ಟರು.

• ಖಾಸಗೀಕರಣ ಸೃಷ್ಟಿಸುವ ಬಿಕ್ಕಟ್ಟುಗಳೇನು?

ಖಾಸಗೀಕರಣವನ್ನು ಸರ್ಕಾರ ಸುಧಾರಣೆ ಎನ್ನುತ್ತಿದೆ. ಸರ್ಕಾರಿ ವಲಯದ ಸಂಸ್ಥೆಗಳನ್ನು ಮತ್ತು ಆಸ್ತಿಯನ್ನು ಮಾರಾಟ ಮಾಡುವುದು ಸುಧಾರಣೆಯಲ್ಲ. ಬದಲಿಗೆ, ಸುಧಾರಣೆ ಮಾಡುವುದು ಸರ್ಕಾರಕ್ಕೆ ಗೊತ್ತಿಲ್ಲ ಮತ್ತು ಅದಕ್ಕಾಗಿ ಯಾವುದೇ ಯೋಜನೆಗಳಿಲ್ಲ ಎಂಬುದನ್ನು ಸರ್ಕಾರಕ್ಕೆ ಒಪ್ಪಿಕೊಂಡಂತೆ. ಕಡಿಮೆ ಮೊತ್ತಕ್ಕೆ ಈ ಸಂಸ್ಥೆಗಳನ್ನು ಪ್ರಧಾನಿ ತಮ್ಮ ಸ್ನೇಹಿತರಿಗೆ ಮಾರಾಟ ಮಾಡುತ್ತಿದ್ದಾರೆ. ಬಡವರಿಗೆ ಉಚಿತ ಆಹಾರ, 2–3 ಅಡುಗೆ ಅನಿಲ ಸಿಲಿಂಡರ್ ಕೊಟ್ಟಿದ್ದೇವೆ ಎಂದು ಹೇಳುತ್ತಲೇ, ಮತ್ತೊಂದೆಡೆ ವಿಮಾನ ನಿಲ್ದಾಣ, ಬಂದರು ನಿರ್ವಹಣೆ, ಮೂಲಸೌಕರ್ಯ ಅಭಿವೃದ್ಧಿಗೆ ಸಂಬಂಧಿಸಿದ ಭಾರೀ ಮೊತ್ತದ ಟೆಂಡರ್‌ಗಳನ್ನು ತಮ್ಮವರಿಗೆ ಕೊಡುತ್ತಿದ್ದಾರೆ. ಇದು ಮುಂದೊಂದು ದಿನ ದೊಡ್ಡ ಬಿಕ್ಕಟ್ಟು ಉದ್ಭವಿಸಲು ಕಾರಣವಾಗುತ್ತದೆ.

• ಸಮಾಜದ ಸ್ವಾಸ್ಥ್ಯ ಕದಡುವಂತಹ ಘಟನೆಯನ್ನು ನೀವು ಹೇಗೆ ನೋಡುತ್ತೀರಿ?

ಸ್ಥಳೀಯ ಮಟ್ಟದಿಂದ ರಾಷ್ಟ್ರ ಮಟ್ಟದವರೆಗೆ ನಡೆಯುತ್ತಿರುವ ಇಂತಹ ಘಟನೆಗಳಿಗೆ ರಾಜಕೀಯ ಪಕ್ಷಗಳ ನಿರ್ಲಕ್ಷ್ಯವೇ ಕಾರಣ. ಪಕ್ಷಗಳು ಚುನಾವಣೆ ಗೆಲ್ಲಲು ಏನು ಬೇಕಾದರೂ ಮಾಡುತ್ತವೆ. ಹಾಗಾಗಿ, ನಾಗರಿಕ ಸಮಾಜ ಆತಂಕದಲ್ಲಿದೆ. ಮಣಿಪುರ ಹೊತ್ತಿ ಉರಿಯುತ್ತಿದೆ. ಅದು ನಮ್ಮ ಸಮಸ್ಯೆ ಅಲ್ಲವೆಂದು ಉಳಿದವರು ಸುಮ್ಮನಿದ್ದಾರೆ. ಗುಜರಾತ್‌ನಲ್ಲಿ 20 ವರ್ಷಗಳ ಹಿಂದೆಯೂ ಇಂತಹದ್ದೇ ಘಟನೆ ನಡೆದಿತ್ತು. ಇದಾದ 20 ವರ್ಷಗಳ ನಂತರ ಮಣಿಪುರ ಅಂತಹದ್ದೇ ಘಟನೆಗೆ ಸಾಕ್ಷಿಯಾಗಿದೆ. ಮುಂದೆ ಇಂತಹದ್ದೇ ಸ್ಥಿತಿ ಬೇರೆ ರಾಜ್ಯಗಳಲ್ಲಿ ಉದ್ಭವಿಸಲು ಹೆಚ್ಚು ವರ್ಷಗಳು ಹಿಡಿಯುವುದಿಲ್ಲ. ಸಮಸ್ಯೆ ನಮ್ಮ ಮನೆ ಬಾಗಿಲಿಗೆ ಬರುವುದಕ್ಕೆ ಮುಂಚೆ ನಾಗರಿಕ ಸಮಾಜ ಎಚ್ಚೆತ್ತುಕೊಳ್ಳಬೇಕಿದೆ.

• ಒಡೆದಾಳುವ ರಾಜಕಾರಣ ಸೃಷ್ಟಿಸುತ್ತಿರುವ ಅಪಾಯಗಳೇನು?

ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ ದೊಡ್ಡ ಮಟ್ಟದಲ್ಲಿ ವಿಭಜನೆ ನಡೆಯುತ್ತಿದೆ. ಮುಖ್ಯವಾಗಿ ಜಾತಿ– ಧರ್ಮದ ವಿಷಯದಲ್ಲಿ ಜನರನ್ನು ವಿಭಜಿಸಿಯೇ ಚುನಾವಣೆ ಗೆಲ್ಲುತ್ತಿದ್ದಾರೆ. ಸರ್ಕಾರವೇ ಒಂದು ಧರ್ಮದ ಪರ ನಿಂತಿದೆ. ಮತ್ತೊಂದು ಧರ್ಮ ಮತ್ತು ದೇಶವನ್ನು ದ್ವೇಷಿಸುವಂತೆ ಮಾಡುತ್ತಿದೆ. ಧರ್ಮ ಎಂಬುದು ವೈಯಕ್ತಿಕ. ಸರ್ಕಾರದ ಭಾಗವಾಗಿರುವವರು ಒಂದು ಧರ್ಮದ ಪರ ಕೆಲಸ ಮಾಡಬಾರದು. ಆದರೆ, ದೇಶದ ಚಿತ್ರಣ ವ್ಯತಿರಿಕ್ತವಾಗಿದೆ. ಧರ್ಮ ದ್ವೇಷವನ್ನು ಸಾರ್ವತ್ರಿಕಗೊಳಿಸಲಾಗುತ್ತಿದೆ. ಸಂವಿಧಾನದ ಮೌಲ್ಯ ಮತ್ತು ವೈವಿಧ್ಯತೆ ಕಾಪಾಡಲು ನಾಗರಿಕ ಸಮಾಜವು ಇಂತಹ ಶಕ್ತಿಗಳ ವಿರುದ್ಧ ದನಿ ಎತ್ತಬೇಕಿದೆ.

• ಇತ್ತೀಚೆಗೆ ಸನಾತನ ಧರ್ಮದ ವಿಷಯ ಮುನ್ನೆಲೆಗೆ ಬಂದಿದೆಯಲ್ಲಾ?

ಬಿಜೆಪಿ ಮತ್ತು ಪರಿವಾರದವರು ವರ್ಣ ವ್ಯವಸ್ಥೆ ಪೋಷಿಸುವ ಸನಾತನ ಧರ್ಮದ ಆರಾಧಕರು. ಅಸ್ಪೃಶ್ಯತೆ, ಅಸಮಾನತೆ, ದೇವಾಲಯ ಪ್ರವೇಶ ನಿಷೇಧ, ಶಿಕ್ಷಣ ನಿರಾಕರಣೆ, ಹೆಣ್ಣಿನ ಸ್ವಾತಂತ್ರ್ಯಕ್ಕೆ ನಿರ್ಬಂಧದಂತಹ ಸನಾತನ ಮೌಲ್ಯಗಳಿಗೆ ಅವರು ಕಟಿಬದ್ಧರಾಗಿದ್ದಾರೆ. ಅವುಗಳನ್ನು ಮತ್ತೆ ಜಾರಿಗೆ ತರುವುದೇ ಅವರ ರಹಸ್ಯ ಅಜೆಂಡಾ. ಎಂದಾದರೂ ಬಹುತ್ವ, ಸಮಾನತೆ, ಸಹಿಷ್ಣುತೆ, ಜಾತ್ಯತೀತ, ಪ್ರಜಾಪ್ರಭುತ್ವದ ಮೌಲ್ಯಗಳ ಪರವಾಗಿ ನಿಂತಿದ್ದಾರೆಯೇ? ಜನರಿಗೆ ಉದ್ಯೋಗ ಕೊಟ್ಟು ದೇಶ ಕಟ್ಟುವುದರಲ್ಲಿ ನಂಬಿಕೆ ಇಲ್ಲದಿರುವುದರಿಂದಲೇ, ಮಂದಿರ ಕಟ್ಟಿದರು. ಅವರಿಗೆ ಭೂತದಲ್ಲಿ ನಂಬಿಕೆ ಇದೆಯೇ ಹೊರತು, ವರ್ತಮಾನ ಮತ್ತು ಭವಿಷ್ಯದಲ್ಲಲ್ಲ.

ಪ್ರೇಮಕಥೆಗೆ ಆಕರ್ಷಕ ಮೈಕಟ್ಟು

ವಿಮರ್ಶೆ

ರಘುನಾಥ ಚ.ಹ.

ಯುವಜನರ ಆಲೋಚನೆಗಳು ಅನನುಭವದಿಂದ ಕೂಡಿದ್ದರೂ ಆಡಿನ ಮರಿಯ ಕೂಗಿನಂತೆ ಆಕರ್ಷಕವಾಗಿರುತ್ತವೆ ಎನ್ನುವ ಅರ್ಥದ ಕಾರ್ಲ್‌ಮಾರ್ಕ್ಸ್‌ನ ಮಾತನ್ನು, ವೈ.ಎನ್. ಮಧು ಅವರ 'ಕನಸೇ ಕಾಡುಮಲ್ಲಿಗೆ' ಕಾದಂಬರಿ ನೆನಪಿಸುವಂತಿದೆ. ಮಧು ಅವರಿಗಿದು ಚೊಚ್ಚಿಲ ಕಾದಂಬರಿ. ಕಾದಂಬರಿಯನ್ನು ಕಟ್ಟಿರುವ ರೀತಿ ಹಾಗೂ ಕಥನದ ಬಗೆಗಿನ ಸ್ಪಷ್ಟತೆಯಲ್ಲಿ ಅನನುಭವದ ಛಾಯೆಯಿಲ್ಲ. ಇಲ್ಲಿನ ಎಳಸುತನ ಮುಖ್ಯಪಾತ್ರಗಳಿಗೆ ಸಂಬಂಧಿಸಿದ್ದು. ಯುವ ತಲೆಮಾರಿನ ತವಕತಲ್ಲಣಗಳು, ಭಾವೋತ್ಕರ್ಷವನ್ನು ಕಾದಂಬರಿ ಆಕರ್ಷಕವಾಗಿ ಹಿಡಿದಿಟ್ಟಿದೆ.

ವಸತಿ ಶಾಲೆಯೊಂದರ ಪರಿಸರದಲ್ಲಿ ಘಟಿಸುವ ಪ್ರೇಮಕಥನ ಕಾದಂಬರಿಯ ಕೇಂದ್ರದಲ್ಲಿದೆ. ಹಾಸ್ಟೆಲ್‌ನಲ್ಲಿನ ಅವ್ಯವಸ್ಥೆ ವಿರುದ್ಧ ಬಂಡೇಳುವುದು, ಆ ಬಂಡಾಯ ವಿಫಲವಾಗಿ ಸಿಕ್ಕಿಬೀಳುವುದು, ವಿದ್ಯಾರ್ಥಿಗಳ ನಡುವಿನ ಜಗಳ, ರಜಾದಿನಗಳಲ್ಲಿನ ಪ್ರೇಮಪತ್ರಗಳ ವ್ಯವಹಾರ – ವಿದ್ಯಾರ್ಥಿಜೀವನದಲ್ಲಿ ಸಹಜವೆನ್ನುವಂಥ ಘಟನೆಗಳೇ ಇಲ್ಲೂ ಇದ್ದರೂ, ಅವುಗಳಿಗೆ ರಕ್ತಮಾಂಸ ತುಂಬುವಲ್ಲಿ ಕಾದಂಬರಿಕಾರರ ಸೃಜನಶೀಲ ಶಕ್ತಿಯ ಮಹತ್ವವಿದೆ.

ಹದಿಹರೆಯದ ಹುಡುಗ ಹುಡುಗಿಯ ನಡುವಣ ಆಕರ್ಷಣೆ–ಪ್ರೇಮಕ್ಕೆ ಸಂಬಂಧಿಸಿದ ಕಥನದ ನಿರೂಪಣೆಗೆ ಕಾದಂಬರಿಕಾರರು ಬಳಸಿಕೊಂಡಿರುವ ತಂತ್ರ ಕುತೂಹಲಕರವಾಗಿದೆ. ವಸ್ತುವಿನ ಆಯ್ಕೆಯಲ್ಲಷ್ಟೇ ಅಲ್ಲ, ಆ ವಸ್ತುವಿಗೆ ತಕ್ಕುದಾದ ಭಾಷೆಯನ್ನು ಕಟ್ಟಿಕೊಳ್ಳುವಲ್ಲಿಯೂ ಮಧು ಯಶಸ್ವಿಯಾಗಿದ್ದಾರೆ. ಹದಿಹರೆಯದವರ ಲೋಕವನ್ನು ಅವರದೇ ವಿಶಿಷ್ಟ ನುಡಿಗಟ್ಟಿನಲ್ಲಿ ಕಾಣಿಸುವ ಪ್ರಯತ್ನ ಕಾದಂಬರಿಗೆ ವಿಶಿಷ್ಟ ಚೆಲುವನ್ನು ತಂದುಕೊಟ್ಟಿದೆ. ಗಾಂಧೀಜಿ, ಅಂಬೇಡ್ಕರ್, ಇಂದಿರಾಗಾಂಧಿ, ನೆಹರೂ ಎಲ್ಲರೂ ಇಲ್ಲಿ ಬಂದುಹೋಗುತ್ತಾರೆ. ಸೈದ್ಧಾಂತಿಕ ಸ್ಪಷ್ಟತೆಯ ಹಂಗಿರದ ಈ ಹೆಸರುಗಳು, ಎಂಥ ಮಹತ್ವದ ಸಂಗತಿಯನ್ನೂ ಲಘುವಾಗಿಸುವ, ನಗೆಯಾಗಿಸುವ ಹರೆಯದ ಕಿಡಿಗೇಡಿತನವನ್ನು ಸೂಚಿಸುವಂತಿವೆ.

ಪ್ರತಿ ಸಾಲೂ ಓದುಗರಿಗೆ ಬೆರಗಿನಂತೆ ಕಾಣಿಸಬೇಕು, ಓದಿನುದ್ದಕ್ಕೂ ಸಹೃದಯರ ಮುಖದಲ್ಲಿ ಮಂದಹಾಸ ಉಳಿದಿರಬೇಕೆನ್ನುವ ಸಂಕಲ್ಪದೊಂದಿಗೇ ಈ ಕಾದಂಬರಿ ರೂಪುಗೊಂಡಂತಿದೆ. ಶಿರಾ ಸೀಮೆಯ ಭಾಷೆಯೊಂದಿಗೆ, ಈ ಕಾಲದ ಶಾಲೆ–ಕಾಲೇಜು ಹುಡುಗ ಹುಡುಗಿಯರ ನಡುವೆ ಬಳಕೆಯಾಗುವ ಮಾತುಗಳನ್ನು ಕಚ್ಚಾಮಾಲಿನ ರೂಪದಲ್ಲಿಯೇ ಬಳಸಿಕೊಂಡಿರುವುದು ಕಥನದ ಹೊಳಪು ಹೆಚ್ಚಿಸಿದೆ. ಪ್ರಥಮ ಪುರುಷ ಪ್ರಯೋಗ ನಿರೂಪಣೆಯಲ್ಲಿನ ಲವಲವಿಕೆಗೆ ಪೂರಕವಾಗಿದೆ.

ಕಾದಂಬರಿಯ ಕಥೆ ನಾಯಕ ಕೇಂದ್ರಿತವಾಗಿದ್ದರೂ, ನಾಯಕಿಯ ಪಾತ್ರ ತನ್ನ ಗಟ್ಟಿತನದಿಂದ ಗಮನಸೆಳೆಯುತ್ತದೆ. ಹುಡುಗ ತನ್ನ ಪ್ರೇಮಿಯೊಂದಿಗೆ ಹರಯಕ್ಕೆ ಸಹಜವಾದ ಭಾವನೆಗಳೊಂದಿಗೆ ಚೆಲ್ಲುಚೆಲ್ಲಾಗಿ ನಡೆದುಕೊಂಡರೆ, ಪ್ರೇಮದ ಆಕರ್ಷಣೆಯ ಹಂತವನ್ನು ದಾಟಿದ ಪ್ರೌಢತೆಯನ್ನು ತನ್ನ ನಡೆ–ನುಡಿಯಲ್ಲಿ ಪ್ರಕಟಪಡಿಸುತ್ತಾಳೆ. ದಾಂಪತ್ಯದಲ್ಲಿ ಗಂಡಿನ ಮೇಲೆ ಹೆಣ್ಣು ತೋರುವ ಕಾಳಜಿಯುತ ಅಧಿಕಾರವನ್ನು ಇಲ್ಲಿನ ಹುಡುಗಿ ತನ್ನ ಪ್ರೇಮಿಯ ಮೇಲೆ ಚಲಾಯಿಸುತ್ತಾಳೆ. ನಾಯಕನನ್ನು ಹುಡುಕಿಕೊಂಡು ಅವನ ಊರಿಗೆ ಬಂದು, ದೋಸೆ ತಿನ್ನಿಸಿ ಹೋಗುವಷ್ಟು ಗಟ್ಟಿಗಿತ್ತಿ ಈ ನಾಯಕಿ.

ಲಘುವಾದ ಘಟನೆಗಳ ಹಂದರದಲ್ಲಿ ಅನಾವರಣಗೊಳ್ಳುವ 'ಕನಸೇ ಕಾಡುಮಲ್ಲಿಗೆ', ರೈತರ ದುರಂತ ಅಂತ್ಯದ ಘಟನೆಯೊಂದನ್ನು ತಳುಕು ಹಾಕಿಕೊಳ್ಳುವ ಮೂಲಕ ಇದ್ದಕ್ಕಿದ್ದಂತೆ ಗಂಭೀರಗೊಳ್ಳುತ್ತದೆ.

ತುಮಕೂರು ಜಿಲ್ಲೆಯ ಶಿರಾದಲ್ಲಿ ರೈತರ ಮೇಲೆ ನಡೆದ ಗೋಲಿಬಾರ್ ಕರ್ನಾಟಕದ ಕೃಷಿ ಚರಿತ್ರೆಯ ಕಹಿ ಅಧ್ಯಾಯಗಳಲ್ಲೊಂದು. 1998ರಲ್ಲಿ ನಡೆದ ಈ ಘಟನೆಯಲ್ಲಿ ಆರು ರೈತರು ಹಾಗೂ ಇಬ್ಬರು ಪೊಲೀಸರು ಜೀವ ಕಳೆದುಕೊಂಡಿದ್ದರು. ಕ್ವಿಂಟಲ್‌ಗೆ ಸಾವಿರ ರೂಪಾಯಿ ಆಸುಪಾಸಿನಲ್ಲಿದ್ದ ಕಡಲೆಕಾಯಿಯ ಬೆಲೆ ಒಮ್ಮಿಂದೊಮ್ಮೆಗೆ ಇನ್ನೂರು ರೂಪಾಯಿಗೆ ಕುಸಿದಾಗ ರೈತರು ಪ್ರತಿಭಟನೆಗೆ ತೊಡಗಿದ್ದರು. ಪ್ರಕರಣ ಹತೋಟಿ ಮೀರಿದ್ದರಿಂದಾಗಿ ಗೋಲಿಬಾರ್ ನಡೆದಿತ್ತು. ರೈತರ ಪ್ರತಿಭಟನೆಯನ್ನು ಕೆಲವು ದುಷ್ಕರ್ಮಿಗಳು ತಮ್ಮ ಹಿತಾಸಕ್ತಿಗೆ ಬಳಸಿಕೊಂಡಿದ್ದು ಹಿಂಸಾಚಾರಕ್ಕೆ ಕಾರಣವಾಗಿ, ಸಾಯಿಪ್ರಕಾಶ್ ಎನ್ನುವ ಜನಪರ ಪೊಲೀಸ್ ಅಧಿಕಾರಿಯನ್ನು ದಾರುಣವಾಗಿ ಕೊಲ್ಲಲಾಗಿತ್ತು. ಎರಡೂವರೆ ದಶಕಗಳ ಹಿಂದಿನ ಈ ಘಟನೆ, 'ಕನಸೇ ಕಾಡುಮಲ್ಲಿಗೆ' ಕಾದಂಬರಿಯ ಕ್ಲೈಮ್ಯಾಕ್ಸ್.

ವಿಷಾದದ ಸ್ಪರ್ಶದೊಂದಿಗೆ ಹಾಸ್ಯ ಪ್ರಸಂಗವೊಂದು ಇದ್ದಕ್ಕಿದ್ದಂತೆ ಹೊಸ ಮೌಲ್ಯವೊಂದನ್ನು ಎಟುಕಿಸಿಕೊಂಡಂತೆ, ಓದುಗರನ್ನು ರಂಜಿಸುವುದನ್ನೇ ಪ್ರಧಾನ ಉದ್ದೇಶವಾಗಿಸಿಕೊಂಡಿರುವ 'ಕನಸೇ ಕಾಡುಮಲ್ಲಿಗೆ' ಕಾದಂಬರಿ ರೈತಾಪಿ ವರ್ಗಕ್ಕೆ ಸಂಬಂಧಿಸಿದ ದುರಂತ ಘಟನೆಯೊಂದನ್ನು ಒಳಗೊಳ್ಳುವ ಮೂಲಕ ತನ್ನ ಲಘುತನವನ್ನು ಕಳೆದುಕೊಂಡು, ಹೊಸ ಆಯಾಮವೊಂದನ್ನು ದೊರಕಿಸಿಕೊಂಡಿದೆ.

'ಕಾರೇಹಣ್ಣು' ಹಾಗೂ 'ಫೀಪೋ' ಸಂಕಲನಗಳ ಮಧು ಕಥೆಗಾರರಾಗಿ ಸಹೃದಯರಿಗೆ ಪರಿಚಿತರು. ಬೌದ್ಧಿಕ ರಚನೆಗಳಂತೆ ಕಾಣಿಸುವ ಕಥೆಗಳಿಗಿಂತಲೂ ಭಿನ್ನವಾದ, ಬುದ್ಧಿ–ಭಾವ ಹದವಾಗಿ ಬೆರೆತ ಕಥನದ ಹದವೊಂದನ್ನು ಕಂಡುಕೊಳ್ಳಲು ಮಧು ನಡೆಸಿರುವ ಪ್ರಜ್ಞಾಪೂರ್ವಕ ಪ್ರಯತ್ನದಂತೆ 'ಕನಸೇ ಕಾಡುಮಲ್ಲಿಗೆ' ಕಾದಂಬರಿ ಕಾಣಿಸುತ್ತದೆ. ಯುವ ಓದುಗರಿಗೆ ಕನ್ನಡದಲ್ಲಿ ವಿರಳವಾಗಿರುವ ಓದುವ ಸಾಮಗ್ರಿಯನ್ನು ಪೂರೈಸುವ ನಿಟ್ಟಿನಲ್ಲೂ ಈ ಕಾದಂಬರಿ ಒಂದು ವಿಶಿಷ್ಟ ಹಾಗೂ ಯಶಸ್ವೀ ಪ್ರಯೋಗ.

'ಕನಸೇ ಕಾಡುಮಲ್ಲಿಗೆ' ಕಾದಂಬರಿ ಆಕರ್ಷಕವಾಗಿದೆ, ಕುತೂಹಲಕರವಾಗಿದೆ, ಭಾಷಾಪ್ರಯೋಗದಿಂದಲೂ ಗಮನಸೆಳೆಯುವಂತಿದೆ. ಆದರೆ, ಘಟನೆಗಳನ್ನು ನಿರೂಪಿಸುವಲ್ಲಿನ ಉತ್ಸಾಹವನ್ನು ಪರಿಸರ ಚಿತ್ರಣಕ್ಕೆ ಸಂಬಂಧಿಸಿದಂತೆ ಕಾದಂಬರಿಕಾರರು ತೋರಿಸಿಲ್ಲ. ನಾಯಕನ ಊರಿನಲ್ಲಿನ ಕೃಷಿ ಸಂಸ್ಕೃತಿಗೆ ಕೂಡ ಹೆಚ್ಚಿನ ಪೋಷಣೆ ದೊರೆತಿಲ್ಲ. ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮದಡಿ ಇಲ್ಲಿನ ವಿದ್ಯಾರ್ಥಿಗಳು ಮಧ್ಯಪ್ರದೇಶಕ್ಕೆ ಹೋಗುವ ಘಟನೆಗಳಿವೆ. ಎರಡು ರಾಜ್ಯಗಳ ನಡುವಿನ ಸಾಂಸ್ಕೃತಿಕ ವೈವಿಧ್ಯವನ್ನು ಗುರ್ತಿಸುವುದಕ್ಕೂ ಕಾದಂಬರಿ ಉತ್ಸಾಹ ವ್ಯಕ್ತಪಡಿಸಿಲ್ಲ. ಪ್ರೇಮಕಥನಕ್ಕೆ ನಿಷ್ಠವಾಗಿರುವುದು, ಪ್ರೇಮದ ನವಿರುತನದಾಚೆಗಿನ ಯಾವುದಕ್ಕೂ ಮಹತ್ವ ದೊರೆಯದಿರುವುದು ಕಾದಂಬರಿಯ ಶಕ್ತಿಯೂ ಹೌದು, ಮಿತಿಯೂ ಹೌದು.



ಪು: 260 ₹300

ಕನಸೇ ಕಾಡುಮಲ್ಲಿಗೆ
ಲೇ: ಮಧು ವೈ.ಎನ್.
ಪ್ರ: ನೆಲಮುಗಿಲು ಪ್ರಕಾಶನ
ಸಂ: 9113885275.

ಜೀತದಿಂದ...

12ನೇ ಪುಟದಿಂದ...

'ನಮ್ಮ ಜನರಿಗೆ ಮನೆ ಕಟ್ಟಿಸಿಕೊಡಬೇಕು, ಜಮೀನು ಒದಗಿಸಬೇಕು' ಎಂದು ಉಪವಿಭಾಗಾಧಿಕಾರಿ ಬಳಿಗೆ ಹೋಗಿದ್ದ ಸೋಮಣ್ಣ ಕಹಿ ಅನುಭವಿಸಿದರು. 'ಆ ಜನರ ಬಳಿ ಹಣ ಪಡೆದುಕೊಂಡು ನಮ್ಮ ಬಳಿಗೆ ಬಂದಿದ್ದೀರಾ' ಎಂದು ಅಧಿಕಾರಿ ನಿಂದಿಸಿದರು. 'ಬೇಕಾದವರೇ ಕೇಳಲಿ ಬಿಡಿ' ಎಂದಿದ್ದು ಅವರನ್ನು ಬಹುವಾಗಿ ಚಿಂತಿಸುವಂತೆ ಮಾಡಿತು. ಜನರೇ ವ್ಯವಸ್ಥೆಯನ್ನು ಪ್ರಶ್ನಿಸುವಂತಾಗಬೇಕು, ಇದಕ್ಕಾಗಿ ಸಂಘಟನೆ ಮಾಡಬೇಕು ಎಂಬ ಹಟಕ್ಕೆ ಬಿದ್ದರು.

'ಸಂಘಟನೆಗಾಗಿ ಹಾಡಿಗಳ ಯಜಮಾನರನ್ನು ಸಂಪರ್ಕಿಸಿದ್ದೆವು. ಅವರು ಹೇಳುವುದನ್ನು ಯಾರೂ ಮೀರುತ್ತಿರಲಿಲ್ಲ. ಅವರ ಮೂಲಕ ಜಾಗೃತಿ ಮೂಡಿಸಲು ಆರಂಭಿಸಿದೆವು. ಸರ್ಕಾರದಿಂದ ಸೌಲಭ್ಯಗಳನ್ನು ಪಡೆದುಕೊಳ್ಳಲೇಬೇಕು. ಕಾಡಿನಲ್ಲೇ ಇರೋಣ, ನಮ್ಮ ಸಂಸ್ಕೃತಿ, ಆಚಾರ–ವಿಚಾರಗಳನ್ನು ಉಳಿಸಿಕೊಳ್ಳೋಣ ಎಂದು ತಿಳಿಸುತ್ತಿದ್ದೆವು. ಮೈಸೂರು, ಚಾಮರಾಜನಗರ, ಕೊಡಗು, ಉಡುಪಿ, ದಕ್ಷಿಣ ಕನ್ನಡ ಮೊದಲಾದ ಕಡೆಗಳಲ್ಲೆಲ್ಲಾ ಸಂಚರಿಸಿದೆವು. ಜಿಲ್ಲಾ ಸಮಿತಿಗಳನ್ನು ರಚಿಸಿದೆವು. ಬಳಿಕ, ರಾಜ್ಯದ ಮೂಲ ನಿವಾಸಿಗಳ ವೇದಿಕೆ ರಚನೆಯಾಯಿತು' ಎಂದು ಹೋರಾಟದ ಹಾದಿಯನ್ನು ನೆನಪಿಸಿಕೊಳ್ಳುತ್ತಾರೆ.

ಬುಡಕಟ್ಟು ಜನರ ಬವಣೆ ಎಲ್ಲ ರಾಜ್ಯದಲ್ಲೂ ಒಂದೇ ಎಂಬುದು ಮನವರಿಕೆಯಾಯಿತು. ಮೂಲ ನೆಲೆಗಳನ್ನು ವಾಪಸ್ ಕೊಡಬೇಕೆಂದು ಹೋರಾಟ ತೀವ್ರಗೊಳಿಸಿದರು. ದೆಹಲಿಯಲ್ಲಿ ವಿವಿಧ ರಾಜ್ಯಗಳವರೊಂದಿಗೆ ಸೇರಿ ಹೋರಾಡಿದರು. ಪರಿಣಾಮ, ರಾಷ್ಟ್ರೀಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಆಯೋಗದ ಅಧ್ಯಕ್ಷರಾಗಿದ್ದ ಬಿ.ಡಿ.ಶರ್ಮಾ ಅವರು ಹಾಡಿಗಳಿಗೆ ಬಂದು ಅಲ್ಲಿಯೇ ಉಳಿದುಕೊಂಡು ಸಮಸ್ಯೆಗಳನ್ನು ಆಲಿಸಿ ಸರ್ಕಾರಕ್ಕೆ ವರದಿ ಸಲ್ಲಿಸಿದರು. ಸಂಘಟಿತ ಪ್ರಯತ್ನದಿಂದ ನೂರಾರು ಮಂದಿಗೆ ಅರಣ್ಯ ಪ್ರದೇಶದಿಂದ ಆರು ಸಾವಿರ ಎಕರೆ ಕೃಷಿ ಭೂಮಿ ದೊರಕಿಸಿಕೊಡುವಲ್ಲಿ ಸೋಮಣ್ಣ ಪಾತ್ರ ಹಿರಿದು. ಕೃಷಿ ಮಾಡಲು ಕೆಲವರಿಗೆ 6ರಿಂದ 11 ಎಕರೆವರೆಗೂ ಜಮೀನು ಸಿಕ್ಕಿದೆ.

ನರ್ಮದಾ ಬಚಾವೋ ಹೋರಾಟದಲ್ಲಿ ಮೇಧಾ ಪಾಟ್ಕರ್ ಜೊತೆಗೂ ಪಾಲ್ಗೊಂಡಿದ್ದರು. 2008ರಿಂದ ಜಾರಿಗೆ ಬಂದ ಅರಣ್ಯವಾಸಿಗಳ ಪಾರಂಪರಿಕ ಹಕ್ಕುಗಳ ಸಮಿತಿಯಲ್ಲಿ ಸಕ್ರಿಯವಾಗಿದ್ದಾರೆ. 1991ರಲ್ಲಿ ಫಿಲಿಪೀನ್ಸ್ ದೇಶದಲ್ಲಿ ನಡೆದ ಆದಿವಾಸಿಗಳ ಮೇಳದಲ್ಲಿ ಬುಡಕಟ್ಟು ಜನರ ಸಮಸ್ಯೆಗಳನ್ನು ಮಂಡಿಸಿದ್ದಾರೆ.

ಕೃಷಿಗೆ ಜಮೀನು, ವಾಸಿಸಲು ಮನೆ ಹಾಗೂ ಮಕ್ಕಳ ಶಿಕ್ಷಣಕ್ಕೆ ಶಾಲೆ ಬೇಕು ಎಂಬುದು ಬುಡಕಟ್ಟು ಜನರ ಪ್ರಮುಖ ಬೇಡಿಕೆ. ಎಲ್ಲಿ ಇದ್ದೇವೆಯೋ ಆ ಜಾಗ ನಮಗೇ ಬಿಟ್ಟುಕೊಡಬೇಕು ಎಂಬುದು ಅವರ ಮನವಿ. ಅದನ್ನು ಮುಂದಿಟ್ಟುಕೊಂಡು ಹೋರಾಟ ನಡೆದಿದೆ. 25 ಮಕ್ಕಳಿದ್ದರೂ ಅಲ್ಲೊಂದು ಸರ್ಕಾರಿ ಶಾಲೆ ತೆರೆಯಬೇಕು ಎಂಬ ಬೇಡಿಕೆಗೂ ಸರ್ಕಾರದಿಂದ ಸ್ಪಂದನೆ ದೊರೆಯಿತು. ಮತದಾರರ ಗುರುತಿನ ಚೀಟಿ, ಪಡಿತರ ಚೀಟಿ ಕೊಡಿಸಲು ಹೋರಾಡಿದರು. ಹೊರಗಿನವರನ್ನು ಕಾವಲಿಗೆ ನೇಮಿಸದೇ ಕಾಡಿನ ಜ್ಞಾನವಿರುವ ಮೂಲ ಆದಿವಾಸಿಗಳನ್ನೇ ನೇಮಿಸಬೇಕು ಎಂಬ ಹೋರಾಟವನ್ನೂ ನಡೆಸಿದರು. ಮೂಲ ಆದಿವಾಸಿಗಳಿಗೇ ಕೆಲಸ ಸಿಗುತ್ತಾ ಹೋಯಿತು. ಹಾಡಿಗಳಿಗೆ ನ್ಯಾಯಬೆಲೆ ಅಂಗಡಿಗಳು ಮಂಜೂರಾದವು. ವಿದ್ಯಾಭ್ಯಾಸ ಮಾಡಿದವರಿಗೆ ಕೆಲಸ ಕೊಡಿಸಲು ಶ್ರಮಿಸುತ್ತಿದ್ದಾರೆ.

ಆರಂಭದಲ್ಲಿ ಕೇರಳದ 'ಪೆಡಿನಾ' ಟ್ರಸ್ಟ್ ಮೂಲಕ ಕೆಲಸ ಮಾಡುತ್ತಿದ್ದರು. ನಂತರ 'ವಿಕಾಸ ಬುಡಕಟ್ಟು ಕೃಷಿಕರ ಸಂಘ'ವನ್ನು ರಚಿಸಿಕೊಂಡರು. ಎಚ್.ಡಿ.ಕೋಟೆ ತಾಲ್ಲೂಕಿನ ಚಾಮಲಾಪುರದಲ್ಲಿ ಉಷ್ಣ ವಿದ್ಯುತ್ ಸ್ಥಾವರದ ವಿರುದ್ಧದ ಹೋರಾಟದಲ್ಲೂ ಮುಂಚೂಣಿಯಲ್ಲಿದ್ದರು. ಕಾವಾಡಿಗಳು–ಮಾವುತರ ಕೆಲಸ ಕಾಯಂಗೊಳಿಸುವ ಹೋರಾಟದಲ್ಲೂ ಇವರ ಪಾತ್ರವಿದೆ. ದಸರಾ ಬಹಿಷ್ಕರಿಸುವ ಎಚ್ಚರಿಕೆ ನೀಡಿ ಬಿಸಿ ಮುಟ್ಟಿಸಿದರು.

ಚುನಾವಣೆಯಲ್ಲಿ ಸೋಲು

1991ರಲ್ಲಿ ಹುಣಸೂರು ವಿಧಾನಸಭಾ ಕ್ಷೇತ್ರ ಹಾಗೂ 2008ರಲ್ಲಿ ಎಚ್.ಡಿ. ಕೋಟೆಯಲ್ಲಿ (ಪರಿಶಿಷ್ಟ ಪಂಗಡ ಮೀಸಲಾದಾಗ) ಪಕ್ಷೇತರನಾಗಿ ಸ್ಪರ್ಧಿಸಿದ್ದ ಅವರು ಜನಪ್ರತಿನಿಧಿಯಾಗಿ ಆಯ್ಕೆಯಾಗುವುದು ಸಾಧ್ಯವಾಗಲಿಲ್ಲ. 2016ನೇ ಸಾಲಿನಲ್ಲಿ ರಾಜ್ಯ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ ಪ್ರಕಟಿಸಿತ್ತು. ಮರುದಿನ ಪಟ್ಟಿಯಿಂದ ಹೆಸರು ತೆಗೆದಿತ್ತು! ಇದನ್ನು ಖಂಡಿಸಿ ಪ್ರಗತಿಪರರು ಸೇರಿ ದೇಣಿಗೆ ಸಂಗ್ರಹಿಸಿ ಸಾಹಿತಿ ದೇವನೂರ ಮಹಾದೇವ ಸಮ್ಮುಖದಲ್ಲಿ 'ಜನ ರಾಜ್ಯೋತ್ಸವ' ಪ್ರಶಸ್ತಿಯನ್ನು ₹ 1 ಲಕ್ಷ ನಗದಿನೊಂದಿಗೆ ನೀಡಿ ಗೌರವಿಸಿದ್ದರು.

ಮೊದಲ ಓದು

ಕರ್ಪೂರಿ ಠಾಕೂರ್ ಬದುಕಿನ ಕಥನ

ಸಮಾಜವಾದಿ ಆಂದೋಲನದ ಅಲೆಮಾರಿ ಕರ್ಪೂರಿ ಠಾಕೂರ್ ಅವರಿಗೆ ಭಾರತ ಸರ್ಕಾರವು ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಭಾರತ ರತ್ನ (ಮರಣೋತ್ತರ) ವನ್ನು ಅವರ ಜನ್ಮ ಶತಮಾನೋತ್ಸವದ ಸಂದರ್ಭದಲ್ಲಿ ಘೋಷಿಸಿದೆ. ಇದೇ ಸಂದರ್ಭದಲ್ಲಿ ನರೇಂದ್ರ ಪಾಠಕ್ ಅವರು ರಚಿಸಿದ 'ಕರ್ಪೂರಿ ಠಾಕೂರ್ ಹಾಗೂ ಸಮಾಜವಾದ' ಕೃತಿ ಬಿಡುಗಡೆಗೊಂಡಿದೆ.

ಇದನ್ನು ಹಸನ್ ನಯೀಂ ಸುರಕೋಡ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. 1924ರ ಜ. 24ರಂದು ಜನಿಸಿದ ಕರ್ಪೂರಿ ಠಾಕೂರ್ ಅವರು ಗಾಂಧೀಜಿ ಅವರ ಪ್ರಭಾವಕ್ಕೆ ಒಳಗಾದವರು. ಜತೆಗೆ ಸೆರೆವಾಸವನ್ನೂ ಅನುಭವಿಸಿದವರು. ಸ್ವಾತಂತ್ರ್ಯ ನಂತರದಲ್ಲಿ ರಾಮಮನೋಹರ ಲೋಹಿಯಾ ಅವರ ಪ್ರಭಾವಕ್ಕೆ ಒಳಗಾದ ಕರ್ಪೂರಿ ಠಾಕೂರ್ ಅವರು ಸಮಾಜವಾದ ಮಾರ್ಗದಲ್ಲಿ ಸಾಗಿದರು. ಹಿಂದುಳಿದ ವರ್ಗದವರ ಹಾಗೂ ಬಡ ಜನರ ಏಳಿಗೆಗಾಗಿ ತಮ್ಮ ಬದುಕನ್ನೇ ಮುಡುಪಾಗಿಟ್ಟವರು.

ಬಿಹಾರ ರಾಜ್ಯಕ್ಕೆ ಎರಡು ಬಾರಿ ಮುಖ್ಯಮಂತ್ರಿಯಾಗಿದ್ದರೂ ಹಾಗೂ 36 ವರ್ಷಗಳ ಸುದೀರ್ಘ ರಾಜಕೀಯ ಜೀವನದಲ್ಲಿದ್ದರೂ, ಕರ್ಪೂರಿ ಅವರ ಬಳಿ ಕೊನೆಯಲ್ಲಿದ್ದಿದ್ದು ₹ 33 ಸಾವಿರ ಮಾತ್ರ! ಸಮಾಜವಾದಿ ಆಂದೋಲನದ ಅಲೆಮಾರಿಯಾಗಿದ್ದ ಕರ್ಪೂರಿ ಅವರು ಬಿಹಾರದ ಕುಗ್ರಾಮದಲ್ಲಿದ್ದ ಅವರ ಗುಡಿಸಲ ಮನೆಯನ್ನು ಪಕ್ಕಾ ಮನೆಯನ್ನಾಗಿ ಮಾಡಿಸಲಾಗದೆ ನಿರ್ಗಮಿಸಿದ ನಿಸ್ವಾರ್ಥ ಜನ ಹೋರಾಟಗಾರ. ರಾಜಕೀಯ ಎಂಬ ಶಬ್ದ ಬೇರೆಯೇ ಕಲ್ಪನೆ ನೀಡುವ ಈ ಕಾಲಘಟ್ಟದಲ್ಲಿ ಕರ್ಪೂರಿ ಠಾಕೂರ್ ಅವರ ಬದುಕು ಮತ್ತು ಹೋರಾಟ ಕುರಿತ ಈ ಕೃತಿ ಅವರ ಹೋರಾಟ ಮತ್ತು ಆಲೋಚನೆಗಳ ಪರಿಚಯ ಮಾಡಿಕೊಡಲಿದೆ.



ಪು: 300 ₹300

ಕರ್ಪೂರಿ ಠಾಕೂರ್ ಹಾಗೂ ಸಮಾಜವಾದ
ಲೇ: ನರೇಂದ್ರ ಪಾಠಕ್
ಅನು: ಹಸನ್ ನಯೀಂ ಸುರಕೋಡ
ಪ್ರ: ಲೋಹಿಯಾ ಪ್ರಕಾಶನ
ಸಂ: 99007 50549

ಮದ್ಯಪಾನ ಪರಂಪರೆಯ ಇಣುಕು ನೋಟ

ಮದ್ಯಕ್ಕೂ ಒಂದು ಇತಿಹಾಸ, ಪರಂಪರೆಯಿದೆ. ಅದರ ಜಾಡು ಹಿಡಿದು ಹೊರಟವರು ಅಬಕಾರಿ ಇಲಾಖೆಯಲ್ಲಿ ಕಾನ್‌ಸ್ಟೇಬಲ್ ಹುದ್ದೆಯಲ್ಲಿರುವ ರಾಜೀವ್ ಬಾಬು. ವೃತ್ತಿಯೊಳಗೆ ತಮ್ಮ ಸಂಶೋಧನಾ ಪ್ರವೃತ್ತಿಯನ್ನು ಹರಿಬಿಟ್ಟು ಈ ಕೃತಿಯನ್ನು ಅವರು ತಂದಿದ್ದಾರೆ.

ಇಲಾಖೆಯಲ್ಲಿನ ಕಾಯ್ದೆ, ನಿಯಮಗಳ ಇತಿಹಾಸ ಕೆದಕುತ್ತಾ, ಬ್ರಿಟಿಷರ ಪೂರ್ವದಲ್ಲಿ ಇದ್ದ ಮದ್ಯ ವಹಿವಾಟಿನ ಬೆನ್ನತ್ತಿ ಈ ಕೃತಿಯನ್ನು ರಾಜೀವ್ ಸಿದ್ಧಪಡಿಸಿದ್ದಾರೆ. ಒಟ್ಟು ಹನ್ನೊಂದು ಅಧ್ಯಾಯಗಳಲ್ಲಿ ಇಲ್ಲಿನ ಲೇಖನಗಳಿವೆ. ಸೋಮರಸದ ಹಿನ್ನೆಲೆ, ಪ್ರಾಚೀನ ಕಾಲದ ಮದ್ಯ ಉತ್ಪಾದಕ ಯಂತ್ರಗಳತ್ತ ಇಣುಕು ನೋಟ, ಶಿಲ್ಪಕಲೆಗಳಲ್ಲಿ ಮದ್ಯಪಾನದ ಕುರುಹುಗಳು, ಪ್ರಾಚೀನ ಸಾಹಿತ್ಯದಲ್ಲಿ ಮದ್ಯಪಾನದ ಘಟನಾವಳಿಗಳು, ಬ್ರಿಟಿಷ್ ಆಳ್ವಿಕೆಯಲ್ಲಿ ಮದ್ಯದ ವಹಿವಾಟುಗಳಲ್ಲಿ ಆದ ಮಾರ್ಪಾಡು- ಹೀಗೆ ಭಿನ್ನ ಆಯಾಮಗಳಲ್ಲಿ ಮದ್ಯದ ಪರಂಪರೆಯನ್ನು ಲೇಖಕರು ಇಲ್ಲಿ ವಿಶ್ಲೇಷಿಸಿದ್ದಾರೆ. ಚಿತ್ರಸಹಿತ ವಿವರಣೆ ಓದಿಗೆ ಪೂರಕವಾಗಿದೆ. ಬ್ರಿಟಿಷ್ ಸರ್ಕಾರದಿಂದ ಪ್ರಮುಖ ನಗರಗಳಲ್ಲಿ ಡಿಸ್ಟಿಲರಿಗಳ ಆರಂಭದ ಹೆಜ್ಜೆಗಳು, ದಕ್ಷಿಣ ಭಾರತದಲ್ಲಿ ಫ್ರಾನ್ಸಿಸ್ ಬುಕಾನನ್ ಪ್ರವಾಸ ಕೈಗೊಂಡ ಸಂದರ್ಭದಲ್ಲಿ ಸಂಗ್ರಹಿಸಿ ಮಾಹಿತಿಗಳನ್ನು ಲೇಖಕರು ವಿಸ್ತೃತವಾಗಿ ಇಲ್ಲಿ ವಿವರಿಸಿದ್ದಾರೆ.

ಮದ್ಯಪಾನ, ಅಬಕಾರಿ ನೀತಿ ಬಗ್ಗೆ ಗಾಂಧೀಜಿ, ಅಂಬೇಡ್ಕರ್ ಅವರ ಅಭಿಪ್ರಾಯಗಳು, ರಾಜ್ಯದಲ್ಲಿ ನಡೆದ ಕಳ್ಳಭಟ್ಟಿ ದುರಂತಗಳ ವಿವರ, ಅಬಕಾರಿ ಇಲಾಖೆ ಬಜೆಟ್‌ಗಳು, ಇಲಾಖೆಯನ್ನು ನಿಭಾಯಿಸಿದ ಸಚಿವರ ವಿವರ ಹಾಗೂ ಇಲಾಖೆಯ ಪ್ರಮುಖಾಂಶಗಳನ್ನೂ ಈ ಕೃತಿಯಲ್ಲಿ ಕ್ರೋಡೀಕರಿಸಿ ನೀಡಲಾಗಿದೆ.



ಪು: 176 ₹250

ಭಾರತದಲ್ಲಿ ಮದ್ಯಪಾನ ಪರಂಪರೆ
ಲೇ: ರಾಜೀವ್ ಬಾಬು
ಪ್ರ: ಶ್ರೀರಾಮ ಪ್ರಕಾಶನ
ಸಂ: 8553667306

ಪಂಚಾಯತ್‌ಗಳ ಸಾಧನೆಯ ಸಂಕಥನ

ಊರಿನ ಅಭಿವೃದ್ಧಿಯ ಎಲ್ಲ ಕೆಲಸಗಳೂ ಸರ್ಕಾರದಿಂದಲೇ ಆಗಬೇಕೆಂದೇನಿಲ್ಲ. ಮನಸ್ಸು ಮಾಡಿದರೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿಯೇ ಸಾಕಷ್ಟು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು. ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾದ ದೇಶದ ಒಂದಷ್ಟು ಮಾದರಿ ಗ್ರಾಮ ಪಂಚಾಯಿತಿಗಳ ಸಾಧನೆಯ ಸಂಕಥನ 'ಪಂಚಾಯತ್ ಪವರ್' ಕೃತಿ. ವಿಭಿನ್ನ ಕೆಲಸಗಳ ಮೂಲಕ ನಮ್ಮ ನಡುವೆ ಮಾದರಿಯಾಗಿ ನಿಲ್ಲಬಲ್ಲ ಕೆಲವಷ್ಟು ಪಂಚಾಯಿತಿಗಳ ಕಿರು ಪರಿಚಯ ಮಾಡಿಕೊಡುವ ಯತ್ನವನ್ನು ಲೇಖಕರು ಈ ಕೃತಿಯಲ್ಲಿ ಮಾಡಿದ್ದಾರೆ.

ಕೃತಿಯಲ್ಲಿ ಆರು ವಿಭಾಗಗಳಿದ್ದು, 30ಕ್ಕೂ ಹೆಚ್ಚು ಕಿರು ಲೇಖನಗಳಿವೆ. ಊರಿನ ಜಲಪಾತದಿಂದಲೇ ಆದಾಯ ಗಳಿಸುವ ಆಂಧ್ರ ಪ್ರದೇಶದ ಕತಕಿ ಪಂಚಾಯಿತಿ, ವಿದ್ಯುತ್‌ನ ಹಂಗಿಲ್ಲದ ರಾಜಸ್ಥಾನದ ನ್ಯೂಕೊಟ್ರ, ಕಾರಂತರನ್ನು ನೆನಪಿಸುವ ಉಡುಪಿಯ ಕೋಟತೊಟ್ಟು ಪಂಚಾಯಿತಿ–ಹೀಗೆ ಬೇರೆ ಬೇರೆ ವಿಷಯಗಳಿಂದ ಸ್ವಾವಲಂಬಿಯಾಗಿ ನಿಂತಿರುವ ಪಂಚಾಯಿತಿಗಳ ವಿಶಿಷ್ಟ ಕಥನಗಳು ಇಲ್ಲಿ ಸಿಗುತ್ತವೆ.

'ಇಂಥ ಅಪರೂಪದ ಕೃತಿ ಪ್ರತಿ ಗ್ರಾಮ ಪಂಚಾಯಿತಿಯ ಕಪಾಟಿನಲ್ಲಿರಬೇಕು. ರಾಜ್ಯದ ಒಂದೊಂದು ಪಂಚಾಯತ್‌ಗೂ ತನ್ನದೇ ಆದ ಗ್ರಾಮಗೀತೆಯನ್ನು ರಚಿಸಲು ಪ್ರೇರಣೆಯಾಗುವಷ್ಟರ ಮಟ್ಟಿಗೆ ಈ ಕೃತಿ ಕೈದೀವಿಗೆಯಾಲಿ' ಎಂದು ಕೃತಿಯ ಮುನ್ನುಡಿಯಲ್ಲಿ ನಾಗೇಶ ಹೆಗಡೆ ಬರೆದಿದ್ದಾರೆ.



ಪು: 130 ₹140

ಪಂಚಾಯತ್ ಪವರ್
ಲೇ: ಗುರುರಾಜ್ ಎಸ್.ದಾವಣಗೆರೆ
ಪ್ರ: ನದಿ ಪ್ರಕಾಶನ
ಸಂ:9008475899

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಪಳುವಟ್ಟೆ

ಪಳುವಟ್ಟೆ (ನಾ). ಕಾಡುದಾರಿ.
(ಪಳು + ಬಟ್ಟೆ)
ಅತ್ರಿಯ ಆಶ್ರಮದಿಂದ ಹೊರಟ ರಾಮ ಸೀತೆ ಲಕ್ಷ್ಮಣರು ರಾಕ್ಷಸ ವಿರಾಧನನ್ನು ಸಂಹರಿಸಿ ಶರಭಂಗನ ಆಶ್ರಮಕ್ಕೆ ಬರುವರು. ಆ ಋಷಿಯು ದಸ್ಯುಗಳ ಹಿಂಸೆಗೆ ಸಿಕ್ಕಿ ಮರಣ ಮುಖಿಯಾಗಿರುತ್ತಾನೆ. ಅವರು ಅವನಿಂದ ದುಷ್ಟದಾನವರ ದೂರ್ತತೆ ತಿಳಿಯುವರು. ಕೆಲದಿನಗಳು ಅಲ್ಲಿರುವರು. ಶರಭಂಗ ತೀರಿ ಹೋಗಲು ಅವನ ಅಪರ ಕರ್ಮಗಳನ್ನು ಮಾಡುವರು. ಅನಂತರ ಅಲ್ಲಿ ವಾನಪ್ರಸ್ಥದಲ್ಲಿರುವ ಬ್ರಾಹ್ಮಣ ವೈಖಾನಸರ ಜೊತೆಗೂಡಿ ಸುತೀಕ್ಷ್ಣ ಋಷ್ಯಾಶ್ರಮಕ್ಕೆ ಹೋಗುವರು.
ಅವರು ಕ್ರಮಿಸಿದ ಕಾಡುದಾರಿಯನ್ನು ಕವಿ ಆ ಹಾದಿಗೆ ಸಹಜ ಅರ್ಥಸ್ಫುರಿಸುವಂತೆ 'ಪಳುವಟ್ಟೆ'ಯೆಂಬ ಹೊಸಪದ ಪರಿಕಲ್ಪಿಸಿ ಪ್ರಯೋಗಿಸಿದ್ದಾರೆ.

ಒಡನೊಡನೆ ಬಂದ ವೈಖಾನಸರನೊಡಗೂಡಿ,
ಮಲೆಯ ಪಳುವಟ್ಟೆಯಂ ಕೊಂಡು ನಡೆತರೆ
ಮುಂದೆ
ಮೂಡಿದತ್ತೊಂದು ಶೈಲಂ ವಿಪುಲಮದ್ಭುತಂ.

ಸಾದರ ಸ್ವೀಕಾರ
ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ–ಮೇಲ್‌ಗೆ ಕಳುಹಿಸಿ
bhanuvara@prajavani.co.in

ಕಥೆ
ಮೂಲ: ಸಈದ್ ಖಾನ್
ಕನ್ನಡಕ್ಕೆ: ಡಾ.ಎಚ್. ಎಂ.ಕುಮಾರಸ್ವಾಮಿ
ಅವರ
ಮನೆ
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ಚಿಕ್ಕೋಬನಹಳ್ಳಿ ಚಾಂದ್ ಬಾಷ
ಅವರ
ಜೋಡಿಸುವುದೆಂದರೆ..?
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಝುಕಿಂತೋಸ್ ದ್ವೀಪದ ನೀಲಿ ಕಡಲು!

ಕಣ್ಣು ಹಾಯಿಸಿದಷ್ಟು ನೀಲಿ ಸಮುದ್ರ. ಇದು ಝುಕಿಂತೋಸ್ ಶಿಪ್‌ರೆಕ್ ಬೀಚ್‌ನ ನೋಟ.

ದೈತ್ಯ ಆಮೆಗಳು!

'ಝುಕಿಂತೋಸ್'ನ ಸಮುದ್ರ ದಂಡೆಯೊಂದರಲ್ಲಿ ಭಾರಿ ಗಾತ್ರ, ದೊಡ್ಡ ತಲೆಯ ಸಾವಿರಾರು ಕಡಲಾಮೆಗಳು ಬಂದು ರಾತ್ರಿ ಹೊತ್ತಿನಲ್ಲಿ ಮೊಟ್ಟೆ ಇಡುತ್ತವೆ. ಇವುಗಳು ಸುತ್ತಮುತ್ತಲ ಪ್ರದೇಶವಲ್ಲದೆ, ನೂರಾರು ಮೈಲಿಗಳ ದೂರದ ಬೇರೆ ದೇಶಗಳಿಂದಲೂ ಬಂದು ಇಲ್ಲಿ ಮೊಟ್ಟೆ ಇಟ್ಟು ಮರಿ ಮಾಡಿಸಿಕೊಂಡು ಹೋಗುತ್ತವೆ. ಅವು ವರ್ಷದ ಮೇ ತಿಂಗಳಿಂದ ಅಕ್ಟೋಬರ್‌ವರೆಗೆ ಇಲ್ಲಿಗೆ ಬರುತ್ತವೆ. ವಿಶೇಷವೆಂದರೆ ಇವು 80 ಕೆ.ಜಿ. ಇಂದ 200 ಕೆ.ಜಿ.ವರೆಗೆ ತೂಗುವ ದೈತ್ಯ ಆಮೆಗಳು.

ಇವುಗಳ ರಕ್ಷಣೆಗಾಗಿ 'ಝುಕಿಂತೋಸ್ ಮೆರಿನ್ ಪಾರ್ಕ್' ಎಂಬ ಸಂಸ್ಥೆಯನ್ನು ಹುಟ್ಟು ಹಾಕಲಾಗಿದೆ. ಇಲ್ಲಿ ಆಮೆಗಳಿಗಾಗಿಯೇ ಸುಂದರ ಮ್ಯೂಸಿಯಂ ಇದೆ. ಪ್ರವೇಶ ಉಚಿತ. ಅಲ್ಲಿನ ಸರ್ಕಾರ ಮತ್ತು ಪರಿಸರವಾದಿಗಳು, ಮೊಟ್ಟೆ ಇಡಲು ಬರುವ ಕಡಲಾಮೆಗಳಿಗೆ ಯಾವುದೇ ಹಾನಿಯಾಗದಂತೆ ನಿಯಮ ರೂಪಿಸಿ ಅವುಗಳ ರಕ್ಷಣೆ ಮಾಡುವಲ್ಲಿ ಸಫಲರಾಗಿದ್ದಾರೆ. ಇಲ್ಲಿ ಆಮೆಗಳನ್ನು ನೋಡಲು ಬರುವ ಪ್ರವಾಸಿಗರು ಅವುಗಳಿಗೆ ಹಾನಿ ಮಾಡದಂತೆ ಜಾಗೃತಿಯನ್ನೂ ಮೂಡಿಸುತ್ತಾರೆ. ಇಲ್ಲಿ ಆಮೆಗಳ ಸವಾರಿಯನ್ನು ಮಾಡುತ್ತಾರೆಂದು ಹೇಳಿದರಾದರೂ ನಾವು ಆ ಪ್ರಯತ್ನ ಮಾಡಲಿಲ್ಲ.

